ಶುಕ್ರವಾರ, ಸೆಪ್ಟೆಂಬರ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 262 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ತಲೆಯಿಂದ ಹುಳ ತೆಗೆಯಲು ಮಾಡಿದ ಸಿನಿಮಾವೇ 'ಯುಐ' ಎನ್ನುತ್ತಾರೆ ಉಪೇಂದ್ರ

ಆಳ-ಅಗಲ ಶ್ರೀಲಂಕಾ: 'ಭವಿಷ್ಯ'ದ ಚುನಾವಣೆ

ಬಿಹಾರ- ಜಾತಿ ಕಲಹ: 21 ಮನೆಗಳಿಗೆ ಬೆಂಕಿ 10

ತಿರುಪತಿ ಲಡ್ಡು: ವಾಗ್ವಾದಕ್ಕೆ 'ಆಹಾರ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
83,184	25,415	₹75,380 (ಬೆಂಗಳೂರು)	₹90,100 (ಬೆಂಗಳೂರು)	83.65

'ಎಚ್‌ಡಿಕೆ, ಬಿಎಸ್‌ವೈರಿಂದ ಡಿನೋಟಿಫೈ'

ಬೆಂಗಳೂರು: 'ಎಚ್‌.ಡಿ. ಕುಮಾರಸ್ವಾಮಿ ಮತ್ತು ಬಿ.ಎಸ್‌. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಗಂಗೇನಹಳ್ಳಿಯಲ್ಲಿ ಬಹುಕೋಟಿ ಮೌಲ್ಯದ 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ನಡೆದಿದೆ. ಇದೊಂದು ವ್ಯವಸ್ಥಿತ ದರೋಡೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದರು. 6

ಕೋಲ್ಕತ್ತ: ಮುಷ್ಕರ ಭಾಗಶಃ ಕೈಬಿಡಲು ನಿರ್ಧಾರ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

43 ಸಾವಿರ ಹೆಕ್ಟೇರ್ ಅರಣ್ಯ ಭೂಮಿ ದಾಖಲೆಯಲ್ಲಿ ಮಾತ್ರ

ಕಾಣೆಯಾದ ಕಾಡು ಭೂಮಿ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅರಣ್ಯ ದಾಖಲೆಗಳಲ್ಲಿ ನಮೂದಾಗಿರುವ 43 ಸಾವಿರ ಹೆಕ್ಟೇರ್‌ಗೂ ಹೆಚ್ಚು ಸರ್ಕಾರಿ ಭೂಮಿ ನಾಪತ್ತೆಯಾಗಿದೆ. ಅಂದರೆ, ದಾಖಲೆಗಳಲ್ಲಿ ಉಲ್ಲೇಖವಾಗಿರುವ ನಿಗದಿತ ಸರ್ವೆ ನಂಬರ್‌ಗಳಲ್ಲಿ ಈ ಭೂಪ್ರದೇಶವೇ ಇಲ್ಲ.

ಪರಿಭಾವಿತ ಅರಣ್ಯದ (ಡೀಮ್ಡ್) ವ್ಯಾಪ್ತಿಯ ಗೊಂದಲ ಕುರಿತು ಮರು ಪರಿಶೀಲಿಸಲು ಕಂದಾಯ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಜಿಲ್ಲಾ ಸಮಿತಿಗಳನ್ನು ರಚಿಸಲಾಗಿತ್ತು. ಸುಮಾರು 43 ಸಾವಿರ ಹೆಕ್ಟೇರ್ ಅರಣ್ಯ ಭೂಮಿಯು ದಾಖಲೆಗಳಲ್ಲಿ ಮಾತ್ರ ಇದೆ. ವಾಸ್ತವದಲ್ಲಿ ಈ ಭೂಮಿಯೇ ಅಲ್ಲಿ ಇಲ್ಲ ಎಂದು ಈ ಸಮಿತಿಗಳು ವರದಿ ಕೊಟ್ಟಿವೆ.

ಯಾವ ಭೂಮಿ	ಎಷ್ಟು ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ಸರ್ವೆ ನಂಬರ್‌ಗಳಲ್ಲಿ ಲಭ್ಯವಿಲ್ಲದ ಸರ್ಕಾರಿ ಭೂಮಿ	43,357
ಪರಿವರ್ತನೆಯಲ್ಲಿ ದೋಷವಿರುವ ಭೂಮಿ	82,089
ಸರ್ವೆ ನಂಬರ್‌ಗಳ ಪುನರಾವರ್ತನೆ	27,604
ಖಾಸಗಿ ಪಟ್ಟಾ ಭೂಮಿ	38,796
ಬಗರ್‌ಹುಕುಂ, ಸಾರ್ವಜನಿಕ ಉದ್ದೇಶದ ಭೂಮಿ	30,615
ಕೆರೆ ತೀರ, ಶಾಲೆ ಇತ್ಯಾದಿ	21,583
ಕಾಲುವೆ, ನೆಡುತೋಪು	27,300
ಎರಡು ಹೆಕ್ಟೇರ್‌ಗಿಂತ ಕಡಿಮೆ ಇರುವ ಜಮೀನು	10,949
ಇಲಾಖೆ, ವಿಭಾಗಗಳಿಗೆ ವರ್ಗಾಯಿಸಿದ ಪ್ರದೇಶ	21,030
ಮೀಸಲು ಅರಣ್ಯ ಪ್ರದೇಶ	1.35 ಲಕ್ಷ
ಪ್ರತಿ ಹೆಕ್ಟೇರ್‌ಗೆ 50ಕ್ಕಿಂತ ಕಡಿಮೆ ಮರಗಳಿರುವ ಪ್ರದೇಶ	1.62 ಲಕ್ಷ

ಕಂದಾಯ ಇಲಾಖೆಯಿಂದಲೂ ಪರಿಶೀಲನೆ

ಎರಡನೇ ಸಮಿತಿ ನೀಡಿರುವ ವರದಿಗೂ ಕಂದಾಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿದೆ. 3.30 ಲಕ್ಷ ಹೆಕ್ಟೇರ್ ಪರಿಭಾವಿತ ಅರಣ್ಯ ಕಂದಾಯ ಭೂಮಿಯನ್ನೂ ಒಳಗೊಂಡಿದೆ ಎಂದು ತಕರಾರು ತೆಗೆದಿದೆ. ಗೊಂದಲ ಪರಿಹಾರಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ಪ್ರಕಟಿಸಿ, ಅಹವಾಲು ಆಲಿಸಿ, ತೀರ್ಮಾನ ಕೈಗೊಳ್ಳಲು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಈಗಾಗಲೇ ಸುತ್ತೋಲೆ ಹೊರಡಿಸಿದ್ದಾರೆ.

ಪರಿಭಾವಿತ ಅರಣ್ಯ ಪ್ರದೇಶಗಳನ್ನು ಗುರುತಿಸಲು 2018ರಲ್ಲಿ ನೇಮಿಸಲಾಗಿದ್ದ ತಜ್ಞರ ಸಮಿತಿ ರಾಜ್ಯದಲ್ಲಿ 9,94,881 ಹೆಕ್ಟೇರ್ ವಿಸ್ತೀರ್ಣದ ಪರಿಭಾವಿತ ಅರಣ್ಯ ಪ್ರದೇಶಗಳಿವೆ ಎಂದು ವರದಿ ನೀಡಿತ್ತು. ಅದನ್ನೇ ರಾಜ್ಯ ಸರ್ಕಾರ ಯಥಾವತ್ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತ್ತು. ವರದಿಯಲ್ಲಿನ ಲೋಪಗಳ ಕುರಿತು ದೂರುಗಳು ಬಂದಿದ್ದರಿಂದಾಗಿ ಪರಿಶೀಲನೆಗಾಗಿ ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜಂಟಿ ಸಮಿತಿ ರಚಿಸಲಾಗಿತ್ತು.

7ನೇ ಪುಟ ನೋಡಿ

ಮುನಿರತ್ನ ಮತ್ತೆ ಬಂಧಿಸಲು ಸಜ್ಜು

ಪ್ರಜಾವಾಣಿ ವಾರ್ತೆ

ರಾಮನಗರ: ಜಾತಿನಿಂದನೆ ಮತ್ತು ಜೀವ ಬೆದರಿಕೆ ಪ್ರಕರಣದಲ್ಲಿ ರಾಜರಾಜೇಶ್ವರಿ ನಗರ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ಜಾಮೀನು ಮಂಜೂರಾದ ಬೆನ್ನಲ್ಲೇ ಅತ್ಯಾಚಾರ ಪ್ರಕರಣದಲ್ಲಿ ಅವರನ್ನು ಬಂಧಿಸಲು ಕಗ್ಗಲಿಪುರ ಪೊಲೀಸರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಬಳಿ ಸಜ್ಜಾಗಿ ನಿಂತಿದ್ದಾರೆ.

ಮುನಿರತ್ನ ಸೇರಿದಂತೆ ಏಳು ಮಂದಿ ವಿರುದ್ಧ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಬುಧವಾರ ತಡರಾತ್ರಿ ಬಿಜೆಪಿಯ ಕಾರ್ಯಕರ್ತೆಯೊಬ್ಬರು ಅತ್ಯಾಚಾರ ದೂರು ದಾಖಲಿಸಿದ್ದಾರೆ.

ಜಾತಿನಿಂದನೆ ಪ್ರಕರಣದಲ್ಲಿ ಗುರುವಾರ ಸಂಜೆ ಮುನಿರತ್ನ ಅವರಿಗೆ ಜಾಮೀನು ಸಿಕ್ಕಿರುವುದರಿಂದ ಜೈಲಿನಿಂದ ಬಿಡುಗಡೆ ಪ್ರಕ್ರಿಯೆ ಪೂರ್ಣಗೊಳಿಸಲು ತಡವಾಗುವ ಸಾಧ್ಯತೆ ಇದೆ. ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗುತ್ತಲೇ ಮುನಿರತ್ನ ಅವರನ್ನು ಬಂಧಿಸಲು ಕಗ್ಗಲಿಪುರ ಪೊಲೀಸರು ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ, ಮೊದಲ ಸಂತ್ರಸ್ತೆ ದೂರು ಕೊಟ್ಟ ಬೆನ್ನಲ್ಲೇ ಮತ್ತೊಬ್ಬ ಸಂತ್ರಸ್ತೆ ಸಹ ಠಾಣೆಗೆ ಬಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ. ಹಾಗಾಗಿ, ಇಬ್ಬರನ್ನೂ ಪ್ರಕರಣದ ಸಂತ್ರಸ್ತೆಯರನ್ನಾಗಿ ಎಫ್‌ಐಆರ್‌ನಲ್ಲಿ ಸೇರಿಸಲಾಗಿದೆ.

7ನೇ ಪುಟ ನೋಡಿ

'ಹನಿಟ್ರ್ಯಾಪ್‌ಗೆ ಎಚ್‌ಐವಿ ಸೋಂಕಿತರ ಬಳಕೆ'

ಮುನಿರತ್ನ

ಎದುರಾಳಿಗಳನ್ನು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸಲು ಮುನಿರತ್ನ ಎಚ್‌ಐವಿ ಸೋಂಕಿತರನ್ನು ಬಳಸಿಕೊಳ್ಳುತ್ತಿದ್ದರು ಎಂಬ ಆಘಾತಕಾರಿ ವಿಷಯವೊಂದು ಬೆಳಕಿಗೆ ಬಂದಿದೆ.

ಪ್ರಕರಣದ ಎರಡನೇ ಸಂತ್ರಸ್ತೆ ಎಚ್‌ಐವಿ ಸೋಂಕಿತೆಯಾಗಿದ್ದಾರೆ. ಬಿಬಿಎಂಪಿಯ ಬಿಜೆಪಿ ಸದಸ್ಯೆಯೊಬ್ಬರ ಪತಿಯನ್ನು ಟ್ರ್ಯಾಪ್ ಮಾಡಲು ಮುನಿರತ್ನ ಎಚ್‌ಐವಿ ಸೋಂಕಿತೆಯನ್ನು ಬಳಸಿಕೊಂಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತನಗೆ ಸಹಕಾರ ನೀಡದ ಪೊಲೀಸರು ಹಾಗೂ ಅಧಿಕಾರಿಗಳನ್ನು ಮುನಿರತ್ನ ನಮ್ಮ ಮೂಲಕ ಹನಿಟ್ರ್ಯಾಪ್ ಮಾಡಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು' ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B/TRD.2024-25/17
ದಿನಾಂಕ: 13.09.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(1) ಬೆಂಗಳೂರು – ಎಡೆಯೂರು ವಿಭಾಗದ ವಿವಿಧ ಯಾರ್ಡ್‌ಗಳಲ್ಲಿ ಇಂಜಿನಿಯರಿಂಗ್ ಮೂಲಕ ಪಾಯಿಂಟ್ ಶಿಫ್ಟಿಂಗ್‌ನ ಕಾರಣ ಓಹೆಚ್‌ಇ ಮೇಲಿನ ಮಾರ್ಪಾಡು. (2) ಎಲ್‌ಸಿಗಳ ಇಂಟರ್‌ಲಾಕಿಂಗ್‌ಗಾಗಿ ಸಹಾಯಕ ಟ್ರಾನ್ಸ್‌ಫಾರ್ಮರ್‌ಗಳ ಪೂರೈಕೆ [ಎಲ್‌ಸಿ ಸಂ. 31/ಕಿಮೀ. 34 (ಬಿಡದಿ – ರಾಮನಗರಂ), ಎಲ್‌ಸಿ ಸಂ. 34/ಕಿಮೀ. 40 (ಬಿಡದಿ – ರಾಮನಗರಂ), ಎಲ್‌ಸಿ ಸಂ. 46/ಕಿಮೀ. 78 (ಗೌರಿಬಿದನೂರು – ವಿಕ್ರಂಫರ್ ಅಲಾಟ್), ಎಲ್‌ಸಿ ಸಂ. 50/ಕಿಮೀ. 58 (ಚನ್ನಪಟ್ಟಣ – ಶೆಟ್ಟಿಹಳ್ಳಿ) ಎಲ್‌ಸಿ ಸಂ. 24/ಕಿಮೀ. 26 (ಹೆಜ್ಜಾಲ – ಬಿಡದಿ)]	ರೂ. 77,12,387.14

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.10.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಟ್ರ್ಯಾಕ್ಷನ್ ವಿನಿಯೋಗ/ಬೆಂಗಳೂರು

PUB/432/AAF/PRB/SWR/2024-25

South Western Railway - SWR | SWRRLY | SWRRLY

ಮಯೂರ, ಸುಧಾ ಓದಿ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SBC-PCET-SMVB-BIZ3-2024
ದಿನಾಂಕ: 30.08.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು: ಎಸ್‌ಎಂವಿಟಿ ಬೆಂಗಳೂರು (ಎಸ್‌ಎಂವಿಬಿ) ನಿಂದ ಬೈಹಟ (ಬಿಐಝಡ್) ವರೆಗೆ ಆರು ವರ್ಷಗಳ ಅವಧಿಗೆ ರೌಂಡ್ ಟ್ರಿಪ್ ಆಧಾರದ ಮೇಲೆ ಪಾರ್ಸೆಲ್ ಕಾರ್ಗೋ ಎಕ್ಸ್‌ಪ್ರೆಸ್ ರೈಲನ್ನು (ಪಿಸಿಇಟಿ) ಗುತ್ತಿಗೆಗೆ ಪಡೆಯುವುದು.

15 ವಿಪಿಹೆಚ್ (ಪ್ರತಿ ಸಿಸಿ 23 ಟನ್‌ಗಳು) + 01 ಬ್ರೇಕ್ ವ್ಯಾನ್	ಮೀಸಲು ಬೆಲೆ
	ರೂ. 21,25,625/-

(4 ಟನ್ ಸಿಸಿ ಗಳ ಎರಡು ಘಟಕಗಳು) ಗಾಗಿ ಪ್ರತೀ ರೌಂಡ್ ಟ್ರಿಪ್‌ನ ಮೀಸಲು ಬೆಲೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.10.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

PUB/437/AAF/PRB/SWR/2024-25

South Western Railway - SWR | SWRRLY | SWRRLY

ಗಾಂಧಿನಗರ, ಮಲ್ಲೇಶ್ವರ, ರಾಜರಾಜೇಶ್ವರಿನಗರ ವಲಯಗಳಲ್ಲಿ ಅವ್ಯವಹಾರ

‘ಸೆ.27ರೊಳಗೆ ಇಲಾಖೆ ವಿಚಾರಣೆ ಆರಂಭಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಗಾಂಧಿನಗರ, ಮಲ್ಲೇಶ್ವರ ಹಾಗೂ ರಾಜರಾಜೇಶ್ವರಿನಗರ ವಲಯಗಳಲ್ಲಿ 2008ರಿಂದ ನಡೆದಿರುವ ಅವ್ಯವಹಾರಗಳ ಬಗ್ಗೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ತನಿಖಾ ಸಮಿತಿ ವರದಿಯ ಶಿಫಾರಸಿ ನಂತೆ ಸೆಪ್ಟೆಂಬರ್ 27ರೊಳಗೆ ಇಲಾಖಾ ವಿಚಾರಣೆ ಆರಂಭಿಸಬೇಕು’ ಎಂದು ವಿಧಾನ ಪರಿಷತ್‌ನ ಸರ್ಕಾರಿ ಭರವಸೆಗಳ ಸಮಿತಿ ಬಿಬಿಎಂಪಿಗೆ ಸೂಚಿಸಿದೆ

‘ಮೂರು ವಲಯಗಳ ಎಂಜಿನಿಯರಿಂಗ್ ವಿಭಾಗಗಳೂ ಸೇರಿದಂತೆ 198 ವಾರ್ಡ್‌ಗಳಲ್ಲಿ 2008ರಿಂದ ನಡೆದಿದೆ ಎನ್ನಲಾದ ಅ್ಯವಹಾರಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿಯನ್ನು ಸರ್ಕಾರ ರಚಿಸಿತ್ತು. ಸಮಿತಿಯು ಅಂತಿಮ ವರದಿಯನ್ನು ಸಲ್ಲಿಸಿದ್ದು, ವಿಧಾನ ಪರಿಷತ್‌ನ ಭರವಸೆಗಳ ಸಮಿತಿಯಲ್ಲಿ ಅದನ್ನು ವಿವರವಾಗಿ ಚರ್ಚಿಸಲಾಗಿದೆ. ಹೀಗಾಗಿ, ತನಿಖಾ ವರದಿಯನ್ನು ಆಧರಿಸಿ ಮುಂದಿನ 15 ದಿನಗಳೊಳಗಾಗಿ (ಸೆ.27) ಇಲಾಖಾ ವಿಚಾರಣೆಯನ್ನು ಆರಂಭಿಸಿ ವರದಿ ನೀಡಬೇಕು’ ಎಂದು ಸಮಿತಿ ಸೂಚಿಸಿದ್ದು, ‘ಇದರಂತೆ ಕ್ರಮವಾಗಬೇಕು’ ಎಂದು ನಗರಾಭಿವೃದ್ಧಿ ಇಲಾಖೆ ಬಿಬಿಎಂಪಿಗೆ ಟಿಪ್ಪಣಿ ಮೂಲಕ ಆದೇಶಿಸಿದೆ.

‘ಪ್ರಸ್ತುತ ಸೇವೆಯಲ್ಲಿರುವ ಆಪಾದಿತರ ಪ್ರತ್ಯೇಕ ಪಟ್ಟಿ ಮಾಡಿ, ಅವರು ಪ್ರಸ್ತುತ ಯಾವ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿಯನ್ನು ಕೋಷ್ಟಕ ರೂಪದಲ್ಲಿ ಸಿದ್ಧಪಡಿಸಬೇಕು. ನಿವೃತ್ತರಾಗಿರುವವರು, ಮರಣ ಹೊಂದಿದವರ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿ ಒದಗಿಸಬೇಕು’ ಎಂದು ಸೂಚಿಸಲಾಗಿದೆ.

ಪ್ರಕರಣವೇನು?: ಮಲ್ಲೇಶ್ವರ, ಗಾಂಧಿನಗರ ಹಾಗೂ ರಾಜರಾಜೇಶ್ವರಿ ನಗರಗಳಲ್ಲಿ 2008-09ನೇ ಸಾಲಿನಿಂದ 2011-12ರವರೆಗೆ ಕೈಗೊಂಡಿದ್ದ ₹1,539 ಕೋಟಿ ಮೊತ್ತದ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿತ್ತು. ಬಿಲ್ ರಿಜಿಸ್ಟರ್, ಅಳತೆ ಪುಸ್ತಕಗಳಿಗೆ ತಾಳೆ ಹೊಂದುತ್ತಿರಲಿಲ್ಲ. ಸುಮಾರು 10 ಸಾವಿರ ಕಾರ್ಯಾದೇಶಗಳು ನಕಲಿ ಎಂಬುದೂ ಕಂಡುಬಂದಿತ್ತು. ಅಂದಿನ ಆಯುಕ್ತ ಸಿದ್ದಯ್ಯ ಅವರು, ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಬಿಎಂಟಿಎಫ್‌ಗೆ ಪ್ರಕರಣವನ್ನು 2011ರ ನವೆಂಬರ್‌ನಲ್ಲಿ ವಹಿಸಿದ್ದರು.

ನವೆಂಬರ್ 19ರಂದು ಬಿಎಂಟಿಎಫ್ ಪೊಲೀಸ್ ಠಾಣಾ ಕಚೇರಿ ಹಾಗೂ ಕಂಪ್ಯೂಟರ್ ಕೊಠಡಿಯಲ್ಲಿ ಬೆಂಕಿ ಅನಾಹುತವಾಗಿ, ಕಂಪ್ಯೂಟರ್ ಹಾಗೂ ಕಡತಗಳು ಭಸ್ಮವಾಗಿದ್ದವು.

ಪಾಲಿಕೆ ಕೌನ್ಸಿಲ್, ವಿಧಾನಮಂಡಲಗಳಲ್ಲಿ ಈ ಬಗ್ಗೆ ಹೆಚ್ಚು ಆಕ್ರೋಶ ವ್ಯಕ್ತವಾದ ಮೇಲೆ ಸರ್ಕಾರ, ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಸಮಿತಿ 2017ರಲ್ಲಿ ಅಂತಿಮ ವರದಿ ಸಲ್ಲಿಸಿತ್ತು.

ಸೆ.21ರೊಳಗೆ ಅಧಿಕಾರಿಗಳ ಪಟ್ಟಿ: ಶರವಣ

‘ನಾಗಮೋಹನ್ ದಾಸ್ ಅವರ ಸಮಿತಿ ವರದಿ ನೀಡಿ ಹಲವು ವರ್ಷಗಳಾಗಿದ್ದರೂ, ಬಿಬಿಎಂಪಿ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಹೀಗಾಗಿ, ಅವರಿಗೆ 15 ದಿನಗಳಲ್ಲಿ ಇಲಾಖೆ ತನಿಖೆ ಆರಂಭಿಸುವಂತೆ ಸೆ.13ರಂದು ನಡೆದ ಭರವಸೆಗಳ ಸಮಿತಿ ಸಭೆಯಲ್ಲಿ ಸೂಚಿಸಲಾಗಿದೆ. ಅವ್ಯವಹಾರದಲ್ಲಿ ಭಾಗಿಯಾಗಿರುವ ಎಲ್ಲ ಎಂಜಿನಿಯರ್‌ಗಳ ಹಾಗೂ ಅಧಿಕಾರಿಗಳ ಪಟ್ಟಿಯನ್ನು ಸೆ.21ರೊಳಗೆ ಸಲ್ಲಿಸುವಂತೆಯೂ ಸೂಚಿಸಲಾಗಿದೆ’ ಎಂದು ವಿಧಾನ ಪರಿಷತ್‌ನ ಸರ್ಕಾರಿ ಭರವಸೆಗಳ ಸಮಿತಿ ಅಧ್ಯಕ್ಷ ಟಿ.ಎ. ಶರವಣ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಕ್ರಮವಾಗಲಿ: ನಾಗಮೋಹನ್ ದಾಸ್

‘ಮಲ್ಲೇಶ್ವರ, ಗಾಂಧಿನಗರ ಹಾಗೂ ರಾಜರಾಜೇಶ್ವರಿನಗರ ವಲಯಗಳಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಕೂಲಂಕಷವಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಸರ್ಕಾರ ಈ ವರದಿಯನ್ನು ಒಪ್ಪಿ, ನಿರ್ಣಯವನ್ನೂ ಮಾಡಿದೆ. ಆದರೆ ಕ್ರಮವಾಗಿರಲಿಲ್ಲ. ಈಗಲಾದರೂ ಆ ಬಗ್ಗೆ ಕ್ರಮವಾಗುತ್ತಿದ್ದರೆ ಅದು ಉತ್ತಮ ಬೆಳವಣಿಗೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಸುದ್ದಿ 2 ನಿಮಿಷ

‘ಗೋಪಾಲಗೌಡ ಅಭಿನಂದನಾ ಗ್ರಂಥಕ್ಕೆ ಹೆಸರು ಸೂಚಿಸಿ’

ಬೆಂಗಳೂರು: ‘ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರ ಅಭಿನಂದನಾ ಗ್ರಂಥಕ್ಕೆ ಸೂಕ್ತ ಹೆಸರು ಸೂಚಿಸಬೇಕು’ ಎಂದು ವಿ.ಗೋಪಾಲಗೌಡ ಅಭಿನಂದನಾ ಸಮಿತಿ ಸಂಚಾಲಕ ಎಂ.ಎನ್. ಪಿಳ್ಳಪ್ಪ ಮನವಿ ಮಾಡಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ವಿ. ಗೋಪಾಲಗೌಡ ಅವರ ಅಭಿಮಾನಿಗಳು, ಹಿರಿಯ ವಕೀಲರು, ಸಮಾಜದ ಮುಖಂಡರು ಅಭಿನಂದನಾ ಸಮಿತಿ ರಚಿಸಿದ್ದಾರೆ. ನಂಜುಂಡಸ್ವಾಮಿ ಸಂಪಾದಕತ್ವದಲ್ಲಿ ಅಭಿನಂದನಾ ಗ್ರಂಥ ರಚನೆಯ ಕೆಲಸ ಈಗಾಗಲೇ ಪ್ರಾರಂಭವಾಗಿದೆ’ ಎಂದು ಹೇಳಿದರು.

‘ಅಭಿನಂದನಾ ಗ್ರಂಥ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಕನ್ನಡ ಭಾಷೆಯಲ್ಲಿ ಬರೆದಿರುವ ಗ್ರಂಥ ಕರ್ನಾಟಕದಲ್ಲಿ ಬಿಡುಗಡೆಯಾದರೆ, ಹಿಂದಿ ಭಾಷೆಯ ಗ್ರಂಥ ಒಡಿಶಾ ರಾಜ್ಯದಲ್ಲಿ ಬಿಡುಗಡೆಯಾಗಲಿದೆ. ಇಂಗ್ಲಿಷ್ ಭಾಷೆಯ ಗ್ರಂಥವನ್ನು ದೆಹಲಿಯಲ್ಲಿ ಬಿಡುಗಡೆ ಮಾಡಲಾಗುವುದು. ಅಭಿನಂದನಾ ಗ್ರಂಥಕ್ಕೆ ಸೂಕ್ತ ಹೆಸರನ್ನು ಇದೇ 30ರೊಳಗೆ 99454 31926 ಮೊಬೈಲ್ ಸಂಖ್ಯೆಗೆ ಕಳುಹಿಸಬಹುದು ಅಥವಾ ಪತ್ರದ ಮೂಲಕ #520, ಎಂಟನೇ ಮುಖ್ಯರಸ್ತೆ, ಪೋಸ್ಟ್ ಆಫೀಸ್ ರಸ್ತೆ, ಸದಾಶಿವನಗರ, ಬೆಂಗಳೂರು–560080 ಈ ವಿಳಾಸಕ್ಕೆ ಕಳಿಸಬಹುದು’ ಎಂದು ಹೇಳಿದರು.

ವೀರಶೈವ ಸಂಘದ ಸದಸ್ಯ ಮೃತ್ಯುಂಜಯಸ್ವಾಮಿ, ವಕೀಲ ಶಿವಶಂಕರಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

ಪಿಂಚಣಿಯಲ್ಲಿ ತಾರತಮ್ಯ ವಿರೋಧಿಸಿ 23ಕ್ಕೆ ಪ್ರತಿಭಟನೆ

ಬೆಂಗಳೂರು: ನಿವೃತ್ತ ನೌಕರರಿಗೆ ಪಿಂಚಣಿ ನೀಡುವುದರಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವುದನ್ನು ವಿರೋಧಿಸಿ ಇದೇ 23ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತಿ ವೇತನದಾರರ ಸಂಘಟನೆಗಳ ಸಮನ್ವಯ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪ್ರಧಾನ ಕಾರ್ಯದರ್ಶಿ ಎ.ಎನ್. ಕೃಷ್ಣಮೂರ್ತಿ, ‘ಕಿರಿಯ ಸಿಬ್ಬಂದಿಗೆ ಹೋಲಿಸಿದರೆ 1992ರಲ್ಲಿ ನಿವೃತ್ತರಾದ ಹಿರಿಯ ಶ್ರೇಣಿಯ ಕಾರ್ಯನಿರ್ವಾಹಕರಿಗೆ ಕಡಿಮೆ ಪಿಂಚಣಿ ನೀಡಲಾಗುತ್ತಿದೆ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಕೈಗೆಟುಕುವ ದರದಲ್ಲಿ ಆರೋಗ್ಯ ವಿಮೆ ಸೌಲಭ್ಯ ದೊರೆಯುತ್ತಿಲ್ಲ. ವಿಮಾ ವೆಚ್ಚವನ್ನು ನಿವೃತ್ತರೇ ಭರಿಸುತ್ತಿದ್ದಾರೆ’ ಎಂದು ದೂರಿದರು.

‘ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ಆಡಳಿತಾತ್ಮಕ ನಿಯಂತ್ರಣ ಹೊಂದಿರುವ ಕೇಂದ್ರ ಸರ್ಕಾರ ನಮ್ಮ ಬೇಡಿಕೆ ವಿಚಾರದಲ್ಲಿ ಮೂಕ ಪ್ರೇಕ್ಷಕನಂತೆ ವರ್ತಿಸುತ್ತಿದೆ. ನಿವೃತ್ತರಿಗೆ ಕಮ್ಯುಟೇಶನ್ ಪಿಂಚಣಿ, ಗ್ರಾಚ್ಯುಯಿಟಿ, ಪಿಂಚಣಿ ಆಯ್ಕೆ ಮತ್ತು ದಿನ ಭತ್ಯೆಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಬೇಕು’ ಎಂದು ಆಗ್ರಹಿಸಿದರು.

ಕೆ.ವಿ. ಆಚಾರ್ಯ, ಜಿ.ಡಿ. ನದಾಫ್, ಎಂ.ಆರ್. ಗೋಪಿನಾಥ್ ರಾವ್, ಎ.ಎನ್. ಕೃಷ್ಣಮೂರ್ತಿ ಸುದ್ದಿಗೋಷ್ಠಿಯಲ್ಲಿದ್ದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂವಿ/ಪ್ರ(ನಿ)/ಆರ್‌ಎಂಜಿಸಿ/ಸಕಾನಿಇಂ(ಕಾ)/2024-25/1866-70 ದಿನಾಂಕ: 18.09.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ, ರಾಮನಗರ ವೃತ್ತದ ವ್ಯಾಪ್ತಿಗೆ ಬರುವ 12 ಸಿವಿಲ್ ಕಾಮಗಾರಿಗಾಗಿ, ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿ ನಿರ್ವಹಿಸಲು ಅರ್ಹತಾ ಅಗತ್ಯತೆಗಳು, ಇತ್ಯಾದಿ ಹೆಚ್ಚಿನ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ಹೈಪರ್‌ಲಿಂಕ್ “E Procurement KPTCL” ನಲ್ಲಿ ಅಥವಾ **https://kppp.karnataka.gov.in** ನಲ್ಲಿ ದಿನಾಂಕ: **24.09.2024** ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ), ರಾಮನಗರ ವೃತ್ತ, ಕವಿಪ್ರನಿನಿ, ಆರ್.ಆರ್. ಮೆಟ್ರೋ ಸ್ಟೇಷನ್ ಎದುರು, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು–560039. ಫೋನ್: 080-29620155.

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ
ಸಿ.ಪಿ. (ಸಿಎಎ) ಸಂಖ್ಯೆ 25/ಬಿಬಿ/2024
ಈ ಕೆಳಕಂಡ ಪ್ರಕರಣದಲ್ಲಿ
ಸಿ.ಎ (ಸಿಎಎ) ಸಂಖ್ಯೆ 34/ಬಿಬಿ/2023
ಕಂಪೆನಿ ಕಾನೂನು, 2013ರ ಪ್ರಕರಣದಲ್ಲಿ
ಮತ್ತು
ಕಂಪೆನಿ ಕಾನೂನು, 2013ರ ಕಲಂ 230 ರಿಂದ 232 ಹಾಗೂ ಇತರೆ ಅನ್ವಯವಾಗುವ ಕಲಂಗಳು ಹಾಗೂ ಇದರಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಪ್ರಕರಣದಲ್ಲಿ
ಮತ್ತು

[illegible]

ಯಾವುದೇ ವ್ಯಕ್ತಿಯು ಜಂಟಿ ಅರ್ಜಿಯ ಪ್ರತಿಯನ್ನು ಕೇಳಿದಲ್ಲಿ ಅಂತಹ ವ್ಯಕ್ತಿಗೆ ಅರ್ಜಿದಾರ ಕಂಪೆನಿಗಳ ವಕೀಲರು ಜಂಟಿ ಅರ್ಜಿಯ ಪ್ರತಿಯನ್ನು ಒದಗಿಸುತ್ತಾರೆ.

ಸಹಿ/– ಶ್ರೀವಾಣಿ ತ್ಯಾರ್ಲ, ನಿರ್ದೇಶಕರು, ಮೆ. ಜಿಫ್ ಮೋಜಿ ಪ್ರೈವೇಟ್ ಲಿಮಿಟೆಡ್ ಪರವಾಗಿ

ಸಹಿ/– ಮಹೇಶ್ ತೇಜ ಗೊಗಿನೇನಿ, ನಿರ್ದೇಶಕರು, ಮೆ. ಇಮೋಜಿಫಿ ಪ್ರೈವೇಟ್ ಲಿಮಿಟೆಡ್ ಪರವಾಗಿ

ದಿನಾಂಕ: ಸೆಪ್ಟೆಂಬರ್ 20, 2024

ಬಿಬಿಎಂಪಿಯಿಂದ 21 ಲಕ್ಷ ಖಾತಾ ಡಿಜಿಟಲೀಕರಣ; ಮಾಲೀಕರಿಗೆ ಎಸ್‌ಎಂಎಸ್

ಇ–ಖಾತಾ: ‘ಫೇಸ್‌ಲೆಸ್ ವ್ಯವಸ್ಥೆ’ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಸ್ತಿಗಳಿಗೆ ಇ–ಖಾತಾ ನೀಡಲು ‘ಫೇಸ್‌ಲೆಸ್, ಸಂಪರ್ಕರಹಿತ ಆನ್‌ಲೈನ್ ಡಿಜಿಟಲ್ ವ್ಯವಸ್ಥೆ’ ಜಾರಿ ಮಾಡಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನದಲ್ಲಿ ‘ಬಿಬಿಎಂಪಿಯು ಫೇಸ್‌ಲೆಸ್, ಸಂಪರ್ಕ ರಹಿತ ವ್ಯವಸ್ಥೆ’ ಪ್ರಾರಂಭಿಸುತ್ತಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಬಿಬಿಎಂಪಿಯ ರಿಜಿಸ್ಟರ್‌ಗಳಲ್ಲಿರುವ ಎಲ್ಲ 21 ಲಕ್ಷ ಖಾತಾಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಇದರ ಮುಂದಿನ ಭಾಗವಾಗಿ, ಜಿಪಿಎಸ್‌ನಲ್ಲಿ ಆಸ್ತಿಯ ಅಕ್ಷಾಂಶ, ರೇಖಾಂಶವನ್ನು ಸೆರೆಹಿಡಿಯಲು ಬಿಬಿಎಂಪಿ ಸಿಬ್ಬಂದಿ ಆಸ್ತಿ–ಕಟ್ಟಡಗಳಿಗೆ ಭೇಟಿ ನೀಡಲಿದ್ದಾರೆ. ಇ–ಖಾತಾ ನೀಡಲು ಆಸ್ತಿಯ ಜಿಪಿಎಸ್ ವಿವರಗಳು ಹಾಗೂ ಚಿತ್ರ ಕಡ್ಡಾಯವಾಗಿರುತ್ತದೆ ಎಂದರು.

‘ಆಸ್ತಿಯ ಜಿಪಿಎಸ್ ಮಾಹಿತಿ ವಿಶಿಷ್ಟ ಗುರುತಾಗಿದೆ. ಇ–ಖಾತಾದ ಎಲ್ಲ ಸೇವೆಗಳು ‘ಫೇಸ್‌ಲೆಸ್’, ಸಂಪರ್ಕರಹಿತ ಮತ್ತು ಆನ್‌ಲೈನ್ ವಿತರಣೆಯ ಸೌಲಭ್ಯ ಹೊಂದಿರುತ್ತವೆ. ಆದ್ದರಿಂದ, ನಗರದ ಆಸ್ತಿಗಳ ಮಾಲೀಕರು ಬಿಬಿಎಂಪಿ ಸಿಬ್ಬಂದಿಗೆ ಎಲ್ಲ ರೀತಿಯ ಸಹಕಾರ ನೀಡಬೇಕು’ ಎಂದು ತುಷಾರ್ ಗಿರಿನಾಥ್ ಮನವಿ ಮಾಡಿದ್ದಾರೆ.

ಆಸ್ತಿ ಮಾಲೀಕರಿಗೆ ಎಸ್‌ಎಂಎಸ್: ಇ–ಖಾತಾಗೆ ಜಿಪಿಎಸ್ ಮಾಹಿತಿ ಅಳವಡಿಸಬೇಕಿರುವುದರಿಂದ ಬಿಬಿಎಂಪಿ ವತಿಯಿಂದ ಆಸ್ತಿಗಳ ಮಾಲೀಕರಿಗೆ ಗುರುವಾರದಿಂದ ಎಸ್‌ಎಂಎಸ್ ಕಳುಹಿಸುವ ಪ್ರಕ್ರಿಯೆ ಆರಂಭವಾಗಿದೆ. ‘ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಆಸ್ತಿಗೂ ಇ–ಖಾತಾವನ್ನು ಸೃಷ್ಟಿ ಮಾಡಲಾಗುತ್ತಿದೆ. ಇದಕ್ಕಾಗಿ ಆಸ್ತಿಯ ಜಿಪಿಎಸ್ ದತ್ತಾಂಶ ಕಡ್ಡಾಯವಾಗಿವೆ. ನಿಮ್ಮ ಆಸ್ತಿಯ ಜಿಪಿಎಸ್ ದತ್ತಾಂಶ ಸೆರೆಹಿಡಿಯಲು ಬಿಬಿಎಂಪಿ ಸಿಬ್ಬಂದಿ ಕೆಲವೇ ದಿನಗಳಲ್ಲಿ ನಿಮ್ಮನ್ನು ಭೇಟಿ ಮಾಡುತ್ತಾರೆ. ಆಸ್ತಿ ತೆರಿಗೆ ರಸೀದಿಯ ನಕಲು ಪ್ರತಿಯನ್ನು ಸಿದ್ಧವಾಗಿರಿಸಿಕೊಳ್ಳಿ. ಬಿಬಿಎಂಪಿಯ ಸಿಬ್ಬಂದಿಯೊಂದಿಗೆ ಸಹಕರಿಸಿ, ನಿಮ್ಮ ಆಸ್ತಿಗೆ ಜಿಪಿಎಸ್ ಅನ್ನು ಸರಿಯಾಗಿ ಟ್ಯಾಗ್ ಮಾಡಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಿ. ಆಸ್ತಿಯ ಜಿಪಿಎಸ್ ‘ಆಸ್ತಿಯ ಭೂ–ಆಧಾರ್’ ಆಗಿರುತ್ತದೆ. ಅದರಂತೆ ಬಳಸಲಾಗುತ್ತದೆ’ ಎಂದು ಎಸ್‌ಎಂಎಸ್‌ನಲ್ಲಿ ಮಾಹಿತಿ ನೀಡಲಾಗಿದೆ.

‘ಎ–ಖಾತಾ ಅಥವಾ ಬಿ–ಖಾತಾ ಹೊಂದಿರುವ ಕಟ್ಟಡಗಳು ಹಾಗೂ ನಿವೇಶನಗಳ ಮಾಲೀಕರಿಗೂ ಇ–ಖಾತಾ ನೀಡಲಾಗುತ್ತದೆ’ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ನಗರಸಭೆ
ಚಿಂತಾಮಣಿ
ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್‌ಮೆಂಟ್ ಮೂಲಕ KW-1, KG-1, KG-2 ದಸ್ತಾವೇಜಿನಲ್ಲಿ **ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ಆಶಾ/ಸಿಆರ್/36/2024–25, ದಿನಾಂಕ: 17.09.2024** ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ E-Procurement KPPP ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ವಿವಿಧ ಅನುದಾನದಡಿಯಲ್ಲಿ ಖರೀದಿಗೆ ಸಂಬಂಧಿಸಿದಂತೆ ಇಂಡೆಂಟ್ ಸಂಖ್ಯೆಗಳು: (1) INDENT NO: DMA/2024-25/SE 3676. (2) INDENT NO: DMA/2024-25/SE 3704. (3) INDENT NO: DMA/2024-25/SE 3705. (4) INDENT NO: DMA/2024-25/IND 3387. (5) NDENT NO: DMA/2024-25/IND 3385. ಸೂಚನೆಗಳು: (1) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ, ಸಮಯ: 30.09.2024 ರಂದು ಸಮಯ ಸಂಜೆ 17:00 ಗಂಟೆಯವರೆಗೆ** (2) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ, ಸಮಯ: 01.10.2024 ರಂದು ಸಂಜೆ: 5:05** ನಿಮಿಷದ ನಂತರ ಅಥವಾ ಸದರಿ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ನಂತರದ ಕೆಲಸದ ದಿನ ತೆರೆಯಲಾಗುವುದು. (3) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ **ದಿನಾಂಕ, ಸಮಯ: 03.10.2024 ರಂದು ಸಂಜೆ: 5:05** ನಿಮಿಷದ ನಂತರ ಅಥವಾ ಸದರಿ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ನಂತರದ ಕೆಲಸದ ದಿನ ತೆರೆಯಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:189/ಕೆಎಸ್‌ಎಂಸಿಎ/2024–25

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./ಭೂ.ಉ.ಬ./08/2024–25/1459 ದಿನಾಂಕ : 17–09–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ, ಈ ಕೆಳಕಂಡ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆ ಯಾಗಿರುವ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವಿನಾಯಕ ಬಾಬು ಗಾಂವಕರ ಬಿನ್ ಬಾಬು ಪಿ ಗಾಂವಕರ	ಹಾರೋಹಳ್ಳಿ	ಹಾರೋಹಳ್ಳಿ	ಹಾರೋಹಳ್ಳಿ	748/10	0–05	ಕೈಗಾರಿಕೆ	ವಸತಿ
					ಒಟ್ಟು	0–05		

ಷರಾ : ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರಿಗೆ ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳನ್ನು ಹಂಚುವುದಾಗಿ, ವಿನ್ಯಾಸ ಅಭಿವೃದ್ಧಿಪಡಿಸುವ ಸಮಯದಲ್ಲಿ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುವುದಾಗಿ ಹಾಗೂ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದಾಗಿ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ **“ಕೈಗಾರಿಕಾ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/330/ಮಣಿಪಾಲ್/2024–25

ಬಿಎಸ್‌ವೈ ಬಂಧನಕ್ಕೆ ತಡೆ: ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ, ‘ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ’ ಎಂಬ ತನ್ನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಹಿರಿಯ ವಕೀಲರೂ ಆದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ‘ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಲಂ 35ರ ಪ್ರಕಾರ ಅಪರಾಧದ ಆರೋಪವನ್ನು ಪರಿಗಣಿಸಿದ ನಂತರ ಒಂದು ತಿಂಗಳ ಅವಧಿಯಲ್ಲಿ ಸಂತ್ರಸ್ತೆಯ ಹೇಳಿಕೆ ದಾಖಲಿಸಿಕೊಳ್ಳಬೇಕಿದೆ. ಆದ್ದರಿಂದ, ಈ ಹಿಂದೆ ನೀಡಿರುವ ತಡೆ ಆದೇಶ ತೆರವುಗೊಳಿಸಬೇಕು’ ಎಂದು ಮನವಿ ಮಾಡಿದರು.

ಆದರೆ ಇದನ್ನು ಒಪ್ಪದ ನ್ಯಾಯಪೀಠ, ‘ಒಟ್ಟಿಗೇ ಎಲ್ಲವನ್ನೂ ಸೇರಿಸಿ ಗೊಂದಲ ಮಾಡಿಕೊಳ್ಳುವುದು ಬೇಡ. ವಿಚಾರಣೆ ನಡೆಸಿ ಇತ್ಯರ್ಥಪಡಿಸೋಣ’ ಎಂದು ಹೇಳಿ ಇದೇ 27ರ ಮಧ್ಯಾಹ್ನ 2.30ಕ್ಕೆ ವಿಚಾರಣೆ ಮುಂದೂಡಿತು. ಈ ಮೊದಲಿನ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರೂ ಹಾಜರಿದ್ದರು.

ಸೀಟು ರದ್ದತಿಗೆ ಇಂದೇ ಕೊನೆ ದಿನ

ಬೆಂಗಳೂರು: ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ (ಎಂಸಿಸಿ) ಎರಡನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆ ಫಲಿತಾಂಶವನ್ನು ಗುರುವಾರ ಪ್ರಕಟಿಸಿದೆ. ಆ ಸೀಟನ್ನೇ ಉಳಿಸಿಕೊಳ್ಳಲು ಬಯಸುವವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆಯಾದ ಸೀಟನ್ನು ರದ್ದುಪಡಿಸಿಕೊಳ್ಳಲು ಸೆ.20ರ ಮಧ್ಯಾಹ್ನ 2ರವರೆಗೆ ಅವಕಾಶ ನೀಡಲಾಗಿದೆ.

ವಿದ್ಯಾರ್ಥಿಗಳು ಕೆಇಎ ಕಚೇರಿಗೆ ಖುದ್ದಾಗಿ ಹಾಜರಾಗಿ ರದ್ದುಪಡಿಸಿಕೊಳ್ಳಬೇಕು. ₹10,000 ದಂಡ ವಿಧಿಸಿ, ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. ರದ್ದುಪಡಿಸಿಕೊಳ್ಳುವಾಗ ಎಂಸಿಸಿ ಇಂದ ಹಂಚಿಕೆಯಾದ ಸೀಟುಗಳ ವಿವರ ಸಲ್ಲಿಸಬೇಕು. ಎಲ್ಲಾ ಸೀಟು ಪರಿಗಣಿಸಿ, ಎರಡನೇ ಸುತ್ತಿನ ಅಂತಿಮ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಭಾರತ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ
ದಿನಾಂಕ 20 ಸೆಪ್ಟೆಂಬರ್, 2024

“ಮಾರಣಾಂತಿಕ ಅನಾರೋಗ್ಯಕ್ಕೆ ಈಡಾಗಿರುವ ರೋಗಿಗಳ ಜೀವ ಬೆಂಬಲ ಹಿಂಪಡೆಯುವಿಕೆ” ಕುರಿತಾದ ಕರಡು ಮಾರ್ಗಸೂಚಿ
ಉಲ್ಲೇಖ ಸಂ. ಜೆಡ್–28020/13/2024–ಎಸ್‌ಎಸ್–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ ಇವರು, “ಮಾರಣಾಂತಿಕ ಅನಾರೋಗ್ಯಕ್ಕೆ ಈಡಾಗಿರುವ ರೋಗಿಗಳ ಜೀವ ಬೆಂಬಲ ಹಿಂಪಡೆಯುವಿಕೆ” ಕುರಿತಂತೆ ಕರಡು ಮಾರ್ಗಸೂಚಿ ರೂಪಿಸಿದ್ದಾರೆ. ಈ ಮಾರ್ಗಸೂಚಿಗಳ ಉದ್ದೇಶ ಕೆಳಗಿನಂತಿರುತ್ತದೆ:

- ರೋಗಿಗಳ ಬಳಲುವಿಕೆಯನ್ನು ಕಡಿಮೆಗೊಳಿಸುವುದು: ಗುಣವಾಗುವಿಕೆಯ ಭರವಸೆ ಇಲ್ಲದಿರುವ ಜೀವವೊಂದು ಅನಗತ್ಯ ನೋವು ಅನುಭವಿಸುವುದನ್ನು ತಡೆಗಟ್ಟಿ, ಮಾರಣಾಂತಿಕ ಅನಾರೋಗ್ಯಕ್ಕೆ ಈಡಾಗಿರುವ ರೋಗಿಗೆ ಸೂಕ್ತ ಆರೈಕೆಯನ್ನು ಖಚಿತಪಡಿಸುವುದು.
- ರೋಗಿಯ ಸ್ವಾಯುತ್ತತೆಗೆ ಗೌರವ: ಆರೋಗ್ಯ ಅಧಿಕಾರಿಗಳು, ರೋಗಿಗಳು ಮತ್ತು ಕುಟುಂಬದವರ ಮಧ್ಯೆ, ಜೀವದ ಅಂತಿಮ ಆಕಾಂಕ್ಷೆಗಳ ಕುರಿತು ಮುಕ್ತವಾಗಿ ಚರ್ಚಿಸುವುದನ್ನು ಉತ್ತೇಜಿಸುವುದು.
- ಆರ್ಥಿಕ ಹೊರೆ ತಗ್ಗಿಸುವುದು: ರೋಗಿಯು ಉತ್ತಮವಾಗಿ ಚೇತರಿಸಿಕೊಳ್ಳಲು ಲಭ್ಯವಿರುವ ಸಂಪನ್ಮೂಲಗಳತ್ತ ತೆರಳಲು ಅವಕಾಶ ನೀಡುವ ಮೂಲಕ, ಕುಟುಂಬಗಳ ಮೇಲೆ ಬೀಳುವ ಆರ್ಥಿಕ ಹೊರೆಯನ್ನು ಶಮನಗೊಳಿಸುವುದು.
- ಭಾವನಾತ್ಮಕ ಒತ್ತಡಗಳನ್ನು ಕಡಿತಗೊಳಿಸುವುದು: ಜೀವದ ಕೊನೆಯ ಕ್ಷಣಗಳ ಆರೈಕೆ ಆಯ್ಕೆಗಳ ಕುರಿತು ಕುಟುಂಬಗಳೊಂದಿಗೆ ಹಂಚಿಕೊಳ್ಳಬೇಕಾದ ಕಠಿನ ಚರ್ಚೆಗಳಿಗೆ ಇಂಬು ನೀಡಲು, ಆರೋಗ್ಯ ಅಧಿಕಾರಿಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಒದಗಿಸುವುದು.
- ಸಂಪನ್ಮೂಲ ಹಂಚಿಕೆ ಉತ್ತಮಗೊಳಿಸುವುದು: ತುರ್ತು ಅಥವಾ ಕಠಿನ ಆರೈಕೆಗಳ ಮಧ್ಯಸ್ಥಿಕೆಯಿಂದ ಬದುಕಿ ಉಳಿಯಬಹುದಾದ ರೋಗಿಗಳಿಗೆ ಐಸಿಯು ಹಾಸಿಗೆಗಳ ಹಂಚಿಕೆಯನ್ನು ಖಚಿತಪಡಿಸುವುದು.

ಈ ವಿಷಯವು ಸಾಮಾನ್ಯ ಸಾರ್ವಜನಿಕರ ಆರೋಗ್ಯ ವಿಚಾರ ಆಗಿರುವದರಿಂದ, 20 ಅಕ್ಟೋಬರ್, 2024 ರವರೆಗೆ ಟೀಕೆ ಟಿಪ್ಪಣಿಗಳನ್ನು ಆಹ್ವಾನಿಸಲಾಗಿದೆ. ಆರೋಗ್ಯ ಸಚಿವಾಲಯದ ಕೆಳಕಂಡ ಪೋರ್ಟಲ್‌ನಲ್ಲಿ ಕರಡು ಮಾರ್ಗಸೂಚಿಗಳು ಲಭ್ಯವಿರುತ್ತವೆ:

https://main.mohfw.gov.in/sites/default/files/Guidelines%20for%20withdrawal%20of%20Life%20Support.pdf
ಮತ್ತು
https://dghs.gov.in/Uploaddata/Guidelines%20for%20withdrawal%20of%20Life%20Support%2014624.pdf

ಟೀಕೆ ಟಿಪ್ಪಣಿಗಳನ್ನು ಇಲ್ಲಿಗೆ ಕಳುಹಿಸಬಹುದು commentswols@gmail.com

ಸಹಿ/–
ಸಹಾಯಕ ಮಹಾನಿರ್ದೇಶಕರು, ಡೆಪ್ಯುಟಿ ಡಿಜಿಎಚ್‌ಎಸ್, ಆ&ಕು.ಕ.ಸಚಿವಾಲಯ

CBC 17135/11/0011/2425

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂ.ಉ./13/2024–25/1451 ದಿನಾಂಕ : 17–09–2024

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ / ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ. ಹೆಚ್. ಬಿ. ಗಯಾಜುದ್ದೀನ್ ಬಿನ್ ಲೇಟ್ ಬಾಬಾಸಾಹೇಬ್	ಹಾರೋಹಳ್ಳಿ	ಹಾರೋಹಳ್ಳಿ	ಹಾರೋಹಳ್ಳಿ	666/10	0–14	ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	ವಸತಿ
					ಒಟ್ಟು	0–14		

ಸಹಿ/– ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/335/ಮಣಿಪಾಲ್/2024–25

ನ್ಯಾಶನಲ್ ಕಂಪನಿ ಲಾ ಟ್ರಿಬ್ಯೂನಲ್, ಬೆಂಗಳೂರು ಪೀಠ

ಕಾರ್ಪೊರೇಟ್ ಭವನ್, 12ನೇ ಮಹಡಿ, ರಹೇಜಾ ಟವರ್ಸ್, ಎಂ.ಜಿ. ರಸ್ತೆ, ಬೆಂಗಳೂರು–560001

IA (IBC)165/2024 in CP(IB) No. 112/BB/2019

ಇವರ ನಡುವೆ:
ಶ್ರೀ ರವೀಂದ್ರ ಬೆಳೆಯೂರ್ ...ಅರ್ಜಿದಾರರು/ಪರಿಹಾರ ವೃತ್ತಿಪರರು
ಮತ್ತು
ಶ್ರೀ ದಯಾನಂದ & ಇತರ 16 ಪ್ರತಿವಾದಿಗಳು ...ಪ್ರತಿವಾದಿಗಳು

ನೋಟೀಸ್

ಗೆ,

ಸ್ಪೈಗೆಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
ಪ್ರತಿನಿಧಿಗಳು: ಅದರ ನಿರ್ದೇಶಕರು
ನೋಂದಾಯಿತ ಕಚೇರಿ: ನಂ. 3, 'ರಾಧಾ', 11ನೇ ಮೇನ್, ಬೇಗೂರು ಮುಖ್ಯ ರಸ್ತೆ
ಹೊಂಗಸಂದ್ರ, ಬೆಂಗಳೂರು–560 068 ... ಪ್ರತಿವಾದಿ ಸಂ. 11

ಆಸ್ಥಾ ಮಿನ್‌ಮೆಟ್ (ಇಂಡಿಯಾ) ಲಿಮಿಟೆಡ್
ಪ್ರತಿನಿಧಿಗಳು: ಅದರ ನಿರ್ವಾಹಕ ನಿರ್ದೇಶಕ/ನಿರ್ದೇಶಕರು
ನೋಂದಾಯಿತ ಕಚೇರಿ: ನಂ. W-204
2ನೇ ಮಹಡಿ, ಸನ್‌ರೈಸ್ ಚೇಂಬರ್ಸ್
ಹಲಸೂರು ರಸ್ತೆ, ಬೆಂಗಳೂರು–560 042 ... ಪ್ರತಿವಾದಿ ಸಂ. 15

ಶ್ರೀ ದುರ್ಗಾ ಟ್ರೇಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್
ಪ್ರತಿನಿಧಿಗಳು: ಅದರ ನಿರ್ದೇಶಕರಾದ ಶ್ರೀ ಅಜಯ್ ಕುಮಾರ್ ಭುವಾಲ್ಕ, ಶ್ರೀ ಅಂಕಿತ್ ಭುವಾಲ್ಕ ಮತ್ತು ಶ್ರೀ ಸುರೇಶ್ ಕುಮಾರ್ ಭುವಾಲ್ಕ
ನೋಂದಾಯಿತ ಕಚೇರಿ: 10ನೇ ಮೈಲಿ, ಹಳೇ ಮದ್ರಾಸ್ ರಸ್ತೆ,
ಬಂದಾಪುರ ಗ್ರಾಮ,
ಬೆಂಗಳೂರು–560 049 ... ಪ್ರತಿವಾದಿ ಸಂ. 17

ಈ ಕೆಳಗೆ ಸಹಿ ಮಾಡಿರುವವರು ಕಾರ್ಪೋರೇಟ್ ಸಾಲಗಾರ ಕಂಪನಿಯ ಆಸ್ತಿ ಮೌಲ್ಯಕ್ಕೆ ತಮ್ಮ ಪಾಲಿನ ಮೌಲ್ಯಾಂಶವನ್ನು ನೀಡಬೇಕು ಎಂಬ ಪರಿಹಾರ ಕೋರಿ ಮಾನ್ಯ ನ್ಯಾಶನಲ್ ಕಂಪನಿ ಲಾ ಟ್ರಿಬ್ಯೂನಲ್, ಬೆಂಗಳೂರು, ಇವರ ಮುಂದೆ ಅರ್ಜಿ IA ಸಂ. 165/2024 in CP(IB) No. 112/BB/2019 ಅನ್ನು ಸಲ್ಲಿಸಿರುತ್ತಾರೆ.

ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ವಿಷಯವು ಮಾನ್ಯ ಟ್ರಿಬ್ಯೂನಲ್‌ನ ಮುಂದೆ ದಿ. 03.09.2024ರಂದು ವಿಚಾರಣೆಗೆ ಬಂದಿತ್ತು. ಪ್ರ. 11, ಪ್ರ. 15 ಮತ್ತು ಪ್ರ. 17ರ ವಿಷಯದಲ್ಲಿ ಒಂದು ಸಾರ್ವಜನಿಕ ನೋಟೀಸನ್ನು ನೀಡುವಂತೆ ಅರ್ಜಿದಾರರಿಗೆ ಮಾನ್ಯ ಟ್ರಿಬ್ಯೂನಲ್ ನಿರ್ದೇನವನ್ನು ನೀಡಿರುತ್ತದೆ.

ಅದರಂತೆ, ಒಂದು ವೇಳೆ ಈ ಮೇಲಿನ ಅರ್ಜಿಯನ್ನು ಪ್ರತಿವಾದಿಸಲು ಉದ್ದೇಶಿಸುವುದಾದಲ್ಲಿ ನೀವುಗಳು ಈ ಮಾನ್ಯ ಟ್ರಿಬ್ಯೂನಲ್‌ನ ಮುಂದೆ ವೈಯಕ್ತಿಕವಾಗಿ, ಇಲ್ಲವೆ ನಿಮ್ಮನ್ನು ಪ್ರತಿನಿಧಿಸುವ ಸಕ್ರಮವಾಗಿ ನೇಮಿಸಲ್ಪಟ್ಟ ವಕೀಲರ ಮೂಲಕ ಅಥವಾ ಈ ಮೇಲಿನ ಕೇಸಿನಲ್ಲಿ ನಿಮ್ಮ ಪರವಾಗಿ ಕಾನೂನಿನ ಮೂಲಕ ನೇಮಕಗೊಂಡ ಪ್ರಾಧಿಕೃತ ಪ್ರತಿದಿನಿಧಿಯ ಮೂಲಕ 15.10.2024ರಂದು ಹಾಜರಾಗುವಂತೆ ನಿಮಗೆ ಈ ಮೂಲಕ ನೋಟೀಸನ್ನು ನೀಡಲಾಗುತ್ತಿದೆ. ಒಂದು ವೇಳೆ ಹಾಜರಾಗಲು ತಪ್ಪಿದಲ್ಲಿ, ತಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆ ನಡೆದು ತೀರ್ಮಾನಿಸಲಾಗುವುದು.

ಸ್ಥಳ: ಬೆಂಗಳೂರು
ದಿನಾಂಕ: 19–09–2024

ಸಹಿ/–
ರವೀಂದ್ರ ಬೆಳೆಯೂರ್
ಪರಿಹಾರ ವೃತ್ತಿಪರರು
ಭಾರತ್ ಇನ್ಫ್ರಾ ಎಕ್ಸ್‌ಪೋರ್ಟ್ಸ್ & ಇಂಪೋರ್ಟ್ಸ್ ಲಿಮಿಟೆಡ್
IBBI ನೋಂದಣಿ ಸಂ. IPA-001/IP-P00189/2017-18/10368

ನಗರದಲ್ಲಿ ಇಂದು

ಎಐಎಂಎಲ್–ಬಿಐಒ ಸಮ್ಮೇಳನ: ಆಯೋಜನೆ: ಡಾ.ಅಗರವಾಲ್ ಹಾಸ್ಪಿಟಲ್ಸ್, ಸ್ಥಳ: ಎನ್‌ಎಂಕೆಆರ್‌ವಿ, ಮಂಗಳ ಮಂಟಪ, ಜಯನಗರ ಮೂರನೇ ಬ್ಲಾಕ್, ಬೆಳಿಗ್ಗೆ 9

ಗಾರ್ಮೆಂಟ್ ಟೆಕ್ನಾಲಜಿ ಎಕ್ಸ್‌ಪೊ–2024: ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ, ಬೆಳಿಗ್ಗೆ 10

ದಶಮಾನೋತ್ಸವ ಸಂಭ್ರಮ, ಛಾಯಾಗ್ರಾಹಕರ ಸಮ್ಮೇಳನ, ‘ಡಿಜಿ ಇಮೇಜ್’ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ: ಉದ್ಘಾಟನೆ: ಡಿ. ವೀರೇಂದ್ರ ಹೆಗ್ಗಡೆ, ಅತಿಥಿಗಳು: ಜಿ. ಪರಮೇಶ್ವರ, ಅಶ್ವಿನಿ ಪುನೀತ್ ರಾಜ್‌ಕುಮಾರ್, ಡಾ.ಸಿ.ಎನ್. ಮಂಜುನಾಥ್, ಎಚ್.ಎನ್. ನಾಗೇಶ್, ಶ್ರೀನಿವಾಸ ಕೊಲ್ಲೂರು, ಓಂ ಪ್ರಕಾಶ್, ಆಯೋಜನೆ: ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘ, ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಅತಿಥಿ: ಎಚ್.ಎ. ರಂಗನಾಥ್, ಅಧ್ಯಕ್ಷತೆ: ಟಿ.ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಅಕಾಡೆಮಿ ಪದವಿ ಕಾಲೇಜು, ಹೆಣ್ಣೂರು ಮುಖ್ಯರಸ್ತೆ ಕಲ್ಯಾಣನಗರ, ಬೆಳಿಗ್ಗೆ 10

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶ್ರೀನಿವಾಸ, ನಾಗರಾಜ ರಾವ್‌ಗೆ ಮೈತ್ರೀ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೈತ್ರೀ ಸಂಸ್ಕೃತ– ಸಂಸ್ಕೃತಿ ಪ್ರತಿಷ್ಠಾನ ವತಿಯಿಂದ ನೀಡಲಾಗುವ 2024ನೇ 'ಮೈತ್ರೀ ಪುರಸ್ಕಾರ'ಕ್ಕೆ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ ಹಾಗೂ ವಿದ್ವಾಂಸ ಡಾ.ಎಚ್.ವಿ. ನಾಗರಾಜ ರಾವ್ ಅವರನ್ನು ಆಯ್ಕೆ ಮಾಡಲಾಗಿದೆ.

ಎಚ್.ವಿ. ನಾಗರಾಜ ರಾವ್

ಶ್ರೀನಿವಾಸ ವರಖೇಡಿ

ಸಂಸ್ಕೃತ, ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿನ ವಿಶೇಷ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಅಕ್ಟೋಬರ್ 17ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮೈತ್ರೀ ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಸ್ಮರಣಿಕೆ ಹಾಗೂ ಗ್ರಂಥಗಳನ್ನು ಒಳಗೊಂಡಿದೆ.

ಕೊತ್ತೂರು ಮಂಜುನಾಥ್ ಅರ್ಜಿ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: 'ನಕಲಿ ಜಾತಿ ಪ್ರಮಾಣ ಪತ್ರ ಪಡೆದು ವಂಚನೆ ಮಾಡಿದ ಆರೋಪದಡಿ ನನ್ನ ವಿರುದ್ಧ ದಾಖಲಿಸಲಾಗಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಕೋಲಾರದ ಶಾಸಕ ಜಿ.ಮಂಜುನಾಥ ಕೊತ್ತೂರು ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಆದೇಶ ಕಾಯ್ದಿರಿಸಿದೆ.

'ಕೋಲಾರದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ-2ರಲ್ಲಿನ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿ ಜಿ.ಮಂಜುನಾಥ್ (39) ಕೊತ್ತೂರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು 'ಶಾಸಕರು–ಸಂಸದರ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿದರು.

'ಬಿಜೆಪಿ ಅವಧಿಯಲ್ಲಿಯೇ ಹೆಚ್ಚು ಕೋಮುಗಲಭೆ'

ಪ್ರಜಾವಾಣಿ ವಾರ್ತೆ

ಆನೇಕಲ್: ದೇಶದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಹೆಚ್ಚು ಕೋಮುಗಲಭೆ ಸಂಭವಿಸಿದ್ದು, ಗಡಿಯಲ್ಲಿ ಯೋಧರು ಮರಣಹೊಂದಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು.

ಬೊಮ್ಮಸಂದ್ರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ವಿವಿಧೆಡೆ ಬಿಜೆಪಿ, ಬಜರಂಗ ದಳದಿಂದಾಗಿ ಹೆಚ್ಚು ಕೋಮುಗಲಭೆಗಳಾಗಿವೆ. ಕಾಂಗ್ರೆಸ್ ಪಕ್ಷ ಸಾಮರಸ್ಯವನ್ನು ಕಾಪಾಡುವ ಪಕ್ಷವಾಗಿದೆ. ಕೋಮುಗಲಭೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದರು.

ಬಿಜೆಪಿ ಅಧಿಕಾರದ್ದಲ್ಲಿದ್ದ ನಾಲ್ಕು ವರ್ಷಗಳು ಪೊಲೀಸ್ ನೈತಿಕಗಿರಿಯನ್ನು ಮಾಡುತ್ತಿದ್ದರು. ಪಾರ್ಕ್, ಪಬ್‌ಗಳಲ್ಲಿ ಪೊಲೀಸ್ ನೈತಿಕಗಿರಿಯ ಮೂಲಕ ಹಲ್ಲೆ ಪ್ರಕರಣಗಳು ನಡೆದಿದೆ. ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆಯಾಗಬೇಕು ಎಂಬುದು ಸರ್ಕಾರದ ಉದ್ದೇಶ ಎಂದರು. ನೆರೆಯ ರಾಷ್ಟ್ರಗಳೊಂದಿಗೆ ಉತ್ತಮ ಸಂಪರ್ಕ ಸಾಧಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಬಡ ಜನರು ಪರದಾಡುವಂತಾಗಿದೆ. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ಎಂದು ಟೀಕಿಸಿದರು.

ಕಾಂಗ್ರೆಸ್ ಸರ್ಕಾರ ಬಿಜೆಪಿಯ ಹಗರಣಗಳ ಬಗ್ಗೆ ತನಿಖೆ ಮಾಡಿದ್ದರೆ ಹಲವಾರು ಮುಖಂಡರುಗಳು ಜೈಲಿನಲ್ಲಿರುತ್ತಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕಾರಣ ಮಾಡುವುದಿಲ್ಲ ಎಂದು ಹೇಳಿದರು.

THE NATIONAL INSTITUTE OF ENGINEERING (NIE)
MYSURU, KARNATAKA
ESTD : 1946
Autonomous Institution, Affiliated to VTU. Recognized by AICTE., Accredited by NAAC, New Delhi

NIE 78 YEARS ...Moving Ahead
Climbing the Ladder
Our Institute's Remarkable Rise in National Rankings!

INDIA TODAY
We are Ranked as One of the Best Colleges in India
INDIA TODAY-MDRA SURVEY 2024-25
16th RANK
BEST ENGINEERING COLLEGES (PRIVATE) in India.

Outlook
We are Ranked as One of the Best Colleges in India
OUTLOOK-ICARE RANKINGS 2024-25
12th RANK in Private Engineering Colleges of India
4th RANK in Private Engineering Colleges of Karnataka

THE WEEK
We are Ranked as One of the Best Colleges in India
HANSA SURVEY 2024-25
18th RANK in Private Engineering Colleges of India
10th RANK in Private Engineering Colleges of South India

30000+ Engineering Leaders | 25000+ NIE Alumni spread across the world | 75 State of the Art Labs | 105+ Ph.D Faculties | AICTE Idea Lab | Skill Development and access to 11k+ online Coursera Courses

ONLY FEW MANAGEMENT SEATS ARE AVAILABLE
IMMEDIATE ADMISSION
• ECE • CSE • CSE (AI&ML) • ISE

SOUTH CAMPUS
Manandavadi Road, Mysuru - 570 008
COURSES OFFERED
- Civil Engineering
- Mechanical Engineering
- Electrical & Electronics Engineering
- Electronics & Communication Engineering
- M.Tech in Major Disciplines

CET CODE: E022 (Aided) E056 (Unaided)
COMED-K CODE: E142

NORTH CAMPUS
Koorgalli Industrial Area, Mysuru - 570 018
COURSES OFFERED
- Computer Science & Engineering
- Computer Science & Engineering (AI&ML)
- Information Science & Engineering
- Master of Computer Application

CET CODE: E178 (Unaided)
COMED-K CODE: E085

For Admissions Contact:
63669 14771 / 63669 14772
Visit: www.nie.ac.in
E-mail: admission@nie.ac.in
Scan QR Code for More Details

MARUTI SUZUKI
NEXA

VELOCITY EDITION
Starting at ₹7.29 LAKH
Limited Period Offer.

INDIA'S FASTEST 1 LAKH SALES
Scan to know more about FRONX
FRONX
*Claim verified by independent research agency - JATO Dynamics Limited for Fastest to 1Lakh sales in SUV and PV categories since launch on 19-January - 2024.

1.0L Turbo Boosterjet Engine with Progressive Smart Hybrid | 360 View Camera | Head Up Display | NEXTre' Rear Combination Lights | In-Built Suzuki Connect | Wireless Charger

CONTACT YOUR NEAREST NEXA DEALER: SOUTH BANGALORE: NEXA KANAKAPURA ROAD (SURAKSHAA CAR CARE PVT LTD PH: 9449865622), NEXA ELECTRONIC CITY (SURAKSHAA CAR CARE PVT. LTD. PH: 080-25732229, 8884442229), NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550), NEXA KORAMANGALA (KATARIA AUTOMOBILES PVT. LTD. PH: 9513363262), WEST BANGALORE: NEXA NAGARBHAVI (BIMAL AUTO AGENCY PH: 08030693069), NEXA RAJAJINAGAR (VARUN MOTORS PVT. LTD. PH: 8884000042), NEXA RR NAGAR (KALYANI MOTORS PH: 9590990011), EAST BANGALORE: NEXA ORR MARATHALLI (BIMAL AUTO AGENCY PH: 08030693069), NEXA BANASWADI (KALYANI MOTORS PH: 9590990011), NEXA WHITEFIELD (VARUN MOTORS PVT. LTD. PH: 9620827474), NORTH BANGALORE: NEXA NAGASANDRA (KALYANI MOTORS PH: 9590990011), NEXA YELAHANKA (MANDOVI MOTORS PVT. LTD. PH: 9886003030), NEXA HEBBAL ORR (VARUN MOTORS PVT. LTD. PH: 9513838777), CENTRAL BANGALORE: NEXA MUSEUM ROAD (PRATHAM MOTORS PH: 9880006006), NEXA PALACE (MANDOVI MOTORS PH: 9886003030), TUMKUR: NEXA SIRA ROAD (SAKETH AUTOMOBILES PH: 9900500051).

Contact us at 1800-200-[6392] 1800-102-[NEXA]
www.nexaexperience.com
NOW YOU CAN ALSO BOOK ONLINE

SMART FINANCE
AN ONLINE END-TO-END CAR FINANCE SOLUTION
Scan to know more.
- Multiple financiers
- Digital Document Upload
- Live Loan status
- Complete transparency (associated fees & charges)

*Terms and conditions apply. Offer valid for select models/variants and in select states only. Accessories and features shown may not be part of standard equipment and may vary from variant to variant. Images used are for illustration purpose only. Appearance of black shade on glass is due to lighting effect. Maruti Suzuki reserves the right to withdraw the offers at any point in time without any advance notice.

वस्त्र मंत्रालय
MINISTRY OF TEXTILES
सत्यमेव जयते

ಕೇಂದ್ರ ರೇಷ್ಮೆ ಮಂಡಳಿ
ಅಮೃತ ಮಹೋತ್ಸವ ಸಂಭ್ರಮಾಚರಣೆ, ಸಾಂಸ್ಕೃತಿಕ ನಗರಿ, ಮೈಸೂರು

केंद्रीय रेशम बोर्ड, भारत
CENTRAL SILK BOARD, INDIA

ಸ್ಥಳ:
ಘಟಿಕೋತ್ಸವ ಸಭಾಂಗಣ,
ಕರ್ನಾಟಕ ರಾಜ್ಯ
ಮುಕ್ತ ವಿಶ್ವವಿದ್ಯಾಲಯ

केंद्रीय रेशम बोर्ड
CENTRAL SILK BOARD
75
रेशमी वर्ष SILKEN YEARS

ದಿನಾಂಕ:
೨೦ನೇ ಸೆಪ್ಟೆಂಬರ್ ೨೦೨೪
ಬೆಳಗ್ಗೆ ೧೦.೦೦ ಘಂಟೆ

ಮುಖ್ಯ ಅತಿಥಿ
ಶ್ರೀ ಗಿರಿರಾಜ್ ಸಿಂಗ್
ಗೌರವಾನ್ವಿತ ಜವಳಿ ಸಚಿವರು, ಭಾರತ ಸರ್ಕಾರ

ವಿಶೇಷ ಅತಿಥಿ
ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಗೌರವಾನ್ವಿತ ಭಾರೀ ಕೈಗಾರಿಕೆಗಳು ಹಾಗೂ ಉಕ್ಕು ಸಚಿವರು, ಭಾರತ ಸರ್ಕಾರ

ಇವರ ಘನ ಉಪಸ್ಥಿತಿಯಲ್ಲಿ

ಶ್ರೀ ಪಬಿತ್ರಾ ಮಾರ್ಗರಿಟ
ಗೌರವಾನ್ವಿತ ವಿದೇಶಾಂಗ ವ್ಯವಹಾರಗಳು ಹಾಗೂ ಜವಳಿ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ವಿ. ಸೋಮಣ್ಣ
ಗೌರವಾನ್ವಿತ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ಕೆ. ವೆಂಕಟೇಶ್
ಗೌರವಾನ್ವಿತ ಪಶುಸಂಗೋಪನೆ ಹಾಗೂ ರೇಷ್ಮೆ ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಗೌರವಾನ್ವಿತ ಸಂಸದರು, ಲೋಕಸಭೆ, ಮೈಸೂರು

ಡಾ. ಕೆ. ಸುಧಾಕರ್
ಗೌರವಾನ್ವಿತ ಸಂಸದರು, ಲೋಕಸಭೆ, ಚಿಕ್ಕಬಳ್ಳಾಪುರ ಹಾಗೂ ಕೇಂದ್ರ ರೇಷ್ಮೆ ಮಂಡಳಿ ಸದಸ್ಯರು

ಶ್ರೀ ನಾರಾಯಣ ಕೊರಗಪ್ಪ
ಗೌರವಾನ್ವಿತ ಸಂಸದರು, ರಾಜ್ಯಸಭೆ ಹಾಗೂ ಕೇಂದ್ರ ರೇಷ್ಮೆ ಮಂಡಳಿ ಸದಸ್ಯರು

ಶ್ರೀಮತಿ ರಚನ ಶಾ
ಕಾರ್ಯದರ್ಶಿಗಳು, ಜವಳಿ ಸಚಿವಾಲಯ, ಭಾರತ ಸರ್ಕಾರ

ಶ್ರೀಮತಿ ಪ್ರಜಕ್ತ ಎಲ್. ವರ್ಮ
ಜಂಟಿ ಕಾರ್ಯದರ್ಶಿಗಳು, ಜವಳಿ ಸಚಿವಾಲಯ, ಭಾರತ ಸರ್ಕಾರ ಹಾಗೂ ಉಪಾಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಳಿ

ತಮಗೆಲ್ಲರಿಗೂ ಸುಸ್ವಾಗತ

ಸಿ.ಎಸ್.ಬಿ. ಕಾಂಪ್ಲೆಕ್ಸ್, ಬಿ.ಟಿ.ಎಂ. ಲೇಔಟ್, ಮಡಿವಾಳ, ಬೆಂಗಳೂರು ೫೬೦ ೦೬೮
E-mail: ms.csb@nic.in Tel: +91 80 2628 2699, 2628 2100
csbmot | Central Silk Board | csb_mot

ಹಲಸೂರುಗೇಟ್ ಪೊಲೀಸ್ ಠಾಣೆಯಲ್ಲಿ ಆರು ಮಂದಿ ವಿರುದ್ಧ ಎಫ್‌ಐಆರ್ • ತಲೆಮರೆಸಿಕೊಂಡ ಆರೋಪಿಗಳು

ಉದ್ಯೋಗದ ಆಮಿಷವೊಡ್ಡಿ ₹23 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ, ಕೆಪಿಟಿಸಿಎಲ್ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸರ್ಕಾರಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ₹23 ಲಕ್ಷ ವಂಚಿಸಿದ್ದ ಆರೋಪದ ಅಡಿ ಹಲಸೂರುಗೇಟ್ ಪೊಲೀಸ್ ಠಾಣೆಯಲ್ಲಿ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಟಿ.ದಾಸರಹಳ್ಳಿಯ ಪ್ರವೀಣ್ ಎಂ. ಸೋಮನಕಟ್ಟ(30), ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ವಿಘ್ನೇಶ್ ಹೆಗಡೆ(44), ದಾಬಸ್‌ಪೇಟೆಯ ವೆಂಕಟೇಶಯ್ಯ, ಆರ್‌.ಟಿ.ನಗರದ ಶಿವಣ್ಣ, ತಿಪ್ಪಸಂದ್ರದ ಶ್ರೀನಿವಾಸ್(29), ಸಹಕಾರ ನಗರದ ರಜನೀಶ್(42) ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಆರೋಪಿಗಳು ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಉದ್ಯೋಗ ಆಕಾಂಕ್ಷಿಗಳಿಗೆ ನಕಲಿ ನೇಮಕಾತಿ ಪತ್ರ ನೀಡಿ ವಂಚನೆ ಮಾಡಿದ್ದಾರೆ. ಅಲ್ಲದೇ ಹೊರಗುತ್ತಿಗೆ ಕೆಲಸಕ್ಕೆ ಸೇರಿಸಿ, 18 ತಿಂಗಳ ನಂತರ ಕೆಲಸ ಕಾಯಂ ಆಗಲಿದೆಯೆಂದು ನಂಬಿಸಿ ವಂಚಿಸಿದ್ದಾರೆ’ ಎಂದು ಆರೋಪಿಸಿ ಮಾಧವನಗರ ಯಮುನಾಬಾಯಿ ರಸ್ತೆ ನಿವಾಸಿ ಲೋಹಿತ್‌ಗೌಡ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಲೋಹಿತ್‌ಗೌಡ ಅವರಿಗೆ 2021ರಲ್ಲಿ ಆರೋಪಿಗಳಾದ ಪ್ರವೀಣ್ ಹಾಗೂ ವಿಘ್ನೇಶ್ ಅವರು ಪರಿಚಯ ಆಗಿದ್ದರು. ನಂತರ, ದೂರುದಾರರನ್ನು ಇಬ್ಬರೂ ಆರೋಪಿಗಳು ಹೋಟೆಲ್‌ವೊಂದಕ್ಕೆ ಕರೆಸಿಕೊಂಡಿದ್ದರು. ಅಲ್ಲಿಗೆ ಮತ್ತೆ ಮೂವರು ಆರೋಪಿಗಳು ಬಂದಿದ್ದರು. ಆಗ ಬೆಸ್ಕಾಂ ಹಾಗೂ ಕೆಪಿಟಿಸಿಎಲ್‌ನಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿದ್ದರು’ ಎಂದು ಪೊಲೀಸರು ಹೇಳಿದರು.

ನಕಲಿ ಐ.ಡಿ ತೋರಿಸಿದ್ದ ಆರೋಪಿ

‘ಆರೋಪಿ ಪ್ರವೀಣ್ ಎಂಬಾತ ತಾನು ಬೆಸ್ಕಾಂ ಉದ್ಯೋಗಿ ಎಂದು ಹೇಳಿಕೊಂಡಿದ್ದ. ವೆಂಕಟೇಶಯ್ಯ ಹಾಗೂ ಶಿವಣ್ಣ ಸಹ ರೈಲ್ವೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ಹೇಳಿಕೊಂಡಿದ್ದರು. ಶ್ರೀನಿವಾಸ್ ಬೆಸ್ಕಾಂನ ಮಾಪಕ ಓದುಗ (ಮೀಟರ್ ರೀಡರ್) ಎಂದು ಪರಿಚಯಿಸಿಕೊಂಡಿದ್ದ. ಉದ್ಯೋಗ ಆಕಾಂಕ್ಷಿಗಳಿಗೆ ನಂಬಿಕೆ ಬರುವಂತೆ ಗುರುತಿನ ಚೀಟಿ ಸಹ ತೋರಿಸಿದ್ದರು. ಅದು ನಕಲಿ ಎಂಬುದು ನಂತರ ಗೊತ್ತಾಗಿತ್ತು. ರೈಲ್ವೆ, ಬೆಸ್ಕಾಂ, ಕೆಪಿಟಿಸಿಎಲ್, ಮೆಟ್ರೊ, ವಿಮಾನ ನಿಲ್ದಾಣ ಹಾಗೂ ನೀರಾವರಿ ಇಲಾಖೆಯಲ್ಲಿ ಉದ್ಯೋಗ ಕೊಡಿಸುವುದಾಗಿ ಹಲವರಿಗೆ ಆರೋಪಿಗಳು ನಂಬಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಗಳ ಮಾತು ನಂಬಿದ ಲೋಹಿತ್‌ಗೌಡ ಅವರು ತಮಗೆ ಪರಿಚಯ ಇದ್ದವರಿಗೂ ಉದ್ಯೋಗದ ಬಗ್ಗೆ ಮಾಹಿತಿ ನೀಡಿದ್ದರು. ಉದ್ಯೋಗ ಆಕಾಂಕ್ಷಿಗಳು ₹23 ಲಕ್ಷ ನೀಡಿದ್ದರು. ನಂತರ, ನಕಲಿ ನೇಮಕಾತಿ ಪತ್ರ ನೀಡಿ ವಂಚಿಸಿದ್ದು ಗೊತ್ತಾದ ಮೇಲೆ ಆಕಾಂಕ್ಷಿಗಳು ಪೊಲೀಸಗೆ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

ಆರೋಪಿ ಸುನೀಶ್ ಹೆಗ್ಡೆ ವಿರುದ್ಧ ಶ್ರೀಕಿ ದೂರು

ಬೆಂಗಳೂರು: ಬಿಟ್ ಕಾಯಿನ್ ಹಗರಣದ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಇದೇ ಪ್ರಕರಣದ ಇನ್ನೊಬ್ಬ ಆರೋಪಿ ಸುನೀಶ್ ಹೆಗ್ಡೆ ವಿರುದ್ಧ ಸಿಐಡಿ ಡಿಜಿಪಿ ಹಾಗೂ ಗೃಹ ಇಲಾಖೆಗೆ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೂರು ತಲುಪಿದ ಬೆನ್ನಲ್ಲೇ ವಿಚಾರಣೆ ನಡೆಸುವಂತೆ ಗೃಹ ಇಲಾಖೆ ಸಂಬಂಧಪಟ್ಟವರಿಗೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

‘2020ರಲ್ಲಿ ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣ ಹಾಗೂ ಅದೇ ವರ್ಷ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಬಿಟ್ ಕಾಯಿನ್ ಅಕ್ರಮ ಪ್ರಕರಣದ ಆರೋಪಿಯಾಗಿರುವ ಸುನೀಶ್ ಹೆಗ್ಡೆ ವಿರುದ್ಧ ಶ್ರೀಕಿ ದೂರು ನೀಡಿದ್ದಾರೆ. ಸೆಪ್ಟೆಂಬರ್ 3ರಂದು ಇ–ಮೇಲ್ ಮೂಲಕ ದೂರು ಸಲ್ಲಿಸಿದ್ದಾರೆ’ ಎಂದು ಗೊತ್ತಾಗಿದೆ.

ಈ ಪ್ರಕರಣದಲ್ಲಿ ಬಂಧಿತರಾಗಿದ್ದ ಶ್ರೀಕಿ ಹಾಗೂ ಸುನೀಶ್ ಹೆಗ್ಡೆ ಅವರು ಷರತ್ತುಬದ್ಧ ಜಾಮೀನಿನ ಮೇಲೆ ಇತ್ತೀಚೆಗೆ ಜೈಲಿನಿಂದ ಬಿಡುಗಡೆ ಆಗಿದ್ದರು. ಅನುಮತಿ ಇಲ್ಲದೇ ವಿದೇಶ ಪ್ರವಾಸ ಮಾಡಬಾರದು ಎಂದು ಕೋರ್ಟ್ ಷರತ್ತು ವಿಧಿಸಿತ್ತು. ಆದರೆ, ಸುನೀಶ್ ಹೆಗ್ಡೆ ಅವರು ವಿದೇಶಕ್ಕೆ ತೆರಳಿದ್ದಾರೆ ಎಂದು ಶ್ರೀಕಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಈ ಹಿಂದೆಯೂ ಹಗರಣಕ್ಕೆ ಸಹಕಾರ ನೀಡಿದ ಆರೋಪದ ಮೇಲೆ ಸಂಜಯನಗರದ ನಿವಾಸಿ ಸುನೀಶ್ ಹೆಗ್ಡೆ ಅವರ ಮನೆಯ ಮೇಲೆ ಎಸ್‌ಐಟಿ ದಾಳಿ ನಡೆಸಿತ್ತು. ಪ್ರಕರಣ ಸಂಬಂಧ ಕೆಲವು ದಾಖಲೆಗಳನ್ನೂ ಅಂದು ಜಪ್ತಿ ಮಾಡಿಕೊಳ್ಳಲಾಗಿತ್ತು.

ಪರಿಚಯ ಹೇಗೆ?

ಶ್ರೀಕಿ

ಶ್ರೀಕಿ ವಿದೇಶದಲ್ಲಿ ವ್ಯಾಸಂಗ ಮಾಡಿದ್ದರು. ಅಲ್ಲಿಂದ ವಾಪಸ್ ಬಂದ ಬಳಿಕ, ಸುನೀಶ್ ಹೆಗ್ಡೆ ಹಾಗೂ ಇತರರು ಪರಿಚಯ ಆಗಿದ್ದರು. ಶ್ರೀಕಿ ಹಾಗೂ ಸುನೀಶ್ ಸೇರಿಕೊಂಡು ಐದು ವರ್ಷಗಳ ಹಿಂದೆ ಸರ್ಕಾರದ ಇ– ಸಂಗ್ರಹಣಾ ವಿಭಾಗದ ವೆಬ್‌ಸೈಟ್ ಹ್ಯಾಕ್ ಮಾಡಿದ್ದರು. ಹಣ ವರ್ಗಾವಣೆ ಮಾಡಿಕೊಂಡಿದ್ದರು. ಆ ಪ್ರಕರಣದಲ್ಲಿ ಸಿಐಡಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು ಎಂದು ಸಿಐಡಿ ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ‘ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣವನ್ನು ತಮಿಳುನಾಡಿನ ಜೊತೆಗೆ ಸಂಬಂಧ ಕಲ್ಪಿಸಿ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ’ ಎಂಬ ಆರೋಪದಡಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ದಾಖಲಿಸ-ಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

‘ನನ್ನ ವಿರುದ್ಧ ಕಾಟನ್‌ಪೇಟೆ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಹಾಗೂ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ-ರುವ ಪ್ರಕರಣವನ್ನು ರದ್ದುಪಡಿಸ-ಬೇಕು’ ಎಂದು ಕೋರಿ ಶೋಭಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯ-ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಗುರುವಾರ ಮಾನ್ಯ ಮಾಡಿದರು.

‘ಇದೇ ಘಟನೆಯ ಬಗ್ಗೆ ಇಂತಹುದೇ ಹೇಳಿಕೆ ನೀಡಿದ್ದ ಪ್ರಕರಣವನ್ನು ಮದ್ರಾಸ್ ಹೈಕೋರ್ಟ್ ಇದೇ 5ರಂದು ರದ್ದು ಗೊಳಿಸಿದೆ. ಹಾಗಾಗಿ, ಮದ್ರಾಸ್ ಹೈಕೋರ್ಟ್ ತೀರ್ಪಿನ ಆಧಾರದಡಿ ಈ ಪ್ರಕರಣವನ್ನೂ ರದ್ದುಗೊಳಿಸ-ಲಾಗುತ್ತಿದೆ’ ಎಂದು ಪೀಠ ತಿಳಿಸಿದೆ.

ಹನಿಟ್ರ್ಯಾಪ್ ಸುಳ್ಳು ಪ್ರಕರಣ: ಬಿ-ವರದಿ ಸಲ್ಲಿಕೆಗೆ ಸಿದ್ಧತೆ

ಬೆಂಗಳೂರು: ಆ್ಯಪ್‌ವೊಂದರ ಮೂಲಕ ಪರಿಚಯವಾದ ಉದ್ಯಮಿಗೆ ಸಿನಿಮಾ ನಿರ್ಮಿಸುವುದಾಗಿ ಹೇಳಿ ₹40 ಲಕ್ಷ ವಂಚಿಸಿದ್ದ ಪ್ರಕರಣ ತನಿಖೆ ನಡೆಸಿದ್ದ ಅಶೋಕನಗರ ಠಾಣೆ ಪೊಲೀಸರು, ಶೀಘ್ರದಲ್ಲೇ ನ್ಯಾಯಾಲಯಕ್ಕೆ ಬಿ–ವರದಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ.

34 ವರ್ಷದ ಉದ್ಯಮಿ ನೀಡಿದ್ದ ದೂರು ಆಧರಿಸಿ ದಿವ್ಯಶ್ರೀ, ದಿಲೀಪ್ ಹಾಗೂ ರವಿಕುಮಾರ್ ಎಂಬುವವರ ವಿರುದ್ಧ ಈ ಹಿಂದೆ ಎಫ್‌ಐಆರ್ ದಾಖಲಾಗಿತ್ತು. ಪೊಲೀಸರು ತನಿಖೆ ಆರಂಭಿಸಿದ್ದರು.

‘ಕುಟುಂಬ’ ಆ್ಯಪ್ ಮೂಲಕ ಉದ್ಯಮಿಗೆ ದಿವ್ಯಶ್ರೀ, 2021ರಲ್ಲಿ ಪರಿಚಯ ಆಗಿದ್ದರು. ಆಕೆ ತಾನು ಸಿನಿಮಾ ಕ್ಷೇತ್ರದಲ್ಲಿ ತೊಡಗಿಸಿ-ಕೊಂಡಿದ್ದು ಸಿನಿಮಾ ನಿರ್ಮಿಸುತ್ತಿರುವುದಾಗಿ ಹೇಳಿಕೊಂಡಿದ್ದರು. ಬಳಿಕ ಸಂಕಷ್ಟದ ನೆಪವೊಡ್ಡಿ ₹4.25 ಲಕ್ಷವನ್ನು ಉದ್ಯಮಿಯಿಂದ ಪಡೆದಿದ್ದರು. ಉದ್ಯಮಿಗೆ ಹಣ ವಾಪಸ್ ನೀಡಿರಲಿಲ್ಲ. ಹಣ ವಾಪಸ್ ಕೇಳಿದಾಗ, ಯುವತಿ ಜತೆಗೆ ಕಳೆದ ಖಾಸಗಿ ಕ್ಷಣದ ವಿಡಿಯೊ ಇದ್ದು ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕುವುದಾಗಿ ಮೂವರೂ ಆರೋಪಿಗಳು ಬೆದರಿಕೆ ಒಡ್ಡಿದ್ದರು’ ಎಂದು ದೂರು ದಾಖಲಾಗಿತ್ತು.

‘ಬ್ಲ್ಯಾಕ್‌ಮೇಲ್ ಹಾಗೂ ಹನಿಟ್ರ್ಯಾಪ್ ಮಾಡಿ ₹ 40 ಲಕ್ಷ ಸುಲಿಗೆ ಮಾಡಿದ್ದಾರೆ’ ಎಂದು ಉದ್ಯಮಿ ಆರೋಪಿಸಿದ್ದರು.

‘ಹನಿಟ್ರ್ಯಾಪ್ ನಡೆದಿಲ್ಲ. ಇದೊಂದು ಸುಳ್ಳು ಕೇಸ್ ಎಂಬುದು ತನಿಖೆಯಿಂದ ಗೊತ್ತಾಗಿದೆ. ಸದ್ಯದಲ್ಲೇ ಕೋರ್ಟ್‌ಗೆ ಬಿ– ವರದಿ ಸಲ್ಲಿಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ನಾಗಮಂಗಲ ಗಲಭೆ: ಡಿವೈಎಸ್ಪಿ ಅಮಾನತು

ಸುಮಿತ್

ಮಂಡ್ಯ: ಜಿಲ್ಲೆಯ ನಾಗಮಂಗಲದಲ್ಲಿ ಈಚೆಗೆ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪದ ಆರೋಪದ ಮೇರೆಗೆ ನಾಗಮಂಗಲ ಉಪವಿಭಾಗದ ಡಿವೈಎಸ್ಪಿ ಸುಮಿತ್ ಎ.ಆರ್. ಅವರನ್ನು ಅಮಾನತು ಮಾಡಲಾಗಿದೆ.

ಮಂಡ್ಯ ಸಿಇಎನ್ ಠಾಣೆಯ ಡಿವೈಎಸ್ಪಿ ಶಿವಮೂರ್ತಿ ಜಿ.ಆರ್. ಅವರಿಗೆ ನಾಗಮಂಗಲ ಉಪವಿಭಾಗದ ಡಿವೈಎಸ್ಪಿ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಜೈಲಿನಲ್ಲಿ ದರ್ಶನ್ ಭೇಟಿಯಾದ ತಾಯಿ, ಅಕ್ಕ

ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರನ್ನು ತಾಯಿ ಮತ್ತು ಅಕ್ಕನ ಕುಟುಂಬಸ್ಥರು ಗುರುವಾರ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಭೇಟಿಯಾದರು.

ಕಾರಾಗೃಹದ ಸಂದರ್ಶಕರ ಕೊಠಡಿಯಲ್ಲಿ ತಾಯಿ ಮೀನಾ, ಅಕ್ಕ ದಿವ್ಯಾ, ಭಾವ ಮಂಜುನಾಥ್ ಮತ್ತು ಅವರ ಮಕ್ಕಳಾದ ರವಿಚಂದ್ರ, ಇಂದ್ರಕುಮಾರ್ ಅವರನ್ನು ದರ್ಶನ್ ಭೇಟಿಯಾದರು.

ದೇಗುಲಗಳಿಗೆ ನಿರ್ವಹಣಾ ಸಮಿತಿ ರಚನೆ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ‘ಬಿ’ ಮತ್ತು ‘ಸಿ’ ವರ್ಗದ ದೇವಾಲಯಗಳಿಗೆ ನಿರ್ವಹಣಾ ಸಮಿತಿ ರಚಿಸುವ ಸಂಬಂಧ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ಆಯುಕ್ತರು 2016ರ ಜುಲೈ 12ರಂದು ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ, ‘ದೇವಸ್ಥಾನಗಳ ನಿರ್ವಹಣಾ ಸಂಘ’ದ ಟ್ರಸ್ಟಿಯಾದ ಉಡುಪಿಯ ವೈ.ಭರತ್ ಹೆಗಡೆ 2016ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಈ ಹಿಂದೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಹೊರಡಿಸಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಈಗಾಗಲೇ ಮಧ್ಯಂತರ ತಡೆ ನೀಡಿರುವ ಹಿನ್ನೆಲೆಯಲ್ಲಿ ತಿದ್ದುಪಡಿ ಕಾಯ್ದೆಯಂತೆ ನಿರ್ವಹಣಾ ಸಮಿತಿಗಳನ್ನು ರಚಿಸುವ ಅಧಿಕಾರ ಸರ್ಕಾರಕ್ಕಿದೆ’ ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಪ್ರಕರಣವೇನು?

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಕಾಯ್ದೆ–1997ರ ಕಲಂ 25ಕ್ಕೆ 2011 ಹಾಗೂ 2012ರಲ್ಲಿ ತಿದ್ದುಪಡಿ ತಂದು ನಿರ್ವಹಣಾ ಸಮಿತಿಗಳ ನೇಮಕಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಇದನ್ನು ಪ್ರಶ್ನಿಸಿ ಕೆಲವು ದೇವಾಲಯಗಳ ಪಾರಂಪರಿಕ ಟ್ರಸ್ಟ್‌ಗಳು ಹೈಕೋರ್ಟ್ ಮೆಟ್ಟಿಲೇರಿದ್ದವು.

ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ತಿದ್ದುಪಡಿ ಕಾಯ್ದೆಯನ್ನು ಅನೂರ್ಜಿತಗೊಳಿಸಿ 2015ರ ನ. 17ರಂದು ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಮೇಲ್ಮನವಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ತೀರ್ಪಿಗೆ 2016ರ ಏಪ್ರಿಲ್ 8ರಂದು ತಡೆ ನೀಡಿತ್ತು. ಸರ್ಕಾರ ತಿದ್ದುಪಡಿ ಕಾಯ್ದೆಗೆ ಅನುಗುಣವಾಗಿ ‘ಬಿ’ ಮತ್ತು ‘ಸಿ’ ದೇವಸ್ಥಾನಗಳಿಗೆ ಸಮಿತಿಗಳನ್ನು ರಚಿಸುವ ನಿಟ್ಟಿನಲ್ಲಿ 2016ರ ಜುಲೈ 12ರಂದು ಅಧಿಸೂಚನೆ ಹೊರಡಿಸಿತ್ತು.

ಅಪಘಾತ ಯುವಕ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಹುನೇಗಲ್ ಗ್ರಾಮದ ಬಳಿ ನಡೆದ ನಡೆದ ಅಪಘಾತದಲ್ಲಿ ಸಮಸೇನಹಳ್ಳಿ ಪ್ರಭು (30) ಎಂಬುವವರು ಮೃತಪಟ್ಟಿದ್ದಾರೆ.

ಹುನೇಗಲ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿದ್ದಿದ್ದ ನಾಯಿ ಮೃತ ದೇಹವನ್ನು ಪ್ರಭು ತೆಗೆಯಲು ಮುಂದಾದ ವೇಳೆ ಈ ಅವಘಡ ನಡೆದಿದೆ. ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯು-ತ್ತಿದ್ದಾರೆ.

ರಸ್ತೆಯಲ್ಲಿ ಸತ್ತಿದ್ದ ನಾಯಿ ಶವವನ್ನು ಪಕ್ಕಕ್ಕೆ ಸರಿಸುತ್ತಿದ್ದರು. ಈ ವೇಳೆ ಹಿಂಬದಿಯಿಂದ ಕಾರು ಬಂದಿದೆ. ಪ್ರಭು ಮತ್ತು ಅವರ ಸ್ನೇಹಿತನನ್ನು ನೋಡಿ ಕಾರಿನ ಚಾಲಕ ಬ್ರೇಕ್ ಹಾಕಿದ್ದಾನೆ. ಕಾರಿನ ಹಿಂಬದಿಯಲ್ಲಿ ಬರುತ್ತಿದ್ದ ಟಿಪ್ಪರ್ ಕಾರಿಗೆ ಡಿಕ್ಕಿಯಾಗಿದೆ. ಕಾರು ಪ್ರಭು ಅವರಿಗೆ ಡಿಕ್ಕಿ ಹೊಡೆದಿದೆ. ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಪ್ರತಿಭಟನೆ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಸದಸ್ಯರು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗೊಟ್ಟಿಗೆರೆ ಕೆರೆಗೆ ಕೊಳಚೆ ನೀರು ಬಿಡಬೇಡಿ: ಉಪ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಗೊಟ್ಟಿಗೆರೆ ಕೆರೆಗೆ ಕೊಳಚೆ ನೀರು ಬಿಡುವುದನ್ನು ಶಾಶ್ವತವಾಗಿ ನಿಲ್ಲಿಸಬೇಕು ಮತ್ತು ಈ ಸಂಬಂಧ ತೆಗೆದುಕೊಂಡ ಕ್ರಮದ ಬಗ್ಗೆ 15 ದಿನಗಳಲ್ಲಿ ವರದಿ ನೀಡಿ’ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಬಿಬಿಎಂಪಿ ಮತ್ತು ಜಲಮಂಡಳಿ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಕೆರೆಗೆ ಕೊಳಚೆ ನೀರು ಬಿಡಲಾಗುತ್ತಿದೆ ಮತ್ತು ಕೆರೆಯ ಅಂಗಳವನ್ನು ತ್ಯಾಜ್ಯ ವಿಲೇವಾರಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಗೊಟ್ಟಿಗೆರೆಯ ನಂದಿನಿ ರಿಟ್ರೀಟ್ ಅಪಾರ್ಟ್‌ಮೆಂಟ್‌ನ ನಿವಾಸಿಗಳ ಸಂಘವು ನೀಡಿದ್ದ ದೂರಿನ ಸಂಬಂಧ ಈ ಆದೇಶ ಹೊರಡಿಸಲಾಗಿದೆ. ತನಿಖೆಯ ಭಾಗವಾಗಿ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಮತ್ತು ನ್ಯಾಯಮೂರ್ತಿ ಬಿ.ವೀರಪ್ಪ ಅವರು ಇದೇ 13ರಂದು ಪರಿಶೀಲನೆ ನಡೆಸಿದ್ದರು. ಕೆರೆಗೆ ಪೂರ್ಣ ಬೇಲಿ ಇಲ್ಲದಿರುವುದು ಮತ್ತು ಕೆರೆಯ ಏರಿಯನ್ನು ಖಾಸಗಿ ವ್ಯಕ್ತಿಗಳು ಸಂಚಾರಕ್ಕೆ ಬಳಸುತ್ತಿರುವುದು ಪತ್ತೆಯಾಗಿತ್ತು.

ಈ ಬಗ್ಗೆ ಮಾಹಿತಿ ಪಡೆದುಕೊಂಡಿದ್ದ ಉಪ ಲೋಕಾಯುಕ್ತರು, ‘ಕೊಳಚೆ ನೀರು ಬರುವುದನ್ನು ನಿಲ್ಲಿಸಲು ಶಾಶ್ವತ ಪರಿಹಾರ ಕಲ್ಪಿಸಿ. ತ್ಯಾಜ್ಯ ವಿಲೇವಾರಿ ಚಟುವಟಿಕೆ ನಿಲ್ಲಿಸಿ. ಜತೆಗೆ ಕೆರೆ ಅಭಿವೃದ್ಧಿಗೆ ಮಂಜೂರಾಗಿರುವ ಅನುದಾನ, ಬಳಕೆಯಾದ ಹಣ ಮತ್ತು ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಸೆ. 30ರ ಒಳಗೆ ಸಲ್ಲಿಸಿ’ ಎಂದು ಬಿಬಿಎಂಪಿ ಕೆರೆ ವಿಭಾಗದ ಕಾರ್ಯನಿರ್ವಾಹಕಾ ಎಂಜಿನಿಯರ್ ಇಂದ್ರಾಣಿ, ಸಹಾಯಕ ಕಾರ್ಯನಿರ್ವಹಣಾ ಎಂಜಿನಿಯರ್ ಉಷಾ, ಜಲಮಂಡಳಿ ಕಾರ್ಯನಿರ್ವಾಹಕಾ ಎಂಜಿನಿಯರ್ ಪ್ರದೀಪ್ ಅವರಿಗೆ ಸೂಚಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My client Sri D.A. Srinivas S/o. Late D.K. Adikesavalu, aged 51years, residing at No.7/21, 1st Cross, 9th Main, RMV Extension, Bangalore-560080 has instructed me to put the public on notice about the following facts:-
1. My client D.A. Srinivas has filed a suit OS.NO.246/2020 in the court of Principal Senior Civil Judge, Bangalore Rural District, Bangalore seeking a declaration that he is the absolute owner in possession by virtue of the Will dated 20.04.2018 executed by K. Raghunath in respect of the following properties:-
Sy.Nos. 274/1, 268, 264, 267, 272/3, 273, 276, 274/2, 274/1, 275, 272/3, 272/1, 272/2, 271/1, 272/4, 15 items of agricultural lands, total measuring 26 acres 10 guntas, situated at Avathi Village, Kasaba Hobli, Devanahalli Taluk;
Sy.Nos. 113/3, 3A & 3B, 117, 117, 120, 118/6B, 121, 112/2, 111/1, 118/1B, 121, 10 items of agricultural lands, total measuring 14 acres 11 guntas, situated at Bullahalli Village, Vijayapura Hobli, Devanahalli Taluk;
Sy.Nos. 47/2, 28/5, 29/5, 41/2, 28/6, 29/6, 28/4, 7 items of agricultural lands, total measuring 6 acres 11 guntas, situated at Dasarahalli Village, Kasaba Hobli, Devanahalli Taluk;
Sy.Nos. 92/6, 92/5A, 89/1, 89/1, 89/1, 89/1, 87/3, 92/1, 92/5B, 9 items of converted lands, total measuring 6 acres 16 guntas, situated at Nallurahalli Village, Krishnarajapura Hobli, Bengaluru East Taluk;
Sy.Nos. 89/1, 89/1, 2 items of agricultural lands, total measuring 29 guntas, situated at Nallurahalli Village, Krishnarajapura Hobli, Bengaluru East Taluk.
2. This suit OS.No.246/2020 has been filed against the wife and children of K. Raghunath, that is Smt. Manjula, Sri K.R. Pradeep and Sri K.R. Rohith. Originally the suit was rejected as not maintainable on 20.10.2023. My client Sri D.A. Srinivas challenged the judgment before the Hon'ble High Court in RFA.NO.2216/2023. The Hon'ble High Court under a judgment dated 22.02.2024 has set aside the judgment passed in OS.NO.246/2020 on 20.10.2023 and directed the trial court to decide the matter on merits by restoring the suit. Thereafter, the wife and sons of K. Raghunath that is Smt. Manjula, Sri K.R. Pradeep and Sri K.R. Rohith have filed SLP(C).No.007924/2024 before the Hon'ble Supreme Court of India. The Hon'ble Supreme Court has issued notice and granted stay on 08.04.2024.
3. It is brought to the kind attention of the general public that during the pendency of these proceedings Smt. Manjula, Sri K.R. Pradeep and Sri K.R. Rohith are trying to alienate or encumber the properties stated above. Any such act will attract the principle of lis-pendens as all the subject properties are sub-judice before court and any such alienation or encumbrance will be at their own risk and violation of the respective parties who venture into such a transaction which will be subject matter of the outcome of the proceedings of the court.
Nagharish G.S. Advocate
#8&9, Ground Floor, No.41, SNS Plaza, Kumara Krupa Road, Bangalore-560001. Tel: 080- 22200202

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

REAL ESTATE SELLING

Commercial Building

Chamarajpet

SALE:
CHAMARAJPET
Commercial Building
18,000 Sft
Rental Income 8.5 Lacs
Sale Price 14.50 Crores
Contact:
96322-37557 / 96069-07557

CONNECT

GOLD MEDAL IN STATE LEVEL JUDO (70+ CATEGORY)
ಅಭಿನಂದನೆಗಳು
ಬೆಂಗಳೂರುಬ್ಲೇಜ್ ಹೆಣ್ಣು ಮಕ್ಕಳ ಪ್ರೌಢಶಾಲೆ, ನಾಗರಭಾವಿಯಲ್ಲಿ, 10ನೇ ತರಗತಿಯಲ್ಲಿ ಓದುತ್ತಿರುವ ಸ್ಪೂರ್ತಿ ಕೆ.ಎಸ್. ಎಂಬ ವಿದ್ಯಾರ್ಥಿನಿಯು 18/09/2024, ಬುಧವಾರ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿ.ಪಿ ಲೇಔಟ್, ಯಲಹಂಕದಲ್ಲಿ ನಡೆದ 2024–25ನೇ ಸಾಲಿನ ರಾಜ್ಯ ಮಟ್ಟದ ಜೂಡೋ ಸ್ಪರ್ಧೆಯಲ್ಲಿ ಭಾಗವಹಿಸಿ ಬಂಗಾರದ ಪದಕವನ್ನು ಪಡೆದಿರುತ್ತಾಳೆ. ಬೆಂಗಳೂರುಬ್ಲೇಜ್‌ನ ಶಾಲಾ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಶುಭಾಶಯವನ್ನು ಕೋರುತ್ತಿದ್ದಾರೆ.

PERSONAL

Change of Name

CHANGE OF NAME
I, Mohammed Zabi Ulla (old Name as per old passport) Residing at 92-A Muslim Block Kanakapura Taluk Ramanagara Dist-562117. Hear by I declare that I have changed my name as Mohamed Dilshad Zabi Ulla urf M D Zabi Ulla (New Name as per Aadhar card Pan & affdivite) S/o Abdul Nazeer for all future purposes

CHANGE OF NAME
I, RENUKAMBA ARYA RAJASHEKARAPPA W/o Chandrashekar Mariswamy, 1130, 4th Cross, 1st Block, BTM Layout 4th stage,Bangalore-560076 have changed my name to RENUKA ARYA RAJASHEKARAPPA forever vide affidavit dt.18.09.2024 before Notary Jain Swaramala, Bangalore

I, SHREENATH RAMACHANDRA RAO_V S/o. Ramachandra Rao_V. R/a#618 4th`cross 8th_Main,BHCS Layout Uttarahalli Subramanyapura Post Bengaluru 560061 have`changed my_Name to SRINATH_R_RAO vide`affidavit dated:17.9.2024 before`Notary B. Gopalakrishna Bengaluru

CHANGE OF NAME
I, Mohammed Imran s/o Nazeer Ahmad (Father old Name as per old passport) Residing at Ward No.3 Bilal Shadi Mahal Road Muslim Block Near Bilal Masjid Kanakapura Taluk Ramanagara Dist-562117. Hear by I declare that some correction in my Father name as Abdul Nazeer (New Name of as per Aadhar card Pan & affdivite) S/o Abdul Nazeer for all future purposes

CHANGE OF NAME
I, DURGAWATI W/o Service JC-306672F Rank, SUBEDAR Major Honorary Lieutenant Jagdish Yadav (Late), R/a Village: Bamhour, Post: Bamhour, Mubarakpur, Sathion, Azamgarh, UP-276406, have changed my name from DURGAWATI to DURGAWATI DEVI vide affidavit dt:19-09-2024, before notary S.I. Balaguru, Bengaluru.

Flat

Malleshwaram

2 BHK Flat near Mantri Square with car parking for sale Srirampura. Call: 9448457916/ 7259396264

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Commercial Site for Sale at Ramohalli Mysore Road
Ready for Registration
Call: 93411 18999
Bank Loan Available

Sites

Kempegowda Layout

NADAPRABHU KEMPEGOWDA LAYOUT 7th_block 'F' Sector50x80 W/F behind 100-feet-road on50 feet-road,near Nayara Petrol-bunk. *VISHVESHWARAIH LAYOUT*2nd_block 40x60_W/F.Contact: 9686469799

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Finance

BANGALORE BASED DSA provides Mortgage, Home Loan, balance transfer. Low interest. Above 1 cr. 8867627879

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/- FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

‘ಪ್ರಾತಿನಿಧ್ಯ ಪೂರ್ಣವೆಂದು ಕೈಬಿಡುವಂತಿಲ್ಲ’

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೌಕರರಿಗೆ ಮುಂಬಡ್ತಿ: ಶಾಲಾ ಶಿಕ್ಷಣ ಇಲಾಖೆಗೆ ಡಿಪಿಎಆರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಬಡ್ತಿಗೆ ಪರಿಗಣಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯ ಪೂರ್ಣಗೊಂಡಿದೆ ಎಂಬ ಕಾರಣಕ್ಕೆ, ಮುಂಬಡ್ತಿಗೆ ಅರ್ಹರಾದ ಎಸ್‌ಸಿ, ಎಸ್‌ಟಿ ನೌಕರರನ್ನು ಕೈಬಿಡುವಂತಿಲ್ಲ’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸ್ಪಷ್ಟಪಡಿಸಿದೆ.

ಮುಂಬಡ್ತಿ ನೀಡುವ ವೃಂದದಲ್ಲಿನ ಕಾರ್ಯನಿರತ ವೃಂದ ಬಲದಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಕೊರತೆ ಇಲ್ಲದೇ ಇದ್ದರೆ, ಮುಂಬಡ್ತಿ ನೀಡಲಾಗುವ ಹುದ್ದೆಗಳನ್ನೂ ಸೇರಿಸಿ ಮತ್ತೊಮ್ಮೆ ಪ್ರಾತಿನಿಧ್ಯ ಲೆಕ್ಕ ಹಾಕಬೇಕು. ಆಗಲೂ ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯದಲ್ಲಿ ಕೊರತೆ ಆಗದಂತೆ ನೋಡಿಕೊಳ್ಳಬೇಕು. ಮೀಸಲಾತಿ ರೋಸ್ಟರ್ (ಪಟ್ಟಿ) ನಿರ್ವಹಿಸುವ ಸಂದರ್ಭದಲ್ಲಿ, ಎಷ್ಟು ಹುದ್ದೆಗಳಿಗೆ ಮುಂಬಡ್ತಿ ನೀಡಲಾಗುತ್ತಿದೆಯೊ ಅಷ್ಟೂ ಹುದ್ದೆಗಳಿಗೆ ರೋಸ್ಟರ್ ಅನ್ವಯಿಸಬೇಕು. ಪ್ರಾತಿನಿಧ್ಯ ಪೂರ್ಣಗೊಂಡಿದೆ ಎಂಬ ಕಾರಣಕ್ಕೆ ರೋಸ್ಟರ್ ನಿರ್ವಹಣೆಯನ್ನು ಮಧ್ಯದಲ್ಲಿಯೇ ನಿಲ್ಲಿಸಬಾರದು ಎಂದೂ ಇಲಾಖೆ ತಿಳಿಸಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ ಹುದ್ದೆಗಳಿಗೆ ಬಡ್ತಿ ನೀಡುವ ಸಂದರ್ಭದಲ್ಲಿ ಮೀಸಲಾತಿ ನೀಡಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆಗೆ ಡಿಪಿಎಆರ್ ಈ ಸ್ಪಷ್ಟನೆ ನೀಡಿದೆ. ಈ ಸೂಚನೆ ಎಲ್ಲ ಆಡಳಿತ ಇಲಾಖೆಗಳಿಗೂ ಅನ್ವಯ ಆಗಲಿದೆ.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲ ಹುದ್ದೆಗೆ 2016ರಿಂದ ಈವರೆಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಮೀಸಲಾತಿ ನಿಯಮ ಪಾಲಿಸಿಲ್ಲ ಎಂದು ಆರೋಪಿಸಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ರಾಜ್ಯ ಎಸ್‌ಸಿ, ಎಸ್‌ಟಿ ನೌಕರರ ಸಂಘ ದೂರು ನೀಡಿತ್ತು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದ ಸಮಿತಿಯು, ‘ಸಮಾಜ ಕಲ್ಯಾಣ ಇಲಾಖೆ, ಡಿಪಿಎಆರ್ ಮತ್ತು ಶಾಲಾ ಶಿಕ್ಷಣ ಇಲಾಖೆ ಜಂಟಿಯಾಗಿ ಪರಿಶೀಲಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸುವವರೆಗೆ ಪ್ರಾಂಶುಪಾಲ ಹುದ್ದೆಗಳಿಗೆ ಬಡ್ತಿ ನೀಡಬಾರದು’ ಎಂದು ಸೂಚಿಸಿತ್ತು.

ಈ ಹಿನ್ನೆಲೆಯಲ್ಲಿ ಡಿಪಿಎಆರ್ ಕಾರ್ಯದರ್ಶಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಸಭೆ ನಡೆಸಿದ್ದರು. ಈ ಸಭೆಯಲ್ಲಿ, ‘ಪ್ರಾಂಶುಪಾಲ ಹುದ್ದೆಗಳಿಗೆ ಬಡ್ತಿ ನೀಡುವಾಗ ಎಸ್‌ಸಿ, ಎಸ್‌ಟಿ ನೌಕರರಿಗೆ ಮೀಸಲಿರಿಸಿದ ರೋಸ್ಟರ್ ಬಿಂದುಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಸ್ವಂತ ಜೇಷ್ಠತೆಯಲ್ಲಿ ಅರ್ಹರಾಗುವ ಎಸ್‌ಸಿ, ಎಸ್‌ಟಿ ಉಪನ್ಯಾಸಕರನ್ನು ಮುಂಬಡ್ತಿಗೆ ಪರಿಗಣಿಸಿಲ್ಲ’ ಎಂದು ಆಯುಕ್ತರು ವಿವರಿಸಿದ್ದರು.

ಮುಂಬಡ್ತಿಯಲ್ಲಿ ವಂಚನೆ ನಡೆದರೆ, ಅದಕ್ಕೆ ಕಾರಣವಾಗುವ ಅಧಿಕಾರಿಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಿಸಲಾಗುವುದು

ಡಿ. ಚಂದ್ರಶೇಖರಯ್ಯ, ಅಧ್ಯಕ್ಷರು, ರಾಜ್ಯ ಎಸ್‌ಸಿ, ಎಸ್‌ಟಿ ನೌಕರರ ಸಂಘ

ಕೈತಪ್ಪಿದ ಮುಂಬಡ್ತಿ: ತನಿಖೆಯಲ್ಲಿ ಪತ್ತೆ

ಉಪನ್ಯಾಸಕ ವೃಂದದಿಂದ ಪ್ರಾಂಶುಪಾಲ ಹುದ್ದೆಗೆ 2016ರ ಅ. 31ರಿಂದ 2022ರವರೆಗೆ ಮುಂಬಡ್ತಿ ನೀಡುವಾಗ ರೋಸ್ಟರ್ ಬಿಂದುಗಳನ್ನು ಪಾಲಿಸಿಲ್ಲ ಎಂದು ಎಸ್‌ಸಿ, ಎಸ್‌ಟಿ ನೌಕರರ ಸಂಘವು ಸಮಾಜ ಕಲ್ಯಾಣ ಇಲಾಖೆಗೆ ದೂರು ನೀಡಿತ್ತು. ಈ ಬಗ್ಗೆ ತನಿಖೆ ನಡೆಸಿದ್ದ ಇಲಾಖೆ, ಹೈದರಾಬಾದ್– ಕರ್ನಾಟಕ ಭಾಗದಲ್ಲಿ ಎಸ್‌ಸಿ 7, ಎಸ್‌ಟಿ 2, ಉಳಿಕೆ ವೃಂದದಲ್ಲಿ ಎಸ್‌ಸಿ 68, ಎಸ್‌ಟಿ 11 ಪ್ರಾಂಶುಪಾಲ ಹುದ್ದೆಗಳನ್ನು ನೀಡದಿರುವುದನ್ನು ಗುರುತಿಸಿತ್ತು. ಈ ತನಿಖಾ ವರದಿಯ ಆಧಾರದಲ್ಲಿ ಎಸ್‌ಸಿ, ಎಸ್‌ಟಿ ಸಂಘವು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ದೂರು ನೀಡಿತ್ತು.

ಗೊಡ್ಡು ಬೆದರಿಕೆಗೆ ಹೆದರಲ್ಲ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತುರ್ತುಪರಿಸ್ಥಿತಿ ಹೇರಲು ಮುಂದಾಗಿದೆ. ಆದರೆ, ನಮ್ಮ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಇವರ ಗೊಡ್ಡು ಬೆದರಿಕೆಗಳಿಗೆ ಹೆದರುವುದೂ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ನಾಗಮಂಗಲದ ಕೋಮುಗಲಭೆ ವಿಚಾರದಲ್ಲಿ ಸರಿಯಾಗಿ ತನಿಖೆ ನಡೆಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದು ಮಾತ್ರವಲ್ಲದೇ, ಅಲ್ಲಿನ ಜನರು ಹೇಳಿದ್ದ ವಿಚಾರವನ್ನು ಆಧರಿಸಿ ‘ಎಕ್ಸ್’ ಮಾಡಿದ್ದೆ. ಸತ್ಯ ಹೇಳಿದ್ದಕ್ಕಾಗಿ ನಮ್ಮನ್ನು ಬೆದರಿಸಲು ಎಫ್‌ಐಆರ್ ದಾಖಲಿಸಿದ್ದಾರೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.



‘ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದನ್ನು ಸುಳ್ಳು ಎಂದು ಸಚಿವರೇ ಹೇಳಿದ್ದರು. ಬಳಿಕ ಅದು ನಿಜ ಎಂದು ಸಾಬೀತಾಯಿತು. ಹಾಗಾದರೆ ಸಚಿವರ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕಿತ್ತಲ್ಲ’ ಎಂದು ಅವರು ಪ್ರಶ್ನಿಸಿದರು.

‘ತನಿಖೆ ಮಾಡಿ ಎಂದು ಸರ್ಕಾರಕ್ಕೆ ಆಗ್ರಹಿಸಿದ್ದೇನೆ. ಸರ್ಕಾರದ ಸರ್ವಾಧಿಕಾರಿ ಧೋರಣೆ ವಿರುದ್ಧ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ. ಪೊಲೀಸರನ್ನು ಕೈಗೊಂಬೆ ಮಾಡಿಕೊಂಡು ಆಡಿಸುತ್ತಿದ್ದಾರೆ. ಇವರು ರಾಜ್ಯಪಾಲರ ಅಧಿಕಾರ ಕಸಿಯಲು ಮುಂದಾಗಿದ್ದಾರೆ’ ಎಂದು ಹೇಳಿದರು.

‘ಸಿದ್ದರಾಮಯ್ಯ ಸರ್ವಾಧಿಕಾರಿ’

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆದಮೇಲೆ ಹಿಟ್ಲರ್ ಆಗಿದ್ದಾರೆ. ರಾಜ್ಯದಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಹೇರಿದ್ದಾರೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಸಂಸದರು ಮತ್ತು ಶಾಸಕರ ಮೇಲೆ ನಿರಂತರವಾಗಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕ ಮತ್ತು ಕೇಂದ್ರ ಸಚಿವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ದೂರಿದರು.

‘ವಿರೋಧಪಕ್ಷದ ನಾಯಕ ಅಶೋಕ ಮತ್ತು ನಾನು ಮಾಡಿದ ತಪ್ಪೇನು? ಯಾವ ಅಪರಾಧಕ್ಕಾಗಿ ನೀವು ಎಫ್‌ಐಆರ್ ಹಾಕಿದ್ದೀರಿ? ನಾವು ನಿಮ್ಮನ್ನು ಪ್ರಶ್ನಿಸಿದ್ದು ನಮ್ಮ ಅಪರಾಧವೇ? ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವುದಕ್ಕಾಗಿ ಪ್ರಜಾತಂತ್ರವನ್ನು ಕಗ್ಗೊಲೆ ಮಾಡುತ್ತಿದ್ದೀರಿ’ ಎಂದು ಅವರು ಹೇಳಿದರು.

ಸ್ವಯಂಪ್ರೇರಿತ ಪ್ರಕರಣವಾಗಿ ಪರಿವರ್ತಿಸಲು ರಾಜ್ಯ ಸರ್ಕಾರಕ್ಕೆ ಪ್ರತಿಭಟನಕಾರರ ಆಗ್ರಹ

ಶಾಸಕ ಮುನಿರತ್ನ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಕೆಪಿಸಿಸಿ ಕಚೇರಿಯ ಮುಂಭಾಗದಲ್ಲಿ ಕಾಂಗ್ರೆಸ್ ನಾಯಕರು ಗುರುವಾರ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ‘ಲಜ್ಜೆಗೆಟ್ಟು ನಡೆದುಕೊಂಡಿರುವ ಮುನಿರತ್ನ ಅವರು ಜನಪ್ರತಿನಿಧಿಯಾಗಲು ಅನರ್ಹರು. ರಾಜ್ಯ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಮುನಿರತ್ನ ಮೇಲಿನ ಪ್ರಕರಣವನ್ನು ಸ್ವಯಂಪ್ರೇರಿತ ಪ್ರಕರಣವಾಗಿ ಪರಿವರ್ತಿಸಬೇಕು’ ಎಂದು ಆಗ್ರಹಿಸಿದರು.

‘ಪರಿಶಿಷ್ಟರು, ಒಕ್ಕಲಿಗರು ಅದರಲ್ಲೂ ಮಹಿಳೆಯರ ಬಗ್ಗೆ ಅತ್ಯಂತ ಹೀನವಾಗಿ ಮಾತನಾಡಿರುವ ಮುನಿರತ್ನ ಅವರ ನಡೆ ಖಂಡನೀಯ. ಮುನಿರತ್ನ ಅವರು ಆಡಿರುವ ಕೆಟ್ಟ ಮಾತುಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಬಿಜೆಪಿಯ ಅಂತರ್ಯದ ಮಾತುಗಳನ್ನು ಅವರು ಹೊರ ಹಾಕಿದ್ದಾರೆ’ ಎಂದರು.

‘ಹೆಣ್ಣು ಮಕ್ಕಳನ್ನು ಮಂಚಕ್ಕೆ ಕರೆಯುವ ವ್ಯಕ್ತಿಯನ್ನು ಬಿಜೆಪಿ ಬೆಂಬಲಿಸುತ್ತಿದೆ. ಆರ್. ಅಶೋಕ, ಪ್ರಲ್ಹಾದ ಜೋಷಿಯವರು ಕೂಡಾ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆಂದರೆ ಅವರೆಲ್ಲ ರಾಜಕೀಯ ಅಧಃಪತನಕ್ಕೆ ಇಳಿದಿದ್ದಾರೆ ಎಂದರ್ಥ’ ಎಂದರು.

‘ಮುನಿರತ್ನ ಅವರನ್ನು ಬಿಜೆಪಿ ತಕ್ಷಣ ವಜಾ ಮಾಡಬೇಕು’ ಎಂದು ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಆಗ್ರಹಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಎಂ. ನಾರಾಯಣಸ್ವಾಮಿ, ಆರ್.ವಿ. ವೆಂಕಟೇಶ್, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಬ್ದುಲ್ ವಾಜಿದ್ ಸೇರಿದಂತೆ ಕಾಂಗ್ರೆಸ್ ಹಾಗೂ ಮಹಿಳಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಇದ್ದರು.

ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಕೆಪಿಸಿಸಿ ಕಚೇರಿಯ ಮುಂಭಾಗದಲ್ಲಿ ಕಾಂಗ್ರೆಸ್ ನಾಯಕರು ಗುರುವಾರ ಪ್ರತಿಭಟನೆ ನಡೆಸಿದರು

ಕಾಂಗ್ರೆಸ್ ಒಕ್ಕಲಿಗ ನಾಯಕರ ಸಭೆ

ಬೆಂಗಳೂರು: ಒಕ್ಕಲಿಗ ಸಮುದಾಯದ ಕುರಿತು ಬಿಜೆಪಿ ಶಾಸಕ ಮುನಿರತ್ನ ಅವರು ಆಡಿರುವ ಮಾತುಗಳ ವಿರುದ್ಧ ಒಟ್ಟಾಗಿ ನಿಂತು ಪ್ರತಿಭಟಿಸಲು ಕಾಂಗ್ರೆಸ್ ಒಕ್ಕಲಿಗ ಸಚಿವರು, ಶಾಸಕರು, ಮುಖಂಡರು ನಿರ್ಧರಿಸಿದ್ದಾರೆ.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ಗುರುವಾರ ಸಭೆ ನಡೆಯಿತು. ಮುನಿರತ್ನ ಪ್ರಕರಣ ಕುರಿತಂತೆ ಚರ್ಚೆ ನಡೆಸಿದ ಮುಖಂಡರು, ಈ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲು ಕೂಡಾ ತೀರ್ಮಾನಿಸಿದರು.

ಸಚಿವರಾದ ಎಂ.ಸಿ. ಸುಧಾಕರ್, ವೆಂಕಟೇಶ್, ಕೃಷ್ಣ ಬೈರೇಗೌಡ, ಶಾಸಕರಾದ ಟಿ.ಬಿ. ಜಯಚಂದ್ರ, ಶಿವಲಿಂಗೇಗೌಡ, ಬಾಲಕೃಷ್ಣ, ಶರತ್ ಬಚ್ಚೇಗೌಡ, ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಸೇರಿದಂತೆ ಹಲವರು ಸಭೆಯಲ್ಲಿದ್ದರು.

‘ನಾವು ಸಹಿಸುವುದಿಲ್ಲ’

‘ಮುನಿರತ್ನ ನಮ್ಮ (ಒಕ್ಕಲಿಗ) ಹೆಣ್ಣು ಮಕ್ಕಳ ಬಗ್ಗೆ ಮಾತನಾಡಿದರೆ ಸಹಿಸಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ. ಆತ ಮೋದಿಯವರ ತಾಯಿ ಬಗ್ಗೆ ಮಾತನಾಡಿದ್ದನ್ನು ಬಿಜೆಪಿಯವರು ಸಹಿಸಿಕೊಂಡಿರಬಹುದು. ಆದರೆ ನಮಗೆ ಅದು ಸಿಟ್ಟು, ಬೇಸರ ತರಿಸಿತ್ತು. ಈಗ ಅದೇ ಮುನಿರತ್ನ ನಮ್ಮ ಸಹೋದರಿಯರು ಹಾಗೂ ಹೆಣ್ಣು ಕುಲಕ್ಕೆ ಮಾಡಿರುವ ಅಪಮಾನವನ್ನು ನಾವು ಸಹಿಸುವುದಿಲ್ಲ’ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ವಾಗ್ದಾಳಿ ನಡೆಸಿದರು.

PVR - INOX CINEMAS {DIRECTORS CUT, FORUM REX WALK, 12:10, 5:15 p.m. | NEXUS FORUM MALL, KORMANGALA, 2:20, 9:15 p.m. | ORION MALL, YESHWANTPUR, 2:40 p.m. | VAISHNAVI SAPPHIRE MALL, TUMKUR ROAD, 10:35, 4:10 p.m. | VEGA CITY MALL | MSR REGALIA, 10:15 p.m. | PHOENIX MARKET CITY, K.R. PURAM, 10:30, 7:55 p.m. | BHARTIYA CITY, 7:05 p.m. | VR MALL, WHITEFIELD ROAD, 1:20, 8:05 p.m. | SUPERPLEX FALCON CITY, 3:45, 10:30 p.m. | MANTRI MALL, 12:40, 7:00 p.m. | GARUDA MALL, 7:55 p.m. | GALLERIA MALL, RMZ YELAHANKA, 9:50, 4:00 p.m. | SBR HORIZON, SEEGEHALLI, 9:30, 10:00 p.m. | VALUE NEIGHBOURHOOD MALL, WHITEFIELD, 10:15, 7:35 p.m.} | CINEPOLIS CINEMAS {ROYAL MEENAKSHI MALL, 11:15, 7:25 p.m. | ETA MALL, BINNY MILL, 12:00, 8:00 p.m. | EAST ORION MALL, 1:55, 7:15 p.m. | SHANTINIKETAN, 11:00, 8:00 p.m. | SJR SPECTRUM MALL, 10:40, 10:15 p.m. | LULU MALL (TRD), 10:40, 10:20 p.m. | LULU MALL (VIP), 4:40 p.m.} | GOPALAN CINEMAS {SIGNATURE MALL, 10:30, 5:30 p.m. | INNOVATION MALL, 10:15, 5:15 p.m. | LEGACY MALL, 12:0, 7:45 p.m.} | INNOVATIVE {MARATHHALLI, 5:00, 10:30 p.m.} | CINEPHILE {HSR LAYOUT, 11:40, 6:15 p.m.} | PVR - INOX CINEMAS {FORUM MALL, MYSORE, 10:05, 10:00 p.m. | SATYAM MALL, MYSORE, 2:40 p.m.} | CINEPOLIS CINEMAS {MANGALORE, 10:45, 6:55 p.m.} | BHARATH CINEMAS {MANGALORE, 1:00 p.m. | MANIPAL | SHIMOGA, 10:45, 6:00 p.m.} | DRC CINEMAS {MYSORE, 7:15 p.m.}.

FARNAZ

‘ಕಳಸಾ-ಬಂಡೂರಿ: ಪ್ರಧಾನಿ ಮಧ್ಯ ಪ್ರವೇಶಿಸಲಿ’

ಗೋವಾ–ತಾಮ್ನಾರ್ ವಿದ್ಯುತ್ ಯೋಜನೆ ಪುನರ್ ಪರಿಶೀಲನೆ: ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳಸಾ- ಬಂಡೂರಿ ನಾಲಾ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಒಪ್ಪಿಗೆ ಕೊಡಿಸಲು ಕೂಡಲೇ ಮಧ್ಯ ಪ್ರವೇಶಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ

‘ನಮ್ಮ ಕುಡಿಯುವ ನೀರಿನ ಯೋಜನೆ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ತಕರಾರು ಎತ್ತಿರುವ ಗೋವಾ ತನ್ನ ಧೋರಣೆಯನ್ನು ಬದಲಿಸದಿದ್ದರೆ, ಗೋವಾ–ತಾಮ್ನಾರ್ ವಿದ್ಯುತ್ ಮಾರ್ಗದ ಯೋಜನೆಗೆ ನಾವು ನೀಡಿರುವ ಒಪ್ಪಿಗೆಯನ್ನು ಪುನರ್ ಪರಿಶೀಲಿಸಬೇಕಾಗುತ್ತದೆ’ ಎಂದು ಸಿದ್ದರಾಮಯ್ಯ ಅವರು ಮೋದಿಗೆ ಬರೆದಿರುವ ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

‘ಅಂತರರಾಜ್ಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಕೇಂದ್ರ ಸರ್ಕಾರದ ಪಾತ್ರ ಮಹತ್ವದ್ದಾಗಿದೆ. ಅದರಲ್ಲೂ ರಾಷ್ಟ್ರೀಯ ಮಹತ್ವದ ಕುಡಿಯುವ ನೀರಿನ ಮತ್ತು ವಿದ್ಯುತ್ ಯೋಜನೆಗಳು ಸಕಾಲದಲ್ಲಿ ಪೂರ್ಣಗೊಂಡಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಇದಕ್ಕಾಗಿ ತ್ವರಿತಗತಿಯಲ್ಲಿ ಯೋಜನೆಗಳಿಗೆ ಅನುಮತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಅಂತರರಾಜ್ಯ ಸಹಕಾರ ಅತಿ ಮುಖ್ಯ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಕಳಸಾ- ಬಂಡೂರಿ ಯೋಜನೆ ಅತ್ಯಂತ ಹಳೆಯ ಮತ್ತು ನ್ಯಾಯಸಮ್ಮತ ಯೋಜನೆಯಾಗಿದ್ದು, ಇದರಿಂದ ವನ್ಯಜೀವಿಗಳಿಗೆ ಹೆಚ್ಚಿನ ಹಾನಿ ಆಗುವುದಿಲ್ಲ’ ಎಂದು ಹೇಳಿದ್ದಾರೆ.

‘ಗೋವಾದ ವಿದ್ಯುತ್ ಪ್ರಸರಣ ಮಾರ್ಗದ ಯೋಜನೆ ವಿಚಾರವಾಗಿ ಕೇಂದ್ರ ಉನ್ನತಾಧಿಕಾರ ಸಮಿತಿ 2021ರಲ್ಲಿ ವರದಿಯೊಂದನ್ನು ನೀಡಿದ್ದು, ಅದರ ಪ್ರಕಾರ ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಧಕ್ಕೆ ಉಂಟು ಮಾಡುವುದರಿಂದ ಮಾರ್ಗವನ್ನೇ ಪುನರ್ ರಚಿಸಬೇಕು ಎಂದು ಸೂಚಿಸಿತ್ತು. ಈ ವರದಿಯ ಶಿಫಾರಸಿಗೆ ಸುಪ್ರೀಂಕೋರ್ಟ್ 2022ರಲ್ಲಿ ತನ್ನ ಸಹಮತಿ ವ್ಯಕ್ತಪಡಿಸಿತ್ತು. ಕೇಂದ್ರ ವಿದ್ಯುತ್ ಸಚಿವರು 2024ರ ಆಗಸ್ಟ್‌ನಲ್ಲಿ ಪತ್ರ ಬರೆದು 72,817 ಮರಗಳ ಬದಲಿಗೆ 13,954 ಮರಗಳನ್ನು ಮಾತ್ರ ಕತ್ತರಿಸುತ್ತೇವೆ ಎಂದು ತಿಳಿಸಿದ್ದರು. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಮರಗಳ ಹನನವಾದರೂ, ಆನೆಗಳು ಹಾದುಹೋಗುವ ಕಾರಿಡಾರ್ ಇದ್ದರೂ ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ವಿದ್ಯುತ್ ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಿದ್ದೆವು’ ಎಂದು ತಿಳಿಸಿದ್ದಾರೆ.

‘ಅಚ್ಚರಿ ಎಂದರೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಗೋವಾದ ಯೋಜನೆಗೆ ಒಪ್ಪಿಗೆ ನೀಡಿ, ನಮ್ಮ ಯೋಜನೆಯ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳದೇ ನ್ಯಾಯಾಂಗ ನಿಂದನೆಯ ನೆಪವೊಡ್ಡಿ ಪ್ರಸ್ತಾವನೆಯನ್ನು ಮುಂದೂಡಿದೆ. ಇದು ಕರ್ನಾಟಕಕ್ಕೆ ಆಗಿರುವ ಅನ್ಯಾಯ. ನಮ್ಮ ನ್ಯಾಯೋಚಿತ ಕುಡಿಯುವ ನೀರಿನ ಯೋಜನೆಗೆ ಗೋವಾ ತಡೆ ಒಡ್ಡಿದೆ. ಆದ್ದರಿಂದ ನಿಮ್ಮ ಮಧ್ಯ ಪ್ರವೇಶ ಅನಿವಾರ್ಯ’ ಎಂದು ಹೇಳಿದ್ದಾರೆ.

ಜಾತಿ ನಿಂದನೆ: ಮುನಿರತ್ನಗೆ ಷರತ್ತುಬದ್ಧ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮಾಜಿ ಸದಸ್ಯರೊಬ್ಬರ ಜಾತಿ ಉಲ್ಲೇಖಿಸಿ ನಿಂದಿಸಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಬಿಜೆಪಿ ಶಾಸಕ ಮುನಿರತ್ನಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯ್ಕರ್ ನೀಡಿದ್ದ ದೂರಿನ ಅನ್ವಯ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಜಾತಿ ನಿಂದನೆ ಆರೋಪ ಪ್ರಕರಣದಲ್ಲಿ ಜಾಮೀನು ಕೋರಿ ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ಕಾಯ್ದಿರಿಸಿತ್ತು.

‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಗುರುವಾರ ತೀರ್ಪು ಪ್ರಕಟಿಸಿದರು.

‘₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಇಬ್ಬರ ಶ್ಯೂರಿಟಿ ಒದಗಿಸಬೇಕು. ಸಾಕ್ಷ್ಯ ನಾಶ ಮಾಡುವ ಪ್ರಯತ್ನ ಮಾಡಬಾರದು’ ಎಂಬ ಷರತ್ತುಗಳನ್ನು ನ್ಯಾಯಾಲಯ ವಿಧಿಸಿದೆ.

ಮುನಿರತ್ನ ಪರ ಹೈಕೋರ್ಟ್ ಹಿರಿಯ ವಕೀಲ ಅಶೋಕ ಹಾರನಹಳ್ಳಿ ವಾದ ಮಂಡಿಸಿದ್ದರು.

ವಿಜಯಭಾಸ್ಕರ್ ಜನ್ಮ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಚಿತ್ರಗೀತೆಗಳಿಗೆ ಅನನ್ಯ ಗುಣಗಳನ್ನು ತುಂಬಿ, ಶ್ರೀಮಂತಗೊಳಿಸಿದವರು ಸಂಗೀತ ಸಾಮ್ರಾಟ್ ವಿಜಯಭಾಸ್ಕರ್’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ವಿಜಯಭಾಸ್ಕರ್ ಕುಟುಂಬ ವರ್ಗದವರು ಆಯೋಜಿಸಿದ್ದ ‘ವಿಜಯಭಾಸ್ಕರ್ ಜನ್ಮ ಶತಮಾನೋತ್ಸವ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿಜಯಭಾಸ್ಕರ್ ಅವರ ಎಲ್ಲ ಸಂಯೋಜನೆಗಳೂ ಚಿತ್ರಗೀತೆಯ ಅಭ್ಯಾಸಕ್ಕೆ ಪಠ್ಯದಂತಿವೆ. ಭಾವಗೀತೆ ಪ್ರಕಾರಕ್ಕೂ ತಮ್ಮ ಆರಂಭಿಕ ಚಿತ್ರಗೀತೆಗಳಲ್ಲಿ ಭೂಮಿಕೆ ರೂಪಿಸಿದ್ದರು. ಮೂಡಣ ಮನೆಯ ಮುತ್ತಿನ ನೀರಿನ, ಬರೆದೆ ನೀನು ನಿನ್ನ ಹೆಸರ... ಮೊದಲಾದ ಅವರ ಸಂಯೋಜನೆಗಳು ಭಾವಗೀತೆ ಪ್ರಕಾರದ ಮೇಲೆ ಅಪಾರ ಪರಿಣಾಮ ಬೀರಿವೆ’ ಎಂದರು.

ವಿಜಯಭಾಸ್ಕರ್ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಭಾರತೀಯ ಅಂಚೆ ಇಲಾಖೆ ಹೊರ ತಂದಿರುವ ವಿಶೇಷ ಅಂಚೆ ಲಕೋಟೆ ಮತ್ತು ಲಹರಿ ಸಂಗೀತ ಸಂಸ್ಥೆ ಹೊರ ತಂದಿರುವ ವಿಜಯಭಾಸ್ಕರ್ ಸಂಗೀತ ಸಂಯೋಜನೆಯ ಮಧುರ ಗೀತೆಗಳ ಎರಡು ಸಂಗೀತ ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ಮಾತನಾಡಿ, ‘ನಾನು ಬಾಲ್ಯದಲ್ಲಿ ನೋಡಿದ ಮೊದಲ ಚಿತ್ರವೇ ವಿಜಯಭಾಸ್ಕರ್ ಅವರ ಸ್ವರ ಸಂಯೋಜನೆಯ ಗೆಜ್ಜೆಪೂಜೆ. ಅವರ ಗೀತೆಗಳನ್ನು ಕೇಳುತ್ತಲೇ ಬೆಳೆದ ನನಗೆ ಅಂಚೆ ಲಕೋಟೆ ತರುವ ಅದೃಷ್ಟ ಸಿಕ್ಕಿದ್ದು ಸೌಭಾಗ್ಯ’ ಎಂದರು.

ಲಹರಿ ಸಂಸ್ಥೆಯ ಲಹರಿ ವೇಲು ಮಾತನಾಡಿ ‘ಬಾಲಕನಾಗಿದ್ದಾಗಿನಿಂದ ವಿಜಯಭಾಸ್ಕರ್ ಅವರ ಸ್ವರ ಸಂಯೋಜನೆ ಕೇಳುತ್ತಾ, ನೋಡುತ್ತಾ ಬೆಳೆದೆ. ಅವರ ಗೀತೆಗಳನ್ನು ನೂರಾರು ಸಲ ಕೇಳಿ ಆನಂದಿಸಿದ್ದೇನೆ. ಈ ಮೇರು ವ್ಯಕ್ತಿತ್ವಕ್ಕೆ ಸಂಗೀತ ಸುರಳಿಗಳ ಮೂಲಕ ನಮನ ಸಲ್ಲಿಸುತ್ತಿದ್ದೇನೆ’ ಎಂದು ಹೇಳಿದರು.

ಗಾಯಕಿ ಬಿ.ಆರ್.ಛಾಯಾ ಅವರು ‘ಹಿಂದೂಸ್ತಾನವು ಎಂದೂ ಮರೆಯದ’ ಗೀತೆಯ ಮೂಲಕ ನುಡಿನಮನ ಸಲ್ಲಿಸಿದರು. ಪತ್ರಕರ್ತ ಎನ್.ಎಸ್. ಶ್ರೀಧರ ಮೂರ್ತಿ, ವಿಜಯಭಾಸ್ಕರ್ ಅವರ ಮಕ್ಕಳಾದ ಶಂಕರಿ ಅನಂತ್ ಮತ್ತು ಮಂಗಳಗೌರಿ ಉಪಸ್ಥಿತರಿದ್ದರು.

ವಿಜಯಭಾಸ್ಕರ್ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಭಾರತೀಯ ಅಂಚೆ ಇಲಾಖೆ ಹೊರ ತಂದಿರುವ ವಿಶೇಷ ಅಂಚೆ ಲಕೋಟೆಯನ್ನು ಬಿ.ಆರ್. ಛಾಯಾ, ವೇಲು, ರಾಜೇಂದ್ರ ಕುಮಾರ್ ಬಿಡುಗಡೆ ಮಾಡಿದರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂ.ಅ.ಪ್ರಾ/ಇ.ಓ/ಟಿ.ಡಿ.ಆರ್ ಸೆಲ್/ಅಧಿಸೂಚನೆ/219/2024–25 ದಿನಾಂಕ: 19.09.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ ರಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಮತ್ತು ಕರ್ನಾಟಕ ರಾಜ್ಯ ಸರ್ಕಾರದ ನೋಟಿಫಿಕೇಷನ್ ಸಂಖ್ಯೆ: ಯುಡಿಡಿ/283/ಬಿಇಎಂಆರ್‌ಯುಪಿಆರ್‌ಎ/ 2015 ದಿನಾಂಕ: 04.03.2017 ರಲ್ಲಿನ ನಿಯಮ ಮತ್ತು ಷರತ್ತುಗಳನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಅಧಿಸೂಚನೆಯಂತೆ, ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್–2015 ರಲ್ಲಿ ಗುರುತಿಸಿರುವ ರಸ್ತೆಗಳ ಅನುಷ್ಠಾನಕ್ಕಾಗಿ, ಆಯುಕ್ತರವರ ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕುಮಾರ ಪಾರ್ಕ್ ಪಶ್ಚಿಮ ಬಡಾವಣೆ, ಟಿ.ಚೌಡಯ್ಯ ರಸ್ತೆ, ಬೆಂಗಳೂರು, ಈ ಕೆಳಗಿನ ಅನುಸೂಚಿಯಲ್ಲಿ ತಿಳಿಸಲಾದ ಪ್ರದೇಶದ ಭೂಮಾಲೀಕರಿಗೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು ವಿತರಿಸಲಾಗಿರುತ್ತದೆ.

ದಿನಾಂಕ: 04.03.2017 ರ ಸರ್ಕಾರದ ಅಧಿಸೂಚನೆಯನ್ವಯ ಹೊಸ ಟಿ.ಡಿ.ಆರ್. ನಿಯಮಾವಳಿಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಿತರಿಸಲಾಗಿರುವ ಈ ಕೆಳಕಂಡ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರಗಳನ್ನು ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಿವ್ಯಾಲಿಡೇಷನ್/ವರ್ಗಾವಣೆ/ಬಳಕೆ ಪ್ರಮಾಣ ಪತ್ರಕ್ಕಾಗಿ ಡಿ.ಆರ್.ಸಿ/ಟಿ.ಡಿ.ಆರ್ ನ ಪ್ರಸ್ತುತ ಹಕ್ಕುದಾರರು ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಭೂಮಿ ಹಾಗೂ ಭೂಮಾಲೀಕರ ವಿವರಗಳನ್ನು ಹಾಗೂ ಸಾರ್ವಜನಿಕ ಉದ್ದೇಶಗಳಿಗಾಗಿ ಯಾರ ಭೂಮಿಯ ಅವಶ್ಯವಿದೆಯೋ ಹಾಗೂ ಅಭಿವೃದ್ಧಿ ಹಕ್ಕುಗಳನ್ನು ನಗದು ಪರಿಹಾರದ ಬದಲಿಗೆ ಯಾರಿಗೆ ನೀಡಲಾಗಿದೆಯೋ ಅಂತಹ ಹಿತಾಸಕ್ತರ ವಿವರಗಳನ್ನು ಕೆಳಕಂಡಂತೆ, ಸಾರ್ವಜನಿಕರ ತಿಳುವಳಿಕೆಗೆ ಪ್ರಕಟಿಸಲಾಗಿದೆ. ಯಾವುದೇ ತಕರಾರುಗಳಿದ್ದಲ್ಲಿ ಹಾಗೂ ಸಲಹೆಗಳಿದ್ದಲ್ಲಿ ಅಂತಹವುಗಳನ್ನು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ವಿಳಾಸಿಸಿ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

ಸ್ವಾಧೀನಕ್ಕೆ ಒಪ್ಪಿಸಿದ ಭೂಮಿ /ಕಟ್ಟಡದ ವಿಸ್ತೀರ್ಣ ಹಾಗೂ ಭೂ ಮಾಲೀಕರ ವಿವರ ಹಾಗೂ ಅದಕ್ಕೆ ನೀಡಲಾಗಿರುವ ಅಭಿವೃದ್ಧಿ ಹಕ್ಕಿನ ಪ್ರಮಾಣ ಪತ್ರದ ತಖ್ತೆ:

ಕ್ರ. ಸಂ.	ನಿವೇಶನ /ಭೂಮಿ /ಕಟ್ಟಡದ ವಿಸ್ತೀರ್ಣ ಹಾಗೂ ವಿಳಾಸ	ಭೂಮಿ /ನಿವೇಶನ /ಅಗತ್ಯವಿರುವ ಸಾರ್ವಜನಿಕ ಉದ್ದೇಶ	ಭೂಮಿ /ನಿವೇಶನದ ವಿಸ್ತೀರ್ಣ ಉದ್ದ X ಅಗಲ ಮೀ. ಗಳಲ್ಲಿ	ಡಿ.ಆರ್.ಸಿ.ಸಂಖ್ಯೆ & ಭೂಮಿ /ನಿವೇಶನದ ವಿಸ್ತೀರ್ಣ ಚ.ಮೀ.ಗಳಲ್ಲಿ	ಭೂಮಿ/ನಿವೇಶನದ ಗಡಿಯ ಚಕ್ಕುಬಂದಿ	ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ನೀಡಲಾಗಿರುವ ಭೂಮಿಯ /ನಿವೇಶನದ ಮೂಲ ಭೂಮಾಲೀಕರ ಹೆಸರು ಮತ್ತು ವಿಳಾಸ
1	ಸರ್ವೆ ನಂ. 9/1, ಕೆಂಪನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಅಟ್ಟೂರು–ಜಾರಕ್ ಬಂಡೆ ಕಾವಲ್ ರಸ್ತೆಯನ್ನು ಅಟ್ಟೂರು ಲೇಕ್ ಅಡ್ಡರಸ್ತೆಯಿಂದ ಜಾರಕ್ ಬಂಡೆ ಕಾವಲ್ ರಸ್ತೆ, ಕೆಂಪನಹಳ್ಳಿ ವರೆಗೆ ರಸ್ತೆ ಅಗಲೀಕರಣ.	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. 1900 1682.60 ಚ.ಮೀ	**ಪೂರ್ವ:** ಸರ್ವೆ ನಂ.10; **ಪಶ್ಚಿಮ:** ಸರ್ವೆ ನಂ.9/4; **ಉತ್ತರ:** ಸರ್ವೆ ನಂ.9/1 ರ ಉಳಿಕೆ; **ದಕ್ಷಿಣ:** ಸರ್ವೆ ನಂ.11;	ಶ್ರೀ ಪ್ರದೀಪ್ ಕೃಷ್ಣಪ್ಪ ಬಿನ್ ಎಂ.ಕೃಷ್ಣಪ್ಪ. # 2937/38/ಇ, ಸರ್ವೀಸ್ ರಸ್ತೆ, ವಿಜಯನಗರ, ಬೆಂಗಳೂರು – 560040.
	ಸರ್ವೆ ನಂ. 10, ಕೆಂಪನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.			ಡಿ.ಆರ್.ಸಿ. 1900 422.90 ಚ.ಮೀ **ಒಟ್ಟು 2105.50 ಚ.ಮೀ**	**ಪೂರ್ವ:** ಸರ್ವೆ ನಂ.12; **ಪಶ್ಚಿಮ:** ಸರ್ವೆ ನಂ.9/1; **ಉತ್ತರ:** ಸರ್ವೆ ನಂ.10 ರ ಉಳಿಕೆ; **ದಕ್ಷಿಣ:** ಸರ್ವೆ ನಂ.11;	
2	ಬಿಬಿಎಂಪಿ ಖಾತಾ ನಂ.2152/206/6, ವಾರ್ಡ್ ನಂ.09, ಕೊಡಿಗೇಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು.	ಜಿ.ಕೆ.ವಿ.ಕೆ. ರಸ್ತೆಯನ್ನು (ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ) ಎನ್.ಹೆಚ್–7 ರಿಂದ ಯಶವಂತಪುರ–ಯಲಹಂಕ ರಸ್ತೆವರೆಗೆ ರಸ್ತೆ ಅಗಲೀಕರಣ	ಭೂಮಾಪಕರ ಸರ್ವೆ ನಕ್ಷೆಯಂತೆ	ಡಿ.ಆರ್.ಸಿ. ಸಂಖ್ಯೆ: 2600 866.54 ಚ.ಮೀ	**ಪೂರ್ವ:** ಕೋತಿಹೊಸಹಳ್ಳಿ ಗಡಿ; **ಪಶ್ಚಿಮ:** ಸರ್ವೆ ನಂ.208; **ಉತ್ತರ:** ಸರ್ವೆ ನಂ.206/6 ರ ಉಳಿಕೆ; **ದಕ್ಷಿಣ:** ಸರ್ವೆ ನಂ.206/6 ರ ಉಳಿಕೆ;	ಶ್ರೀ ಎಸ್.ವೆಂಕಟಕೃಷ್ಣ ರಾಜು ಬಿನ್ ಶ್ರೀನಿವಾಸ ರಾಜು. ಸಂಖ್ಯೆ: ಎಂ 1601, ಎಂ–ವಿಂಗ್, ಬ್ರಿಗೇಡ್ ಗೇಟ್‌ವೇ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು ನಗರ–560055.

ಸಹಿ/- ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಸಿನಿಮಾ ಪುರವಣಿ

ತಲೆಯಿಂದ ಹುಳ ತೆಗೆಯೋ ಸಿನಿಮಾ

ನಟ ಉಪೇಂದ್ರ ಕಳೆದ ಬುಧವಾರ(ಸೆ.18) ತಮ್ಮ ಜನ್ಮದಿನ ಆಚರಿಸಿಕೊಂಡರು. ಈ ಸಂದರ್ಭದಲ್ಲಿ ನಿರ್ದೇಶನ, ತಮ್ಮ ಹೊಸ ಸಿನಿಮಾ 'ಯುಐ' ಹಾಗೂ ಹೊಸ ತಂತ್ರಜ್ಞಾನಗಳ ಬಗ್ಗೆ ಆಸಕ್ತಿದಾಯಕ ವಿಚಾರಗಳನ್ನು ಹಂಚಿಕೊಂಡರು. ಅವುಗಳ ತುಣುಕುಗಳು ಇಲ್ಲಿ....

ಉಪೇಂದ್ರ

1 'ಬರೀ ನಟನೆ ಮಾಡುತ್ತೀರಿ, ಹೆಚ್ಚಾಗಿ ನಿರ್ದೇಶನ ಏಕೆ ಮಾಡುತ್ತಿಲ್ಲ' ಎಂದು ಹಲವರು ಕೇಳುತ್ತಾರೆ. ನಾನು ಬೇಕಾದರೆ ಐದಾರು ಮದುವೆ ಆಗಿಬಿಡುತ್ತೇನೆ, ಆದರೆ ಈ ನಿರ್ದೇಶನವಿದೆಯಲ್ಲ...ಅದು ಮದುವೆಗಿಂತ ಅಪಾಯಕಾರಿ. ನಿರ್ದೇಶನಕ್ಕೆ ಇಳಿದರೆ ಮಧ್ಯದಲ್ಲೇ ಸಿಕ್ಕಿಹಾಕಿಕೊಳ್ಳುವುದು ಖಚಿತ. ನಿರ್ದೇಶನ ಮಾಡುತ್ತಿದ್ದೇನೆ ಎಂದಾಗಲೇ 'ಮನೆ ಒಳಗೇ ಬರಬೇಡ ಹೋಗು' ಎಂದು ಪ್ರಿಯಾಂಕಾ ನನ್ನ ಬಿಟ್ಟೇಬಿಟ್ಟಿದ್ದಾರೆ. ಸಿನಿಮಾ ನಿರ್ದೇಶನ ಎನ್ನುವುದೇ ದೊಡ್ಡ ಯುದ್ಧದಂತೆ.

2 'ಯುಐ' ಸಿನಿಮಾ ಎರಡೂವರೆ ವರ್ಷದ ಪಯಣ. ಚಿತ್ರದ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಚಿತ್ರದ ದೃಶ್ಯಗಳನ್ನು ನೋಡಿದ ಬಳಿಕ ರಿರೆಕಾರ್ಡಿಂಗ್ ಬದಲಿಸಿದರು. ಇದನ್ನು ಯುರೋಪ್‌ನಲ್ಲೇ ಮಾಡಬೇಕು ಎಂದರು. ಸಿನಿಮಾ ನಿರ್ಮಾಣ ಶೈಲಿ (ಮೇಕಿಂಗ್ ಸ್ಟೈಲ್) ಹಿಂದಿನಂತಿಲ್ಲ. ತಂತ್ರಜ್ಞಾನ ಹೊಸದಾದಂತೆ ನಿರ್ಮಾಣ ಶೈಲಿಯೂ ಬದಲಾಗಿದೆ. 'ಹಿಂದೆಲ್ಲ ಆರು ತಿಂಗಳಲ್ಲಿ ಒಂದು ಸಿನಿಮಾ ಆಗುತ್ತಿತ್ತು, ಮೂರು ದಿನಕ್ಕೆ ಒಂದು ಹಾಡಿನ ಚಿತ್ರೀಕರಣ ಆಗುತ್ತಿತ್ತಲ್ಲವೇ? ಈಗ ಏಕೆ ಇದು ಸಾಧ್ಯವಿಲ್ಲ' ಎಂದು ಕೆಲವರು ಕೇಳುತ್ತಾರೆ. ಆದರೆ ಇದು ಈಗ ಸಾಧ್ಯವಿಲ್ಲ. ಒಂದು ಸೆಟ್ ನಿರ್ಮಾಣ ಮಾಡಿ ಅದರೊಳಗೆ ಹಾಡಿನ ಚಿತ್ರೀಕರಣಕ್ಕೇ ಹತ್ತು ದಿನಗಳು ಬೇಕಾಗುತ್ತವೆ. ನಿರ್ಮಾಣ ಶೈಲಿ ಬದಲಾಗಿರುವುದೇ ಇದಕ್ಕೆ ಕಾರಣ. ನಾವು 'ಯುಐ' ಸಿನಿಮಾವನ್ನು ಮೊದಲು ಕನ್ನಡದಲ್ಲಷ್ಟೇ ಮಾಡಬೇಕು ಎಂದುಕೊಂಡಿದ್ದೆವು. ಇದೀಗ ಇದು ಪ್ಯಾನ್ ಇಂಡಿಯಾ ಆಗಿದೆ.

3 ಪ್ರೇಕ್ಷಕರು ಅತಿ ಬುದ್ಧಿವಂತರು ಎನ್ನುವ ಒಂದೇ ವಿಶ್ವಾಸದಿಂದ 'ಯುಐ' ಸಿನಿಮಾ ಮಾಡಿದ್ದೇನೆ. 'ಎ' ಸಿನಿಮಾ ಮಾಡಿದಾಗ ಪ್ರೇಕ್ಷಕರು ಬುದ್ಧಿವಂತರು ಎಂಬುದನ್ನು ಸಾಬೀತು ಮಾಡಿದರು. ನನ್ನ ಪ್ರಕಾರ ಪ್ರೇಕ್ಷಕ, ನಿರ್ದೇಶಕ ಹಾಗೂ ತಂತ್ರಜ್ಞನಿಗಿಂತಲೂ ಮೇಲಿರುತ್ತಾನೆ. ಪ್ರೇಕ್ಷಕರನ್ನು ಗೆಲ್ಲುವುದಕ್ಕೆ ಭಿನ್ನವಾದ ಯೋಚನೆಯೇ ಬೇಕು. ಒಂದು ಪೋಸ್ಟರ್ ವಿನ್ಯಾಸ ನೋಡಿ ಸಿನಿಮಾ ನೋಡಬೇಕೇ ಬೇಡವೇ ಎನ್ನುವುದನ್ನು ಇದೀಗ ಪ್ರೇಕ್ಷಕ ನಿರ್ಧರಿಸುತ್ತಿದ್ದಾನೆ. ಪ್ರೇಕ್ಷಕನೂ ತಂತ್ರಜ್ಞನಾಗಿದ್ದಾನೆ, ಫಿಲ್ಮ್‌ಮೇಕರ್ ಆಗಿದ್ದಾನೆ. ಹೀಗಾಗಿ ಸಿನಿಮಾ ಮಾಡುವುದು ಸುಲಭವಾಗಿ ಉಳಿದಿಲ್ಲ. 'ಯುಐ'ಯನ್ನು ಡಿಕೋಡ್ ಮಾಡುವುದು ಪ್ರೇಕ್ಷಕರ ಸಾಮರ್ಥ್ಯಕ್ಕೆ ಬಿಟ್ಟಿದ್ದು.

4 ಸಿನಿಮಾ ತಯಾರಿಗೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿರುವುದಕ್ಕೆ ಸಿನಿಮಾ ವ್ಯವಹಾರ, ಸಿನಿಮಾ ತಂತ್ರಜ್ಞಾನ ಬದಲಾಗಿರುವುದೇ ಕಾರಣ. ಸುದ್ದಿಯ ನೇರಪ್ರಸಾರದಂತೆ(ಲೈವ್) ಸಿನಿಮಾ ಮಾಡಲು ಸಾಧ್ಯವಿಲ್ಲ. ಸಿನಿಮಾವನ್ನು ಬೇಕೆಂದೇ ಯಾರೂ ವಿಳಂಬ ಮಾಡುವುದಿಲ್ಲ. ಅದಕ್ಕೊಂದು ಕಾರಣವಿದ್ದೇ ಇರುತ್ತದೆ.

5 'ಯುಐ' ಮುಗಿದ ತಕ್ಷಣ ವರ್ಷಕ್ಕೆ ಎರಡು ಸಿನಿಮಾ ಮಾಡಬೇಕು ಎಂದುಕೊಂಡಿದ್ದೇನೆ. 'ಯುಐ' ಇಲ್ಲಿಯವರೆಗಿನ ನನ್ನ ಸಿನಿಪಯಣದ ಅತ್ಯಂತ ಹೆಚ್ಚಿನ ಬಜೆಟ್‌ನ ಸಿನಿಮಾ.

6 ತೆಲುಗಿನಲ್ಲಿ ಬಂದಿದ್ದು ಮೈಥಲಾಜಿಕಲ್ 'ಕಲ್ಕಿ'. 'ಯುಐ' ಲಾಜಿಕಲ್, ಸೈಕಾಲಾಜಿಕಲ್ 'ಕಲ್ಕಿ'. ಈ ಸಿನಿಮಾದ ವಿಚಾರ ಇರುವುದೇ ಪ್ರೇಕ್ಷಕರ ಯೋಚನೆಯನ್ನು ಪ್ರಚೋದಿಸಲು. ನನ್ನನ್ನು ತಲೆಗೆ ಹುಳ ಬಿಡೋ ನಿರ್ದೇಶಕ ಎನ್ನುತ್ತಾರೆ, 'ಯುಐ' ತಲೆಯಿಂದ ಹುಳ ತೆಗೆಯಲು ಮಾಡಿದ ಸಿನಿಮಾ. ಆದರೆ ಈ ಹುಳ ತೆಗೆಯುವುದು ಬಹಳ ಕಷ್ಟ. ಶೀರ್ಷಿಕೆಯ ಅರ್ಥ ಏನು ಎನ್ನುವುದನ್ನು ಸಿನಿಮಾ ನೋಡಿಯೇ ತಿಳಿದುಕೊಳ್ಳಬೇಕು.

“ಉಪೇಂದ್ರ ಅವರಿಗೆ ಎಟಿಎಂ ಕೊಟ್ಟಿದ್ದೇನೆ. ಸಿನಿಮಾಗೆ ಎಷ್ಟು ಖರ್ಚಾಗಿದೆ ಎಂದು ಇನ್ನಷ್ಟೇ ಲೆಕ್ಕ ಹಾಕಬೇಕಿದೆ. 'ಯುಐ' ಚಿತ್ರ ಅಕ್ಟೋಬರ್‌ನಲ್ಲೇ ತೆರೆಕಾಣಲಿದೆ. ಇದು ಶೇಕಡ 200 ಖಚಿತ. ಪ್ಯಾನ್ ಇಂಡಿಯಾ ಸಿನಿಮಾವಾಗಿರುವುದಕ್ಕೆ ವಿಳಂಬ ಆಗುತ್ತಿದೆ. ನಾವು ಬಾಲಿವುಡ್‌ನವರಿಗೆ ಸ್ಪರ್ಧೆ ಒಡ್ಡಬೇಕಲ್ಲವೇ?
ಜಿ.ಮನೋಹರನ್, 'ಯುಐ' ನಿರ್ಮಾಪಕ”

'ನನಗೆ ಸಿನಿಮಾ ತೋರಿಸಿದ ದಿನ ರಿಲೀಸ್ ದಿನ ನಿಗದಿ'

ಅಕ್ಟೋಬರ್‌ನಲ್ಲಿ ಬಿಗ್‌ಬಜೆಟ್ ಸಿನಿಮಾಗಳಾದ 'ಮಾರ್ಟಿನ್' ಹಾಗೂ 'ಬಘೀರ' ಬರುತ್ತಿದೆ. ಹೀಗಿರುವಾಗ 'ಯುಐ' ರಿಲೀಸ್ ಯಾವಾಗ ಮಾಡುತ್ತೀರಿ ಎನ್ನುವ ಪ್ರಶ್ನೆಗೆ ಉತ್ತರಿಸಿದ ಉಪೇಂದ್ರ, 'ಅಕ್ಟೋಬರ್‌ನಲ್ಲಿ ರಿಲೀಸ್ ಅಂದಿದ್ದೇವೆ. ಏನು ರಿಲೀಸ್ ಅಂದಿದ್ದೇವಾ? ಅಕ್ಟೋಬರ್‌ನಲ್ಲಿ ಎರಡು ದೊಡ್ಡ ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಶ್ರೀಕಾಂತ್ ಎಲ್ಲರಿಗೂ ಬೇಕಾದವರು. ಈ ಸಿನಿಮಾಗಳ ನಿರ್ಮಾಪಕರ ನಡುವೆ ಒಳ್ಳೆಯ ಸಂಬಂಧವಿದೆ. ದೊಡ್ಡ ಸಿನಿಮಾಗಳು ಬರಬೇಕಾದರೆ ಒಂದು ಅಂತರ ಇದ್ದರೆ ಒಳ್ಳೆಯದು. ಯಾರು ಯಾರಿಗೆ ಅಂತರ ನೀಡುತ್ತಾರೆ ಎನ್ನುವುದು ಸದ್ಯದಲ್ಲೇ ತೀರ್ಮಾನವಾಗಲಿದೆ. ನನಗೆ ಸಿನಿಮಾ ತೋರಿಸಿದ ದಿನ ಬಿಡುಗಡೆ ದಿನಾಂಕ ಘೋಷಣೆ ಮಾಡಿ ಎಂದಿದ್ದೇನೆ. ಮುಂದಿನ ಸೋಮವಾರ(ಸೆ.23) 'ಯುಐ' ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ' ಎಂದರು.

7 'ಯುಐ'ನಲ್ಲಿ ಈ ರಿಯಲ್ ಸ್ಟಾರ್‌ಗೇ ಅನ್‌ರಿಯಲ್ ತಂತ್ರಜ್ಞಾನದ ಅನುಭವವಾಗಿದೆ. ಸುಮಾರು 250 ಕ್ಯಾಮೆರಾಗಳನ್ನು ಬಳಸಿ ಪೂರ್ತಿಯಾಗಿ ನನ್ನನ್ನು ಸ್ಕ್ಯಾನ್ ಮಾಡಲಾಗಿದೆ. ಇವುಗಳನ್ನು ಸಾಹಸ ದೃಶ್ಯಗಳಲ್ಲಿ ಬಳಸಿಕೊಳ್ಳಲಾಗಿದೆ. ಇಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಒಂದು ಕೊಠಡಿಯಲ್ಲೇ ಕುಳಿತು ಒಂದು ಸಿನಿಮಾದ ಶೇ 80ರಷ್ಟು ಚಿತ್ರೀಕರಣವನ್ನು ಮಾಡಿ ಮುಗಿಸಬಹುದು ಎನ್ನುವುದನ್ನು 'ಯುಐ'ಯಿಂದ ಕಲಿತಿದ್ದೇನೆ.

8 ರಜನಿಕಾಂತ್ ಅವರ ಜೊತೆ ತಮಿಳಿನಲ್ಲಿ 'ಕೂಲಿ' ಸಿನಿಮಾ ಮಾಡುತ್ತಿದ್ದೇನೆ. ಒಳ್ಳೆಯ ಪಾತ್ರ ದೊರಕಿದೆ. ಇದು ಖಂಡಿತಾ ಖಳನಾಯಕನ ಪಾತ್ರವಲ್ಲ.

9 'ಓಂ' ಸಿನಿಮಾದ ಸ್ಯಾಟಲೈಟ್ ಹಕ್ಕುಗಳನ್ನು ಯಾರಿಗೂ ನೀಡಿಲ್ಲ. ಹೀಗಾಗಿ ರಿರಿಲೀಸ್ ಆದಾಗ ಇದು ದಾಖಲೆಗಳನ್ನೂ ಬರೆಯಿತು. ಇದೀಗ ರಿರಿಲೀಸ್ ಟ್ರೆಂಡ್ ಪ್ರಾರಂಭವಾಗಿದೆ. 'ಎ' ಸೇರಿದಂತೆ ಹಲವರ ಸಿನಿಮಾಗಳು ರಿರಿಲೀಸ್ ಆದವು. ಸೆ.20ಕ್ಕೆ 'ಉಪೇಂದ್ರ' ಮರುಬಿಡುಗಡೆಯಾಗುತ್ತಿದೆ. ❖

ಖುಷಿಯಾದ ಬೃಂದಾ

'ನೆನಪಿರಲಿ' ಪ್ರೇಮ್ ನಟನೆಯ 'ಪ್ರೇಮಂ ಪೂಜ್ಯಂ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ನಟಿ ಬೃಂದಾ ಆಚಾರ್ಯ ಸದ್ಯ ತಮ್ಮ ಮೂರು ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

ತಮ್ಮ ಸಿನಿ ಬ್ಯಾಂಕ್ ಹಿಗ್ಗಿಸಿಕೊಳ್ಳುತ್ತಿರುವ ಬೃಂದಾ 'ಸತ್ಯ ಸನ್ ಆಫ್ ಹರಿಶ್ಚಂದ್ರ'ದಲ್ಲಿ ಬಣ್ಣ ಹಚ್ಚಿದ್ದಾರೆ. ಇದೀಗ ಆ ಸಿನಿಮಾದಲ್ಲಿನ ಅವರ ಪಾತ್ರವನ್ನು ಚಿತ್ರತಂಡ ಪರಿಚಯಿಸಿದೆ. 'ಖುಷಿ ಜಗನ್ನಾಥ್' ಎಂಬ ಪಾತ್ರದಲ್ಲಿ ಬೃಂದಾ ಕಾಣಿಸಿಕೊಳ್ಳಲಿದ್ದಾರೆ. 'ಖುಷಿ' ಸೋಶಿಯಲ್ ಮೀಡಿಯಾ ಇನ್‌ಫ್ಲೂಯೆನ್ಸರ್ ಎಂದು ಚಿತ್ರತಂಡ ತಿಳಿಸಿದೆ.

'ಕೌಸಲ್ಯಾ ಸುಪ್ರಜಾ ರಾಮ' ಚಿತ್ರದಲ್ಲಿ 'ಶಿವಾನಿ'ಯಾಗಿ ಮಿಂಚಿದ ಬೃಂದಾ, ಸಚಿನ್ ವಾಲಿ ಆ್ಯಕ್ಷನ್ ಕಟ್ ಹೇಳುತ್ತಿರುವ 'ಸತ್ಯ ಸನ್ ಆಫ್ ಹರಿಶ್ಚಂದ್ರ'ದಲ್ಲಿ ನಿರೂಪ್ ಭಂಡಾರಿಗೆ ಜೋಡಿಯಾಗಿದ್ದಾರೆ. ಈ ಚಿತ್ರದಲ್ಲಿ ನಟಿ ಅಂಕಿತಾ ಅಮರ್ ವರದಿಗಾರ್ತಿಯಾಗಿ ಬಣ್ಣಹಚ್ಚಿದ್ದಾರೆ. ಸಾಯಿಕುಮಾರ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಸಚಿನ್ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದ್ದು, ಸಿನಿಮಾ ಹಾಸ್ಯ ಹಾಗೂ ಸಾಂಸಾರಿಕ ಕಥಾವಸ್ತುವನ್ನು ಹೊಂದಿದೆ. ಸದ್ಯ ಬೃಂದಾ ಕೈಯಲ್ಲಿ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ', 'ರಾಮಾ ರಾಮಾ ರೇ' ಖ್ಯಾತಿಯ ಸತ್ಯಪ್ರಕಾಶ್ ನಿರ್ದೇಶನದ 'ಎಕ್ಸ್ ಆ್ಯಂಡ್ ವೈ', ಎಸ್.ನಾರಾಯಣ್ ನಿರ್ದೇಶನದ 'ಒಂದ್ಸಲ ಮೀಟ್ ಮಾಡೋಣ' ಚಿತ್ರಗಳಿವೆ. ❖

ದೀಪಾವಳಿಗೆ ಡಾಲಿ 'ಜೀಬ್ರಾ'

'ಅಣ್ಣ ಫ್ರಂ ಮೆಕ್ಸಿಕೊ', 'ಉತ್ತರಕಾಂಡ', 'ಜಿಂಗೋ', 'ನಾಡಪ್ರಭು ಕೆಂಪೇಗೌಡ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡಿರುವ ನಟ 'ಡಾಲಿ' ಧನಂಜಯ ನಟನೆಯ 26ನೇ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ.

ಧನಂಜಯ ಹಾಗೂ ತೆಲುಗಿನ ನಟ ಸತ್ಯದೇವ್ ನಟನೆಯ ಮಲ್ಟಿಸ್ಟಾರ್ ಸಿನಿಮಾ 'ಜೀಬ್ರಾ' ಅ.31ರಂದು ತೆರೆಕಾಣಲಿದೆ. ತೆಲುಗಿನಲ್ಲಿ ನಿರ್ಮಾಣವಾಗಿರುವ ಈ ಸಿನಿಮಾ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. 'ಜೀಬ್ರಾ'ದ ಮೋಷನ್ ಪೋಸ್ಟರ್ ರಿಲೀಸ್ ಆಗಿದ್ದು, ಇದರಲ್ಲಿ ಸತ್ಯರಾಜ್, ಸತ್ಯ ಅಕ್ಕಲಾ, ಜೆನ್ನಿಫರ್ ಪಿಕ್ಕಿನಾಟೊ, ಸುನಿಲ್, ಪ್ರಿಯಾ ಭವಾನಿಶಂಕರ್, ಧನಂಜಯ ಮತ್ತು ಸತ್ಯದೇವ್ ಅವರ ಪಾತ್ರಗಳನ್ನು ಪರಿಚಯಿಸಲಾಗಿದೆ. ಜೀಬ್ರಾ ಸಿನಿಮಾವನ್ನು ಈಶ್ವರ್ ಕಾರ್ತಿಕ್ ನಿರ್ದೇಶನ ಮಾಡಿದ್ದು, ಕ್ರೈಂ ಮತ್ತು ಥ್ರಿಲ್ಲರ್ ಕಥಾಹಂದರ ಹೊಂದಿರುವ ಸಿನಿಮಾ ಇದಾಗಿದೆ. ಸತ್ಯದೇವ್ ಮತ್ತು ಡಾಲಿ ಇಬ್ಬರೂ ಚಿತ್ರದ ನಾಯಕರಾಗಿದ್ದು, ಇಬ್ಬರದ್ದೂ ಇದು 26ನೇ ಸಿನಿಮಾ ಎಂಬುದು ವಿಶೇಷ ಎಂದಿದೆ ಚಿತ್ರತಂಡ.

ಪದ್ಮಜಾ ಫಿಲಂಸ್ ಪ್ರೈವೇಟ್ ಲಿಮಿಟೆಡ್ ಮತ್ತು ಓಲ್ಡ್ ಟೌನ್ ಪಿಕ್ಚರ್ಸ್ ಬ್ಯಾನರ್‌ಗಳ ಅಡಿಯಲ್ಲಿ ಎಸ್‌ಎನ್ ರೆಡ್ಡಿ, ಎಸ್. ಪದ್ಮಜಾ, ಬಾಲ ಸುಂದರಂ ಮತ್ತು ದಿನೇಶ್ ಸುಂದರಂ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರವಿ ಬಸ್ರೂರ್ ಚಿತ್ರಕ್ಕೆ ಸಂಗೀತ ನೀಡಿದ್ದು, ಸತ್ಯ ಪೊನ್ಮಾರ್ ಅವರ ಛಾಯಾಚಿತ್ರಗ್ರಹಣವಿದೆ ❖.

ನಿಧಿ ಹೆಗಡೆ, ಅರುಣ್ ಸೂರ್ಯ

'ರಾವಣ ರಾಜ್ಯದಲ್ಲಿ..' ನಿಧಿ

'ಡಾಲಿ' ಧನಂಜಯ ನಟನೆಯ 'ಬಡವ ರಾಸ್ಕಲ್' ಸಿನಿಮಾ ನಿರ್ದೇಶಿಸಿದ್ದ ಶಂಕರ್ ಗುರು ಇದೀಗ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಅರುಣ್ ಸೂರ್ಯ ಹಾಗೂ ನಿಧಿ ಹೆಗಡೆ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ರಾವಣ ರಾಜ್ಯದಲ್ಲಿ ನವದಂಪತಿಗಳು' ಸಿನಿಮಾ ಮೂಲಕ ನಿರ್ಮಾಪಕರಾಗಿ ಶಂಕರ್ ಗುರು ಗುರುತಿಸಿಕೊಳ್ಳಲಿದ್ದಾರೆ.

ಯುವ ಪ್ರತಿಭೆಗಳ ಕನಸಿಗೆ ಶಂಕರ್ ಗುರು ಸಾಥ್ ನೀಡಿದ್ದು, ಧೀರಜ್ ಎಂ.ವಿ ಹಾಗೂ ವರುಣ್ ಗುರುರಾಜ್ ಇವರಿಗೆ ಕೈಜೋಡಿಸಿದ್ದಾರೆ. ಗ್ರೀನ್ ಚಿಲ್ಲೀಸ್ ಸ್ಟುಡಿಯೊಸ್ ಹಾಗೂ ಧೀರಜ್ ಎಂ.ವಿ ಫಿಲ್ಮಂಸ್‌ನಡಿ 'ರಾವಣ ರಾಜ್ಯದಲ್ಲಿ ನವದಂಪತಿಗಳು' ಚಿತ್ರ ನಿರ್ಮಾಣವಾಗಿದೆ.

ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇರುವ ರಂಗ ಈ ಚಿತ್ರದ ಮೂಲಕ ನಿರ್ದೇಶಕರಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಶೂಟಿಂಗ್ ಪೂರ್ಣಗೊಳಿಸಿ ಬಿಡುಗಡೆಗೆ ಸಜ್ಜಾಗುತ್ತಿರುವ ಈ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ಚಿತ್ರತಂಡ ಪ್ರಚಾರಕ್ಕೆ ಇಳಿದಿದೆ. 'ಡೊಳ್ಳು', 'ಶಾಖಾಹಾರಿ' ಸಿನಿಮಾದಲ್ಲಿ ನಟಿಸಿದ್ದ ನಿಧಿ ಹೆಗಡೆ ನಾಯಕಿಯಾಗಿದ್ದಾರೆ. ಅಭಿನಂದನ್ ಕಶ್ಯಪ್ ಸಂಗೀತ ನಿರ್ದೇಶನ, ವೀರೇಶ್ ಎನ್‌ಟಿಎ ಛಾಯಾಚಿತ್ರಗ್ರಹಣ, ವಸಂತ ಅವರ ಸಂಕಲನ ಚಿತ್ರಕ್ಕಿದೆ. ಡಾರ್ಕ್ ಸೋಷಿಯಲ್ ಡ್ರಾಮಾ ಕಥಾಹಂದರದ ಈ ಸಿನಿಮಾದಲ್ಲಿ, ನವದಂಪತಿಗಳು ಸಾಮಾಜಿಕ ಕಟ್ಟುಪಾಡುಗಳಿಗೆ ಸಿಲುಕುವ ಕಥೆಯಿದೆ ಎಂದಿದೆ ಚಿತ್ರತಂಡ. ❖

'ಮಾರ್ನಮಿ'ಗೆ ಜೊತೆಯಾದ ಚೈತ್ರಾ, ರಿತ್ವಿಕ್

ಚೈತ್ರಾ ಜೆ. ಆಚಾರ್, ರಿತ್ವಿಕ್

ತುಳುನಾಡಿನ ಪ್ರಮುಖ ಹಬ್ಬಗಳಲ್ಲೊಂದು 'ಮಾರ್ನಮಿ'. ದುಷ್ಟಶಕ್ತಿಯ ಸಂಹಾರದ ಪ್ರತೀಕವಾದ ಈ ಹಬ್ಬವನ್ನೇ ಶೀರ್ಷಿಕೆಯಾಗಿಸಿಕೊಂಡು ಚಿತ್ರವೊಂದು ಸೆಟ್ಟೇರುತ್ತಿದೆ. ಕಿರುತೆರೆ ನಟ ರಿತ್ವಿಕ್ ಹಾಗೂ ಚೈತ್ರಾ ಜೆ. ಆಚಾರ್ ಜೋಡಿಯಾಗಿ ನಟಿಸುತ್ತಿರುವ ಈ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಿಶಿತ್ ಶೆಟ್ಟಿ ಚೊಚ್ಚಲ ನಿರ್ದೇಶನದ ಚಿತ್ರವಿದು.

'ಒಂದಷ್ಟು ಸಿನಿಮಾಗಳಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವೆ. ಕರಾವಳಿ ಭಾಗದ ಹುಲಿವೇಷ, ಆಚರಣೆಗಳ ಜೊತೆಗೆ ಪ್ರೇಮಕಥೆಯನ್ನು ಹೊಂದಿರುವ ಚಿತ್ರವಿದು. ಟೈಟಲ್ ಟೀಸರ್ ಮಾಡಿದ್ದೇವೆ. ಅಕ್ಟೋಬರ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮಂಗಳೂರು ಸುತ್ತ ಚಿತ್ರೀಕರಣ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ' ಎಂದು ಮಾಹಿತಿ ನೀಡಿದರು ರಿಶಿತ್ ಶೆಟ್ಟಿ.

ಸಂಗೀತ ನಿರ್ದೇಶಕ ಚರಣ್ ರಾಜ್ ಮಾತನಾಡಿ, 'ಹೊಸ ತಂಡ, ಹೊಸ ನಿರ್ದೇಶಕರು. ಈ ತಂಡದಲ್ಲಿ ನನ್ನ ಅಚ್ಚುಮೆಚ್ಚಿನ ನಟರು ಇದ್ದಾರೆ. ತುಂಬಾ ಒಳ್ಳೆ ಕಥೆ. ನನಗೂ ಒಳ್ಳೆಯ ಅವಕಾಶ ಇದೆ ಎನಿಸಿತು. ಸಂಗೀತದ ಕೆಲಸ ಶುರು ಮಾಡಿದ್ದೇನೆ. ಐದು ಹಾಡುಗಳು ಇರಲಿವೆ' ಎಂದರು.

ನಿಶಾಂತ್ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಯಶ್ ಶೆಟ್ಟಿ, ಮೈಮ್ ರಾಮದಾಸ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಶಿವಸೇನ ಛಾಯಾಚಿತ್ರಗ್ರಹಣವಿದೆ. ❖

ಇಂದು ಐದು ಸಿನಿಮಾಗಳು ತೆರೆಗೆ

ಇಂದು (ಸೆ.20) ಐದು ಹೊಸ ಸಿನಿಮಾಗಳು ತೆರೆಕಾಣುತ್ತಿವೆ. ಉಪೇಂದ್ರ ನಟಿಸಿ, ನಿರ್ದೇಶಿಸಿದ 'ಉಪೇಂದ್ರ' ಸಿನಿಮಾ ಮತ್ತೆ ಬಿಡುಗಡೆ ಆಗುತ್ತಿದೆ.

ಹಗ್ಗ

ಅನು ಪ್ರಭಾಕರ್

ಅನು ಪ್ರಭಾಕರ್ ಮುಖ್ಯಭೂಮಿಕೆಯಲ್ಲಿರುವ ಹಾರರ್ ಸಿನಿಮಾ ಇದಾಗಿದೆ. ಚಿತ್ರಕ್ಕೆ ಅವಿನಾಶ್ ಆ್ಯಕ್ಷನ್ ಕಟ್ ಹೇಳಿದ್ದು, ಇದು ಅವರ ಚೊಚ್ಚಲು ಸಿನಿಮಾ. ಹರ್ಷಿಕಾ ಪೂಣಚ್ಚ, ತಬಲಾ ನಾಣಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರವನ್ನು ರಾಜ್ ಭಾರದ್ವಾಜ್ ನಿರ್ಮಾಣ ಮಾಡಿದ್ದಾರೆ. 'ಚಿತ್ರದಲ್ಲಿ ಹಗ್ಗವನ್ನು ಆಯುಧವನ್ನಾಗಿ ಬಳಸಿಕೊಳ್ಳಲಾಗಿದೆ. ಒಳ್ಳೆಯ ವಿಷಯಕ್ಕಾಗಿ ಹಗ್ಗ ಹೋರಾಟ ಮಾಡುತ್ತದೆ. ಇದೊಂದು ಹಾರರ್ ಫ್ಯಾಂಟಸಿ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ. ಚಿತ್ರದಲ್ಲಿ ಗ್ರಾಫಿಕ್ಸ್ ಹೆಚ್ಚು ಇದೆ' ಎಂದಿದ್ದಾರೆ ಅವಿನಾಶ್.

ಧ್ರುವತಾರೆ

ಜಿ.ಪಿ. ಫಿಲಂಸ್ ಸ್ಟುಡಿಯೊಸ್ ಬ್ಯಾನರ್‌ನಡಿ ಗಣೇಶ್ ಕುಮಾರ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಪ್ರತೀಕ್ ನಿರ್ದೇಶನದ ಜೊತೆಗೆ ನಾಯಕನಾಗಿ ಬಣ್ಣಹಚ್ಚಿದ್ದಾರೆ. ಇದೊಂದು ಫ್ಯಾಮಿಲಿ ಡ್ರಾಮಾದ ಕಥೆಯಾಗಿದೆ. ಚಿತ್ರದಲ್ಲಿ ಪ್ರತೀಕ್ ಅವರ ಪತ್ನಿ ಮೌಲ್ಯ ಅವರೇ ನಾಯಕಿಯಾಗಿ ನಟಿಸಿದ್ದಾರೆ. ರಮೇಶ್ ಭಟ್, ಸುಮನ್ ನಗರ್ಕರ್, ಅಶ್ವಿನ್ ರಾವ್ ಪಲ್ಲಕ್ಕಿ, ಪಿ.ಡಿ ಸತೀಶ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ಕಾರ್ತಿಕ್ ಮಹೇಶ್ ಚಿತ್ರದಲ್ಲಿ ಖಳನಟನಾಗಿ ಕಾಣಿಸಿಕೊಂಡಿದ್ದಾರೆ. ಬಾಡಿ ಶೇಮಿಂಗ್ ಎನ್ನುವುದು ಎಷ್ಟು ಪರಿಣಾಮ ಬೀರುತ್ತದೆ ಎನ್ನುವ ಕಥೆಯನ್ನು ಈ ಸಿನಿಮಾ ಹೊತ್ತಿದೆ ಎಂದಿದೆ ಚಿತ್ರತಂಡ.



ಪ್ರತೀಕ್

ಲಂಗೋಟಿ ಮ್ಯಾನ್

ಆಕಾಶ್ ರಾಂಬೋ

ತನು ಟಾಕೀಸ್ ಲಾಂಛನದಲ್ಲಿ ನಿರ್ಮಾಣವಾಗಿರುವ, ಸಂಜೋತ ಭಂಡಾರಿ ನಿರ್ದೇಶನದ ಈ ಸಿನಿಮಾದಲ್ಲಿ ಆಕಾಶ್ ರಾಂಬೋ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. 'ಇದು ತಾತ ಮೊಮ್ಮಗನ ಸುತ್ತ ನಡೆಯುವ ಕಥೆ. ತಾತನಿಗೆ ಮೊಮ್ಮಗ ಲಂಗೋಟಿ ಹಾಕಿಕೊಳ್ಳಬೇಕು ಎಂಬ ಬಯಕೆ. ಮೊಮ್ಮಗನಿಗೆ ಅಂಡರ್‌ವೇರ್ ಹಾಕಿಕೊಳ್ಳುವ ಆಸೆ. ಈ ವಿಷಯವನ್ನು ಹಾಸ್ಯ ರೂಪದಲ್ಲಿ ಚಿತ್ರದಲ್ಲಿ ಹೇಳಲಾಗಿದೆ' ಎಂದಿದೆ ಚಿತ್ರತಂಡ. ಸ್ನೇಹ ಖುಷಿ, ಸಂಹಿತ ವಿನ್ಯಾ, ಹುಲಿ ಕಾರ್ತಿಕ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಕರ್ಕಿ

'ಸೂರ್ಯನ್', 'ಐ ಲವ್ ಇಂಡಿಯಾ', 'ಇಂದು', 'ಕಲ್ಲೂರಿ ವಾಸಲ್' ಮುಂತಾದ ತಮಿಳು ಚಿತ್ರಗಳನ್ನು ನಿರ್ದೇಶಿಸಿದ್ದ ಪವಿತ್ರನ್ ಕನ್ನಡದಲ್ಲಿ ನಿರ್ದೇಶಿಸಿರುವ ಮೊದಲ ಸಿನಿಮಾ ಇದು. ಮರಿಸೆಲ್ವರಾಜ್ ನಿರ್ದೇಶನದ 'ಪರಿಯೆರುಂ ಪೆರುಮಾಳ್' ಚಿತ್ರದ ರಿಮೇಕ್ ಇದಾಗಿದೆ. ಪ್ರಕಾಶ್ ಪಳನಿ 'ಕರ್ಕಿ' ಚಿತ್ರವನ್ನು ನಿರ್ಮಿಸಿದ್ದಾರೆ. ಜಯಪ್ರಕಾಶ್ (ಜೆ.ಪಿ) ರೆಡ್ಡಿ ಈ ಚಿತ್ರದ ನಾಯಕ. ಅವರಿಗೆ ಮೀನಾಕ್ಷಿ ಜೋಡಿಯಾಗಿದ್ದಾರೆ. ಸಾಧು ಕೋಕಿಲ, ಬಲ ರಾಜವಾಡಿ, ಯತಿರಾಜ್, ಮಿಮಿಕ್ರಿ ಗೋಪಿ ಮೊದಲಾದವರು ಚಿತ್ರದಲ್ಲಿದ್ದಾರೆ.

ಮೀನಾಕ್ಷಿ

ರಮ್ಮಿ ಆಟ

ಆನ್‌ಲೈನ್ ಜೂಜಾಟದ ವಿರುದ್ಧ ಧ್ವನಿಯೆತ್ತುವ ಸಿನಿಮಾ ಇದಾಗಿದೆ. ಉಮರ್ ಷರೀಫ್ ಚಿತ್ರದ ನಿರ್ದೇಶಕರು. ರಮೇಶ್ ಯಾದವ್ ಹಾಗೂ ಹನುಮೇಶ್ ಪಾಟೀಲ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಇವತ್ತು ಆನ್‌ಲೈನ್ ಜೂಜು ಸಾಕಷ್ಟು ಕುಟುಂಬಗಳನ್ನು ಬೀದಿಗೆ ತಂದು ನಿಲ್ಲಿಸುತ್ತಿವೆ. ಇಂತಹ ಆಟದ ಅಡ್ಡಪರಿಣಾಮಗಳನ್ನು ಹಾಸ್ಯದ ಮೂಲಕ ಹೇಳಲಾಗಿದೆ' ಎಂದಿದೆ ಚಿತ್ರತಂಡ. ಚಿತ್ರಕ್ಕೆ ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ, ಪ್ರಭು ಎಸ್. ಆರ್. ಸಂಗೀತವಿದೆ. ರಾಘವ ಸೂರ್ಯ ಹಾಗೂ ಸಯ್ಯದ್ ಇರ್ಫಾನ್ ಚಿತ್ರದ ನಾಯಕರು. ವಿನ್ಯಾ ಶೆಟ್ಟಿ, ಸ್ನೇಹರಾವ್, ಅಭಿಗೌಡ, ಶ್ರೀಕರ್, ರೋಷನ್ ಶ್ರೀನಿವಾಸ್ ಮುಂತಾದವರು ಉಳಿದ ತಾರಾಗಣದಲ್ಲಿದ್ದಾರೆ.

ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?

ಪ್ರಜಾವಾಣಿ ಸ್ಪರ್ಧಾವಾಣಿ MASTERMIND

ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.

ಕೇವಲ ₹220 ರಿಂದ ಪ್ರಾರಂಭ

* ಷರತ್ತುಗಳು ಅನ್ವಯ

ವರುಣದಲ್ಲಿ ಮುಡಾ ಹಣ ಬಳಕೆ, ಅಧಿಕಾರ ದುರುಪಯೋಗ ಆರೋಪ

ಕಾಮಗಾರಿ: ವಿವರಣೆ ಕೇಳಿದ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳಲ್ಲಿ ಮುಡಾದಿಂದ ಕೈಗೆತ್ತಿಕೊಳ್ಳಲಾದ ₹387 ಕೋಟಿ ವೆಚ್ಚದ ಕಾಮಗಾರಿಗಳ ವಿವರ ನೀಡುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದ್ದಾರೆ.

'ಮುಡಾ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಮುಖ್ಯಮಂತ್ರಿಯ ಮೌಖಿಕ ಸೂಚನೆ ಮೇರೆಗೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮುಡಾ ಆರ್ಥಿಕ ಸಂಕಷ್ಟದಲ್ಲಿ ಇದ್ದರೂ ಭಾರಿ ಮೊತ್ತದ ಕಾಮಗಾರಿ ಕೈಗೊಂಡು ಅಧಿಕಾರ ದುರುಪಯೋಗಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು' ಎಂದು ಕೋರಿ ಮುಡಾದ ನಿವೃತ್ತ ಅಧಿಕಾರಿ ಪಿ.ಎಸ್. ನಟರಾಜು, ರಾಜ್ಯಪಾಲರಿಗೆ ಆ.27ರಂದು ದೂರು ನೀಡಿದ್ದರು.

'ಈ ದೂರು ಗಂಭೀರ ಸ್ವರೂಪದ್ದಾಗಿದ್ದು, ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಬೇಕು. ಈ ಸಂಬಂಧ ಅಗತ್ಯ ದಾಖಲೆಗಳೊಂದಿಗೆ ಆದಷ್ಟು ಶೀಘ್ರದಲ್ಲಿ ವಿಸ್ತೃತ ವರದಿಯನ್ನು ಸಲ್ಲಿಸಬೇಕು' ಎಂದು ರಾಜ್ಯಪಾಲರು ಸೆ.5ರಂದು ಮುಖ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ನಿರ್ದೇಶನ ನೀಡಿದ್ದಾರೆ.

ಏನಿದೆ ದೂರಿನಲ್ಲಿ?

'ಮುಖ್ಯಮಂತ್ರಿ ಮೌಖಿಕ ಸೂಚನೆ ಮೇರೆಗೆ ವರುಣ ಕ್ಷೇತ್ರದ 24 ಗ್ರಾಮಗಳಲ್ಲಿ ಹಾಗೂ ಶ್ರೀರಂಗಪಟ್ಟಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ₹377 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ಅಲ್ಲದೆ, ವರುಣ ಕ್ಷೇತ್ರಕ್ಕೆ ₹40 ಕೋಟಿ ಹಾಗೂ ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ₹15 ಕೋಟಿ ಬಳಕೆ ಸಂಬಂಧ 2023ರ ಸೆ.6ರಂದು ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸಲಾಗಿತ್ತು. ಈ ಸಂಬಂಧ ಸರ್ಕಾರದ ಮಾರ್ಗದರ್ಶನ ಕೋರಿ ಮುಡಾದಿಂದ ಪ್ರಸ್ತಾವ ಸಲ್ಲಿಸಲಾಗಿತ್ತು. ಈ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರವು ಎರಡೇ ತಿಂಗಳಲ್ಲಿ ಅನುಮೋದನೆ ನೀಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ' ಎಂದು ನಟರಾಜು ದೂರಿನಲ್ಲಿ ವಿವರಿಸಿದ್ದಾರೆ.

'ಮುಡಾ ವ್ಯಾಪ್ತಿಯಲ್ಲಿ ಬರದ ಪ್ರದೇಶಗಳ ಕಾಮಗಾರಿಗೆ ಅನುದಾನ ವಿನಿಯೋಗಿಸುವುದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪರಿಚ್ಛೇದ 15 ಮತ್ತು 25ಕ್ಕೆ ವಿರುದ್ಧವಾಗಿದೆ. ಈ ಕಾಮಗಾರಿಗಳಿಗೆ ಒಪ್ಪಿಗೆ ನೀಡುವಾಗ ಅಧಿಕಾರಿಗಳು, 'ಮುಖ್ಯಮಂತ್ರಿಯವರ ಮೌಖಿಕ ಸೂಚನೆ ಮೇರೆಗೆ' ಎಂದು ಉಲ್ಲೇಖಿಸಿದ್ದಾರೆ. ಇದು ಕಾನೂನುಬಾಹಿರವಾಗಿದ್ದು, ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಅವರು ಕೋರಿದ್ದಾರೆ.

ಸಿದ್ದರಾಮಯ್ಯ



ಗೆಹಲೋತ್

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ನಟರಾಜು, 'ಮುಖ್ಯಮಂತ್ರಿ ಸೂಚನೆ ಮೇರೆಗೆ ಎಂದು ಅಧಿಕಾರಿಗಳು ಉಲ್ಲೇಖಿಸಿದ್ದಾರೆ. ಈ ಕುರಿತು ಸಿದ್ದರಾಮಯ್ಯ ಸ್ಪಷ್ಟನೆ ನೀಡಬೇಕು. ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಕಾವೇರಿ ಆರತಿ: ಗಂಗಾ ಆರತಿ ವೀಕ್ಷಣೆಗೆ ರಾಜ್ಯದ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಾ ನದಿಗೆ ಮಾಡಲಾಗುವ ಗಂಗಾ ಆರತಿ ಮಾದರಿ ಕಾವೇರಿ ನದಿಗೆ 'ಕಾವೇರಿ ಆರತಿ' ಮಾಡುವ ಕಾರ್ಯಕ್ರಮದ ರೂಪುರೇಷೆಗಳ ಕುರಿತು ಅವಲೋಕಿಸಿ ಅಧ್ಯಯನ ನಡೆಸಲು ಸಚಿವರು, ಶಾಸಕರು ಮತ್ತು ಅಧಿಕಾರಿಗಳನ್ನೊಳಗೊಂಡ ನಿಯೋಗ ವಾರಾಣಸಿ ಮತ್ತು ಹರಿದ್ವಾರಕ್ಕೆ ಶುಕ್ರವಾರ ಮತ್ತು ಶನಿವಾರ ಭೇಟಿ ನೀಡಲಿದೆ.

ಕಾವೇರಿ ಆರತಿ ಕಾರ್ಯಕ್ರಮದ ಅಧ್ಯಕ್ಷ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಲ ಸಂಪನ್ಮೂಲ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ನಿಯೋಗ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ.

ನಿಯೋಗವು ಸೆ.20ರ ರಾತ್ರಿ ಹರಿದ್ವಾರದಲ್ಲಿ ಗಂಗಾ ನದಿಗೆ ಆರತಿ ಮಾಡುವುದನ್ನು ವೀಕ್ಷಣೆ ಮಾಡಲಿದೆ. ಸೆ.21ರಂದು ವಾರಾಣಸಿಗೆ ತೆರಳಿ ದಶಾಶ್ವಮೇಧ ಘಾಟ್‌ನಲ್ಲಿ ಗಂಗಾ ಆರತಿ ವೀಕ್ಷಣೆ ಮಾಡಲಿದೆ. ಸೆ.22ರಂದು ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡುವುದರ ಜೊತೆಗೆ ಘಾಟ್‌ನಲ್ಲಿ ಸಂಚರಿಸಿ, ಅಲ್ಲಿನ ಅಧಿಕಾರಿಗಳೊಂದಿಗೆ ಸಭೆ ನಡೆಸಿ ರಾಜ್ಯಕ್ಕೆ ವಾಪಸ್ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ಎಚ್. ಸಿ. ಬಾಲಕೃಷ್ಣ, ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಎಂ.ಶಿವಲಿಂಗೇಗೌಡ, ಕೃಷ್ಣಮೂರ್ತಿ, ವಿಧಾನ ಪರಿಷತ್ ಮಾಜಿ ಸದಸ್ಯ ಅಪ್ಪಾಜಿಗೌಡ, ಮಂಡ್ಯ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಮಾಜಿ ಶಾಸಕ ರಾಜು, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಜಲ ಸಂಪನ್ಮೂಲ ಸಚಿವರ ಸಲಹೆಗಾರ ಜಯಪ್ರಕಾಶ್ ಸೇರಿದಂತೆ ಹಲವರು ನಿಯೋಗದಲ್ಲಿ ಇರಲಿದ್ದಾರೆ.

ಪ್ರಶಸ್ತಿ ಪ್ರದಾನ ಕರ್ನಾಟಕ ನಾಟಕ ಅಕಾಡೆಮಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2022–23ನೇ ಸಾಲಿನ, 2023–24ನೇ ಸಾಲಿನ ಹಾಗೂ 2024–25ನೇ ಸಾಲಿನ ಪ್ರಶಸ್ತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. (ಎಡದಿಂದ) ಅಕಾಡೆಮಿ ರಿಜಿಸ್ಟ್ರಾರ್ ನಿರ್ಮಲಾ ಮಠಪತಿ, ಮುಂಬೈ ರಂಗಭೂಮಿ ಕಲಾವಿದ ಗಣೇಶ್ ಯಾದವ್, ಕೇರಳದ ರಂಗಭೂಮಿ ಕಲಾವಿದ ಚಂದ್ರದಾಸನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ. ಧರಣೀದೇವಿ ಮಾಲಗತ್ತಿ, ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸಚಿವ ಶಿವರಾಜ ತಂಗಡಗಿ, ನಟಿ ಉಮಾಶ್ರೀ, ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಪರಿಸರ ಸೂಕ್ಷ್ಮ ಪ್ರದೇಶ 16,114 ಚ.ಕಿ.ಮೀ.'

ಕಸ್ತೂರಿ ರಂಗನ್ ವರದಿಗೆ ಜನಪ್ರತಿನಿಧಿಗಳ ಸಭೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಅರಣ್ಯ ಮತ್ತು ವನ್ಯಜೀವಿ ತಾಣಗಳ ಸುತ್ತ 16,114 ಚದರ ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶವನ್ನು ಈಗಾಗಲೇ ಸಂರಕ್ಷಿಸಲಾಗಿದ್ದು, ಈ ಮಿತಿಗೆ ಒಳಪಟ್ಟು ಕಸ್ತೂರಿ ರಂಗನ್ ವರದಿಗೆ ಒಪ್ಪಿಗೆ ಸೂಚಿಸಬಹುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಶ್ಚಿಮಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕುರಿತಂತೆ ಕೇಂದ್ರ ಸರ್ಕಾರ ಆ.2 ರಂದು 6ನೇ ಅಧಿಸೂಚನೆ ಹೊರಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನಿಲುವು ಸಲ್ಲಿಸಬೇಕಿದೆ. ಈ ಹಿನ್ನೆಲೆಯಲ್ಲಿ ಗುರುವಾರ ನಡೆದ 11 ಜಿಲ್ಲೆಗಳ ಜನಪ್ರತಿನಿಧಿಗಳ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಪಶ್ಚಿಮಘಟ್ಟ ವ್ಯಾಪ್ತಿಯ ಜಿಲ್ಲೆಗಳ ಸಚಿವರು, ಶಾಸಕರು ಮತ್ತು ಸಂಸತ್ ಸದಸ್ಯರ ಅಭಿಪ್ರಾಯ ಪಡೆಯಲಾಗಿದೆ. ಆ ಎಲ್ಲ ಅಭಿಪ್ರಾಯವನ್ನು ಶುಕ್ರವಾರ ನಡೆಯಲಿರುವ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗುವುದು. ಬಳಿಕ, ಮುಖ್ಯಮಂತ್ರಿಯವರೊಂದಿಗೆ ಸಮಾಲೋಚಿಸಿ, ಸಂಪುಟದ ಅನುಮೋದನೆ ಪಡೆದು ಕೇಂದ್ರಕ್ಕೆ ಸಲ್ಲಿಸಲಾಗುವುದು' ಎಂದರು.

> **ವರದಿ ಜಾರಿಗೆ ಮುನ್ನ ಮತ್ತೊಮ್ಮೆ ಸರ್ವೆಯಾಗಬೇಕು. ವರದಿ ಜಾರಿಯಾದರೆ ಪಟ್ಟಾ ಭೂಮಿಯಲ್ಲಿ ಕೃಷಿ ಚಟುವಟಿಕೆ ಸಾಧ್ಯವಿಲ್ಲ. ಈಗಿನ ಸ್ವರೂಪದಲ್ಲಿ ಒಪ್ಪಬಾರದು**
> **ವಿ.ಸುನಿಲ್‌ಕುಮಾರ್,** ಶಾಸಕ, ಬಿಜೆಪಿ

'ರಾಜ್ಯದಲ್ಲಿ 16,114 ಚ.ಕಿ.ಮೀ ಸೂಕ್ಷ್ಮ ಪ್ರದೇಶ ಇದ್ದು, ಇನ್ನು ಹೆಚ್ಚಳ ಮಾಡಿದರೆ ಅರಣ್ಯದಂಚಿನ ಜನರ ಬದುಕೇ ದುಸ್ತರವಾಗುತ್ತದೆ. ಹೀಗಾಗಿ, ಬಫರ್ ವಲಯವನ್ನು ಶೂನ್ಯಕ್ಕೆ ತರಬೇಕು ಎಂದು ಸಲಹೆ ನೀಡಿದ್ದಾರೆ' ಎಂದರು.

'ಈಗಾಗಲೇ ಇರುವ 16,114 ಚ.ಕಿ.ಮೀ ಪ್ರದೇಶಕ್ಕೆ ಅಂಗೀಕಾರ ನೀಡಿದರೂ ಈ ಪ್ರದೇಶದಲ್ಲಿರುವ 1,576 ಗ್ರಾಮಗಳ ಜನರ ಜೀವನೋಪಾಯಕ್ಕೆ ತೊಂದರೆ ಆಗಲಿದೆ. ಈ ದಿಸೆಯಲ್ಲಿ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಕೇಂದ್ರವನ್ನು ಒತ್ತಾಯಿಸಬಹುದು' ಎಂದರು.

ಸಚಿವರಾದ ಕೆ.ಜೆ.ಜಾರ್ಜ್, ಡಾ.ಎಚ್.ಸಿ.ಮಹದೇವಪ್ಪ, ಸತೀಶ ಜಾರಕಿಹೊಳಿ, ಮಧು ಬಂಗಾರಪ್ಪ, ಮಂಕಾಳ ವೈದ್ಯ, ವಿಧಾನಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಶಾಸಕರಾದ ಆರ್. ವಿ.ದೇಶಪಾಂಡೆ, ಆರಗ ಜ್ಞಾನೇಂದ್ರ, ವಿ.ಸುನಿಲ್ ಕುಮಾರ್, ನಯನಾ ಮೋಟಮ್ಮ, ಟಿ.ಡಿ. ರಾಜೇಗೌಡ, ಹರೀಶ್ ಪೂಂಜಾ, ಸಂಸದ ಶ್ರೇಯಸ್ ಪಟೇಲ್ ಇದ್ದರು.

ಸುತ್ತೋಲೆಯಲ್ಲಿ ಹಿಂದಿ ಬಳಕೆ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಪೋಷಣ ಮಾಸಾಚರಣೆಗೆ ಸಂಬಂಧಿಸಿದಂತೆ ಪಿಎಂ ಪೋಷಣ್ ಯೋಜನೆಯ ಇಲ್ಲಿನ ನಿರ್ದೇಶಕರು ಹೊರಡಿಸಿರುವ ಸುತ್ತೋಲೆಯಲ್ಲಿ ಹಿಂದಿ ಪದಗಳನ್ನು ಬಳಸಿ, ಕನ್ನಡ ವಿರೋಧಿ ಧೋರಣೆ ಅನುಸರಿಸಿರುವುದು ಖಂಡನೀಯ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. 'ಕೇಂದ್ರ ಸರ್ಕಾರದ ಸಹಯೋಗದಲ್ಲಿ ರಾಜ್ಯ ಸರ್ಕಾರವು 'ಪಿಎಂ ಪೋಷಣ್ ಯೋಜನೆ' ಅನುಷ್ಠಾನಗೊಳಿಸುತ್ತಿದೆ. ಇದಕ್ಕೆ ಸಂಬಂಧಿಸಿದ ಸುತ್ತೋಲೆಯಲ್ಲಿ ಅನೇಕ ವ್ಯಾಕರಣ ದೋಷಗಳಿದ್ದು, ಇದು ಸುತ್ತೋಲೆಯ ಗಾಂಭೀರ್ಯಕ್ಕೆ ಚ್ಯುತಿ ತಂದಿದೆ. 'ಪೋಷಣ್ ಭಿ', 'ಪಢಾಯಿ ಭಿ', 'ಷೋಷಣ್ ಮಾಹ್', 'ರಾಷ್ಟ್ರೀಯ ಪೋಷಣ್' ಸೇರಿ ಹಲವಾರು ಹಿಂದಿ ಪದಗಳನ್ನು ಕನ್ನಡಕ್ಕೆ ಅನುವಾದಿಸದೆ ಹಾಗೆಯೇ ಬಳಸಲಾಗಿದೆ. ಇಲಾಖೆಯ ಕನ್ನಡ ವಿರೋಧಿ ಧೋರಣೆ ಖಂಡನೀಯ. ರಾಷ್ಟ್ರೀಯ ಪೋಷಣ ಮಾಸಾಚರಣೆಯಲ್ಲಿ ಶಿಕ್ಷಣ ಇಲಾಖೆಯ ಹಿಂದಿ ಹೇರಿಕೆ ಕುರಿತಂತೆ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆ ನೀಡಿ' ಎಂದು ತಿಳಿಸಿದ್ದಾರೆ.



ಪುರುಷೋತ್ತಮ ಬಿಳಿಮಲೆ

'ಕೇಂದ್ರ ಸರ್ಕಾರದ ಧನ ಸಹಾಯದ ನೆಪದಲ್ಲಿ ಈ ರೀತಿಯ ಹಿಂದಿ ಹೇರಿಕೆ ಅಪೇಕ್ಷಣೀಯವಲ್ಲ. ಇದು ಇಡೀ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ಕ್ರಮ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯ ಸರ್ಕಾರದ ಇಲಾಖೆಗಳ ಆಡಳಿತದಲ್ಲಿ, ವಿಶೇಷವಾಗಿ ಶಿಕ್ಷಣ ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಇಂತಹ ಅಪಸವ್ಯಗಳಿಗೆ ಅವಕಾಶ ಇರಬಾರದು. ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳೇ ಕನ್ನಡ ವಿರೋಧಿಗಳಾದರೆ, ಕನ್ನಡವು ಕರ್ನಾಟಕದಲ್ಲಿ ಉಳಿಯುವ ಪ್ರಾಥಮಿಕ ಅವಕಾಶಗಳನ್ನೇ ಕಳೆದುಕೊಳ್ಳುತ್ತದೆ' ಎಂದು ಹೇಳಿದ್ದಾರೆ.

ನ.1ಕ್ಕೆ ಭುವನೇಶ್ವರಿ ಪ್ರತಿಮೆ ಅನಾವರಣ

ಕರ್ನಾಟಕ ಸುವರ್ಣ ಸಂಭ್ರಮ–50ರ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸುವರ್ಣ ಸಂಭ್ರಮ–50ರ ಸಮಾರೋಪ ಸಮಾರಂಭದ ಪ್ರಯುಕ್ತ 50 ಸಾಧಕಿಯರ ಕುರಿತು ತಲಾ 100 ಪುಟಗಳ 50 ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮೂಲಕ ಪ್ರಕಟಿಸಲು ಸರ್ಕಾರ ತೀರ್ಮಾನಿಸಿದೆ.

ರಾಜ್ಯೋತ್ಸವ ಮತ್ತು ಸುವರ್ಣ ಸಂಭ್ರಮ ಸಮಾರೋಪ ಸಮಾರಂಭದ ಪೂರ್ವಭಾವಿ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆಯಿತು. ಈ ಸಭೆಯಲ್ಲಿ ಹಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

ಕೊರಗ ಭಾಷೆಯಂತಹ ಸಣ್ಣ ಭಾಷೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ತಜ್ಞರ ಸಮಿತಿ ರಚಿಸುವಂತೆ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮನವಿ ಮಾಡಿದರು.

ವಿಧಾನಸೌಧದ ಆವರಣದಲ್ಲಿ 25 ಅಡಿ ಎತ್ತರದ ಭುವನೇಶ್ವರಿದೇವಿ ಕಂಚಿನ ಪ್ರತಿಮೆ ಕಾಮಗಾರಿ ಪ್ರಗತಿಯಲ್ಲಿದ್ದು, ನವೆಂಬರ್ 1 ರಂದು ಪ್ರತಿಮೆ ಅನಾವರಣ ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು. ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮತ್ತು ಸುವರ್ಣ ಸಂಭ್ರಮ ವಿಧಾನಸೌಧದ ಮುಂಭಾಗದಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಅಧಿಕಾರಿಗಳು ಇದ್ದರು.

ನಾಲ್ಕು ವಲಯಗಳಲ್ಲಿ ವಿಶೇಷ ಕಾರ್ಯಕ್ರಮ

ರಾಜ್ಯದ ನಾಲ್ಕು ಕಂದಾಯ ವಲಯಗಳಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲು ಸಭೆ ನಿರ್ಧರಿಸಿದೆ.

ಇದರ ಜತೆಗೆ, ಮೈಸೂರಿನಲ್ಲಿ ಚಿಂತನಾ ಸಮಾವೇಶ, ರಾಯಚೂರಿನಲ್ಲಿ ಗೋಕಾಕ್ ಚಳವಳಿ ಸಂಸ್ಮರಣೆ, ಮಹಾರಾಷ್ಟ್ರದ ಜತ್ ತಾಲ್ಲೂಕಿನಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ ಮತ್ತು ಮಂಗಳೂರಿನಲ್ಲಿ ವಿವಿಧ ಅಕಾಡೆಮಿ ಸಹಯೋಗದಲ್ಲಿ ಬಹು ಸಂಸ್ಕೃತಿ ಉತ್ಸವ ಆಯೋಜನೆ ನಡೆಸಲು ಸಭೆ ತೀರ್ಮಾನಿಸಿದೆ. ನಾಡಿನ ಕಲೆ, ಸಾಹಿತ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ ಕುರಿತಾದ 5 ಸಂಪುಟಗಳನ್ನು ಸಿದ್ಧಪಡಿಸಲಾಗುತ್ತಿದೆ. ಸ್ಮರಣ ಸಂಭ್ರಮ ಸಂಪುಟ ಹೊರ ತರಲಾಗುತ್ತದೆ.

ಸಭೆಯ ತೀರ್ಮಾನಗಳು

- ಮನೆ– ಮನೆಯಲ್ಲಿ ಕನ್ನಡ ಬಾವುಟ ಹಾರಿಸಲು ಮನವಿ ಮಾಡುವುದು.
- ಕರ್ನಾಟಕದ ಬಹು ಸಂಸ್ಕೃತಿ, ಸೌಹಾರ್ದ ಸಂಸ್ಕೃತಿ, ಬಹುತ್ವದ ಕುರಿತು 100 ಪುಸ್ತಕಗಳನ್ನು ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡುವುದು.
- ಕನ್ನಡದ ಸಾಹಿತಿಗಳ ನುಡಿಮುತ್ತುಗಳನ್ನು ಎಲ್ಲ ಜಿಲ್ಲೆಗಳ ಪ್ರಮುಖ ಸ್ಥಳಗಳಲ್ಲಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಚುರಪಡಿಸುವುದು.
- ಮೈಸೂರು ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಪ್ರತಿಮೆ ಸ್ಥಾಪನೆ ಕಾಮಗಾರಿ ಪ್ರಗತಿಯಲ್ಲಿದೆ. ಬಳ್ಳಾರಿಯಲ್ಲಿ ರಂಜಾನ್ ಸಾಬ್ ಸ್ಮಾರಕ ನಿರ್ಮಾಣ ಕಾರ್ಯ ನಡೆಯುತ್ತಿದೆ. ಧಾರವಾಡದಲ್ಲಿ ಅದರಗುಂಚಿ ಶಂಕರಗೌಡ ಸ್ಮಾರಕ ನಿರ್ಮಿಸಲು ಅಂದಾಜು ವೆಚ್ಚ ಸಲ್ಲಿಸಲಾಗಿದೆ. ಗದಗದಲ್ಲಿ ಅಂದಾನಪ್ಪ ದೊಡ್ಡಮೇಟಿ ಸ್ಮಾರಕ ನಿರ್ಮಿಸಲಾಗುವುದು.

'ಗೈಡಿಂಗ್ ಪೋರ್ಸ್' ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ

'ಸಾಧನೆಗೆ ಆತ್ಮವಿಶ್ವಾಸ ಅಗತ್ಯ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ನಂಬಿಕೆ ಇಲ್ಲದಿದ್ದರೆ ಯಾವ ಸಾಧನೆಯನ್ನೂ ಮಾಡಲು ಸಾಧ್ಯವಿಲ್ಲ. ಯಶಸ್ಸು ಗಳಿಸಬೇಕೆಂದರೆ ಅಚಲ ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮ ಎರಡೂ ಅಗತ್ಯ. ಜೀವನದಲ್ಲಿ ಉನ್ನತ ಗುರಿ ಮತ್ತು ಸ್ಪಷ್ಟವಾದ ದಾರಿ ಎರಡೂ ಮುಖ್ಯ' ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು.

'ಪ್ರಜಾವಾಣಿ'–'ಡೆಕ್ಕನ್ ಹೆರಾಲ್ಡ್' ಮತ್ತು 'ಇನ್‌ಸೈಟ್ಸ್ ಐಎಎಸ್' ಸಹಭಾಗಿತ್ವದಲ್ಲಿ ನಗರದ ಅಂಬೇಡ್ಕರ್ ಭವನದಲ್ಲಿ ಗುರುವಾರ ಏರ್ಪಡಿಸಿದ್ದ 'ಗೈಡಿಂಗ್ ಪೋರ್ಸ್' ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ಅಗತ್ಯವಾದ ಮಾರ್ಗದರ್ಶನ ನೀಡುವ ಉದ್ದೇಶದಿಂದ 'ಗೈಡಿಂಗ್ ಪೋರ್ಸ್' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. 'ಪ್ರಜಾವಾಣಿ' ಪತ್ರಿಕೆ ಸಾಮಾಜಿಕ ಕಾಳಜಿಯಿಂದ ಇಂಥ ಅಪರೂಪದ ಕಾರ್ಯಾಗಾರವನ್ನು ಮಂಡ್ಯದಲ್ಲಿ ಆಯೋಜಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ' ಎಂದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಮತ್ತು ನಿರ್ದೇಶಕ ವಿನಯ್‌ಕುಮಾರ್ ಜಿ.ಬಿ. ಮಾತನಾಡಿ, 'ಪತ್ರಿಕೆಗಳನ್ನು ಓದದೇ ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡಿ ಐಎಎಸ್ ಅಧಿಕಾರಿ ಆಗುತ್ತೇನೆ ಎನ್ನುವುದು ತಿರುಕನ ಕನಸಾಗುತ್ತದೆ. ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳ ಕಣಜವಾಗಿರುವ ದಿನಪತ್ರಿಕೆಗಳನ್ನು ಓದುವ ಮೂಲಕ ಯಶಸ್ಸಿನ ಗುರಿ ಮುಟ್ಟಬಹುದು' ಎಂದು ಸಲಹೆ ನೀಡಿದರು.

'ಪ್ರಜಾವಾಣಿ'– 'ಡೆಕ್ಕನ್ ಹೆರಾಲ್ಡ್' ಮತ್ತು ಇನ್‌ಸೈಟ್ಸ್ ಐಎಎಸ್ ಸಹಭಾಗಿತ್ವದಲ್ಲಿ ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಗುರುವಾರ ಏರ್ಪಡಿಸಿದ್ದ 'ಗೈಡಿಂಗ್ ಪೋರ್ಸ್' ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಕುಮಾರ ಅವರು ವಿದ್ಯಾರ್ಥಿಗಳೊಂದಿಗೆ ಉದ್ಘಾಟಿಸಿದರು. 'ಇನ್‌ಸೈಟ್ಸ್' ಸಂಸ್ಥೆಯ ಪ್ರದೀಪ್ ಕೃಷ್ಣ, ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ವಿನಯ್‌ಕುಮಾರ್ ಜಿ.ಬಿ., ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್.ನಾಗರಾಜು ಪಾಲ್ಗೊಂಡಿದ್ದರು–ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳೊಂದಿಗೆ ಸಂವಾದ: ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಚ್. ಎಲ್. ನಾಗರಾಜು ಅವರು ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ಪರೀಕ್ಷೆಗಳನ್ನು ಎದುರಿಸುವ ಬಗ್ಗೆ ಮತ್ತು ತಮ್ಮ ಜೀವನದ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. 1,300 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭವನ ಕಿಕ್ಕಿರಿದು ತುಂಬಿತ್ತು.

ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಇನ್‌ಸೈಟ್ಸ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಉತ್ತರ ನೀಡಿ ಗೊಂದಲ ಪರಿಹರಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಅಗತ್ಯ ಸಿದ್ಧತೆ, ಅಧ್ಯಯನ ಸಾಮಗ್ರಿ, ಓದುವ ಬಗೆಯನ್ನು ತಿಳಿಸಿಕೊಟ್ಟ 'ಪ್ರಜಾವಾಣಿ'ಗೆ ಧನ್ಯವಾದಗಳನ್ನು ತಿಳಿಸಿದರು.

ಪಾಟೀಲ–ಗೋಯಲ್ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, ಬೆಂಗಳೂರು ಕುರಿತು ಸರ್ಕಾರ ತೋರುತ್ತಿರುವ ಅನಾದರದಿಂದ ಅನೇಕ ಹೂಡಿಕೆದಾರರು ರಾಜ್ಯದಿಂದ ದೂರ ಸರಿಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕರ್ನಾಟಕದ ಕೈಗಾರಿಕಾ ಹಾಗೂ ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿದ ಅವರು, 'ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್ ಅಡಿಯಲ್ಲಿ ತುಮಕೂರಿನಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಿಸಲು ಕೇಂದ್ರ ಸರ್ಕಾರ ನಿರಂತರ ಬೆಂಬಲ ನೀಡುತ್ತಿದೆ. ಆದರೆ, ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿ ಗುಣಮಟ್ಟದ ಮೂಲಸೌಕರ್ಯ, ಉತ್ತಮ ರಸ್ತೆ ನಿರ್ಮಿಸಿಲ್ಲ. ಬೆಂಗಳೂರು ನಗರವು ನಿರ್ಲಕ್ಷ್ಯಕ್ಕೆ ಒಳಗಾಗಿದೆ' ಎಂದು ಕಿಡಿಕಾರಿದ್ದಾರೆ.

'ವಾಸ್ತವವಾಗಿ, ಸಚಿವ ಎಂ.ಬಿ. ಪಾಟೀಲ ಹಾಗೂ ಅವರ ಕಾಂಗ್ರೆಸ್ ಸರ್ಕಾರವು ಭಾರತದ ಪ್ರಗತಿಯನ್ನು ಅಪಹಾಸ್ಯ ಮಾಡುವ ಬದಲು ತುಮಕೂರು ಟೌನ್‌ಶಿಪ್ ಅನ್ನು ಸಿಲಿಕಾನ್ ವ್ಯಾಲಿ ಮಾಡಲು ಪ್ರಯತ್ನಿಸಬೇಕು' ಎಂದು ಅವರು ಪೋಸ್ಟ್ ಮಾಡಿದ್ದಾರೆ.

'ತುಮಕೂರು ಟೌನ್‌ಶಿಪ್‌ಗೆ ಸಂಬಂಧಿಸಿದ ಭೂಸ್ವಾಧೀನದ ಬಿಕ್ಕಟ್ಟನ್ನು ರಾಜ್ಯ ಸರ್ಕಾರ ಬಗೆಹರಿಸಿಲ್ಲ. ಹೀಗಾಗಿ, ಈ ಟೌನ್‌ಶಿಪ್ ಅತಂತ್ರಗೊಂಡಿದೆ. ವಾಸ್ತವವಾಗಿ, ರಾಜ್ಯ ಸರ್ಕಾರದ ವಿಳಂಬ ಮತ್ತು ಬೆಂಬಲದ ಕೊರತೆಯಿಂದಾಗಿ ಕರ್ನಾಟಕದಿಂದ ಹಲವು ಹೂಡಿಕೆದಾರರು ಬೇರೆ ರಾಜ್ಯಕ್ಕೆ ಸ್ಥಳಾಂತರಗೊಂಡಿದ್ದಾರೆ. ಹೀಗಾಗಿ, ಸಾವಿರಾರು ಉದ್ಯೋಗಗಳು ಹಾಗೂ ಕೋಟ್ಯಂತರ ರೂಪಾಯಿ ಹೂಡಿಕೆಗಳು ಅನ್ಯ ರಾಜ್ಯಗಳ ಪಾಲಾಗಿವೆ' ಎಂದು ಅವರು ಹೇಳಿದ್ದಾರೆ.

ಬೆಂಗಳೂರು ಭಾರತದಲ್ಲೇ ಇದೆ: ಎಂಬಿಪಿ

ಬೆಂಗಳೂರು: ಬೆಂಗಳೂರಿಗೆ ಸಿಲಿಕಾನ್ ವ್ಯಾಲಿ ಎನ್ನುವ ಖ್ಯಾತಿ ಇದೆ. ಕೇಂದ್ರ ಸಚಿವ ಪೀಯೂಷ್ ಗೋಯಲ್ ಅದನ್ನು ಮರೆತಿರಬೇಕು. ಆದ್ದರಿಂದ, ತಮ್ಮದೇ ಆದ ಸಿಲಿಕಾನ್ ವ್ಯಾಲಿ ಅಭಿವೃದ್ಧಿಪಡಿಸುವ ಮಾತುಗಳನ್ನು ಆಡಿದ್ದಾರೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಟೀಕಿಸಿದ್ದಾರೆ.

' ಭಾರತ ನಮ್ಮ ದೇಶ. ಬೆಂಗಳೂರು ಕೂಡ ಈ ದೇಶದಲ್ಲೇ ಇದೆ ಎಂಬುದನ್ನು ಅವರು ಮರೆಯಬಾರದು. ಬೆಂಗಳೂರನ್ನು ಒಂದೇ ದಿನದಲ್ಲಿ ಕಟ್ಟಿಲ್ಲ. ಇದಕ್ಕೆ ಹಲವು ದಶಕಗಳು ಮತ್ತು ಶತಮಾನಗಳೇ ಹಿಡಿದಿವೆ' ಎಂದು ಅವರು 'ಎಕ್ಸ್'ನಲ್ಲಿ ಪ್ರತಿಪಾದಿಸಿದ್ದಾರೆ.

ಮುಖ್ಯಮಂತ್ರಿಗೆ ಪುರುಷೋತ್ತಮ ಬಿಳಿಮಲೆ ಒತ್ತಾಯ

'ಸರೋಜಿನಿ ಮಹಿಷಿ ವರದಿಗೆ ಬೆಂಬಲ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿರುವ ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿಗೆ ಆದಷ್ಟು ಶೀಘ್ರ ಕಾನೂನು ಬೆಂಬಲ ಒದಗಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದ ಅವರು ಮನವಿ ಸಲ್ಲಿಸಿದರು. 'ಕನ್ನಡದ ಉಳಿವಿನ ದೃಷ್ಟಿಯಿಂದ ಇದು ಮಹತ್ವದ ವರದಿಯಾಗಿದೆ. ಈ ವರದಿಯಲ್ಲಿ ಖಾಸಗಿ ವಲಯದ ವಿವಿಧ ವರ್ಗಗಳ ಹುದ್ದೆಗಳಲ್ಲಿ ಕನ್ನಡಿಗರಿಗೆ ಆದ್ಯತೆ, ರಾಜ್ಯದಲ್ಲಿ ವ್ಯವಹರಿಸುವ ಬ್ಯಾಂಕ್‌ನಲ್ಲಿ ನೇಮಕ ಹೊಂದುವ ಅಭ್ಯರ್ಥಿಗಳಿಗೆ ಕನ್ನಡ ಪರೀಕ್ಷೆಯ ಷರತ್ತು, ಸರ್ಕಾರಿ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಆದ್ಯತೆ, ಅಪ್ರೆಂಟಿಸ್, ಕಾರ್ಮಿಕರು, ಗುತ್ತಿಗೆ ಹಾಗೂ ದಿನಗೂಲಿ ನೌಕರರ ನೇಮಕಾತಿಯಲ್ಲಿ ಕನ್ನಡಿಗರಿಗೆ ಮಾತ್ರ ಅವಕಾಶ ಒದಗಿಸುವ ಬಗ್ಗೆ ಉಲ್ಲೇಖಿಸಲಾಗಿದೆ. ಆದ್ದರಿಂದ ಈ ವರದಿಗೆ ಕಾನೂನು ಬೆಂಬಲ ನೀಡಬೇಕು' ಎಂದು ಮನವಿ ಮಾಡಿದರು.

ಸರೋಜಿನಿ ಮಹಿಷಿ ಪರಿಷ್ಕೃತ ವರದಿಗೆ ಕಾನೂನು ಬೆಂಬಲ ಒದಗಿಸುವಂತೆ ಸಿದ್ದರಾಮಯ್ಯ ಅವರಿಗೆ ಪುರುಷೋತ್ತಮ ಬಿಳಿಮಲೆ ಮನವಿ ಮಾಡಿದರು. ಗೃಹ ಸಚಿವ ಜಿ. ಪರಮೇಶ್ವರ, ಸಂತೋಷ ಹಾನಗಲ್ಲ ಮೊದಲಾದವರು ಇದ್ದಾರೆ

'ಈ ವರದಿಯನ್ನು ಗಮನಿಸಿ ಇದೇ ಮಾದರಿಯಲ್ಲಿ ಕೆಲವು ರಾಜ್ಯಗಳು ಕಾನೂನು ರಚಿಸಿವೆ. ವರದಿಯು 'ಸ್ಥಳೀಯರಿಗೆ ಉದ್ಯೋಗ' ಎಂಬುದಕ್ಕೆ ತಾತ್ವಿಕ ನೆಲೆಯನ್ನು ಒದಗಿಸಿತ್ತು. 'ಸ್ಥಳೀಯರು' ಎಂದರೆ ಯಾರು ಎಂಬುದಕ್ಕೆ ಖಚಿತ ಮಾಪನವನ್ನು ಅಳವಡಿಸಿ, ರಾಷ್ಟ್ರದ ಗಮನ ಸೆಳೆದಿತ್ತು. ಮಹಿಷಿ ವರದಿಯಲ್ಲಿ ಹೇಳಿರುವ, 'ಸ್ಥಳೀಯರು ಕನಿಷ್ಠ 15 ವರ್ಷಗಳಿಂದ ನಿವಾಸಿಯಾಗಿರಬೇಕು' ಎಂಬ ಮಾನದಂಡವನ್ನು ಹಲವು ರಾಜ್ಯಗಳು ಅಳವಡಿಸಿಕೊಂಡಿವೆ' ಎಂದು ಹೇಳಿದರು.

'ತಂತ್ರಜ್ಞಾನ ಬೆಳವಣಿಗೆಗೆ ಅನುಗುಣವಾಗಿ ಉದ್ಯೋಗ ತರಬೇತಿಗೆ ಪ್ರತ್ಯೇಕ ತಾಂತ್ರಿಕ ಸಲಹಾ ಮಂಡಳಿ ಸ್ಥಾಪನೆ ಬಗ್ಗೆಯೂ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ನಾಮಫಲಕಗಳಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ, ಕೇಂದ್ರ ಪಠ್ಯಕ್ರಮ ಶಿಕ್ಷಣದಲ್ಲಿ ಒಂದರಿಂದ 10ನೇ ತರಗತಿಯವರೆಗೆ ಕನ್ನಡ ಬೋಧನೆಯನ್ನು ಕಡ್ಡಾಯಗೊಳಿಸುವಿಕೆ ಸೇರಿದಂತೆ ಒಟ್ಟು 14 ಅನುಷ್ಠಾನ ಯೋಗ್ಯ ಅಂಶಗಳು ಪರಿಷ್ಕೃತ ವರದಿಯಲ್ಲಿದೆ. ಮುಂದಿನ ಅಧಿವೇಶನದಲ್ಲಿ ಪ್ರಾಧಿಕಾರದ ವರದಿಯನ್ನು ಮಂಡಿಸಿ, ರಾಜ್ಯ ಸರ್ಕಾರದ ಕನ್ನಡದ ಬದ್ಧತೆಯನ್ನು ಸ್ಥಿರೀಕರಿಸಬೇಕು' ಎಂದು ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

‘ವಿದ್ಯಾನಿಧಿ’ಗೆ ಅರ್ಜಿ ಆಹ್ವಾನ

ಬೆಂಗಳೂರು: ವಿದ್ಯಾನಿಧಿ ಯೋಜನೆ ಸೌಲಭ್ಯಕ್ಕಾಗಿ ರಾಜ್ಯದಲ್ಲಿನ ಹಳದಿ ಬೋರ್ಡ್ ಟ್ಯಾಕ್ಸಿ ಚಾಲಕರ ಮತ್ತು ಆಟೊ ಚಾಲಕರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸೇವಾ ಸಿಂಧು ವೆಬ್‌ಪೋರ್ಟಲ್ ಮೂಲಕ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರಗಳಲ್ಲಿ, ಚಾಲಕರು, ಪೋಷಕರ ಚಾಲನಾ ಅನುಜ್ಞಾ ಪತ್ರ ಸಂಖ್ಯೆ, ಆಧಾರ್ ಸಂಖ್ಯೆ ಮತ್ತು ವಿದ್ಯಾರ್ಥಿಯ ಆಧಾರ್ ಸಂಖ್ಯೆಯೊಂದಿಗೆ ವೆಬ್‌ಸೈಟ್ https://sevasindhu.karnataka.gov.in/sevasindhu/kannada ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸಾರಿಗೆ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.21ಕ್ಕೆ ಪರಿಷತ್ ಉಪ ಚುನಾವಣೆ

ನವದೆಹಲಿ: ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ರಾಜೀನಾಮೆಯಿಂದ ತೆರವಾಗಿರುವ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರಕ್ಕೆ ಚುನಾವಣಾ ಆಯೋಗವು ಉಪಚುನಾವಣೆಯ ವೇಳಾಪಟ್ಟಿಯನ್ನು ಗುರುವಾರ ಪ್ರಕಟಿಸಿದೆ.

ಕೋಟ ಅವರ ಅವಧಿ 2028ರ ಜನವರಿ 5ರ ವರೆಗೆ ಇತ್ತು. ಸಂಸದರಾಗಿ ಆಯ್ಕೆಯಾದ ಕಾರಣ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಾಮಪತ್ರ ಸಲ್ಲಿಕೆಗೆ ಅ.3 ಕೊನೆಯ ದಿನಾಂಕ. ನಾಮಪತ್ರ ಪರಿಶೀಲನೆ 4ರಂದು ನಡೆಯಲಿದೆ. ನಾಮಪತ್ರ ಹಿಂಪಡೆಯಲು 7ರಂದು ಕೊನೆಯ ದಿನ. ಅ.21ರಂದು ಮತದಾನ ನಡೆಯಲಿದೆ. 24ರಂದು ಮತ ಎಣಿಕೆ ನಡೆಸಲಾಗುತ್ತದೆ.

ಈ ಕ್ಷೇತ್ರವು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. 392 ಸ್ಥಳೀಯ ಸಂಸ್ಥೆಗಳಿದ್ದು, 6033 ಮತದಾರರು ಇದ್ದಾರೆ.

ರಾಷ್ಟ್ರಪತಿ ಅಂಕಿತಕ್ಕೆ ನೋಂದಣಿ ತಿದ್ದುಪಡಿ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ-ನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡದೆಯೇ ಆಸ್ತಿ ನೋಂದಣಿಗೆ ಅವಕಾಶ ಕಲ್ಪಿಸುವ ‘ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ’ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅನುಮೋದನೆ ನೀಡಿದ್ದು, ಮಸೂದೆಯನ್ನು ರಾಜ್ಯ ಸರ್ಕಾರ ರಾಷ್ಟ್ರಪತಿ ಅಂಕಿತಕ್ಕೆ ಕಳುಹಿಸಿದೆ.

ಈ ಮಸೂದೆಗೆ ವಿಧಾನಮಂಡಲವು ಇದೇ ಫೆಬ್ರುವರಿಯಲ್ಲಿ ಅನುಮೋದನೆ ನೀಡಿತ್ತು. ಅದನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿತ್ತು. ಆದರೆ, ಅವರು ಕೆಲವು ಸ್ಪಷ್ಟನೆಗಳನ್ನು ಕೇಳಿ ಮಸೂದೆಯನ್ನು ಸರ್ಕಾರಕ್ಕೆ ಮರಳಿಸಿದ್ದರು.

ರಾಜ್ಯ ಸರ್ಕಾರ ಸ್ಪಷ್ಟೀಕರಣ ನೀಡಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿಯ ಅಂಕಿತಕ್ಕೆ ಮೀಸಲಿಟ್ಟು ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆಗೆ ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ. ರಾಷ್ಟ್ರಪತಿಯ ಅಂಕಿತಕ್ಕಾಗಿ ಮಸೂದೆಯನ್ನು ಕೇಂದ್ರ ಗೃಹ ಸಚಿವಾಲಯಕ್ಕೆ ಗುರುವಾರ (ಸೆ. 19) ಕಳುಹಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ತಿಳಿಸಿದರು.

ಕೇಂದ್ರ ಸಚಿವ ರವನೀತ್ ಸಿಂಗ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ನಿಂದಿಸಿದ ಆರೋಪದ ಅಡಿ ಕೇಂದ್ರ ರೈಲ್ವೆ ಮತ್ತು ಆಹಾರ ಸರಬರಾಜು ಖಾತೆ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟು ಅವರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಜಯನಗರದ ನಿವಾಸಿ ಎಂ.ವಿ.ರವೀಂದ್ರ ಅವರು ನೀಡಿದ ದೂರು ಆಧರಿಸಿ ಪೊಲೀಸರು ರವನೀತ್ ಸಿಂಗ್ ಬಿಟ್ಟು ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

‘ಸೆಪ್ಟೆಂಬರ್ 15ರಂದು ಬಿಹಾರದ ಬಾಗಲ್ಪುರದಲ್ಲಿ ವಂದೇ ಭಾರತ್ ರೈಲು ಸಂಚಾರ ಉದ್ಘಾಟನೆಯ ಬಳಿಕ ನಡೆದ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಗಾಂಧಿ ಅವರನ್ನು ಕೇಂದ್ರ ಸಚಿವರು ನಿಂದನೆ ಮಾಡಿದ್ದಾರೆ. ಧರ್ಮಗಳ ನಡುವೆ ಸೌಹಾರ್ದ ಹಾಳುಮಾಡಿ ಸಮಾಜದಲ್ಲಿ ಗಲಭೆ ಉಂಟಾಗುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ರಾಹುಲ್ ಹಾಗೂ ಅವರ ಕುಟುಂಬದವರ ಗೌರವಕ್ಕೆ ಧಕ್ಕೆ ಆಗುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ’ ಎಂದು ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಕುಮಾರಸ್ವಾಮಿ ಭಾಮೈದ ಚನ್ನಪ್ಪಗೆ ಬೆಲೆಬಾಳುವ ಜಮೀನು ಮಾರಾಟ: ಸಚಿವರಿಂದ ಆರೋಪ

‘ಎಚ್‌ಡಿಕೆ, ಬಿಎಸ್‌ವೈರಿಂದ ಡಿನೋಟಿಫೈ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್.ಡಿ. ಕುಮಾರಸ್ವಾಮಿ ಮತ್ತು ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಗಂಗೇನಹಳ್ಳಿಯಲ್ಲಿ ಬಹುಕೋಟಿ ಮೌಲ್ಯದ 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ನಡೆದಿದೆ. ಇದೊಂದು ವ್ಯವಸ್ಥಿತ ದರೋಡೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದರು.



ಎಚ್.ಡಿ.ಕುಮಾರಸ್ವಾಮಿ

ಬಿ.ಎಸ್. ಯಡಿಯೂರಪ್ಪ

ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ಸಂತೋಷ್ ಲಾಡ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಡಿನೋಟಿಫೈ ಆಗಿರುವ ಜಮೀನು ಕೆಲವೇ ದಿನಗಳಲ್ಲಿ ಕುಮಾರಸ್ವಾಮಿ ಅವರ ಭಾಮೈದನ ಹೆಸರಿಗೆ ನೋಂದಣಿಯಾಗಿದೆ. ಈ ಪ್ರಕರಣದ ತನಿಖೆಯನ್ನು ಲೋಕಾಯುಕ್ತ ತ್ವರಿತಗತಿಯಲ್ಲಿ ಪೂರೈಸಿ ಸರ್ಕಾರಕ್ಕೆ ವರದಿ ನೀಡಬೇಕು. ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು’ ಎಂದು ಆಗ್ರಹಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ‘ಯಾವುದೇ ದಾಖಲೆಗಳು ಇಲ್ಲದಿದ್ದರೂ ದಲಿತರ ಭೂಮಿ ನುಂಗಿದ್ದಾರೆ ಎಂದು ಮುಖ್ಯಮಂತ್ರಿ ಮೇಲೆ ವಿರೋಧ ಪಕ್ಷಗಳು ಆರೋಪ ಮಾಡುತ್ತಿವೆ. ಆದರೆ, ಈ ಪ್ರಕರಣದಲ್ಲಿ ಎಲ್ಲ ದಾಖಲೆಗಳಿವೆ’ ಎಂದರು.

‘ತಮ್ಮ ಮುಖ್ಯಮಂತ್ರಿ ಸ್ಥಾನ ಹೋಗುವವರೆಗೆ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದ ಕಡತದ ಹಿಂದೆಯೇ ಕುಮಾರಸ್ವಾಮಿ ಇರುತ್ತಾರೆ. ಕುಮಾರಸ್ವಾಮಿಯವರ ಅತ್ತೆಗೂ ಈ ಜಮೀನಿಗೂ ಸಂಬಂಧವೇ ಇಲ್ಲ. ಆದರೂ, ಅವರ ಹೆಸರಿಗೆ 20 ದಿನಗಳಲ್ಲಿ ಜಿಪಿಎ ಆಗುತ್ತದೆ. ಅವರು ತಮ್ಮ ಮಗ ಹಾಗೂ ಅನಿತಾ ಕುಮಾರಸ್ವಾಮಿ ಸೋದರ ಚನ್ನಪ್ಪ ಅವರಿಗೆ ಈ ಜಮೀನು ಮಾರಾಟ ಮಾಡಿರುವುದು ನಿಜವೋ ಸುಳ್ಳೋ ಎಂದು ಕುಮಾರಸ್ವಾಮಿ ಹೇಳಬೇಕು’ ಎಂದು ಒತ್ತಾಯಿಸಿದರು.

‘ಈ ಹಗರಣದಲ್ಲಿ ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಎಷ್ಟು ಪಾಲು ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಇಬ್ಬರೂ ಉತ್ತರ ನೀಡಬೇಕು. ಯಡಿಯೂರಪ್ಪ ಅವರಿಗೆ ₹ 25 ಸಾವಿರ ದಂಡ ಹಾಕಿದ್ದ ಹೈಕೋರ್ಟ್, ತನಿಖೆ ಮುಂದುವರೆಸುವಂತೆ ಸೂಚಿಸಿದ್ದರೂ ಲೋಕಾಯುಕ್ತದಲ್ಲಿ ತನಿಖೆ ಏಕೆ ಮುಂದುವರೆಯುತ್ತಿಲ್ಲ’ ಎಂದು ಪ್ರಶ್ನಿಸಿದರು. ‘ಈ ಹಗರಣದ ಮುಖ್ಯ ರೂವಾರಿ ಕುಮಾರಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಯಡಿಯೂರಪ್ಪನವರು ಉತ್ತರ ಕೊಡಬೇಕು. ಬಿಜೆಪಿಯವರು ನಾವು ಬಿಡುಗಡೆ ಮಾಡುವ ಎಲ್ಲ ದಾಖಲೆಗಳನ್ನು ತೆಗೆದುಕೊಂಡು ಹೋಗಿ ರಾಜ್ಯಪಾಲರಿಗೆ ನೀಡಿ ಮತ್ತೊಮ್ಮೆ ತನಿಖೆಗೆ ಆದೇಶಿಸುವಂತೆ ಮನವಿ ಮಾಡಬೇಕು. ರಾಷ್ಟ್ರಪತಿ ಮಧ್ಯಪ್ರವೇಶಿಸಿ ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ಪತ್ರ ಬರೆಯಬೇಕು’ ಎಂದು ಸಂತೋಷ್ ಲಾಡ್ ಆಗ್ರಹಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ನಾರಾಯಣ ಸ್ವಾಮಿ, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ವಿಜಯ್ ಮತ್ತಿಕಟ್ಟಿ, ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಮತ್ತು ಮಾಧ್ಯಮ ಕಾರ್ಯದರ್ಶಿ ದೀಪಕ್ ತಿಮ್ಮಯ ಇದ್ದರು.

ಮೂವರು ಅಧಿಕಾರಿಗಳ ಹೇಳಿಕೆ ದಾಖಲು

ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆ ಗುರುವಾರ ನಡೆದಿದೆ.

2015ರಲ್ಲಿ ಲೋಕಾಯುಕ್ತದಲ್ಲಿ ದಾಖಲಾಗಿದ್ದ ದೂರನ್ನು ಆಧರಿಸಿ, ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದಲ್ಲಿ ಗುರುವಾರ ಮೂವರು ಅಧಿಕಾರಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಗೊತ್ತಾಗಿದೆ.

ಆದಾಯದ ಶೇ 7ರಷ್ಟು ಪಾಲು ಮೀಸಲಿಡುವುದು ಕಡ್ಡಾಯ: ಸಚಿವ ಸುಧಾಕರ್ ಸೂಚನೆ

ಸಂಶೋಧಕಿಯರಿಗೆ ಹೆಚ್ಚಿನ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳಲ್ಲಿ ಸಂಗ್ರಹವಾಗುವ ಆದಾಯದಲ್ಲಿ ಶೇ 7ರಷ್ಟು ಮೊತ್ತವನ್ನು ಇನ್ನುಮುಂದೆ ಮಹಿಳೆಯರು ಕೈಗೊಳ್ಳುವ ಸಂಶೋಧನೆಗಳಿಗೆ ಮೀಸಲಿಡುವುದು ಕಡ್ಡಾಯವಾಗಲಿದೆ.

ಎಂ.ಸಿ. ಸುಧಾಕರ್

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸಾಮಾನ್ಯ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ವಿವಿಧ ವಿಷಯಗಳ ಸಂಶೋಧನೆಗಳಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಮಹಿಳೆಯರ ಸಾಧನೆ ಮೇಲೆ ಬೆಳಕು ಚೆಲ್ಲುವ ವಿಷಯಗಳನ್ನು ಪಠ್ಯಗಳಲ್ಲೂ ಕಡ್ಡಾಯಗೊಳಿಸ ಲಾಗುತ್ತಿದೆ ಎಂದರು.

ಏಕರೂಪದ ವೇಳಾಪಟ್ಟಿ: ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ 2024–25ನೇ ಸಾಲಿಗೆ ಏಕರೂಪದ ವೇಳಾಪಟ್ಟಿ ಪ್ರಕಟಿಸಲಾಗಿದೆ. ಪದವಿ ತರಗತಿಗಳಿಗೆ ಜುಲೈ 8ರಿಂದ, ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೆ. 19ರಿಂದ ತರಗತಿಗಳು ಆರಂಭವಾಗಿವೆ. 2025–26ನೇ ಸಾಲಿನಿಂದ ಈ ಅವಧಿ ಕ್ರಮವಾಗಿ ಜೂನ್ ಹಾಗೂ ಸೆಪ್ಟೆಂಬರ್‌ನಿಂದ ಆರಂಭವಾಗಲಿವೆ ಎಂದರು.

2024–25ನೇ ಸಾಲಿನ ಕೋರ್ಸ್‌ಗಳ ಸಂಯೋಜನೆ, ಬದಲಾವಣೆಗೆ ಅ. 14ರಿಂದ ನ. 4ರವರೆಗೆ ಅವಕಾಶ ನೀಡಲಾಗಿದೆ. ಎಲ್ಲ ಪ್ರಕ್ರಿಯೆಗಳನ್ನು 2025ರ ಮಾರ್ಚ್ 21ರ ಒಳಗೆ ಪೂರ್ಣಗೊಳ್ಳಲಿವೆ. ಏ. 15ರಿಂದಲೇ ಪ್ರವೇಶ ಪ್ರಕ್ರಿಯೆ ಆರಂಭಿಸಲು ಅವಕಾಶ ನೀಡಲಾಗುತ್ತದೆ ಎಂದರು.

ಯುವಿಸಿಇಗೆ ‘ಐಐಟಿ’ ಸ್ಪರ್ಶ, ರಾಜ್ಯಕ್ಕೆ ಶೇ 85 ಸೀಟು: ‘ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ₹500 ಕೋಟಿ ವೆಚ್ಚದಲ್ಲಿ ಕ್ರಿಯಾಯೋಜನೆ ಸಿದ್ಧಪಡಿಸಲಾಗುತ್ತಿದೆ. ಪ್ರಸಕ್ತ ಬಜೆಟ್‌ನಲ್ಲಿ ₹100 ಕೋಟಿ ನೀಡಲಾಗಿದೆ. ಪ್ರತಿವರ್ಷ ₹100 ಕೋಟಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ’ ಎಂದು ಸುಧಾಕರ್ ಹೇಳಿದರು.

‘ಅಲಹಾಬಾದ್‌ನ ಐಐಟಿಗೆ ಭೇಟಿ ನೀಡಿ ಪರಿಶೀಲಿಸಿ, ಮಾಹಿತಿ ಕಲೆ ಹಾಕಿದ್ದೇವೆ. ಬೆಂಗಳೂರು ವಿ.ವಿ ಆವರಣದ 50 ಎಕರೆಯಲ್ಲಿ ಹೊಸ ಕಟ್ಟಗಳನ್ನು ನಿರ್ಮಿಸಲಾಗುವುದು. ಯುವಿಸಿಇಯಲ್ಲಿ ಲಭ್ಯವಿರುವ ಸೀಟುಗಳಲ್ಲಿ ನಿಯಮದಂತೆ ಶೇ 75ರಷ್ಟು ಕರ್ನಾಟಕದ ವಿದ್ಯಾರ್ಥಿಗಳಿಗೆ ಹಾಗೂ ಶೇ 25ರಷ್ಟು ಜೆಇಇ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಜೆಇಇ ಬರೆದ ರಾಜ್ಯದ ವಿದ್ಯಾರ್ಥಿಗಳಿಗೆ ಅದರಲ್ಲೂ ಶೇ 10ರಷ್ಟು ಸೀಟು ಮೀಸಲಿಡುವ ಕುರಿತು ಚಿಂತನೆ ನಡೆದಿದೆ ಎಂದರು.

ವಿದ್ಯಾರ್ಥಿಸ್ನೇಹಿ ನಡಾವಳಿ ರೂಪಿಸಲು ಸಮಿತಿ

ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಲು, ಆತ್ಮಹತ್ಯೆ ಯಂತಹ ಪ್ರಕರಣಗಳನ್ನು ತಡೆಯಲು ರಾಜ್ಯದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಏಕರೂಪದ ನಡಾವಳಿ ಸಿದ್ಧಪಡಿಸಲು ಮನೋವಿಜ್ಞಾನಿಗಳು ಹಾಗೂ ಕುಲಪತಿಗಳನ್ನು ಒಳಗೊಂಡ ಸಮಿತಿ ರಚಿಸಲಾಗುತ್ತಿದೆ.

ಖಾಸಗಿ ವಿಶ್ವವಿದ್ಯಾನಿಲಯವೊಂದರ ಬಿ.ಟೆಕ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ನಂತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಒತ್ತಡ ಕುರಿತು ಅಧ್ಯಯನ ಮಾಡಿ, ವರದಿ ನೀಡಲು ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಎಸ್.ಎಂ. ಜಯಕರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

ನಕಲು ಮಾಡುವಾಗ ಸಿಕ್ಕಿಬಿದ್ದ ಕಾರಣಕ್ಕೆ ಕೆಲ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಸಮಿತಿ ದೃಢಪಡಿಸಿತ್ತು.

‘ಜಯಕರ ಅವರು ನೀಡಿದ ವರದಿ ಕುರಿತು ಚರ್ಚಿಸಲಾಯಿತು. ಇಂತಹ ಪ್ರಕರಣಗಳನ್ನು ತಡೆಯುವುದು ಹಾಗೂ ವಿದ್ಯಾರ್ಥಿಗಳ ಜೊತೆ ಅಧ್ಯಾಪಕರು, ಶಿಕ್ಷಣ ಸಂಸ್ಥೆಗಳು ಹೇಗೆ ನಡೆದುಕೊಳ್ಳಬೇಕು ಎಂಬ ಕುರಿತು ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ಪ್ರತ್ಯೇಕ ಸಮಿತಿ ರಚಿಸಲಾಗುತ್ತದೆ’ ಎಂದು ಸಚಿವ ಸುಧಾಕರ್ ಹೇಳಿದರು.

ಖಾಸಗಿ ವಿ.ವಿ ಪ್ರವೇಶಕ್ಕಿಲ್ಲ ಪ್ರತ್ಯೇಕ ಪರೀಕ್ಷೆ

ವಿವಿಧ ವೃತ್ತಿಪರ ಕೋರ್ಸ್‌ಗಳ ಆಡಳಿತ ಮಂಡಳಿ ಕೋಟಾದ ಸೀಟುಗಳಿಗೆ ಪ್ರತ್ಯೇಕ ಪರೀಕ್ಷೆ ನಡೆಸದೆ, ಈಗಿರುವ ಸಿಇಟಿ, ಜೆಇಇ, ಕಾಮೆಡ್–ಕೆ ಮೊದಲಾದ ಪ್ರವೇಶ ಪರೀಕ್ಷೆಗಳ ಆಧಾರದಲ್ಲೇ ಪ್ರವೇಶ ನೀಡಲು ಖಾಸಗಿ ವಿಶ್ವವಿದ್ಯಾಲಯಗಳು ಸಮ್ಮತಿಸಿವೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಕರ್ನಾಟಕ ರಾಜ್ಯ ಖಾಸಗಿ ವಿಶ್ವವಿದ್ಯಾಲಯಗಳ ಸಂಘದ ಪ್ರತಿನಿಧಿಗಳ ಸಭೆಯಲ್ಲಿ ಒಮ್ಮತದ ನಿರ್ಧಾರಕ್ಕೆ ಬರಲಾಗಿದ್ದು, 2025–26ನೇ ಸಾಲಿನಿಂದ ಒಪ್ಪಂದ ಜಾರಿಯಾಗುತ್ತದೆ. ಶುಲ್ಕ ನಿಗದಿ ಕುರಿತು ನಿವೃತ್ತ ನ್ಯಾಯಮೂರ್ತಿಯವರ ನೇತೃತ್ವದಲ್ಲಿ ಹೊಸ ಸಮಿತಿ ರಚಿಸಲಾಗುತ್ತದೆ. ಸಮಿತಿ ವರದಿಯ ನಂತರ ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳು ಪರಿಷ್ಕೃತ ಶುಲ್ಕ ಪ್ರಕಟಿಸಲಿವೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ 31 ಖಾಸಗಿ ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ 17 ವಿಶ್ವವಿದ್ಯಾಲಯಗಳಲ್ಲಿ ವೃತ್ತಿಪರ ಕೋರ್ಸ್‌ಗಳಿವೆ. ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಶೇ 40ರಷ್ಟು ಸೀಟುಗಳನ್ನು ಮೊದಲಿನಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿಇಟಿ ಮೂಲಕ ಭರ್ತಿ ಮಾಡಲಾಗುತ್ತದೆ. ಉಳಿದ ಸೀಟುಗಳಿಗೆ ಯಾವುದಾದರೂ ಒಂದು ಪ್ರವೇಶ ಪರೀಕ್ಷೆಯನ್ನು ಅನುಸರಿಸಲಾಗುತ್ತದೆ ಎಂದರು.

ಸುದ್ದಿ 2 ನಿಮಿಷ

ಪ್ರಜ್ವಲ್ ಜಾಮೀನು ಅರ್ಜಿ ಕಾಯ್ದಿರಿಸಿದ ಆದೇಶ

ಬೆಂಗಳೂರು: ಮಹಿಳೆಯ ಮೇಲಿನ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಜಾಮೀನು ಅರ್ಜಿಗಳ ವಿಚಾರಣೆ ಪೂರೈಸಿದ ಹೈಕೋರ್ಟ್ ಆದೇಶವನ್ನು ಕಾಯ್ದಿರಿಸಿದೆ.

ಈ ಸಂಬಂಧ ಪ್ರಜ್ವಲ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ಒಪ್ಪಿಗೆ ಕ್ರಿಯೆ: ವಿಚಾರಣೆ ವೇಳೆ ಪ್ರಜ್ವಲ್ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಪ್ರಕರಣದಲ್ಲಿ ಸಂತ್ರಸ್ತೆಯ ಪುತ್ರಿ ಹೇಳಿಕೆಯನ್ನು ಸಾಕ್ಷ್ಯವಾಗಿ ಪರಿಗಣಿಸಲಾಗಿದೆ. ಆದರೆ, ಆಕೆಯ ಹೇಳಿಕೆಯಲ್ಲಿ ವ್ಯತ್ಯಾಸಗಳಿವೆ. ಒಂದೊಮ್ಮೆ ಅತ್ಯಾಚಾರ ನಡೆದಿದ್ದರೂ ಇದು ಒಪ್ಪಿಗೆಯಿಂದ ನಡೆದ ಕೃತ್ಯವಾಗಿದೆ’ ಎಂದರು.

‘ಅರ್ಜಿದಾರರು 2024ರ ಮೇ 30ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರು ನ್ಯಾಯಿಕ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ನ್ಯಾಯಪೀಠ ವಿಧಿಸುವ ಯಾವುದೇ ಷರತ್ತುಗಳಿಗೆ ತಲೆಬಾಗುತ್ತಾರೆ. ಹಾಗಾಗಿ, ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಇದಕ್ಕೆ ಆಕ್ಷೇಪಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮ ಕುಮಾರ್, ‘ಆರೋಪಿ ಪ್ರಜ್ವಲ್ ಒಬ್ಬ ಸಂಸದರಾಗಿದ್ದವರು. ಅತ್ಯಾಚಾರದ ವಿವರ ಬಹಿರಂಗಪಡಿಸಿದರೆ ಸಂತ್ರಸ್ತೆಯ ಪತಿಯನ್ನು ಕೊಲೆ ಮಾಡಿಸುವುದಾಗಿ ಬೆದರಿಕೆ ಹಾಕಿದ್ದವರು. ಅಶ್ಲೀಲ ವಿಡಿಯೊಗಳನ್ನು ಬಿಡುಗಡೆ ಮಾಡುವುದಾಗಿಯೂ ಎಚ್ಚರಿಸಿದ್ದರು. ಇದರಿಂದಾಗಿ ಸಂತ್ರಸ್ತೆ ತಡವಾಗಿ ದೂರು ದಾಖಲಿಸಿದ್ದಾರೆ’ ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿದರು.

‘ಬೆಂಗಳೂರಿನಲ್ಲಿ ಅಮೆರಿಕ ರಾಯಭಾರಿ ಕಚೇರಿ ಶೀಘ್ರ’

ನವದೆಹಲಿ: ಬೆಂಗಳೂರಿನಲ್ಲಿ ಅಮೆರಿಕ ರಾಯಭಾರಿ ಕಚೇರಿಯನ್ನು ಆದ್ಯತೆ ಮೇರೆಗೆ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭಾರತದಲ್ಲಿನ ಅಮೆರಿಕ ಸಂಯುಕ್ತ ಸಂಸ್ಥಾನಗಳ ರಾಯಭಾರಿ ಎರಿಕ್ ಗಾರ್ಸೆಟಿ ಅವರು ಗ್ರಾಮೀಣಾಭಿವೃದ್ಧಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಭರವಸೆ ನೀಡಿದ್ದಾರೆ.

ಗುರುವಾರ ಇಲ್ಲಿ ಗಾರ್ಸೆಟಿ ಅವರನ್ನು ಭೇಟಿ ಮಾಡಿದ ಪ್ರಿಯಾಂಕ್ ಬೆಂಗಳೂರಿನಲ್ಲಿ ರಾಯಭಾರಿ ಕಚೇರಿ ಆರಂಭ, ರಾಜ್ಯದಲ್ಲಿ ಬಂಡವಾಳ ಹೂಡಿಕೆ, ತಂತ್ರಜ್ಞಾನ ವಿನಿಮಯ ಸೇರಿದಂತೆ ಕೆಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

‘ಬೆಂಗಳೂರು ಸೇರಿದಂತೆ ಕರ್ನಾಟಕದ ಹಲವೆಡೆಯಿಂದ ಅಮೆರಿಕಕ್ಕೆ ಪಯಣ ಬೆಳೆಸುವವರು ಈಗ ಚೆನ್ನೈಗೆ ಹೋಗಬೇಕಿದೆ. ರಾಯಭಾರಿ ಕಚೇರಿ ತೆರೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಮನವಿ ಸಲ್ಲಿಸಿದ್ದಾರೆ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ಅಮೆರಿಕದಲ್ಲಿ ಅಧ್ಯಕ್ಷರ ಚುನಾವಣೆಯ ಪ್ರಕ್ರಿಯೆ ನಡೆಯುತ್ತಿದೆ. ಚುನಾವಣೆ ಮುಗಿದ ಕೂಡಲೇ ಆದ್ಯತೆಯ ಮೇರೆಗೆ ಬೆಂಗಳೂರಿನಲ್ಲಿ ರಾಯಭಾರ ಕಚೇರಿ ಆರಂಭಿಸಲಾಗುವುದು’ ಎಂದು ಗಾರ್ಸೆಟಿ ಭರವಸೆ ನೀಡಿದರು.

ಕನ್ನಡಿಗರ ಬಹು ದಿನಗಳ ಕನಸು ಶೀಘ್ರದಲ್ಲೇ ಸಾಕಾರಗೊಳ್ಳಲಿದೆ ಎಂದು ಸಚಿವ ಪ್ರಿಯಾಂಕ್ ತಿಳಿಸಿದರು.

‘ಕಲಾವಿದರ ಮಾಸಾಶನ ₹3 ಸಾವಿರಕ್ಕೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಕಷ್ಟದಲ್ಲಿರುವ ಕಲಾವಿದರಿಗೆ ನೀಡಲಾಗುತ್ತಿರುವ ಮಾಸಾಶನವನ್ನು ಮುಂದಿನ ವರ್ಷದಿಂದ ₹ 3 ಸಾವಿರಕ್ಕೆ ಹೆಚ್ಚಿಸಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ನಾಟಕ ಅಕಾಡೆಮಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 2022–23ನೇ ಸಾಲಿನ, 2023–24ನೇ ಸಾಲಿನ ಹಾಗೂ 2024–25ನೇ ಸಾಲಿನ ಪ್ರಶಸ್ತಿ ವಿತರಿಸಿ, ಮಾತನಾಡಿದರು.

‘ಸದ್ಯ ಪ್ರತಿ ತಿಂಗಳು ₹ 2 ಸಾವಿರ ಮಾಸಾಶನ ನೀಡಲಾಗುತ್ತಿದೆ. 12 ಸಾವಿರಕ್ಕೂ ಅಧಿಕ ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ. ಮುಂದಿನ ವರ್ಷದಿಂದ ಮಾಸಾಶನ ಹೆಚ್ಚಿಸಲಾಗುತ್ತದೆ. ಹಿಂದೆ ನಾವು ಅಧಿಕಾರದಲ್ಲಿ ಇದ್ದಾಗ ಅಕಾಡೆಮಿಗಳಿಗೆ ಹೆಚ್ಚಿನ ಅನುದಾನ ಒದಗಿಸುತ್ತಿದ್ದವು. ಬಳಿಕ ಬಂದ ಸರ್ಕಾರಗಳು ಅನುದಾನ ಕಡಿತ ಮಾಡಿದವು. ನಾವು ಈಗ ಹೆಚ್ಚಿನ ಅನುದಾನ ನೀಡಿದ್ದೇವೆ. ಮುಂದಿನ ವರ್ಷ ಅಕಾಡೆಮಿಗಳಿಗೆ ನೀಡುವ ಅನುದಾನವನ್ನು ಇನ್ನಷ್ಟು ಹೆಚ್ಚಳ ಮಾಡುತ್ತೇವೆ’ ಎಂದು ಹೇಳಿದರು.

ಜೀವಮಾನದ ಸಾಧನೆ ಗೌರವ ಪ್ರಶಸ್ತಿಯನ್ನು ಕೋಟಿಗಾನಹಳ್ಳಿ ರಾಮಯ್ಯ, ಉಮಾಶ್ರೀ, ಪ್ರೊ. ಎಚ್‌ ಎಸ್‌ ಶಿವಪ್ರಕಾಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು.ಕನ್ನಡ ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್‌.ತಂಗಡಗಿ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕೇರಳದ ರಂಗಕರ್ಮಿ ಚಂದ್ರದಾಸನ್, ಮುಂಬೈನ ಗಣೇಶ್ ಯಾದವ್ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಧರಣಿದೇವಿ ಮಾಲಗತ್ತಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ‘ಕನ್ನಡ ರಂಗಭೂಮಿಯು ಮೂರು ವರ್ಷಗಳಿಂದ ಸ್ತಬ್ಧವಾಗಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸರ್ಕಾರಕ್ಕೆ ಆದಾಯ ತರದಿದ್ದರೂ ಗೌರವ ತರಲಿದೆ. ಇದನ್ನು ಅರಿತು ಈಗಿನ ಸರ್ಕಾರ ಕಲೆ ಮತ್ತು ಸಾಹಿತ್ಯಕ್ಕೆ ಅಗತ್ಯ ಪ್ರೋತ್ಸಾಹ ನೀಡುತ್ತಿದೆ’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಮಾತನಾಡಿದರು.

ಕೇರಳದ ರಂಗಭೂಮಿ ಕಲಾವಿದ ಚಂದ್ರದಾಸನ್, ಮುಂಬೈ ರಂಗಭೂಮಿ ಕಲಾವಿದ ಗಣೇಶ್ ಯಾದವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ. ಧರಣೀದೇವಿ, ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ನಿರ್ಮಲಾ ಮಠಪತಿ ಉಪಸ್ಥಿತರಿದ್ದರು.

92 ಮಂದಿಗೆ ಪ್ರಶಸ್ತಿ ಪ್ರದಾನ: ಸಮಾರಂಭದಲ್ಲಿ ನಟಿ ಉಮಾಶ್ರೀ, ನಾಟಕಕಾರರಾದ ಎಚ್.ಎಸ್. ಶಿವಪ್ರಕಾಶ್ ಹಾಗೂ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’ (ಗೌರವ ಪ್ರಶಸ್ತಿ) ಸೇರಿ 92 ಮಂದಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಪ್ರಕಾಶ್ ರಾಜ್ ಕೈಬಿಟ್ಟ ಅಕಾಡೆಮಿ

ವಾರ್ಷಿಕ ಪ್ರಶಸ್ತಿಯನ್ನು ನಟ ಪ್ರಕಾಶ್ ರಾಜ್ ನಿರಾಕರಿಸಿದ್ದರಿಂದ ಅಕಾಡೆಮಿ ಅವರ ಹೆಸರನ್ನು ಕೈಬಿಟ್ಟಿತ್ತು. ಅವರು 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಅವರ ಬದಲು ಬೇರೆಯವರನ್ನು ಆಯ್ಕೆ ಮಾಡದ ಅಕಾಡೆಮಿ, 24 ಮಂದಿಗೆ ಮಾತ್ರ 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿ ವಿತರಿಸಿತು.

ನಿಧನ ವಾರ್ತೆ

ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ (84) ಅವರು ಜ್ಯೋತಿಪುರದ ತಮ್ಮ ನಿವಾಸದಲ್ಲಿ ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರಿಗೆ ಪತ್ನಿ, ಮೂವರು ಪುತ್ರಿಯರು ಹಾಗೂ ಪುತ್ರ ಇದ್ದಾರೆ. ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಜ್ಯೋತಿಪುರದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2019ರಿಂದ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿದ್ದ ಕೆಂಪಣ್ಣ ಅವರು ಇತ್ತೀಚೆಗಷ್ಟೇ ತೀವ್ರ ಅನಾರೋಗ್ಯದ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆದು ಮನೆಗೆ ಹಿಂತಿರುಗಿದ್ದರು.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕೆಂಪಣ್ಣ ಅವರು ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿದ್ದರು. ರಾಜ್ಯ ಸರ್ಕಾರದ ವಿರುದ್ಧ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಚೇರಿಗೆ ಪತ್ರ ಬರೆದು, ಗುತ್ತಿಗೆದಾರರಿಗೆ ಆಗುತ್ತಿರುವ ಅನ್ಯಾಯದ ಕುರಿತು ಗಮನ ಸೆಳೆದಿದ್ದರು.

ಕೆಂಪಣ್ಣ ಆರೋಪವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ವಿರುದ್ಧ ‘40 ಪರ್ಸೆಂಟ್ ಸರ್ಕಾರ’ ಎಂಬ ಅಭಿಯಾನವನ್ನು ಹಮ್ಮಿಕೊಂಡಿತ್ತು.

ಶಾಸಕ ಮುನಿರತ್ನ ಕಮಿಷನ್‌ಗೆ ಬೇಡಿಕೆ ಇಟ್ಟಿದ್ದರು ಎಂದು ಕೆಂಪಣ್ಣ ದೂರಿದ್ದರು. ಹೀಗಾಗಿ ಅವರ ವಿರುದ್ಧ ಮುನಿರತ್ನ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಈ ಹಿನ್ನೆಲೆಯಲ್ಲಿ ಕೆಂಪಣ್ಣ ಬಂಧನವೂ ಆಗಿತ್ತು.

ಕಾಂಗ್ರೆಸ್ ಆಡಳಿತಕ್ಕೆ ಬಂದ ನಂತರವೂ ಗುತ್ತಿಗೆದಾರರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದ ಕೆಂಪಣ್ಣ, ಬಾಕಿ ಬಿಲ್ ಪಾವತಿಗೆ ಅಧಿಕಾರಿಗಳು ಕಮಿಷನ್ ಬೇಡಿಕೆ ಇಡುತ್ತಿದ್ದಾರೆ ಎಂದೂ ದೂರಿದ್ದರು.

ದರ್ಶನ್‌ಗೆ ಆತಿಥ್ಯ: ನಾಗ, ವೇಲು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರಿಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡಿದ ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆ ನಡೆಸಲು ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ್ ಹಾಗೂ ವೇಲು ಅವರನ್ನು ಪೊಲೀಸರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಗುರುವಾರ ಸಂಜೆ ತಮ್ಮ ವಶಕ್ಕೆ ಪಡೆದುಕೊಂಡರು.

ಜೈಲಿನಲ್ಲಿ ವಿಶೇಷ ಆತಿಥ್ಯ ಪ್ರಕರಣ ಸಂಬಂಧ ಮೂರು ಎಫ್‌ಐಆರ್‌ಗಳು ದಾಖಲಾಗಿದ್ದವು. ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದಲ್ಲಿ ಕಸ್ಟಡಿಗೆ ಪಡೆದಿರುವ ಪೊಲೀಸರು, ಹುಳಿಮಾವು ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತನಿಖೆ ನಡೆಸುತ್ತಿದ್ದಾರೆ. ಇಬ್ಬರನ್ನೂ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯ ಸೆಲ್‌ನಲ್ಲಿ ಇರಿಸಲಾಗಿದೆ.

ನಾಗ ಮತ್ತು ವೇಲು ಅವರನ್ನು ಗುರುವಾರ ಬೆಳಿಗ್ಗೆ ನ್ಯಾಯಾಲಯದ ಎದುರು ಹಾಜರುಪಡಿಸಿದ್ದ ಪೊಲೀಸರು, ಜೈಲಿನ ಒಳಗೆ ವಿಚಾರಣೆಗೆ ಸಹಕಾರ ನೀಡುತ್ತಿಲ್ಲ. ನಾಗನ ಬಳಿ ಮೊಬೈಲ್‌ಗಳು ಪತ್ತೆಯಾಗಿದ್ದು, ವಿಚಾರಣೆಗೆ ತಮ್ಮ ಕಸ್ಟಡಿಗೆ ನೀಡಬೇಕು ಎಂದು ಮನವಿ ಮಾಡಿದ್ದರು. ನ್ಯಾಯಾಧೀಶರು ಸಮ್ಮತಿ ನೀಡಿದ ಬಳಿಕ ಇಬ್ಬರೂ ವಿಚಾರಣಾಧೀನ ಕೈದಿಗಳನ್ನು ‘ಬಾಡಿ ವಾರಂಟ್’ ಮೇಲೆ ಪೊಲೀಸರು ತಮ್ಮ ಕಸ್ಟಡಿಗೆ ಪಡೆದುಕೊಂಡರು.

‘ಆಗಸ್ಟ್ 22ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಶೇಷ ಬ್ಯಾರಕ್ ಎದುರು ಟೀ–ಪಾರ್ಟಿ ಆಯೋಜಿಸಿದ್ದು ವಿಲ್ಸನ್ ಗಾರ್ಡನ್ ನಾಗ. ಅಂದು ಸಂಜೆ ನಾನಿದ್ದ ಬ್ಯಾರಕ್‌ಗೆ ವ್ಯಕ್ತಿಯೊಬ್ಬ ಬಂದು, ‘ನಮ್ಮ ಬಾಸ್ ನಾಗ ಬರಲು ಹೇಳಿದ್ದಾರೆ’ ಎಂದರು. ನಾನು ಎದ್ದು ಹೋಗಿದ್ದೆ. ಅವರು ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿ ಸಿಗರೇಟ್, ಟೀ ನೀಡಿದ್ದರು. ನಾನು ಯಾರಿಗೂ ಸಿಗರೇಟ್, ಟೀ ಬೇಕೆಂದು ಕೇಳಿಲ್ಲ’ ಎಂಬುದಾಗಿ ರೇಣುಕಸ್ವಾಮಿ ಕೊಲೆ ಪ್ರಕರಣ ಆರೋಪಿ ದರ್ಶನ್ ಅವರು ಪೊಲೀಸರ ವಿಚಾರಣೆ ವೇಳೆ ಹೇಳಿಕೆ ನೀಡಿದ್ದರು. ಆ ಹೇಳಿಕೆ ಆಧರಿಸಿ ಇಬ್ಬರನ್ನೂ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ವಿಶೇಷ ಆತಿಥ್ಯದ ಬಳಿಕ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರ ಮಾಡಲಾಗಿತ್ತು.

ಬೆಳಗಾವಿ ಜೈಲಿಗೆ ನಾಗ: ಕೊಲೆ ಪ್ರಕರಣದಲ್ಲಿ ನ್ಯಾಯಾಂಗದ ಬಂಧನದಲ್ಲಿರುವ ನಾಗ ಹಾಗೂ ಸಹಚರರನ್ನು ಬೆಳಗಾವಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲು ನ್ಯಾಯಾಲಯ ಆದೇಶ ನೀಡಿದೆ. ಪೊಲೀಸರ ವಿಚಾರಣೆ ಮುಕ್ತಾಯವಾದ ಬಳಿಕ ಸ್ಥಳಾಂತರ ಮಾಡಲಾಗುವುದು ಎಂದು ಕಾರಾಗೃಹ ಇಲಾಖೆ ಮೂಲಗಳು ತಿಳಿಸಿವೆ. ವಿಶೇಷ ಆತಿಥ್ಯ ಪ್ರಕರಣದ ತನಿಖಾಧಿಕಾರಿ ಆಗಿರುವ ಸಿಸಿಬಿ ಜಂಟಿ ಕಮಿಷನರ್ ಚಂದ್ರಗುಪ್ತ ಅವರು ಗುರುವಾರ ಕಾರಾಗೃಹಕ್ಕೆ ಭೇಟಿ ನೀಡಿ, ಪ್ರಕರಣದ ಸಂಬಂಧ ಮಾಹಿತಿ ಕಲೆ ಹಾಕಿದರು.

ಬೇಡಿಕೆ ಈಡೇರಿಕೆಗಾಗಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಹರಿದ ಸೀರೆ, ಕಳಪೆ ಆಹಾರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ನಿವೃತ್ತರಿಗೆ ಗ್ರ್ಯಾಚ್ಯುಯಿಟಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಅಂಗನವಾಡಿಗಳ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತೆಯರು, ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಆಗಿರುವ ಕಳಪೆ ಗುಣಮಟ್ಟದ ಆಹಾರ ಪದಾರ್ಥ ಹಾಗೂ ಹರಿದ ಸೀರೆ (ಸಮವಸ್ತ್ರ) ಪ್ರದರ್ಶಿಸಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್‌ನ (ಎಐಟಿಯುಸಿ) ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ, ‘ನಿವೃತ್ತರಾದ ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಗ್ರ್ಯಾಚ್ಯುಯಿಟಿ ನೀಡಬೇಕೆಂದು 2022ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. 2023ರ ಏಪ್ರಿಲ್ 1ಕ್ಕೆ ಅನ್ವಯವಾಗುವಂತೆ ಗ್ರ್ಯಾಚ್ಯುಯಿಟಿ ನೀಡುವ ಸರ್ಕಾರದ ಆದೇಶವನ್ನು ಹಿಂಪಡೆದು, ಎಲ್ಲ ನಿವೃತ್ತರಿಗೂ ಗ್ರ್ಯಾಚ್ಯುಯಿಟಿ ನೀಡಬೇಕು’ ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ಸದಸ್ಯರು ಗುರುವಾರ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಆಗುತ್ತಿರುವ ಪೌಷ್ಟಿಕ ಆಹಾರಗಳು ಕಳಪೆ ಗುಣಮಟ್ಟದಲ್ಲಿರುವುದನ್ನು ತೋರಿಸಿದರು —ಪ್ರಜಾವಾಣಿ ಚಿತ್ರ

ಅಂಗನವಾಡಿ ಕೇಂದ್ರಗಳಿಗೆ ಪೂರೈಕೆ ಆಗುತ್ತಿರುವ ಪೌಷ್ಟಿಕ ಆಹಾರ ಕಳಪೆ ಗುಣಮಟ್ಟದಿಂದ ಕೂಡಿದ್ದು, ಫಲಾನುಭವಿಗಳು ಈ ಆಹಾರ ಸೇವಿಸುತ್ತಿಲ್ಲ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪ್ರಕಾರ ಸ್ಥಳೀಯ ಪೌಷ್ಟಿಕ ಆಹಾರ ನೀಡಬೇಕೆಂಬ ನಿಯಮವನ್ನು ಉಲ್ಲಂಘಿಸಲಾಗುತ್ತಿದೆ ಎಂದು ದೂರಿದರು.

‘ಗೌರವಧನ ಹೆಚ್ಚಿಸದ ಸರ್ಕಾರ’

ವಿಧಾನಸಭೆ ಚುನಾವಣೆಯ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷವು ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು ತಿಂಗಳಿಗೆ ₹15 ಸಾವಿರ ಹಾಗೂ ಸಹಾಯಕಿಯರಿಗೆ ₹10 ಸಾವಿರಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಿತ್ತು. ಅದನ್ನು ಈಗ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಈಡೇರಿಸಬೇಕು. ನಿವೃತ್ತರಾದ ಎಲ್ಲರಿಗೂ ₹3 ಲಕ್ಷ ಇಡುಗಂಟು ನೀಡಬೇಕು ಎಂದು ಜಯಮ್ಮ ಒತ್ತಾಯಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಆರಂಭಿಸಬೇಕು. ಎಲ್ಲ ಬೇಡಿಕೆಗಳನ್ನು ಎರಡು ತಿಂಗಳ ಒಳಗೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಸಚಿವ ತಿಮ್ಮಾಪುರ ಮಾಲೀಕತ್ವದ ಸಕ್ಕರೆ ಕಾರ್ಖಾನೆ ನಿರ್ಮಾಣ; ಭೂ ಸಂತ್ರಸ್ತರ ಪರದಾಟ

ಜಮೀನು ಒತ್ತುವರಿ: ರೈತರ ಆಕ್ರೋಶ

• ಬಿ.ಎ. ನಂದಿಕೋಲಮಠ

ಮುಖ್ಯಾಂಶಗಳು

- ಅಕ್ರಮವಾಗಿ ನೂರಾರು ಎಕರೆ ಕಲ್ಲುಗುಡ್ಡ ನೆಲಸಮ
- ಚಿಕ್ಕ ಉಪ್ಪೇರಿ ಸ.ನಂ. 62ರಲ್ಲಿ ಕೃತಕ ಗುಡ್ಡ ನಿರ್ಮಾಣ
- ಭೂಕಬಳಿಕೆ ಪ್ರತಿಬಂಧಕ ಕಾಯ್ದೆ ನಿಯಮ ಉಲ್ಲಂಘನೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಮಾಲೀಕತ್ವದ ಆರ್.ಬಿ. ಶುಗರ್ಸ್ ಕಂಪನಿ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕಾಗಿ ಅಕ್ರಮವಾಗಿ ಕಂದಾಯ, ಅರಣ್ಯ ಭೂಮಿ ಹಾಗೂ ಉಳುಮೆ ಮಾಡುತ್ತಿರುವ ಪಟ್ಟಾ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ರೈತರು ಆರೋಪಿಸಿದ್ದಾರೆ.

ಕಾರ್ಖಾನೆ ನಿರ್ಮಾಣಕ್ಕಾಗಿ ಕಂಪನಿಯು 85.01 ಎಕರೆ ಜಮೀನು ಖರೀದಿಸಿದೆ. ಈ ಪೈಕಿ 49 ಎಕರೆ ಜಮೀನನ್ನು ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಿ, ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಮುಂದಾಗಿದೆ. ಇದರ ಜೊತೆಗೆ ಅಕ್ಕಪಕ್ಕದ ಕಂದಾಯ, ಅರಣ್ಯ ಸೇರಿದಂತೆ ರೈತರ ಉಳಿಮೆ ಪಟ್ಟಾ ಜಮೀನನ್ನೂ ಸಮತಟ್ಟು ಮಾಡುತ್ತಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಸುಣಕಲ್ಲ ಗ್ರಾಮದ ಕಂದಾಯ, ಅರಣ್ಯ ಮತ್ತು ಖಾಸಗಿ ರೈತರ ಪಟ್ಟಾ ಜಮೀನಿನಲ್ಲಿರುವ ಕಲ್ಲುಗುಂಡು, ಮಣ್ಣು ಕಿತ್ತು ಚಿಕ್ಕ ಉಪ್ಪೇರಿ ಸೀಮಾಂತರ ಸರ್ವೆ ನಂ. 62 ಕಂದಾಯ ಜಮೀನಿನಲ್ಲಿ ಕೃತಕ ಗುಡ್ಡ ನಿರ್ಮಿಸಲಾಗಿದೆ. ಹೀಗಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ರೈತರು ದೂರಿದ್ದಾರೆ.

ಆರ್.ಬಿ. ಶುಗರ್ಸ್ ಕಂಪನಿಯು ಸರ್ವೆ ನಂ. 77/2 (13-01 ಎಕರೆ), ಸ.ನಂ 77/3 (7 ಎಕರೆ), 78/1 (24-12 ಎಕರೆ), 80/2 (6 ಎಕರೆ), 81/2 (06-21 ಎಕರೆ), 82/2 (6-05 ಎಕರೆ), 83/2 (13-12 ಎಕರೆ), ಸ.ನಂ. 84 (5 ಎಕರೆ) ರಲ್ಲಿ ಜಮೀನು ಖರೀದಿಸಿದೆ. ಈ ಪೈಕಿ 77/2 (13-01 ಎಕರೆ), 77/3 (7 ಎಕರೆ), ಸ.ನಂ 78/1 (24-12 ಎಕರೆ)ರಲ್ಲಿನ ಜಮೀನನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸಿಕೊಂಡಿದೆ. ಉಳಿದಂತೆ 300ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಅಕ್ರಮವಾಗಿ ಕಲ್ಲುಗುಂಡು ನೆಲಸಮಗೊಳಿಸಿರುವುದು ಕಂಡು ಬಂದಿದೆ.

‘ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸ್ವಂತ ಖರೀದಿ ಜಮೀನು ಜತೆಗೆ 111.2 ಎಕರೆ ಕಂದಾಯ ಮತ್ತು ಅರಣ್ಯ ಇಲಾಖೆಗೆ ಒಳಪಟ್ಟ ಜಮೀನನ್ನು ಅಕ್ರಮವಾಗಿ ಸ್ವಚ್ಛಗೊಳಿಸಿ ಸಮತಟ್ಟುಗೊಳಿಸುತ್ತಿರುವ ಬಗ್ಗೆ ಕರ್ನಾಟಕ ರೈತ ಸಂಘದಿಂದ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲಶೆಟ್ಟರ್ ಅವರಿಗೆ ಲಿಖಿತ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಕರ್ನಾಟಕ ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ ಬಸವರಾಜ ಬಡಿಗೇರ ದೂರಿದ್ದಾರೆ.

‘ನೂರಾರು ವರ್ಷಗಳಿಂದ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಉಳುಮೆ ಮಾಡುವ ಹಾಗೂ ಸರ್ಕಾರಿ ಜಮೀನಿಗೆ ಹೊಂದಿಕೊಂಡ ಪಟ್ಟಾ ಜಮೀನುಗಳನ್ನು ಕೂಡ ದೌರ್ಜನ್ಯದಿಂದ ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿದ್ದಾರೆ. ಪಟ್ಟಾ ಜಮೀನು ದಾಖಲೆ ತೋರಿಸಿದರೂ ಅಧಿಕಾರಿಗಳ ಮೂಲಕವೇ ಬೆದರಿಕೆ ಹಾಕಿಸುತ್ತಿದ್ದಾರೆ. ಜಮೀನು ಉಳಿಸಿಕೊಡದಿದ್ದರೆ ವಿಷ ಸೇವನೆ ಮಾಡುತ್ತೇವೆ’ ಎಂದು ರೈತರು ಮಾಧ್ಯಮದವರ ಎದುರು ಅಳಲು ತೋಡಿಕೊಂಡಿದ್ದಾರೆ.

‘ಯಾವುದೇ ಕಂಪನಿಯು ಕಂದಾಯ ಹಾಗೂ ಅರಣ್ಯ ಇಲಾಖೆಯ ಜಾಗ ಅತಿಕ್ರಮಣ ಮಾಡಿಕೊಂಡು ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ ಅವರು ಸೆ. 17ರಂದು ನಡೆದ ಕಲ್ಯಾಣ ಕರ್ನಾಟಕ ಉತ್ಸವದ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ್ದರು.

ಸ್ಥಳದಲ್ಲೇ ಇದ್ದ ಜಿಲ್ಲಾಧಿಕಾರಿ ನಿತಿಶ್ ಅವರನ್ನು ಈ ಬಗ್ಗೆ ವಿಚಾರಿಸಿದರೂ ಸಮರ್ಪಕವಾದ ಉತ್ತರ ದೊರೆತಿರಲಿಲ್ಲ. ರಾಜಕಾರಣಿಗಳು ಸರ್ಕಾರಿ ಜಾಗ ಅತಿಕ್ರಮಣ ಮಾಡುತ್ತಿದ್ದರೂ ಅಧಿಕಾರಿಗಳು ಮೌನವಹಿಸಿರುವುದಕ್ಕೆ ರೈತರಿಂದ ಆಕ್ರೋಶ ವ್ಯಕ್ತವಾಗಿದೆ.

‘ಪಟ್ಟಾ ಮಾಲೀಕರಿಂದ 90 ಎಕರೆಯಷ್ಟು ಜಮೀನು ಖರೀದಿಸಿದ್ದೇವೆ. ಉಳಿದಂತೆ ಖಾಸಗಿಯಾಗಿ ಖರೀದಿಸಿದ್ದು, ಯಾರಿಗೂ ಅನ್ಯಾಯ ಮಾಡಿಲ್ಲ. ಸರ್ಕಾರಿ ಜಮೀನು ಕಬಳಿಕೆ ಮಾಡಿದ್ದಾರೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ’ ಎಂದು ಆರ್.ಬಿ. ಶುಗರ್ಸ್ ಕಂಪನಿಯ ವ್ಯವಸ್ಥಾಪಕ ಪಂಚಾಕ್ಷರಯ್ಯ ದೊಡಮನಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

‘ಆರ್.ಬಿ. ಶುಗರ್ಸ್ ಕಂಪನಿಗೆ 39 ಎಕರೆ ಮಾತ್ರ ಕೃಷಿಯೇತರ ಜಮೀನಾಗಿ ಬಳಸಲು ಅನುಮತಿ ನೀಡಲಾಗಿದೆ. ಸರ್ಕಾರಿ ಮತ್ತು ಇತರೆ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿರುವ ಬಗ್ಗೆ ದೂರು ಬಂದಿದ್ದು, ಪರಿಶೀಲಿಸಲಾಗುವುದು’ ಎಂದು ಲಿಂಗಸುಗೂರು ತಹಶೀಲ್ದಾರ್ ಶಂಶಾಲಂ ನಾಗಡದಿನ್ನಿ ತಿಳಿಸಿದ್ದಾರೆ.

ಲಿಂಗಸುಗೂರು ತಾಲ್ಲೂಕು ಸುಣಕಲ್ಲ ಕಲ್ಲುಗುಡ್ಡವನ್ನು ಆರ್‌ಬಿ ಶುಗರ್ಸ್ ಕಂಪನಿಯವರು ಯಂತ್ರ ಬಳಸಿ ನೆಲಸಮಗೊಳಿಸಿದರು



ನಾವು ಉಳುಮೆ ಮಾಡಿಕೊಂಡು ಬಂದಿದ್ದ ಜಮೀನನ್ನು ಒತ್ತುವರಿ ಮಾಡಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ವಿಷ ಸೇವಿಸುವುದೊಂದೇ ನಮಗಿರುವ ಮಾರ್ಗ

ಹನುಮಂತಪ್ಪ ಗದ್ದೆಪ್ಪ
ಭೂ ಸಂತ್ರಸ್ತ, ಸುಣಕಲ್ಲ

ತಲೆಮಾರುಗಳಿಂದ ಜಮೀನು ಸಾಗುವಳಿ ಮಾಡಿಕೊಂಡು ಬಂದಿದ್ದೇವೆ. ಪಟ್ಟಾ ಜಮೀನು ಖರೀದಿಸಿದ್ದೇವೆ ಎಂದು ಆರ್.ಬಿ ಶುಗರ್ಸ್‌ನವರು ನಮ್ಮನ್ನು ಒಕ್ಕಲೆಬ್ಬಿಸಿದ್ದಾರೆ

ದೇವಮ್ಮ ಚೌಡಕೆಪ್ಪ
ಭೂ ಸಂತ್ರಸ್ತೆ, ಸುಣಕಲ್ಲ

ಅಖಿಲ ಭಾರತೀಯ ಸಂತ ಸಮಿತಿ ಕರ್ನಾಟಕ ಘಟಕದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಜೇಶ್‌ನಾಥ್ ಗುರೂಜಿ ಮಾತನಾಡಿದರು

ಹಿಂದೂಗಳ ಮೇಲಿನ ಪ್ರಕರಣ ಹಿಂಪಡೆಯಲು ಸಂತ ಸಮಿತಿ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಗಲಭೆಗೆ ಸಂಬಂಧಿಸಿ ಹಿಂದೂಗಳ ಮೇಲೆ ದಾಖಲಿಸಿರುವ ಪ್ರಕರಣ ಹಿಂಪಡೆಯದಿದ್ದರೆ, ಬೆಂಗಳೂರು ವಿಧಾನಸೌಧದ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅಖಿಲ ಭಾರತೀಯ ಸಂತ ಸಮಿತಿ ಕರ್ನಾಟಕ ಘಟಕದ ಅಧ್ಯಕ್ಷರಾಗಿರುವ ಮಂಗಳೂರಿನ ಓಂ ಶ್ರೀ ಮಠದ ಮಹಾಮಂಡಲೇಶ್ವರ ಸ್ವಾಮೀಜಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಹುಸಂಖ್ಯಾತರನ್ನು ಕಡೆಗಣಿಸಲಾಗುತ್ತಿದೆ. ಹಿಂದೂ ಸಮಾಜಕ್ಕೆ ಅನ್ಯಾಯವಾದಲ್ಲಿ, ಸಂತ ಸಮಿತಿ ಹೋರಾಟ ಮಾಡಲು ಹಿಂಜರಿಯುವುದಿಲ್ಲ. ಸಂಘಟನೆಯಲ್ಲಿ 130ಕ್ಕೂ ಹೆಚ್ಚು ಸ್ವಾಮಿಗಳು ಸದಸ್ಯತ್ವ ಪಡೆದಿದ್ದಾರೆ. ಜಾತಿ, ಪಂಥ ಮೀರಿ ಎಲ್ಲ ಹಿಂದೂ ಸಮುದಾಯಗಳ ಸ್ವಾಮಿಗಳು ಒಂದಾಗಿ ಶಕ್ತಿ ತೋರಿಸಬೇಕು’ ಎಂದರು.

‘ಮುಸ್ಲಿಂ ಧರ್ಮದ ಬಗ್ಗೆ ನಮ್ಮ ವಿರೋಧವಿಲ್ಲ. ಹಿಂದೂ ರಾಷ್ಟ್ರದಲ್ಲಿರುವ ಅವರು ಹಿಂದೂಗಳೊಡನೆ ಹೊಂದಾಣಿಕೆ ಮಾಡಿಕೊಂಡು ಮುನ್ನಡೆಯಬೇಕು. ಮುಸ್ಲಿಂ ಧರ್ಮದಲ್ಲೂ ಹಿಂದೆ ಆಗಿ ಹೋದವರು ಒಳಿತನ್ನೇ ಬೋಧಿಸಿದ್ದರು. ಆದರೆ, ಈಗ ಸನ್ನಿವೇಶ ಬದಲಾಗಿದೆ ಎಂದರು.

‘ಲವ್ ಜಿಹಾದ್ ನಡೆಸಿ ಹಿಂದೂ ಹೆಣ್ಣು ಮಕ್ಕಳಿಗೆ ತೊಂದರೆ ನೀಡಿದರೆ, ಸಂತ ಸಮಿತಿ ಹೋರಾಟ ನಡೆಸುತ್ತದೆ’ ಎಂದು ಅರಸಿಗುಪ್ಪೆಯ ಮಂಜುನಾಥ ಕ್ಷೇತ್ರದ ರಾಜೇಶ್‌ನಾಥ್ ಗುರೂಜಿ ಹೇಳಿದರು. ಸಂತ ಸಮಿತಿಯ ಮಹಾಬಲೇಶ್ವರ ಸರಸ್ವತಿ ಸ್ವಾಮೀಜಿ, ಸದ್ಗುರು ಜಯಪ್ರಕಾಶ್ ಸ್ವಾಮೀಜಿ, ನಿಶ್ಚಲ ನಿರಂಜನ ದೇಶಿಕೇಂದ್ರ ಸ್ವಾಮೀಜಿ, ಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಮಾತಾಶ್ರೀ ಓಂಶ್ರೀ ಶಿವಜ್ಞಾ ನಮಿ ಸರಸ್ವತಿ ಇದ್ದರು.

ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ

ಕಲ್ಲು ಬಡಿದು ಇಬ್ಬರು ಕಾನ್‌ಸ್ಟೆಬಲ್‌ಗಳಿಗೆ ಗಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲು ತೂರಿರುವ ಘಟನೆ ಇಲ್ಲಿನ ಬೇತೂರು ರಸ್ತೆಯ ವೆಂಕಟೇಶ್ವರ ವೃತ್ತದಲ್ಲಿ ಗುರುವಾರ ರಾತ್ರಿ ನಡೆದಿದೆ. ಘಟನೆಯಲ್ಲಿ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಗಾಯವಾಗಿದೆ.

ಬೇತೂರು ರಸ್ತೆಯಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆಯು ರಾತ್ರಿ 7.30ರ ವೇಳೆಗೆ ವೆಂಕಟೇಶ್ವರ ದೇವಸ್ಥಾನದ ವೃತ್ತಕ್ಕೆ ಬಂದಾಗ ಕೆಲವರು ಘೋಷಣೆ ಕೂಗಿದ್ದರಿಂದ ಗಲಭೆ ಆರಂಭವಾಗಿದೆ. ಏಕಾಏಕಿ ಒಂದು ಗುಂಪಿನ ಮೇಲೆ ಕಲ್ಲು ತೂರಾಟ ನಡೆದಿದೆ.

ಬಂದೋಬಸ್ತ್‌ಗೆ ನಿಯುಕ್ತರಾಗಿದ್ದ ಪೊಲೀಸ್ ಕಾನ್‌ಸ್ಟೆಬಲ್‌ಗಳಾದ ಅನ್ನಪೂರ್ಣಾ, ರಘು ಅವರಿಗೆ ಕಲ್ಲು ಬಡಿದು ಗಾಯವಾಗಿದ್ದು, ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ. ಈ ಸಂದರ್ಭ ಪೊಲೀಸ್ ಸಿಬ್ಬಂದಿ ಲಾಠಿ ಪ್ರಹಾರ ನಡೆಸುವ ಮೂಲಕ ಗುಂಪನ್ನು ಚದುರಿಸಿದರು. ಸ್ಥಳದಲ್ಲಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಪರಿಸ್ಥಿತಿ ತಹಬದಿಗೆ ತರಲು ಅಗತ್ಯ ಕ್ರಮ ಕೈಗೊಂಡು, ಪೊಲೀಸ್ ತುಕಡಿ ನಿಯೋಜಿಸಿದರು.

ಗಲಭೆ ಆರಂಭವಾಗುತ್ತಿದ್ದಂತೆಯೇ ಅಂಗಡಿ– ಮುಂಗಟ್ಟುಗಳನ್ನು ಬಂದ್ ಮಾಡಿಸಲಾಯಿತು. ಸ್ಥಳದಲ್ಲಿ ಬಿಗುವಿನ ವಾತಾವರಣ ಇರುವುದರಿಂದ ಹೆಚ್ಚುವರಿಯಾಗಿ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ನಾಗಮಂಗಲ ಗಲಭೆ: ಪೊಲೀಸರಿಗೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸೂಚನೆ

‘ಶಾಂತಿ ನೆಲಸುತ್ತಿದೆ, ಯಾರನ್ನೂ ಬಂಧಿಸಬೇಡಿ’

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಗಲಭೆ ನಡೆದಿದ್ದ ನಾಗಮಂಗಲದಲ್ಲಿ ಶಾಂತಿ ನೆಲಸುತ್ತಿದ್ದು, ಸಹಜ ವಾತಾವರಣ ಮರುಸ್ಥಾಪನೆ ಆಗುತ್ತಿದೆ. ಹೀಗಾಗಿ ಯಾರನ್ನೂ ಬಂಧಿಸಬಾರದು’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಪೊಲೀಸರಿಗೆ ಸೂಚಿಸಿದರು.

ಇಲ್ಲಿನ ಬದ್ರಿಕೊಪ್ಪಲಿಗೆ ಗುರುವಾರ ಭೇಟಿ ನೀಡಿದ ಸಚಿವರು; ಗಣೇಶ ಮೂರ್ತಿ ಗಲಾಟೆ ಹಿನ್ನೆಲೆಯಲ್ಲಿ ತಮ್ಮ ಮಕ್ಕಳ ಬಗ್ಗೆ ಆತಂಕಗೊಂಡಿರುವ ಪೋಷಕರಿಗೆ ಧೈರ್ಯ ತುಂಬಿದರು.

ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಅವರೊಂದಿಗೆ ಸ್ಥಳದಿಂದಲೇ ದೂರವಾಣಿಯಲ್ಲಿ ಮಾತನಾಡಿದ ಸಚಿವರು, ‘ಪಟ್ಟಣದಲ್ಲಿ ಮೊದಲಿನ ವಾತಾವರಣವೇ ನೆಲೆಸಿದೆ. ಇಂಥ ಸಂದರ್ಭದಲ್ಲಿ ಯಾರನ್ನಾದರೂ ಬಂಧಿಸುವ ಕೆಲಸವಾದರೆ, ಮತ್ತೆ ಅಶಾಂತಿ ಉಂಟಾಗುವ ಅಪಾಯವಿದೆ’ ಎಂದು ಹೇಳಿದರು.

‘ಯಾವುದೇ ತಪ್ಪು ಮಾಡದೆ ಜೈಲು ಪಾಲಾಗಿರುವ ಅಮಾಯಕರನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಲಾಗುತ್ತಿದೆ. ನಿಮ್ಮ ಜೊತೆ ನಾವಿದ್ದೇವೆ’ ಎಂದು ಜನರಿಗೆ ಭರವಸೆ ನೀಡಿದರು.

ಹದಿನೇಳು ಕುಟುಂಬದವರಿಗೆ ಹಣಕಾಸು ನೆರವು ನೀಡಿದರು.

ಗುಪ್ತದಳ ವೈಫಲ್ಯ– ಆರೋಪ: ‘ಆರ್. ಅಶೋಕ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಆ ಎಫ್‌ಐಆರ್ ನೋಡಿದರೆ, ಗುಪ್ತದಳದ ವೈಫಲ್ಯ ಆಗಿರುವುದು ಗೊತ್ತಾಗುತ್ತದೆ. ಎಫ್‌ಐಆರ್ ನೋಡಿದರೆ ನಗು ಬರುತ್ತದೆ. ಗೃಹ ಸಚಿವರು ಎಚ್ಚರಿಕೆ ವಹಿಸಿದ್ದಿದ್ದರೆ ಹೀಗೆ ಆಗುತ್ತಿರಲಿಲ್ಲ’ ಎಂದರು.

‘ನಾಗಮಂಗಲದಲ್ಲಿ ಸಂಸದರ ಕೆಲಸ ಏನು’ ಎಂಬ ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ‘ನಾನು ಆರಾಮವಾಗಿ ದೆಹಲಿಯಲ್ಲಿ ಇರಬೇಕಾ? ನಾನು ಈ ಕ್ಷೇತ್ರದ ಸಂಸದ. ಜನರು ಕಷ್ಟದಲ್ಲಿ ಇದ್ದಾಗ ನಾನು ಬರಲೇಬೇಕು. ಮಂಡ್ಯದಲ್ಲಿ ಮಾತ್ರ ಪ್ರವಾಸ ಮಾಡಿಲ್ಲ, ಇಡೀ ದೇಶವನ್ನೇ ಸುತ್ತುತ್ತಿದ್ದೇನೆ’ ಎಂದು ತಿರುಗೇಟು ನೀಡಿದರು.

‘ರಾಜಕೀಯ ಮಾಡಲಾಗಲೀ, ಕುಮ್ಮಕ್ಕು ಕೊಡುವುದಕ್ಕಾಗಲೀ ಇಲ್ಲಿಗೆ ಬಂದಿಲ್ಲ. ಗಲಾಟೆಗೆ ಕುಮ್ಮಕ್ಕು ಕೊಟ್ಟಿದ್ದು ಯಾರು? ಬೆಂಕಿ ಹಚ್ಚಿ ಎಂದು ಜೆಡಿಎಸ್‌ನವರು ಹೇಳಿದ್ರಾ? ಪೊಲೀಸರು ಇದ್ದಿದ್ದರೆ ಈ ಘಟನೆ ಆಗುತ್ತಿರಲಿಲ್ಲ’ ಎಂದರು.

ನಾಗಮಂಗಲದ ಬದ್ರಿಕೊಪ್ಪಲಿಗೆ ಗುರುವಾರ ಭೇಟಿ ನೀಡಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಐಜಿಪಿ ಬೋರಲಿಂಗಯ್ಯ ಅವರೊಂದಿಗೆ ಮೊಬೈಲ್ ಫೋನ್‌ನಲ್ಲಿ ಮಾತನಾಡಿದರು

‘ಘರ್ಷಣೆಗೆ ಜೆಡಿಎಸ್‌ನವರ ಪ್ರಚೋದನೆ’

ಮಂಡ್ಯ: ‘ನಾಗಮಂಗಲ ಶಾಂತವಾಗಿದ್ದು, ತಣ್ಣಗಿರುವ ವಿಷಯವನ್ನು ಕೆಲವರು ದಿನವೂ ಕೆದಕುತ್ತಿದ್ದಾರೆ. ಘರ್ಷಣೆಗೆ ಜೆಡಿಎಸ್‌ನ ಕೆಲವರು ಕುಮ್ಮಕ್ಕು ಕೊಡಲು ನಿಂತಿದ್ದಾರೆ. ಅವರ ತಾಳಕ್ಕೆ ಸಂಸದರು ಸ್ಪಂದಿಸುತ್ತಿದ್ದಾರೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್‌.ಚಲುವರಾಯಸ್ವಾಮಿ ಅಸಮಾಧಾನ ಹೊರಹಾಕಿದರು.

ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಮೊದಲು ಕೆರಗೋಡು ಗ್ರಾಮದಲ್ಲಿ ಶುರು ಮಾಡಿದರು. ಕೆ.ಆರ್.ಪೇಟೆ, ಪಾಂಡವಪುರದಲ್ಲಿ ಪ್ರಯತ್ನಿಸಿದರು. ಅದ್ಯಾವುದರಲ್ಲೂ ಯಶಸ್ಸು ಕಾಣಲಿಲ್ಲ. ಈಗ ಕೇಂದ್ರ ಸಚಿವರು ನಾಗಮಂಗಲಕ್ಕೆ ಪದೇ ಪದೇ ಬರುತ್ತಿದ್ದಾರೆ. ಇದರಿಂದ ಏನು ಪ್ರಯೋಜನ?’ ಎಂದು ಕುಟುಕಿದರು.

‘ಪರಿಹಾರ ಕೊಡಿಸುತ್ತೇನೆ. ಬಂಧಿತರಿಗೆ ಜಾಮೀನು ಕೊಡಿಸುವ ಕೆಲಸವನ್ನು ನಮ್ಮ ಹುಡುಗರು ಮಾಡುತ್ತಿದ್ದಾರೆ. ಮತ್ತೆ ಯಾರನ್ನೂ ಬಂಧಿಸಿಲ್ಲ. ನಾಗಮಂಗಲದಲ್ಲಿ ಹಿಂದೂ ಮತ್ತು ಮುಸ್ಲಿಂ ಒಗ್ಗಟ್ಟಿನಿಂದ ಇದ್ದಾರೆ. ಇಂಥ ಸಂದರ್ಭದಲ್ಲಿ ಭೇಟಿ ಕೊಡುವುದು ಸರಿಯಲ್ಲ. ಆದರೆ, ಸಂಸದರನ್ನು ಬರಬೇಡಿ ಅನ್ನಲು ಸಾಧ್ಯವೇ? ಎಂದರು.

ಮಾಜಿ ಶಾಸಕರಿಗೆ ನೋಟಿಸ್: ಗಲಭೆಯಲ್ಲಿ ಬಾಂಗ್ಲಾ ದೇಶದವರ ಪಾತ್ರವಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ‘ಈ ಸಂಬಂಧ ಎಸ್ಪಿ ಅವರಿಗೆ ಹೇಳಿದ್ದೇನೆ. ಆ ಬಗ್ಗೆ ಮಾತನಾಡಿರುವ ಮಾಜಿ ಶಾಸಕ ಸುರೇಶ್‌ಗೌಡ ಅವರಿಗೆ ನೋಟಿಸ್ ಕೊಟ್ಟು, ವಿವರಣೆ ಕೇಳಲು ಹೇಳಿದ್ದೇನೆ. ಬಾಂಗ್ಲಾದೇಶದಿಂದ ಬಂದಿದ್ದಾರೆ ಎಂದರೆ ಅದು ಕೇಂದ್ರ ಸರ್ಕಾರದ ವೈಫಲ್ಯ. ಇದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕುಮಾರಸ್ವಾಮಿ ಉತ್ತರ ಕೊಡಬೇಕಾಗುತ್ತದೆ ಎಂದರು.

ಕಾಣೆಯಾದ ಕಾಡು ಭೂಮಿ

ಒಂದನೇ ಪುಟದಿಂದ...

ಪುನರ್ ಪರಿಶೀಲನೆಗೆ ರಚಿಸಲಾಗಿದ್ದ ಜಿಲ್ಲಾ ಸಮಿತಿಗಳು ಪರಿಭಾವಿತ ಅರಣ್ಯದ ವ್ಯಾಪ್ತಿಯನ್ನು 3.30 ಲಕ್ಷ ಹೆಕ್ಟೇರ್ ಎಂದು ಗುರುತಿಸಿವೆ. 6.64 ಲಕ್ಷ ಹೆಕ್ಟೇರ್ ಪ್ರದೇಶವನ್ನು ವ್ಯಾಪ್ತಿಯಿಂದ ಕೈಬಿಟ್ಟಿವೆ. ಆದರೂ, ಗೊಂದಲಗಳು ಮಾತ್ರ ಮುಗಿದಿಲ್ಲ.

ಪರಿಭಾವಿತ ಅರಣ್ಯಕ್ಕೆ ವ್ಯಾಖ್ಯಾನವೇ ಇಲ್ಲ: ಯಾವುದು ಪರಿಭಾವಿತ ಅರಣ್ಯ ಎನ್ನುವುದಕ್ಕೆ ಸರ್ಕಾರದ ಬಳಿ ನಿರ್ದಿಷ್ಟ ವ್ಯಾಖ್ಯಾನವೇ ಇಲ್ಲ. ಪೂರ್ವನಿರ್ಧರಿತ ಮಾನದಂಡಗಳನ್ನೂ ಅಳವಡಿಸಿಲ್ಲ ಎನ್ನುವುದನ್ನು ಅರಣ್ಯ ಇಲಾಖೆಯೇ ಒಪ್ಪಿಕೊಂಡಿದೆ. ಪ್ರತಿ ಹೆಕ್ಟೇರ್‌ಗೆ ಕನಿಷ್ಠ 50 ಮರಗಳಿರುವ ಪ್ರದೇಶವನ್ನು ಪರಿಭಾವಿತ ಎಂದು ನಮೂದಿಸಿದ ಪರಿಣಾಮವಾಗಿ ರೈತರ ಹೊಲ, ತೋಟ, ಪಟ್ಟ ಭೂಮಿ, ಮನೆಗಳು, ಆಸ್ಪತ್ರೆ ಪ್ರದೇಶಗಳನ್ನೂ ವ್ಯಾಪ್ತಿಗೆ ಸೇರಿಸಲಾಗಿತ್ತು. ಅಷ್ಟೇ ಅಲ್ಲದೆ, ಶಾಸನಬದ್ಧ ಅರಣ್ಯ ಪ್ರದೇಶ, ಮೀಸಲು ಅರಣ್ಯ ಪ್ರದೇಶಗಳನ್ನೂ ತಪ್ಪಾಗಿ ವರ್ಗೀಕರಿಸಿ, ‘ಪರಿಭಾವಿತ’ದ ಪರಿಧಿಗೆ ತಂದಿರುವುದನ್ನು ಜಿಲ್ಲಾ ಸಮಿತಿಗಳು ಪತ್ತೆ ಮಾಡಿವೆ.

ಅರಣ್ಯದ ಗುಣಲಕ್ಷಣಗಳನ್ನು ಹೊಂದಿಲ್ಲದ ಭೂಮಿ, ಖಾಸಗಿ ಪಟ್ಟಾ, ನೆಡು ತೋಪುಗಳು, ಬಗರ್‌ಹುಕುಂ ಸಾಗುವಳಿ ಮಂಜೂರಾದ ಜಮೀನು, ಮೀಸಲು ಅರಣ್ಯ, ಎರಡು ಹೆಕ್ಟೇರ್‌ಗಿಂತ ಕಡಿಮೆ ಇರುವ ಪ್ರದೇಶಗಳನ್ನು ಹೊರಗಿಟ್ಟು ಪರಿಭಾವಿತ ಅರಣ್ಯದ ವ್ಯಾಪ್ತಿಯನ್ನು ಪುನರ್ ಪರಿಶೀಲಿಸಿ, ಈ ಸಮಿತಿಗಳು ವರದಿ ಸಿದ್ಧಪಡಿಸಿವೆ.

ಮತ್ತೊಂದು ಸಮಿತಿ ರಚನೆ?

ಪರಿಭಾವಿತ ಅರಣ್ಯ ಪ್ರದೇಶ ಮರುಪರಿಶೀಲಿಸಲು ರಚಿಸಲಾಗಿದ್ದ ಜಿಲ್ಲಾ ಸಮಿತಿಗಳು ನೀಡಿದ ವರದಿಗೂ ಆಕ್ಷೇಪಣೆಗಳು ವ್ಯಕ್ತವಾಗಿದ್ದು, ಮತ್ತೊಂದು ಸಮಿತಿ ರಚಿಸಲು ಅರಣ್ಯ ಇಲಾಖೆ ಮುಂದಾಗಿದೆ.

ಅರಣ್ಯ ಹಕ್ಕು ಕಾಯ್ದೆ, ಬಗರ್‌ಹುಕುಂ ಅಡಿಯಲ್ಲಿ ಸಾಗುವಳಿ ಮಾಡಿದ ಭೂಮಿಯನ್ನೂ ಪರಿಭಾವಿತ ಅರಣ್ಯದ ವ್ಯಾಪ್ತಿಗೆ ಸೇರಿಸಲಾಗಿದೆ. ಮಂಜೂರಾತಿ ಕೋರಿ ಸಲ್ಲಿಕೆಯಾದ ಅರ್ಜಿಗಳು ಇತ್ಯರ್ಥವಾಗದೆ ಅಂತಹ ಭೂಮಿ ಕುರಿತು ನಿರ್ಧಾರ ತೆಗೆದುಕೊಳ್ಳಬಾರದು ಎಂದು ಶಾಸಕರು, ಸಚಿವರು ಸೇರಿದಂತೆ ಹಲವರು ಒತ್ತಾಯಿಸಿದ್ದಾರೆ.

‘ಮತ್ತೊಂದು ಸಮಿತಿ ರಚನೆಗೆ ನಿರ್ಧರಿಸಲಾಗಿದೆ. ಪ್ರಕ್ರಿಯೆಗಳು ಆರಂಭವಾಗಿದ್ದು, ಶೀಘ್ರ ಆದೇಶ ಹೊರಡಿಸಲಾಗುವುದು’ ಎಂದು ಅರಣ್ಯ ಇಲಾಖೆ ಉನ್ನತಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪರಿಭಾವಿತ ಅರಣ್ಯ ಪ್ರದೇಶ ಈಗ 3.30 ಲಕ್ಷ ಹೆಕ್ಟೇರ್‌ಗೆ ಕುಸಿದಿದೆ. ಈಗಿರುವ ಪ್ರದೇಶ ಸಂಕ್ಷಣೆಗೆ ಸರ್ಕಾರ ಮುಂದಾಗಬೇಕು

ಅನಂತ ಹೆಗಡೆ ಅಶೀಸರ, ಮಾಜಿ ಅಧ್ಯಕ್ಷ
ಕರ್ನಾಟಕ ಜೀವ ವೈವಿಧ್ಯ ಮಂಡಳಿ

ಆಹಾರದ ಕೊರತೆ: ಕಾಡು ಹಂದಿಗಳ ಸಾವು

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಹೆರಾವಲಿ ಗ್ರಾಮದಲ್ಲಿ ಕಾಡುಹಂದಿಗಳು ಅಸಹಜವಾಗಿ ಸಾಯುತ್ತಿವೆ. ಕಳೆದ ಹತ್ತು ದಿನಗಳಲ್ಲಿ ಐದಕ್ಕೂ ಹೆಚ್ಚು ಕಾಡು ಹಂದಿಗಳು ಮೃತಪಟ್ಟಿದ್ದು, ಗುರುವಾರ ಮತ್ತೊಂದು ಕಳೇಬರ ಪತ್ತೆ ಆಗಿದೆ. ಅವುಗಳ ಸಾವಿಗೆ ‘ಆಹಾರದ ಕೊರತೆ’ ಕಾರಣವೆಂದು ವೈದ್ಯರು ತಿಳಿಸಿದ್ದಾರೆ.

ಈ ಕುರಿತು ತನಿಖೆ ನಡೆಸಲಾಗುವುದು’ ಎಂದು ಆರ್‌ಎಫ್‌ಒ ಸವಿತಾ ದೇವಾಡಿಗ ತಿಳಿಸಿದರು.

ರಾಜ್ಯದಾದ್ಯಂತ ಕನ್ನಡ ಜ್ಯೋತಿ ರಥ ಸಂಚಾರ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಮಂಡ್ಯದಲ್ಲಿ ಡಿ.20ರಿಂದ ಮೂರು ದಿನಗಳವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಮಿತ್ತ 87 ದಿನಗಳವರೆಗೆ ನಾಡಿನಾದ್ಯಂತ ಸಂಚರಿಸಲಿರುವ ‘ಕನ್ನಡ ಜ್ಯೋತಿ ರಥ’ಕ್ಕೆ ಸಮೀಪದ ಗಂಜಾಂ ನಿಮಿಷಾಂಬ ದೇವಾಲಯದ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಗುರುವಾರ ಪೂಜೆ ಸಲ್ಲಿಸಿ, ಬೀಳ್ಕೊಟ್ಟರು.

‘ಸಮ್ಮೇಳನದ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕನ್ನಡ ಜ್ಯೋತಿ ರಥವು ಸಂಚರಿಸಲಿದೆ. ಸಮಸ್ತ ಕನ್ನಡಿಗರನ್ನು ಆಹ್ವಾನಿಸುವ ಉದ್ದೇಶದಿಂದ ಈ ರಥ ಸಂಚಾರಕ್ಕೆ ಚಾಲನೆ ನೀಡಲಾಗಿದೆ. ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕು’ ಎಂದು ಸಚಿವರು ಕೋರಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಎಚ್. ಎಲ್. ನಾಗರಾಜು, ‘ರಥವು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಭುವನಗಿರಿಯ ಭುವನೇಶ್ವರಿ ದೇವಾಲಯಕ್ಕೆ ಸೆ.22ರ ಮುಂಜಾನೆ ತಲುಪಲಿದೆ. ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಂಡ್ಯ ಜಿಲ್ಲೆ ಪ್ರತಿನಿಧಿಗಳು ಕನ್ನಡ ಜ್ಯೋತಿ ರಥ ಸಂಚಾರಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಅಂದಿನಿಂದ ಸತತವಾಗಿ ರಾಜ್ಯದ 31 ಜಿಲ್ಲೆಗಳಲ್ಲೂ ಸಂಚರಿಸಲಿದೆ’ ಎಂದು ತಿಳಿಸಿದರು. ಕಸಾಪ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿದರು. ರಥ ನಿರ್ಮಿಸಿದ ಅಭಿಲಾಷ್‌ಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಶ್ರೀರಂಗಪಟ್ಟಣ ಸಮೀಪದ ಗಂಜಾಂ ನಿಮಿಷಾಂಬ ದೇವಾಲಯದ ಬಳಿ ಕನ್ನಡ ಜ್ಯೋತಿ ರಥಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್‌ ಚಲುವರಾಯಸ್ವಾಮಿ ಗುರುವಾರ ಸಂಜೆ ಚಾಲನೆ ನೀಡಿದರು. ಶಾಸಕ ರವಿಕುಮಾರ್, ಕಸಾಪ ಅಧ್ಯಕ್ಷ ಮಹೇಶ್ ಜೋಶಿ, ಶಾಸಕ ರಮೇಶ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಕುಮಾರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

KENDRIYA VIDYALAYA, RAIL WHEEL FACTORY
Under the Ministry of Education, Govt. of India
YELAHANKA NEW TOWN, BENGALUGU - 560 064.
Phone : 080-28460979 (O), Fax No.: 080-28566968

WALK - IN INTERVIEW

Walk - In Interview for the following posts on purely Part Time / Contractual basis for the academic Year 2024-25.
Reporting Time : 9:00 a.m.

DATE	POST
25.09.2024	TGT (Maths & English) Special Educator and Sports Coach (Preferably Ladies)

For Eligibility Details, Educational Qualifications and Application Form, kindly log on to the website of **Kendriya Vidyalaya, Rail Wheel Factory at https://wapyelahanka.kvs.ac.in.** Candidates should report to the venue On **25-09-2024 at 09:00 am** for the Interview with Original and a set of Photocopies of all necessary document.
No TA / DA will be paid by the Vidyalaya for Walk-in-Interview
Sd/- PRINCIPAL

ಮುನಿರತ್ನ ಮತ್ತೆ ಬಂಧಿಸಲು ಸಜ್ಜಾದ ಪೊಲೀಸರು

ಒಂದನೇ ಪುಟದಿಂದ...

ಈ ಇಬ್ಬರು ಸಂತ್ರಸ್ತೆಯರನ್ನೂ ಗುರುವಾರ ಸಂಜೆಯೇ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದಾರೆ. ಕಲಂ 164ರ ಅಡಿ ಸಂತ್ರಸ್ತರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವೈದ್ಯಕೀಯ ಪರೀಕ್ಷೆ: ಪ್ರಕರಣದ ತನಿಖೆ ಚುರುಕುಗೊಳಿಸಿರುವ ಡಿವೈಎಸ್‌ಪಿ ದಿನಕರ ಶೆಟ್ಟಿ ನೇತೃತ್ವದ ತಂಡ ಸಂತ್ರಸ್ತೆಯರನ್ನು ರಾಜರಾಜೇಶ್ವರಿ ನಗರ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆ ನಡೆಸಿದೆ. ಅತ್ಯಾಚಾರ ನಡೆದ ರೆಸಾರ್ಟ್‌ನಲ್ಲಿ ಸ್ಥಳ ಮಹಜರು ನಡೆಸಿದೆ ಎಂದು ಮೂಲಗಳು ಹೇಳಿವೆ.

ತನ್ನ ಮೇಲೆ ವಿವಿಧೆಡೆ ಅತ್ಯಾಚಾರ ನಡೆದಿರುವುದಾಗಿ ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ. ಆ ಪೈಕಿ ಕಗ್ಗಲಿಪುರ ಠಾಣೆ ವ್ಯಾಪ್ತಿಯ ರೆಸಾರ್ಟ್‌ನಲ್ಲಿ ಸಹ ಅತ್ಯಾಚಾರ ನಡೆದಿದೆ. ಉಳಿದಂತೆ ಬೆಂಗಳೂರಿನ ವಿವಿಧೆಡೆ ಮತ್ತು ಚಿಕ್ಕಬಳ್ಳಾಪುರದಲ್ಲಿ ಅತ್ಯಾಚಾರ ನಡೆದಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲೇ ಅತ್ಯಾಚಾರ ಕೃತ್ಯ ಹೆಚ್ಚು ಬಾರಿ ನಡೆದಿದೆ. ಹಾಗಾಗಿ ಕಗ್ಗಲಿಪುರ ಪ್ರಕರಣವನ್ನು ಬೆಂಗಳೂರಿನ ಠಾಣೆಗೆ ವರ್ಗಾಯಿಸುವ ಕುರಿತು ಮೇಲಧಿಕಾರಿಗಳು ಚರ್ಚೆ ನಡೆಸಿದ್ದಾರೆ ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

12 ಕಲಂ ಅಡಿ ಪ್ರಕರಣ: ಸಮಾಜ ಸೇವಕಿಯಾಗಿ ಗುರುತಿಸಿಕೊಂಡಿರುವ ಮತ್ತು ಬಿಜೆಪಿಯಲ್ಲಿ ಸಕ್ರಿಯರಾಗಿರುವ ರಾಜರಾಜೇಶ್ವರಿ ನಗರದ 40 ವರ್ಷದ ಮಹಿಳೆಯು ಶಾಸಕ ಮುನಿರತ್ನ ಸೇರಿದಂತೆ ಏಳು ಮಂದಿ ವಿರುದ್ಧ ಅತ್ಯಾಚಾರ ಮತ್ತು ಹನಿಟ್ರ್ಯಾಪ್‌ಗೆ ತನ್ನನ್ನು ಬಳಸಿಕೊಳ್ಳಲಾಗಿದೆ ಎಂದು ದೂರು ನೀಡಿದ್ದರು.

ಪ್ರಕರಣದಲ್ಲಿ ಮುನಿರತ್ನ ಹೊರತುಪಡಿಸಿ ಅವರ ಗನ್‌ಮ್ಯಾನ್ ವಿಜಯಕುಮಾರ್, ಸುಧಾಕರ, ಕಿರಣ್ ಕುಮಾರ್, ಲೋಹಿತ್ ಗೌಡ, ಮಂಜುನಾಥ ಹಾಗೂ ಲೋಕಿ ಆರೋಪಿಗಳಾಗಿದ್ದಾರೆ. ಮುನಿರತ್ನ ಆಣತಿಯಂತೆ ಹನಿಟ್ರ್ಯಾಪ್‌ಗೆ ನೆರವಾಗುತ್ತಿದ್ದ ಆರೋಪಿಗಳು, ಕೆಲವರ ಮೇಲೆ ಅತ್ಯಾಚಾರ ಎಸಗಿರುವ ಆರೋಪವಿದೆ. ಪೊಲೀಸರು ಇದುವರೆಗೂ ಯಾರನ್ನೂ ಬಂಧಿಸಿಲ್ಲ.

ಒಂದೂವರೆ ವರ್ಷದ ಹಿಂದೆಯೇ ದೂರು

ಮುನಿರತ್ನ ವಿರುದ್ಧ ಒಂದೂವರೆ ವರ್ಷದ ಹಿಂದೆಯೇ ಸಂತ್ರಸ್ತ ಮಹಿಳೆ ಅತ್ಯಾಚಾರ ದೂರು ಕೊಟ್ಟಿದ್ದರು. ಆದರೆ, ಜೀವಭಯದಿಂದಾಗಿ ವಿಚಾರಣೆಗೆ ಹಾಜರಾಗದೆ ಸುಮ್ಮನಾಗಿದ್ದರು ಎಂಬುದು ಗೊತ್ತಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಬಂದಿದ್ದ ಸಂತ್ರಸ್ತೆ ಕಗ್ಗಲಿಪುರ ಸಮೀಪದ ರೆಸಾರ್ಟ್‌ನಲ್ಲಿ ಮುನಿರತ್ನ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂಬ ದೂರನ್ನು ಅಲ್ಲಿನ ಸಿಬ್ಬಂದಿಗೆ ಕೊಟ್ಟು ಹೋಗಿದ್ದರು.

ದೂರು ಪರಿಶೀಲಿಸಿದ್ದ ಪೊಲೀಸರು ವಿಚಾರಣೆಗೆ ಬರುವಂತೆ ಸಂತ್ರಸ್ತೆಗೆ ನೋಟಿಸ್ ಕಳಿಸಿದ್ದರು. ವಿಷಯ ಗೊತ್ತಾಗುತ್ತಿದ್ದಂತೆಯೇ ಸಂತ್ರಸ್ತೆಗೆ ಕರೆ ಮಾಡಿದ್ದ ಮುನಿರತ್ನ, ‘ಈ ವಿಷಯದಲ್ಲಿ ನೀನೇನಾದರೂ ಮುಂದುವರಿದರೆ, ನಿನ್ನ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ನಿನ್ನ ಹಾಗೂ ಕುಟುಂಬದ ಮರ್ಯಾದೆ ತೆಗೆಯುತ್ತೇನೆ. ನಿನ್ನನ್ನು ಜೀವಸಹಿತ ಬಿಡುವುದಿಲ್ಲ’ ಎಂದು ಬೆದರಿಸಿದ್ದರು. ಹಾಗಾಗಿ, ಪೊಲೀಸರ ನೋಟಿಸ್ ಕೈ ಸೇರಿದ್ದರೂ ವಿಚಾರಣೆಗೆ ಹಾಜರಾಗಿರಲಿಲ್ಲ ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

‘ಬಂಧನದಲ್ಲಿರುವ ಮುನಿರತ್ನ ಮತ್ತೆ ಹೊರಗೆ ಬಂದರೆ ನನಗೆ ಮತ್ತು ಕುಟುಂಬಕ್ಕೆ ತೊಂದರೆ ಕೊಡುತ್ತಾರೆ. ಹಾಗಾಗಿ, ನನ್ನ ಮೇಲೆ ವಿವಿಧೆಡೆ ನಡೆಸಿರುವ ಅತ್ಯಾಚಾರದ ಕುರಿತು ಠಾಣೆಗೆ ಬಂದು ದೂರು ಕೊಟ್ಟಿದ್ದೇನೆ. ನನಗಾಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸುವ ಜೊತೆಗೆ, ರಕ್ಷಣೆ ಕೂಡ ಒದಗಿಸಬೇಕು’ ಎಂದು ಸಂತ್ರಸ್ತೆ ಮನವಿ ಮಾಡಿದ್ದಾರೆ.

ವಿಡಿಯೊ ತೋರಿಸಿ ವಿಕೃತಿ: ತನ್ನ ತಂಡ ಹನಿಟ್ರ್ಯಾಪ್ ಮಾಡುವ ದೃಶ್ಯವನ್ನು ತನ್ನ ಮೊಬೈಲ್‌ನಲ್ಲಿ ನೇರವಾಗಿ ನೋಡಿಕೊಳ್ಳುವಂತೆ ಮುನಿರತ್ನ ವ್ಯವಸ್ಥೆ ಮಾಡಿದ್ದರು. ಕೆಲಸ ಮುಗಿದ ಬಳಿಕ ಕಚೇರಿಗೆ ನನ್ನನ್ನು ಕರೆಸಿ, ಆ ದೃಶ್ಯಗಳನ್ನು ಟಿ.ವಿ.ಯಲ್ಲಿ ಹಾಕಿ ತೋರಿಸಿ ಸಂತೋಷಪಡುತ್ತಿದ್ದರು ಎಂದು ಮಹಿಳೆ ದೂರಿದ್ದಾರೆ.

‘ಹೊಯ್ಸಳ’ ಪೊಲೀಸರೇ ಬೆಂಗಾವಲು!

ತನ್ನ ಎದುರಾಳಿ ಮಹಿಳೆಯೊಬ್ಬರ ಮರ್ಯಾದೆ ತೆಗೆಯಬೇಕಿದೆ. ಅವರನ್ನ ಟ್ರ್ಯಾಪ್ ಮಾಡಬೇಕು ಎಂದು ಮುನಿರತ್ನ ಸಂತ್ರಸ್ತೆಗೆ ಸೂಚಿಸಿದ್ದರು. ಅದಕ್ಕಾಗಿ, ಸಂತ್ರಸ್ತೆ ಸೇರಿದಂತೆ ಇತರ ಆರೋಪಿಗಳ ತಂಡ ರಚಿಸಿದ್ದರು.

ಮಹಿಳೆಯನ್ನು ಪರಿಚಯಿಸಿಕೊಂಡಿದ್ದ ತಂಡ ನಂತರ ಅವರನ್ನು ಪಾರ್ಟಿ ನೆಪದಲ್ಲಿ ಬೆಂಗಳೂರಿನ ವಿವಿಧೆಡೆಗೆ ಕರೆದೊಯ್ದಿತ್ತು. ಚಿಕ್ಕಬಳ್ಳಾಪುರಕ್ಕೆ ಟ್ರಿಪ್ ನೆಪದಲ್ಲಿ ಕರೆದೊಯ್ದು ಆಕೆಗೆ ನಿದ್ರೆ ಮಾತ್ರೆ ಕೊಟ್ಟು ಅಶ್ಲೀಲ ವಿಡಿಯೊಗಳನ್ನು ಚಿತ್ರೀಕರಿಸಿಕೊಂಡಿತ್ತು.

‘ಮುನಿರತ್ನ ಸೂಚನೆ ಮೇರೆಗೆ ಮಹಿಳೆ ಕೊಠಡಿಗೆ ಮಾದಕವಸ್ತು ತಂದಿಟ್ಟು ಆಕೆಯೊಂದಿಗೆ ಜಗಳವಾಡಿಕೊಂಡು ಸ್ಥಳದಿಂದ ಹೊರಟೆವು. ನಮ್ಮನ್ನು ಹೊಯ್ಸಳ ಪೊಲೀಸ್ ವಾಹನದಲ್ಲಿ ಎಸ್ಕಾರ್ಟ್ ಮಾಡಲಾಯಿತು. ನಂತರ ಆರೋಪಿ ಲೋಕಿ ಮೂಲಕ ಮಹಿಳೆ ಮೇಲೆ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಡಿಸಿ, ಬಂಧಿಸುವಂತೆ ಮಾಡಿದ್ದರು. ಬಳಿಕ ದೂರು ಹಿಂಪಡೆದಿದ್ದರು’ ಎಂದು ಸಂತ್ರಸ್ತೆ ದೂರಿನಲ್ಲಿ ಆರೋಪಿಸಿದ್ದಾರೆ.

ಇದೊಂದು ಸೂಕ್ಷ್ಮ ಪ್ರಕರಣ. ರಾಮನಗರ ಡಿವೈಎಸ್‌ಪಿಗೆ ತನಿಖೆಯ ಹೊಣೆ ವಹಿಸಲಾಗಿದೆ. ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ

ಕಾರ್ತಿಕ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ

ಪ್ಯಾಲೆಸ್ಟೀನ್ ಧ್ವಜ ಹಿಡಿಯುವುದರಲ್ಲಿ ತಪ್ಪೇನಿಲ್ಲ: ಜಮೀರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಕೇಂದ್ರ ಸರ್ಕಾರವೇ ಪ್ಯಾಲೆಸ್ಟೀನ್‌ಗೆ ಬೆಂಬಲ ಘೋಷಿಸಿದೆ. ಕೇಂದ್ರ ಸರ್ಕಾರವೇ ಬೆಂಬಲ ಕೊಟ್ಟಿದ್ದರಿಂದ ಧ್ವಜ (ಪ್ಯಾಲೆಸ್ಟೀನ್) ಹಿಡಿದುಕೊಂಡಿದ್ದಾರೆ. ಬೇರೆ ದೇಶಕ್ಕೆ ಜೈಕಾರ ಹಾಕಿದರೆ ತಪ್ಪು. ಅವರದ್ದೇ (ಕೇಂದ್ರ ಸರ್ಕಾರ) ಬೆಂಬಲ ಇದ್ದಾಗ ಧ್ವಜ ಹಿಡಿಯುವುದರಲ್ಲಿ ತಪ್ಪೇನೂ ಇಲ್ಲ’ ಎಂದು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಚಿಕ್ಕಮಗಳೂರಿನಲ್ಲಿ ಯುವಕರು ಪ್ಯಾಲೆಸ್ಟೀನ್ ಬಾವುಟ ಹಿಡಿದು ಓಡಾಡಿದ ಬಗ್ಗೆ ನಗರದಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, ‘ಬೇರೆ ಯಾವುದಾದರೂ ದೇಶಕ್ಕೆ ಜೈಕಾರ ಹಾಕಿದರೆ ದೇಶದ್ರೋಹ ಆಗುತ್ತದೆ. ಅಂತಹ ಘೋಷಣೆ ಕೂಗಿದವರನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು. ಕೇಂದ್ರ ಸರ್ಕಾರ ಪ್ಯಾಲೆಸ್ಟೀನ್‌ಗೆ ಬೆಂಬಲಿಸದಿದ್ದರೆ ಯಾರು ಧ್ವಜ ಹಿಡಿದುಕೊಳ್ಳುತ್ತಿದ್ದರು? ಬೆಂಬಲ ಇದೆ ಎಂಬ ಕಾರಣಕ್ಕೆ ತಾನೇ ಅವರೂ ಧ್ವಜ ಹಿಡಿದಿದ್ದು’ ಎಂದು ಸಮರ್ಥಿಸಿಕೊಂಡರು. ‘ಯಾರೋ ಒಂದು ಧ್ವಜ ಹಿಡಿದಿದ್ದಾರೆ ಎಂಬ ಕಾರಣಕ್ಕೆ ಬಿಜೆಪಿಯವರು ದೊಡ್ಡ ವಿವಾದ ಮಾಡುತ್ತಿದ್ದಾರೆ’ ಎಂದರು.

ಸಮಗ್ರ ಶಿಕ್ಷಣ – ಕರ್ನಾಟಕ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.

ಸಂಖ್ಯೆ: ಎಸ್.ಎಸ್.ಕೆ/ಎಲ್.ಇ.ಪಿ/ಪಿ.ಎ.ಬಿ/2/2024–25 ದಿನಾಂಕ: 18–09–2024

ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವಿಷಯ: ‘ಮರುಸಿಂಚನ’ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ಕಲಿಕಾ ಸಾಮಾಗ್ರಿಗಳನ್ನು ಮುದ್ರಿಸಿ ವಿತರಿಸಲು ಸಂಸ್ಥೆಗಳಿಂದ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲು ನೀಡಲಾಗುವ ಪತ್ರಿಕಾ ಪ್ರಕಟಣೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅರ್ಹ ಸಂಸ್ಥೆಗಳು ಟೆಂಡರ್ ಸಲ್ಲಿಸಲು ಅರ್ಜಿ ಆಹ್ವಾನಿಸಿದ್ದು ಇ–ಟೆಂಡರ್ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **http://eproc.karnataka.gov.in** ಮೂಲಕ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **25–09–2024 ಸಮಯ: ಸಂಜೆ 5.30** ಆಗಿರುತ್ತದೆ.

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ –ಕರ್ನಾಟಕ

ವಾಸಾಸಂಇ/ವಾಪ್ರ/ಜಿಎ/2067/2024–25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–3/ಟೆಂಡರ್/20/2024–25 ದಿನಾಂಕ: 19–09–2024

ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ ಕರ್ನಾಟಕ ಪಬ್ಲಿಕ್ ಶಾಲೆ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **26–09–2024 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2070/ಅಡ್ವರ್ಟೋರ್/2024–25



❦ ಸುಭಾಷಿತ ❦

ನಿಮ್ಮ ಹೃದಯದ ಒಳಹೊಕ್ಕು ನೋಡಿದಾಗ, ಅಲ್ಲಿ ಯಾವ ತಪ್ಪೂ ನಿಮಗೆ ಗೋಚರಿಸದಿದ್ದರೆ, ಚಿಂತೆ ಮಾಡುವುದಕ್ಕೆ ಏನಿದೆ? ಭಯ ಪಡುವುದು ಯಾಕಾಗಿ?

–ಕನ್‌ಫ್ಯೂಷಿಯಸ್

‘ಬುಲ್ಡೋಜರ್ ನ್ಯಾಯ’ಕ್ಕೆ ತಾತ್ಕಾಲಿಕ ತಡೆ ತಪ್ಪು ಎಸಗಿದರೆ ಕಠಿಣ ಕ್ರಮ ಆಗಲಿ

‘ಬುಲ್ಡೋಜರ್ ನ್ಯಾಯ’ದ ಬಗ್ಗೆ ಈ ಹಿಂದೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್ ಈಗ, ದೇಶದ ಯಾವುದೇ ಪ್ರದೇಶದಲ್ಲಿ ತನ್ನ ಅನುಮತಿ ಇಲ್ಲದೆ ಕಟ್ಟಡ ನೆಲಸಮ ಕೆಲಸ ನಡೆಯುವಂತಿಲ್ಲ ಎಂದು ಸೂಚಿಸಿದೆ. ‘ಬುಲ್ಡೋಜರ್ ನ್ಯಾಯ’ದ ಭಾಗವಾಗಿ ನಡೆಯುವ ಕಟ್ಟಡ ನೆಲಸಮ ಕಾರ್ಯಕ್ಕೆ ಸಂಬಂಧಿಸಿದಂತೆ ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಯನ್ನು ರೂಪಿಸುವುದಾಗಿ ಕೋರ್ಟ್ ಈ ತಿಂಗಳ ಆರಂಭದಲ್ಲಿ ಹೇಳಿತ್ತು. ಆದರೆ, ಮಾರ್ಗಸೂಚಿ ಹೊರಡಿಸುವುದಿಲ್ಲ; ಬದಲಿಗೆ ನಿರ್ದೇಶನಗಳನ್ನು ಮಾತ್ರ ನೀಡಲಾಗುತ್ತದೆ ಎಂದು ಕೋರ್ಟ್ ಈಗ ಸ್ಪಷ್ಟಪಡಿಸಿದೆ. ಕಾರ್ಯಾಂಗವು ಕಾನೂನುಗಳ ಮೇಲೆ ಬುಲ್ಡೋಜರ್ ಹರಿಸುವ ಕೆಲಸವನ್ನು ಮಾಡುತ್ತಿದೆ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿರುವ ಕೋರ್ಟ್, ಈ ದೇಶದಲ್ಲಿ ‘ಕಾರ್ಯಾಂಗವು ನ್ಯಾಯಾಧೀಶನಂತೆ ಕೆಲಸ ಮಾಡಲು ಅವಕಾಶ ಇಲ್ಲ’ ಎಂದು ಕೂಡ ಹೇಳಿದೆ. ‘ಬುಲ್ಡೋಜರ್ ನ್ಯಾಯ’ದ ಬಗ್ಗೆ ಈ ಹಿಂದೆಯೂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು. ಹೀಗಿದ್ದರೂ ಇಂತಹ ಕಾರ್ಯಾಚರಣೆಗಳು ಮುಂದುವರಿದವು. ಈಗ ಕೋರ್ಟ್ ಜಾರಿಗೆ ತಂದಿರುವ ನಿಷೇಧ ಕ್ರಮವು ತಾತ್ಕಾಲಿಕವಾದುದು, ಇದು ಅಕ್ಟೋಬರ್ 1ರವರೆಗೆ ಚಾಲ್ತಿಯಲ್ಲಿ ಇರುತ್ತದೆ. ಅಕ್ಟೋಬರ್ 1ರಂದು ಸುಪ್ರೀಂ ಕೋರ್ಟ್ ಈ ವಿಚಾರವಾಗಿ ವಿಸ್ತೃತವಾದ ನಿರ್ದೇಶನಗಳನ್ನು ನೀಡುವ ನಿರೀಕ್ಷೆ ಇದೆ.

ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ತನಗೆ ಇರುವ ವಿಶೇಷವಾದ ಅಧಿಕಾರವನ್ನು ಬಳಸಿ ಸುಪ್ರೀಂ ಕೋರ್ಟ್ ಈ ಆದೇಶ ಹೊರಡಿಸಿದೆ. ಯಾವುದೇ ವಿಷಯದಲ್ಲಿ ಸಂಪೂರ್ಣ ನ್ಯಾಯ ಕೊಡಿಸುವ ಉದ್ದೇಶದಿಂದ ಆದೇಶ ಹೊರಡಿಸುವ ಅಧಿಕಾರವನ್ನು ಈ ವಿಧಿಯು ಸುಪ್ರೀಂ ಕೋರ್ಟ್‌ಗೆ ನೀಡುತ್ತದೆ. ಬುಲ್ಡೋಜರ್ ಬಳಸಿ ಕಟ್ಟಡ ಧ್ವಂಸಗೊಳಿಸುವ ಕೃತ್ಯಗಳ ಹಿಂದೆ ಬಹಳ ಕಳವಳಕಾರಿ ಆಯಾಮವೊಂದು ಇದೆ. ಇಂತಹ ಕೃತ್ಯಗಳನ್ನು ನಡೆಸುವಾಗ ಸರ್ಕಾರಗಳೇ ಕಾನೂನು ಕೈಗೆತ್ತಿಕೊಳ್ಳುವ ಕೆಲಸ ಮಾಡಿರುತ್ತವೆ. ಶಿಕ್ಷೆಯ ರೂಪದಲ್ಲಿ ಕಟ್ಟಡವೊಂದನ್ನು ಧ್ವಂಸಗೊಳಿಸಬೇಕು ಎಂದು ದೇಶದ ಯಾವ ಕಾನೂನು ಕೂಡ ಹೇಳುವುದಿಲ್ಲ. ಆದರೆ, ಬಿಜೆಪಿಯ ನೇತೃತ್ವ ಇರುವ ಕೆಲವು ರಾಜ್ಯ ಸರ್ಕಾರಗಳು, ಅದರಲ್ಲೂ ಮುಖ್ಯವಾಗಿ ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯ ಸರ್ಕಾರಗಳು, ಮನೆ ಹಾಗೂ ಮನೆ ಇರುವ ಸ್ಥಳದ ಧ್ವಂಸ ಕಾರ್ಯವನ್ನು ಸರ್ಕಾರದ ನೀತಿಯ ಭಾಗವನ್ನಾಗಿಸಿಕೊಂಡಿವೆ. ಸರ್ಕಾರಗಳ ಈ ನಡೆಯ ಹಿಂದೆ ಕೋಮು ಆಯಾಮವೊಂದು ಕೂಡ ಇದೆ. ಧ್ವಂಸ ಕಾರ್ಯಾಚರಣೆ ಹೆಚ್ಚಾಗಿ ನಡೆದಿರುವುದು, ಮುಸ್ಲಿಮರ ಮಾಲೀಕತ್ವದಲ್ಲಿರುವ ಕಟ್ಟಡಗಳನ್ನು ಗುರಿಯಾಗಿಸಿಕೊಂಡು. ಆದರೆ, ಇದು ಬಹಳ ತಪ್ಪು ಸಂಕಥನ,

ಪ್ರಜೆಗಳ ಆಸ್ತಿಯನ್ನು ರಕ್ಷಿಸುವ ಖಾತರಿ ನೀಡುವ ಸಂವಿಧಾನವನ್ನು ಒಪ್ಪಿಕೊಂಡಿರುವ ನಾಗರಿಕ ಸಮಾಜದಲ್ಲಿ ಇಂತಹ ಕೃತ್ಯಗಳಿಗೆ ಅವಕಾಶ ಇರಕೂಡದು

ಕೋರ್ಟ್‌ನ ಮೇಲೆ ಹೊರಗಡೆಯ ಗದ್ದಲಗಳು ಪ್ರಭಾವ ಬೀರಿವೆ ಎಂದು ಸಾಲಿಸಿಟರ್ ಜನರಲ್ ಅವರು ಹೇಳಿದ್ದರು. ಆದರೆ, ಹೊರಗಡೆಯ ಗದ್ದಲಗಳು ತಮ್ಮ ಮೇಲೆ ಪ್ರಭಾವ ಬೀರುವುದಿಲ್ಲ ಎಂದು ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದ್ದಾರೆ. ಅಕ್ರಮವಾಗಿ ಒಂದೇ ಒಂದು ನೆಲಸಮ ಕಾರ್ಯ ನಡೆದರೂ ಅದು ಯಾವುದೇ ಧರ್ಮದ ವ್ಯಕ್ತಿಯನ್ನು ಗುರಿಯಾಗಿಸಿಕೊಂಡಿದ್ದರೂ ಅಂತಹ ಕೃತ್ಯವು ಸಂವಿಧಾನಕ್ಕೆ ವಿರುದ್ಧವಾದುದಾಗುತ್ತದೆ ಎಂದು ಕೋರ್ಟ್ ಎಚ್ಚರಿಸಿದೆ. 2024ರಲ್ಲಿ ನಡೆದ ಹಲವು ಧ್ವಂಸ ಕಾರ್ಯಾಚರಣೆಗಳಲ್ಲಿ ಎರಡು ವರ್ಷಗಳ ಹಿಂದೆಯೇ ನೋಟಿಸ್ ನೀಡಲಾಗಿತ್ತು ಎಂದು ಸಾಲಿಸಿಟರ್ ಜನರಲ್ ಮಾಹಿತಿ ನೀಡಿದರು. ಆದರೆ, ಹಿಂದಿನ ಯಾವುದೋ ದಿನಾಂಕಕ್ಕೆ ನೋಟಿಸ್ ನೀಡಿರುವಂತೆ ತೋರಿಸಿ, ಕಟ್ಟಡ ಧ್ವಂಸ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಕೆಲಸಗಳು ನಡೆದಿವೆ ಎನ್ನುವ ವಿಶ್ವಾಸಾರ್ಹ ದೂರುಗಳು ಇವೆ. ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ವ್ಯಕ್ತಿಯ ಸಂಬಂಧಿಕರಿಗೆ ಸೇರಿದ ಕಟ್ಟಡಗಳನ್ನು ಕೂಡ ಧ್ವಂಸಗೊಳಿಸಿದ ನಿದರ್ಶನಗಳು ಇವೆ.

ಧ್ವಂಸ ಕಾರ್ಯಾಚರಣೆಗೆ ತಡೆ ನೀಡಿರುವ ತನ್ನ ನಿರ್ದೇಶನವು ಸಾರ್ವಜನಿಕ ಬೀದಿಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ, ರೈಲು ಮಾರ್ಗಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಅತಿಕ್ರಮಣ ನಡೆಸಿ ನಿರ್ಮಿಸಿರುವ ಕಟ್ಟಡಗಳಿಗೆ ಅನ್ವಯವಾಗುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಹೀಗಾಗಿ, ಕೋರ್ಟ್ ಉಲ್ಲೇಖಿಸಿರುವ ವಿನಾಯಿತಿಗಳನ್ನು ಆಧಾರವಾಗಿ ಇರಿಸಿಕೊಂಡು, ಈಗಲೂ ಕಟ್ಟಡ ಧ್ವಂಸ ಕಾರ್ಯಕ್ಕೆ ಸರ್ಕಾರಗಳು ಮುಂದಾಗುವ ಸಾಧ್ಯತೆ ಇದೆ. ಅಂತಹ ಪ್ರಕರಣಗಳಲ್ಲಿ ತಪ್ಪು ಮಾಡಿದವರ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸುವುದು ಸೇರಿದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ‘ಬುಲ್ಡೋಜರ್ ನ್ಯಾಯ’ವು ಅರಾಜಕತೆಗೆ ಹಾಗೂ ಪೂರ್ವಗ್ರಹಗಳಿಗೆ ಕಾನೂನಿನ ಮಾನ್ಯತೆ ತಂದುಕೊಡುವ ಕೆಲಸ ಮಾಡುತ್ತದೆ. ಪ್ರಜೆಗಳ ಆಸ್ತಿಯನ್ನು ರಕ್ಷಿಸುವ ಖಾತರಿ ನೀಡುವ ಸಂವಿಧಾನವನ್ನು ಒಪ್ಪಿಕೊಂಡಿರುವ ನಾಗರಿಕ ಸಮಾಜದಲ್ಲಿ ಇಂತಹ ಕೃತ್ಯಗಳಿಗೆ ಅವಕಾಶ ಇರಕೂಡದು.

ದಿನದ ಟ್ವೀಟ್

ಮತದ ಮಹತ್ವ ಮನದಟ್ಟಾಗಿದೆ!

ಗಮನ ಸೆಳೆದ ಸುದ್ದಿ: ಜಮ್ಮು ಮತ್ತು ಕಾಶ್ಮೀರದ ಮೊದಲ ಹಂತದ ಚುನಾವಣೆಯಲ್ಲಿ ಶೇ 61ರಷ್ಟು ಮತದಾನ ನಡೆದಿರುವುದು ಅತಿದೊಡ್ಡ ಸಕಾರಾತ್ಮಕ ಬೆಳವಣಿಗೆ. ಈ ಮೊದಲು ಇಲ್ಲಿನ ಕೆಲವು ಪ್ರದೇಶಗಳಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿ ಮತದಾನ ನಡೆಯುತ್ತಿತ್ತು. ಅನುಭವಿ ಕಾಶ್ಮೀರಿ ವೀಕ್ಷಕರೊಬ್ಬರು ಹೀಗೆ ಹೇಳಿದ್ದಾರೆ: ‘ಮತಗಳೇ ಹೊಸ ಕಲ್ಲುಗಳು’. ಒಳ್ಳೆಯದು.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ದ್ವೇಷ ಎಂಬ ಬೆಂಕಿ

ಸಾಮಾಜಿಕ ಮಾಧ್ಯಮವೆಂದರೆ ದ್ವೇಷದ ಫಸಲು ಬೆಳೆಯುವ ಯಂತ್ರ. ಅದು ದ್ವೇಷದ ಮೇಲ್ವಿಚಾರಕ.

ಎಂ.ಎಚ್.ಸ್ವಾಮಿನಾಥ್, ಅರಣ್ಯಾಧಿಕಾರಿ

ಕಿಡಿನುಡಿ



ಮುನಿರತ್ನ ಬೆದರಿಕೆ ಹಾಕಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಗುತ್ತಿಗೆದಾರನು ಪ್ರಬಲ ಒಕ್ಕಲಿಗ ಸಮುದಾಯಕ್ಕೆ ಸೇರಿರುವ ಕಾರಣ ಈ ಮಟ್ಟಕ್ಕೆ ಅದು ಪ್ರಚಾರ ಪಡೆದು ಶಾಸಕರು ಅರೆಸ್ಟ್ ಆಗುವ ಹಾಗೆ ಆಯಿತು, ಒಳ್ಳೆಯದೆ. ಒಂದೊಮ್ಮೆ ಗುತ್ತಿಗೆದಾರ ಸಣ್ಣ ಸಮುದಾಯಕ್ಕೆ ಸೇರಿದ್ದರೆ ಏನು ಕಥೆ? ಈ ವ್ಯವಸ್ಥೆಯಲ್ಲಿ ಅಂತಹವರು ಬದುಕಬಹುದೆ? ಈ ಬೆಂಬಲ ಸಿಗುತ್ತಿತ್ತೇ?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 20-9-1999

• ಬಿಹಾರ: ಅಧಿಕಾರಿಗಳ ವರ್ಗಾವಣೆಗೆ ಶಿಫಾರಸು

ಪಟ್ನಾ, ಸೆ. 19 (ಪಿಟಿಐ)– ಬಿಹಾರದ ರಾಜ್ಯಪಾಲ ಬಿ.ಎಂ. ಲಾಲ್ ಅವರು ‘ಸಂಶಯಾಸ್ಪದ’ ಪೊಲೀಸ್ ಮತ್ತು ನಾಗರಿಕ ಅಧಿಕಾರಿಗಳನ್ನು ಚುನಾವಣಾ ಕರ್ತವ್ಯದಿಂದ ತೆಗೆದುಹಾಕುವಂತೆ ಇಂದು ಸಲಹೆ ಮಾಡಿದ್ದಾರೆ.

ರಾಜಭವನದಲ್ಲಿ ಸುದ್ದಿಗಾರರ ಜತೆ ಮಾತನಾಡುತ್ತಿದ್ದ ರಾಜ್ಯಪಾಲರು ತಾವು ಈ ಕುರಿತು ಕೇಂದ್ರ ಗೃಹಸಚಿವಾಲಯ ಮತ್ತು ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಬಿಹಾರದಲ್ಲಿ ನಿನ್ನೆ ನಡೆದ ಮತದಾನದ ಸಮಯದಲ್ಲಿ ವ್ಯಾಪಕ ಹಿಂಸಾಚಾರ ನಡೆದಿತ್ತಲ್ಲದೆ, ನಕ್ಸಲೀಯರು ಹಲವು ಕಡೆ ಸ್ಫೋಟಿಸಿದ ನೆಲಬಾಂಬ್‌ಗೆ ಅನೇಕ ಜನರು ಬಲಿಯಾಗಿದ್ದರು.

ರಾಜ್ಯದಲ್ಲಿ ಮುಕ್ತ ಮತ್ತು ಶಾಂತಿಯುತ ಚುನಾವಣೆ ನಡೆಸುವ ಕುರಿತು ತಮ್ಮ ಕಳಕಳಿಯನ್ನು ರಾಜ್ಯ ಮುಖ್ಯಕಾರ್ಯದರ್ಶಿ ಮತ್ತು ಮುಖ್ಯ ಚುನಾವಣಾ ಅಧಿಕಾರಿಗೆ ಕಾಲ ಕಾಲಕ್ಕೆ ತಿಳಿಸಿರುವುದಾಗಿ ರಾಜ್ಯಪಾಲರು ವಿವರಿಸಿದರು.

• ಲಾಡೆನ್ ಸವಾಲಿಗೆ ತಕ್ಕ ಉತ್ತರ: ಅಡ್ವಾಣಿ

ಭುವನೇಶ್ವರ, ಸೆ. 19 (ಪಿಟಿಐ)– ಭಾರತದ ವಿರುದ್ಧ ಒಸಾಮ ಬಿನ್ ಲಾಡೆನ್ ಸಾರಿರುವ ಧರ್ಮಯುದ್ಧ ಮತ್ತು ಧಾರ್ಮಿಕ ಭಯೋತ್ಪಾದನೆಯ ಸವಾಲನ್ನು ಯಶಸ್ವಿಯಾಗಿ ಎದುರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರು ಹೇಳಿದರು.

ಕಾರ್ಗಿಲ್‌ನಲ್ಲಿ ಪಾಕಿಸ್ತಾನದ ಅತಿಕ್ರಮಣಕಾರರನ್ನು ಮಟ್ಟಹಾಕಿದ ರೀತಿಯಲ್ಲಿಯೇ ಇವುಗಳನ್ನು ಸಹ ಮಟ್ಟ ಹಾಕಲಾಗುವುದು ಎಂದು ಅವರು ಹೇಳಿದರು.

ಭಾರತದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅಸ್ಥಿರಗೊಳಿಸುವುದು ಹಾಗೂ ದೇಶದಲ್ಲಿರುವ ಕೋಮು ಸೌಹಾರ್ದ ಸ್ಥಿತಿಯನ್ನು ಹಾಳುಗೆಡಹುವುದು ಲಾಡೆನ್ ಎಚ್ಚರಿಕೆಯ ಉದ್ದೇಶ ಎಂದು ಅವರು ಇಂದು ಇಲ್ಲಿ ಪತ್ರಕರ್ತರ ಜೊತೆ ಮಾತನಾಡುತ್ತಾ ತಿಳಿಸಿದರು.

• ಮಂಡ್ಯದ ಯೋಧ ಕಾಶ್ಮೀರದಲ್ಲಿ ಸಾವು

ಮಂಡ್ಯ, ಸೆ. 19– ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾದಲ್ಲಿ ನಿನ್ನೆ ನಡೆದ ಮೂರನೇ ಹಂತದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಸಂದರ್ಭ ನಡೆದ ಗಲಭೆಯಲ್ಲಿ ಜಿಲ್ಲೆಯ ಸುಧೀರ್ (23) ಎಂಬ ಯೋಧ ಮೃತಪಟ್ಟಿದ್ದಾರೆ.

ಐದು ವರ್ಷಗಳ ಹಿಂದೆ ಸೇನೆಗೆ ಸೇರಿದ ಸುಧೀರ್‌ರವರ ಮೃತದೇಹವನ್ನು ನಾಳೆ ಅವರ ತಂದೆಯ ಮನೆಗೆ ಕಳುಹಿಸುವುದಾಗಿ ಸೇನಾ ಮೂಲಗಳು ಖಚಿತಪಡಿಸಿವೆ.

ಸುಧೀರ್ ಅವರ ತಂದೆ ಬಿ.ಟಿ. ಕೃಷ್ಣೇಗೌಡರು ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದವರು.

ಕ್ರೀಡೆಯಲ್ಲಿ ಮನೋವಿಜ್ಞಾನದ ಮಹತ್ವ ಸಾರಿದ ಜಾವೆಲಿನ್ ತಾರೆ

ಯಶಸ್ಸಿನಲ್ಲೂ ಸಮಚಿತ್ತ: ನೀರಜ್ ಮಾದರಿ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

‘ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಾಗ ನನ್ನ ಬಗ್ಗೆ ಮೆಚ್ಚುಗೆಯ ಮಹಾಪೂರ ಹರಿಯಿತು. ಇನ್ನೊಂದೆಡೆ, ಈ ಹುಡುಗನ ಜೀವನವೇ ಬದಲಾಯಿತು. ಸಾಧಿಸಲು ಇನ್ನೇನು ಉಳಿದಿದೆ. ಜೀವನದಲ್ಲಿ ಸೆಟಲ್ ಆಗಿಬಿಟ್ಟ ಎಂದವರೂ ಬಹಳಷ್ಟು ಮಂದಿ. ಆದರೆ ಆ ಮಾತುಗಳಿಂದಾಗಿ ನಾನು ಉಬ್ಬಿಹೋಗಲಿಲ್ಲ ಮತ್ತು ಅಷ್ಟಕ್ಕೇ ತೃಪ್ತಿ ಹೊಂದಲಿಲ್ಲ. ಪ್ರತಿಯೊಂದು ಗೆಲುವು ಮತ್ತು ಪದಕ ಇನ್ನೊಂದು ಸಾಧನೆಗೆ ಮೆಟ್ಟಿಲಾಗಬೇಕು. ನನ್ನಲ್ಲಿ ಸಾಮರ್ಥ್ಯ ಇರುವವರೆಗೂ ಗೆಲ್ಲುತ್ತಲೇ ಇರಬೇಕು ಎಂದುಕೊಂಡೆ. ಅದೇ ದಾರಿಯಲ್ಲಿ ನಡೆಯುತ್ತಿರುವೆ. ಎಲ್ಲದಕ್ಕೂ ನಮ್ಮ ಮನಃಸ್ಥಿತಿಯೇ ಮುಖ್ಯ ಕಾರಣ. ಮನಸ್ಸಿದ್ದರೆ ಮಾರ್ಗ...’

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಪಾಡ್‌ಕಾಸ್ಟ್‌ನಲ್ಲಿ ಈಚೆಗೆ ಒಲಿಂಪಿಯನ್ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಹೇಳಿದ ಮಾತುಗಳಿವು. ಅವರ ಮಾತಿನಲ್ಲಿ ಯಶಸ್ಸನ್ನು ವಿನಯದಿಂದ ಸ್ವೀಕರಿಸುವ ಮತ್ತು ಅದನ್ನೇ ಮತ್ತಷ್ಟು ಉನ್ನತಿಗೆ ಏಣಿಯನ್ನಾಗಿಸುವ ಪಾಠ ಅಡಗಿದೆ. ಯಾವುದೇ ಕ್ಷೇತ್ರದಲ್ಲಿ ವೈಫಲ್ಯ ನಿಭಾಯಿಸಲು ಹತ್ತಾರು ಸಲಹೆಗಳು ಸಿಗುತ್ತವೆ. ಆದರೆ ಒಬ್ಬ ಯಶಸ್ವಿ ವ್ಯಕ್ತಿಯು ಮೈಮರೆತು ದಾರಿ ತಪ್ಪುವಾಗ ಬುದ್ಧಿ ಹೇಳಿ ಸರಿದಾರಿಗೆ ತರುವವರು ಕಡಿಮೆ. ಕ್ರೀಡಾ ಕ್ಷೇತ್ರದಲ್ಲಿಯೇ ಉನ್ನತ ಯಶಸ್ಸು ಸಾಧಿಸಿದ ನಂತರ ಕೆಟ್ಟ ಹಾದಿ ಹಿಡಿದು ಪ್ರಪಾತಕ್ಕೆ ಉರುಳಿದವರ ಉದಾಹರಣೆಗಳು ಬಹಳಷ್ಟಿವೆ. ನಾಲ್ಕು ವರ್ಷಗಳಿಂದ ಸತತವಾಗಿ ಪದಕಗಳನ್ನು ಗೆದ್ದರೂ ಇನ್ನೂ ಹೆಚ್ಚಿನದನ್ನು ಸಾಧಿಸುವ ಛಲ ಮತ್ತು ಹುಮ್ಮಸ್ಸು ಕಾಪಾಡಿಕೊಂಡಿದ್ದಾರೆ ನೀರಜ್. ಅವರ ಸಾಧನೆಗೆ ಮನೋವಿಜ್ಞಾನ ಸಹ ಬಲ ತುಂಬಿದೆ. ನೀರಜ್ ಅವರಿಗೆ ತರಬೇತಿ ನೀಡುತ್ತಿದ್ದ ವಿದೇಶಿ ಕೋಚ್ ಕ್ಲಾಸ್ ಬಾರ್ಟೋನೀಟ್ಜ್ ಅವರು ದೇಹಕ್ಕಿಂತಲೂ ಮನೋದಾರ್ಢ್ಯ ಬೆಳವಣಿಗೆಗೆ ಹೆಚ್ಚು ಒತ್ತು ಕೊಟ್ಟಿದ್ದು ಫಲ ನೀಡಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ನಂತರ ಅವರ ಬದುಕು ಬದಲಾಯಿತು. ಹಣ, ಕೀರ್ತಿ ಒಲಿಯಿತು. ಸವಲತ್ತುಗಳು ಹರಿದುಬಂದವು. ನೋಡಲು ಸ್ಫುರದ್ರೂಪಿಯೂ ಆಗಿರುವ ನೀರಜ್ ಅವರಿಗೆ ಹುಡುಗಿಯರೂ ಮನಸೋತರು. ‘ಮದುವೆ ಆಗ್ತೀರಾ?’ ‘ಪ್ರೀತಿಸುತ್ತೀರಾ?’ ಎಂಬ ಪ್ರಸ್ತಾವಗಳನ್ನು ಮುಂದಿಟ್ಟರು. ಇಂತಹ ಪ್ರಸ್ತಾವಗಳನ್ನು ನಯವಾಗಿ ತಿರಸ್ಕರಿಸಿದ ನೀರಜ್, ಈ ನಾಲ್ಕು ವರ್ಷಗಳಲ್ಲಿ ಮಾಡಿದ ಸಾಧನೆಗಳನ್ನು ಒಟ್ಟಾಗಿ ನೋಡಿದರೆ ಅಬ್ಬಾ ಎನಿಸದೇ ಇರದು. ಏಷ್ಯಾದ ಯಾವುದೇ ಅಥ್ಲೀಟ್ ಅಥವಾ ಕ್ರೀಡಾ ತಂಡ ಮಾಡದಿರುವುದನ್ನು ನೀರಜ್ ಸಾಧಿಸಿದ್ದಾರೆ. ಸ್ಥಿರತೆ, ಮನೋದಾರ್ಢ್ಯ ಮತ್ತು ಸರಳತೆಯ ರಾಯಭಾರಿ ಆಗಿದ್ದಾರೆ.

ಹಿಂದಿನ ನಾಲ್ಕು ವರ್ಷಗಳಲ್ಲಿ ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಗೇಮ್ಸ್, ಡೈಮಂಡ್ ಲೀಗ್ ಹಾಗೂ ಪಾವೊ ನುರ್ಮಿ ಗೇಮ್ಸ್ ಸೇರಿದಂತೆ ಐದು ಚಿನ್ನ ಮತ್ತು ನಾಲ್ಕು ಬೆಳ್ಳಿಪದಕಗಳನ್ನು ಕೊರಳಿಗೇರಿಸಿಕೊಂಡಿದ್ದಾರೆ. ಇತ್ತೀಚೆಗೆ ಬ್ರಸೆಲ್ಸ್ ಡೈಮಂಡ್ ಲೀಗ್ ಫೈನಲ್‌ನಲ್ಲಿ ಕೇವಲ ಒಂದು ಸೆಂಟಿಮೀಟರ್ ಅಂತರದಿಂದ ಅವರಿಗೆ ಚಿನ್ನ ಕೈತಪ್ಪಿತು. ಎಡಗೈ ಮೂಳೆಮುರಿತ ಮತ್ತು ತೊಡೆ ಸ್ನಾಯುವಿನ ಗಾಯದ ನೋವನ್ನು ಅವಡುಗಚ್ಚಿ ತಡೆದುಕೊಂಡೇ ಈ ಸಾಧನೆ ಮಾಡಿದ್ದಾರೆ. ಕಳೆದ ಇಡೀ ವರ್ಷ ಅವರು ಇಂತಹ ಗಾಯದ ನೋವು ಅನುಭವಿಸುತ್ತಲೇ 140 ಕೋಟಿ ಜನಸಂಖ್ಯೆಯಿರುವ ಭಾರತದ ನಿರೀಕ್ಷೆಯ ಭಾರವನ್ನು ಹೊತ್ತು ಕಣಕ್ಕಿಳಿದಿದ್ದಾರೆ.

ಕ್ರಿಕೆಟ್ ಆಟವನ್ನೇ ಉಸಿರಾಡುವ ದೇಶದಲ್ಲಿ ಜಾವೆಲಿನ್ ಥ್ರೋ ಎಂಬ ಸ್ಪರ್ಧೆಗೆ ತಾರಾಮೆರುಗು ತರುವುದೆಂದರೆ ಸುಲಭವೇನಲ್ಲ. ಈ ಹಿಂದೆ ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್, ‘ಫ್ಲೈಯಿಂಗ್ ಸಿಖ್’ ಖ್ಯಾತಿಯ ಮಿಲ್ಖಾ ಸಿಂಗ್, ‘ಚಿನ್ನದ ಜಿಂಕೆ’ ಪಿ.ಟಿ. ಉಷಾ ಮತ್ತು ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ ಅವರು ತಾವು ಆಡಿದ ಕ್ರೀಡೆಗಳು ಜನಜನಿತವಾಗುವಂತೆ ಮಾಡಿದವರು. ಅದೇ ರೀತಿ ನೀರಜ್ ಕೂಡ ಜಾವೆಲಿನ್ ಥ್ರೋಗೆ ಅಂತಹ ಸ್ಥಾನಮಾನ ಗಳಿಸಿಕೊಟ್ಟಿದ್ದಾರೆ. ಭಾರತೀಯ ಅಥ್ಲೀಟ್‌ಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸೋತಾಗಲೆಲ್ಲ ‘ನಮ್ಮ ದೈಹಿಕ ರಚನೆಯು ಯುರೋಪ್ ಅಥವಾ ಆಫ್ರಿಕಾದವರಂತೆ ಬಲಾಢ್ಯವಲ್ಲ. ಅಥ್ಲೆಟಿಕ್ಸ್, ಬಾಕ್ಸಿಂಗ್ ಮತ್ತಿತರ ಕ್ರೀಡೆಗಳು ನಮಗಲ್ಲ’ ಎಂಬ ಮಾತುಗಳು ಕೇಳಿಬರುತ್ತವೆ. ಇದನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗದು. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದ ಈ ಕಾಲಘಟ್ಟದಲ್ಲಿ ಎಲ್ಲವೂ ಸಾಧ್ಯ ಎಂಬುದಕ್ಕೆ ನೀರಜ್ ಸಾಧನೆ ಉದಾಹರಣೆಯಾಗುತ್ತದೆ.

ಇವತ್ತು ಭಾರತದ ಕ್ರೀಡಾಕ್ಷೇತ್ರದಲ್ಲಿ ದೈಹಿಕ ತರಬೇತಿಯ ಜೊತೆಗೆ ಮನೋಬಲ ಹೆಚ್ಚಿಸುವುದಕ್ಕೂ ಒತ್ತು ನೀಡುವ ಅಗತ್ಯವಿದೆ. ಈಚೆಗೆ ಪ್ಯಾರಿಸ್ ಒಲಿಂಪಿಕ್ಸ್ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಅವರು ಕಂಚಿನ ಪದಕ ಸುತ್ತಿನಲ್ಲಿ ಸೋತಾಗ ಕೋಚ್ ಪ್ರಕಾಶ್ ಪಡುಕೋಣೆ ಅವರು ಇದೇ ಮಾತು ಹೇಳಿದ್ದರು. ಕ್ರೀಡೆಯಲ್ಲಿ ಮನೋವಿಜ್ಞಾನದ ಬಳಕೆ ಹೆಚ್ಚಬೇಕು ಎಂಬುದು ಅವರ ಇಂಗಿತವಾಗಿತ್ತು. ಇತ್ತೀಚೆಗೆ ನಡೆದ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಅಥ್ಲೀಟ್‌ಗಳು 29 ಪದಕಗಳನ್ನು ಗೆದ್ದು ಇತಿಹಾಸ ಬರೆದರು. ತಮ್ಮ ಸಾಧನೆಯ ಹಿಂದೆ ಮನೋವಿಜ್ಞಾನದ ಪಾತ್ರ ಇತ್ತು ಎಂದು ಸಾಧಕರು ಹೇಳಿಕೊಂಡಿದ್ದಾರೆ.



‘ಹದಿಹರೆಯದವರಲ್ಲಿ ಹಾರ್ಮೋನುಗಳ ಬದಲಾವಣೆಯಾಗುವುದು ಸಹಜ ಪ್ರಕ್ರಿಯೆ. ಇದು ಭಾವನಾತ್ಮಕವಾದ ಕಾಲಘಟ್ಟ. ಇದೇ ಹಂತದಲ್ಲಿ ಲಭಿಸುವ ಉನ್ನತ ಯಶಸ್ಸನ್ನು ನಿಭಾಯಿಸುವುದು ಬಹಳ ಸೂಕ್ಷ್ಮವಾದ ಕಾರ್ಯ. ಸಾಧನೆಯೆಂದರೆ ಇದಷ್ಟೇ ಅಲ್ಲ, ಇನ್ನೂ ಬಹಳಷ್ಟಿದೆ, ಅದಕ್ಕಾಗಿ ಮುನ್ನಡೆಯಬೇಕು ಎಂಬ ಭಾವನೆಯನ್ನು ಕ್ರೀಡಾಪಟುಗಳಲ್ಲಿ ಮೂಡಿಸಬೇಕು. ಆಗ ಅವರು ಸರಿದಾರಿಯಲ್ಲಿ ಮುನ್ನಡೆಯುತ್ತಾರೆ’ ಎಂದು 11 ದೇಶಗಳ ಒಲಿಂಪಿಯನ್ ಅಥ್ಲೀಟ್‌ಗಳಿಗೆ ಮಾರ್ಗದರ್ಶನ ನೀಡುವ ಮೈಸೂರಿನ ಕ್ರೀಡಾ ಮನಃಶಾಸ್ತ್ರಜ್ಞೆ ಸಂಜನಾ ಕಿರಣ್ ಹೇಳುತ್ತಾರೆ.

ಉನ್ನತ ಸಾಧನೆಯ ನಂತರವಷ್ಟೇ ಅಲ್ಲ, ಪ್ರಾಥಮಿಕ ಮಟ್ಟದಿಂದಲೂ ಕ್ರೀಡಾಪಟುಗಳಿಗೆ ಮನೋವಿಜ್ಞಾನದ ನೆರವು ನೀಡುವಂತಾಗಬೇಕು ಎಂಬ ಮಾತುಗಳೂ ಕೇಳಿಬರುತ್ತಿವೆ. ವಿದೇಶಗಳಲ್ಲಿರುವ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಈ ಪದ್ಧತಿ ರೂಢಿಯಲ್ಲಿದೆ. ಏಕೆಂದರೆ ಭಾರತದಲ್ಲಿ ಬಹುತೇಕ ಕ್ರೀಡಾಪ್ರತಿಭೆಗಳು ಸಿಗುವುದು ಗ್ರಾಮಾಂತರ ಪ್ರದೇಶಗಳಲ್ಲಿ. ಮಹಾನಗರಗಳ ನಡವಳಿಕೆಗೆ ಹೊಂದಿಕೊಳ್ಳುವುದು ತ್ರಾಸದಾಯಕ ಎಂಬ ಭಾವನೆ ಮತ್ತು ಕೀಳರಿಮೆಯಿಂದಾಗಿಯೇ ಬಹಳಷ್ಟು ಪ್ರತಿಭಾವಂತರು ತೆರೆಮರೆಯಲ್ಲಿ ಉಳಿದುಬಿಡುತ್ತಾರೆ. ಅವರಿಗೆ ಸೂಕ್ತ ಸಂದರ್ಭದಲ್ಲಿ ಮಾರ್ಗದರ್ಶನ ದೊರೆತರೆ ಉತ್ತಮ ಫಲಿತಾಂಶ ಸಿಗಬಹುದು. ನೀರಜ್ ಕೂಡ ಹರಿಯಾಣದ ಪುಟ್ಟ ಹಳ್ಳಿಯೊಂದರಿಂದಲೇ ಬಂದವರು. ಆದರೆ ಅಪ್ಪ ಮತ್ತು ಅಮ್ಮ ನೀಡಿದ ಮಾರ್ಗದರ್ಶನ ಅವರ ಜೀವನದ ದಿಕ್ಕು ಬದಲಿಸಿತು. ಯಶಸ್ವಿ ಕ್ರೀಡಾಪಟುವಾಗುವುದರ ಜೊತೆಗೆ ಉತ್ತಮ ವ್ಯಕ್ತಿತ್ವವೂ ಅವರದ್ದಾಗಿದೆ. ತಮ್ಮ ಪ್ರತಿಸ್ಪರ್ಧಿ ಪಾಕಿಸ್ತಾನದ ಅರ್ಷದ್ ನದೀಂ ಅವರೊಂದಿಗೆ ನೀರಜ್ ತೋರಿದ ಸಹೋದರತ್ವದ ನಡವಳಿಕೆ ಕ್ರೀಡಾಸ್ಫೂರ್ತಿಗೆ ಉತ್ತಮ ನಿದರ್ಶನ.

ಕೆಲವು ಹಿರಿಯ ಕ್ರೀಡಾಪಟುಗಳು ಒತ್ತಡ ಅಥವಾ ಮೆಂಟಲ್ ಕೋಚಿಂಗ್ ಬಗ್ಗೆ ವ್ಯಂಗ್ಯವಾಗಿ ಮಾತನಾಡುತ್ತಾರೆ. ಆದರೆ ಇವತ್ತಿನ ಕಾಲಘಟ್ಟದಲ್ಲಿ ಕ್ರೀಡೆ ಬರೀ ದೈಹಿಕ ಚಟುವಟಿಕೆಯಾಗಿ ಉಳಿದಿಲ್ಲ. ವಾಣಿಜ್ಯಕ ಅಂಶಗಳೂ ಒಳಗೊಂಡಿರುವುದರಿಂದ ಸ್ಪರ್ಧೆಯ ಮಟ್ಟ ಹೆಚ್ಚಾಗಿದೆ. ಪೈಪೋಟಿಯ ಒತ್ತಡ ತಡೆದುಕೊಳ್ಳುವುದು ಸುಲಭವಲ್ಲ. ಈ ನಡುವೆ ಕೆಲವು ಯಶಸ್ವಿ ಕ್ರೀಡಾಪಟುಗಳೂ ಆತ್ಮಹತ್ಯೆ ಮತ್ತು ಅಪರಾಧ ಚಟುವಟಿಕೆಗಳಿಗೆ ಬಲಿಯಾಗಿರುವ ಉದಾಹರಣೆಗಳೂ ಇವೆ. ಆದ್ದರಿಂದ ಮನೋವಿಜ್ಞಾನದ ನೆರವು ಅತ್ಯಗತ್ಯ ಎಂಬುದು ನಿಸ್ಸಂಶಯ. ಇಂದಿನ ಮಕ್ಕಳಲ್ಲಿ ಆಟದ ಕುರಿತ ಜ್ಞಾನ ಮತ್ತು ತರಬೇತಿಯ ಕುರಿತ ಅರಿವು ಸಾಕಷ್ಟಿದೆ. ಆದರೆ ಪ್ರಮುಖ ಹಂತಗಳಲ್ಲಿ ಆತ್ಮವಿಶ್ವಾಸದ ಕೊರತೆ ಎದುರಿಸುತ್ತಾರೆ. ಕ್ರೀಡಾಪಟುವಿನಲ್ಲಿ ಸ್ವಸಾಮರ್ಥ್ಯದ ಅರಿವು ಮೂಡಿಸಬೇಕು. ಭಾವನಾತ್ಮಕವಾದ ಬೆಂಬಲ ನೀಡುವುದು ಮುಖ್ಯವಾಗುತ್ತದೆ. ಉತ್ತಮ ಸಾಮರ್ಥ್ಯ ಅಥವಾ ಕೊರತೆ ಯಾವುದೇ ಇರಲಿ ಅದನ್ನು ಸ್ವಯಂಪ್ರೇರಿತವಾಗಿ ಒಪ್ಪಿಕೊಳ್ಳುವ ಮನೋಭಾವ ಬೆಳೆಸಬೇಕು. ಯಶಸ್ಸನ್ನು ಗಳಿಸುವುದು ಎಷ್ಟು ಕಷ್ಟವೋ ಅದನ್ನು ಕಾಪಿಟ್ಟುಕೊಳ್ಳುವುದು ಅದಕ್ಕಿಂತಲೂ ಹೆಚ್ಚು ಕಷ್ಟ. ಈ ಸವಾಲನ್ನು ಮೀರಿ ನಿಂತಿರುವ ನೀರಜ್ ಪ್ರೇರಣೆಯಾಗುತ್ತಾರಲ್ಲವೇ?

ಚುರುಮುರಿ



ಕತ್ತೆಗೊಂದು ಕಾಲ!

• ಬಿ.ಎನ್. ಮಲ್ಲೇಶ್

‘ನಾನು ಈ ದರಿದ್ರ ರಾಜಕೀಯ ಬಿಟ್ಟು ನಾಲ್ಕು ಕತ್ತೆ ಸಾಕೋಣ ಅಂತಿದೀನಿ’ ಎಂದ ದುಬ್ಬೀರ.

‘ಕತ್ತೇನಾ? ಯಾಕೆ?’ ಗುಡ್ಡೆ ನಕ್ಕ.

‘ಈಗ ಕತ್ತೆಗೂ ಒಂದು ಕಾಲ ಬಂದಿದೆ ಅದಕ್ಕೆ’.

‘ಕತ್ತೆಗೂ ಒಂದು ಕಾಲನಾ? ಹೆಂಗೆ?’

‘ಪೇಪರ್ ನೋಡಿಲ್ವಾ? ಹೊಸಪೇಟೇಲಿ ಸಾಫ್ಟ್‌ವೇರ್ ಕಂಪನಿ ತರ ಕತ್ತೆ ಹಾಲಿನ ಮಿಲ್ಕ್‌ವೇರ್ ಕಂಪನಿ ಶುರು ಮಾಡಿದಾರಂತೆ. ಕತ್ತೆ ಸಾಕಿ, ಹಾಲು ಮಾರಿ ಕೋಟಿಗಟ್ಲೆ ದುಡ್ಡು ಮಾಡ್ತದಾರಂತೆ’.

‘ಹೌದು, ಒಂದು ಲೀಟರ್ ಕತ್ತೆ ಹಾಲಿಗೆ ಎರಡು ಸಾವಿರ ರೂಪಾಯಂತೆ. ಅದ್ರಲ್ಲಿ ಭಾರೀ ಔಷಧ ಗುಣ ಅದಾವಂತೆ. ಕತ್ತೆ ಹಾಲು ಸೌಂದರ್ಯವರ್ಧಕ ಅಂತೆ’ ಮಂಜಮ್ಮ ವರದಿ ಒಪ್ಪಿಸಿದಳು.

‘ಹಂಗಾದ್ರೆ ಈ ಪೌಡ್ರು, ಕ್ರೀಮು, ಸೋಪ್ ಕಂಪನಿ ಎಲ್ಲ ಢಮಾರ್ ಅನ್ನು. ಮುಖಕ್ಕೆ ಕತ್ತೆ ಹಾಲು ಹಚ್ಕಂಡ್ರೆ ಮುಗೀತು’ ಗುಡ್ಡೆ ಮಂಜಮ್ಮನ್ನ ನೋಡಿ ನಕ್ಕ.

‘ಈಗ ದುಬ್ಬೀರ ಹೇಳಿದಂಗೆ ನಾವೂ ನಾಲ್ಕು ಕತ್ತೆ ಸಾಕಿ ಹಾಲು ಮಾರಿದ್ರೆ ಹೆಂಗೆ?’ ಕೊಟ್ರೇಶಿ ಕೇಳಿದ.

‘ಕರೆಕ್ಟ್, ಈ ದರಿದ್ರ ರಾಜಕೀಯಕ್ಕಿಂತ ಕತ್ತೆ ಸಾಕೋದು ವಾಸಿ. ಕತ್ತೆಗಳು ರಾಜಕಾರಣಿಗಳ ತರ ಕುರ್ಚಿ ಕೇಳಲ್ಲ, ಕೆಟ್ಟದಾಗಿ ಮಾತಾಡಲ್ಲ, ದುಡ್ಡು ತಿನ್ನಲ್ಲ, ಭಾರ ಹೊರ್ತಾವೆ, ಬೈದ್ರು ಬೈಸ್ಕಂತಾವೆ’.

‘ಅಷ್ಟೇ ಅಲ್ಲ, ಎಷ್ಟು ಹುಲ್ಲು ಹಾಕ್ತೀವೋ ಅಷ್ಟು ಹಾಲು ಕೊಡ್ತಾವೆ. ರಾಜಕಾರಣಿಗಳ ತರ ಆಶ್ವಾಸನೆ ಕೊಡಲ್ಲ’ ತೆಪರೇಸಿ ನಕ್ಕ.

‘ಇನ್ಮೇಲೆ ಯಾರನ್ನೂ ‘ಕತ್ತೆ’ ಅಂತ ಬೈಯಂಗಿಲ್ಲ, ‘ಕತ್ತೆ ಕಾಯಾಕೆ ಹೋಗು’ ಅನ್ನಂಗಿಲ್ಲ’.

‘ಅಲ್ಲ, ಎಲ್ಲ ಸರಿ, ನಂಗೊಂದು ಡೌಟು’ ಕೊಟ್ರೇಶಿ ಕೊಕ್ಕೆ.

‘ಏನು?’

‘ಕತ್ತೆ ಹಾಲು ಕುಡಿದೋರು ರಾಜಕಾರಣಿಗಳ ತರ ಜಾಡ್ಸಿ ಒದೆಯಲ್ಲ ತಾನೆ?’

ಕೊಟ್ರೇಶಿ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಕಾಯುವಿಕೆಯ ಕಾಯಿಲೆಗೆ ಮದ್ದಿದೆ

ಕಾಲ ಬದಲಾದಂತೆ ಅದರೊಂದಿಗೆ ಒಡಲಾಗದ ಉದ್ಯೋಗಿಗಳಿಂದ ಕೆಲಸವು ದಕ್ಷತೆಯನ್ನು ಮತ್ತು ವೇಗವನ್ನು ಕಳೆದುಕೊಂಡಿದೆ

• ಸದಾಶಿವ್ ಸೊರಟೂರು

ತಾಲ್ಲೂಕು ಕೇಂದ್ರವೊಂದರ ಬಸ್ ನಿಲ್ದಾಣದ ಟಿಕೆಟ್ ಕೌಂಟರ್ ಬಳಿ ತಿಂಗಳ ಪಾಸ್ ಮಾಡಿಸಲು ನಿಂತಿದ್ದೆ. ಹೆಸರು, ವಯಸ್ಸು, ಎಲ್ಲಿಂದ ಎಲ್ಲಿಗೆ, ದಿನಾಂಕ ಎಲ್ಲವನ್ನೂ ನಮೂದಿಸಿ ಸಹಿ ಮಾಡಿಕೊಡಲು ಎಷ್ಟು ಸಮಯ ಬೇಕಾಗಬಹುದು? ಅವರು ಬರೋಬ್ಬರಿ 20 ನಿಮಿಷಕ್ಕೂ ಹೆಚ್ಚು ಸಮಯ ತೆಗೆದುಕೊಂಡರು. ಹಳೆಯ ಪಾಸ್ ನೋಡಿ ಒಂದೊಂದೇ ಅಕ್ಷರ ಬರೆಯುತ್ತಿದ್ದರು. ಮಧ್ಯೆ ಒಂದೆರಡು ಫೋನ್ ಕರೆ ಬೇರೆ. ನನ್ನ ಹಿಂದೆ ರೈಲಿನಂತೆ ಉದ್ದದ ಸರತಿ ಇತ್ತು. ಅವರಿಗೆಲ್ಲಾ ಯಾವಾಗ ಪಾಸ್ ಸಿಕ್ಕಿತೊ, ಅವರೆಲ್ಲಾ ಯಾವಾಗ ತಮ್ಮ ಕೆಲಸಕ್ಕೆ ಮರಳಿದರೊ!

ದೊಡ್ಡ ಖಾಸಗಿ ಆಸ್ಪತ್ರೆಯೊಂದರ ಕೌಂಟರಿನಲ್ಲಿ ಮೊನ್ನೆ ಇಂಥದ್ದೇ ಅನುಭವ ಆಯಿತು. ಕೊಂಡ ಔಷಧಿಗಳ ವಿವರವನ್ನು ರಸೀದಿಯಲ್ಲಿ ನಮೂದು ಮಾಡಲು ಅಲ್ಲಿ ಕೂತವರು ಕಂಪ್ಯೂಟರ್ ಕೀ ಬೋರ್ಡಿನ ಅಕ್ಷರದ ಗುಂಡಿಗಳನ್ನು ಒಂದೊಂದೇ ಹುಡುಕಿ ಒತ್ತುತ್ತಿದ್ದರು. ಅದರ ಮಧ್ಯೆ ಅಕ್ಕಪಕ್ಕದವರ ಜೊತೆ ಮಾತುಕತೆ. ಕೌಂಟರ್ ಮುಂದೆ ಉದ್ದದ ಸಾಲು. ಕಾಯದೆ ಬೇರೆ ದಾರಿಯಿರಲಿಲ್ಲ. ಅರ್ಧಗಂಟೆ ಮುಲಾಜಿಲ್ಲದೆ ಖರ್ಚಾಯಿತು.

ಒಂದು ಅಂದಾಜಿನ ಪ್ರಕಾರ, ಭಾರತೀಯರ ಒಟ್ಟು ಜೀವಮಾನದ ‘ಎರಡು ವರ್ಷಗಳು’ ತಮ್ಮ ತಪ್ಪಿಲ್ಲದಿದ್ದರೂ ಬರೀ ಅಲ್ಲಲ್ಲಿ ಕಾಯುವಿಕೆಗಾಗಿಯೇ ಖರ್ಚಾಗುತ್ತವಂತೆ. ಅದೆಷ್ಟು ಕೋಟಿ ಜನರಿದ್ದೇವೆ. ವ್ಯರ್ಥವಾಗಿ ಹೋಗುತ್ತಿರುವ ಸಮಯವೆಷ್ಟು?! ಡಾಕ್ಟರ್ ಬಳಿ ಐದು ನಿಮಿಷ ಮಾತನಾಡಲು ಇಡೀ ದಿನ ಖರ್ಚಾಗುತ್ತದೆ. ಹನ್ನೊಂದಕ್ಕೆ ಬರುವ ಬಸ್ ಹನ್ನೆರಡಕ್ಕೆ ಬರುತ್ತದೆ. ಬ್ಯಾಂಕಿನ ಕೆಲಸ ಒಂದು ದಿನದ ರಜೆ ಬೇಡುತ್ತದೆ. ಸಭೆಗಳು ಸರಿಯಾದ ಸಮಯಕ್ಕೆ ಶುರುವಾದ ಇತಿಹಾಸ ನಮ್ಮಲ್ಲಿಲ್ಲ. ಕಡತಗಳು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಹೋಗುವಷ್ಟರಲ್ಲಿ ನಮ್ಮ ಎರಡ್ಮೂರು ತಲೆಗೂದಲು ಬೆಳ್ಳಗಾಗಿರುತ್ತವೆ.

ಸರಿಯಾದ ಜಾಗದಲ್ಲಿ ಸರಿಯಾದ ದಕ್ಷತೆ ಇಲ್ಲದವರಿಂದ ಹೀಗಾಗುತ್ತದೆಯೇ? ಕೆಲಸ ಸಿಕ್ಕ ಮೇಲೆ ತಮ್ಮ ವೃತ್ತಿದಕ್ಷತೆ ಹೆಚ್ಚಿಸಿಕೊಳ್ಳದ ಮತ್ತು ಕಾಲ ಬೇಡುವ ಹೊಸ ಬೆಳವಣಿಗೆ, ಕೌಶಲ ರೂಢಿಸಿಕೊಳ್ಳುವಲ್ಲಿನ ವೈಫಲ್ಯವೇ? ಆಯಕಟ್ಟಿನ ಜಾಗದಲ್ಲಿ ಇರುವವರದು ‘ಆದಾಗ ಆಯಿತು ಬಿಡು’ ಅನ್ನುವ ವಿಚಿತ್ರ ಧೋರಣೆಯೇ? ಬಹುಶಃ ಇವೆಲ್ಲವೂ ಸೇರಿ ಜನಸಾಮಾನ್ಯರ ಬಂಗಾರದಂತಹ ಸಮಯವನ್ನು ಕಬಳಿಸಿ ಹಾಕುತ್ತವೆ.

ಕೆಲವು ಕಳಪೆ ಮೂಲಸೌಕರ್ಯಗಳು, ನಿಧಾನಗತಿಯ ಆಡಳಿತ ವ್ಯವಸ್ಥೆ ಮತ್ತು ಜನ ಬಾಹುಳ್ಯದಿಂದಾಗಿ ನಾವು ಇತರ ದೇಶಗಳ ಜನರ ಸರಾಸರಿಗಿಂತ ಹೆಚ್ಚು ಸಮಯವನ್ನು ಕಾಯುವಿಕೆಗೇ ಖರ್ಚು ಮಾಡುತ್ತಿದ್ದೇವೆ. ಟಿಕೆಟ್ ಕೌಂಟರ್ ಮುಂದೆ ಹತ್ತು ಜನರಿದ್ದರೆ ಟಿಕೆಟ್ ಕೊಡುವವನ ಅದಕ್ಷತೆಯಿಂದ ಹತ್ತೂ ಜನರ ಕೆಲಸ ಹಾಳಾಗುತ್ತದೆ. ಬಸ್ಸು ಒಂದು ಗಂಟೆ ತಡವಾಗಿ ಬಂದರೆ ಹತ್ತಾರು ಜನರ ಕೆಲಸಗಳು ಆಗದೇ ಹೋಗಬಹುದು. ವೈದ್ಯರ ವಿಳಂಬದಿಂದ ರೋಗಿ ಮತ್ತು ಆತನ ಕಡೆಯವರು ಅದೆಷ್ಟು ಆತಂಕಕ್ಕೆ ಈಡಾಗಬಹುದು. ಕಡತ ವಿಳಂಬದಿಂದ ಎಷ್ಟು ಹೊಟ್ಟೆಗಳು ಅನ್ನವಿಲ್ಲದೆ ಮಲಗಬಹುದು... ಯೋಚಿಸಬೇಕಿದೆ.

ಸಮಯ ಎನ್ನುವುದು ಹಣಕ್ಕಿಂತಲೂ ದೊಡ್ಡ ಬಂಡವಾಳ. ನಮ್ಮ ಜನರ ಸಮರ್ಪಕವಲ್ಲದ ತಲಾ ಆದಾಯಕ್ಕೆ ಸಮಯದ ಈ ದುಂದುವೆಚ್ಚವೂ ಕಾರಣ. ಒಬ್ಬ ಕೂಲಿಗಾರ ಒಂದು ಸಣ್ಣ ಕೆಲಸಕ್ಕಾಗಿ ಬ್ಯಾಂಕಿನಲ್ಲಿ ದಿನಪೂರ್ತಿ ಕಳೆಯುತ್ತಾನೆ. ಎಷ್ಟೋ ಬಾರಿ ಕೌಶಲ ಇಲ್ಲದವರಿಗೆ ಕೆಲಸ ಸಿಕ್ಕಿರುತ್ತದೆ. ಕೌಶಲ ಇರುವವರಿಗೆ ಕೆಲಸ ಸಿಕ್ಕಿರುವುದಿಲ್ಲ. ಎರಡು ನಿಮಿಷಕ್ಕೆ ಒಂದು ಪಾಸ್ ಬರೆದುಕೊಡುವವನನ್ನು ಹೊರಗಿಟ್ಟು ಅದಕ್ಕೆ ಇಪ್ಪತ್ತು ನಿಮಿಷ ತೆಗೆದುಕೊಳ್ಳುವವನನ್ನು ನೆಚ್ಚಿಕೊಳ್ಳುತ್ತಿದ್ದೇವೆ.

ಸಮಯದ ವಿಷಯವಾಗಿ ನಾವೆಷ್ಟು ನಿಷ್ಠುರವಾಗಿ ಇರಬೇಕೆಂಬುದಕ್ಕೆ ಈ ಉದಾಹರಣೆಯನ್ನು ಕೊಡಬಹುದು. ಒಮ್ಮೆ ಲೇಖಕ ಖುಷ್‌ವಂತ್ ಸಿಂಗ್ ಅವರು ಆಗಿನ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ತಮ್ಮ ನಿವಾಸಕ್ಕೆ ಊಟಕ್ಕೆ ಆಹ್ವಾನಿಸಿದ್ದರಂತೆ. ಪ್ರಧಾನಿ ರಾತ್ರಿ 8 ಗಂಟೆಗೆ ಬರುವುದಾಗಿ ಒಪ್ಪಿಕೊಂಡಿದ್ದರು. ಆದರೆ ನಿಗದಿತ ಸಮಯಕ್ಕೆ ಬರಲಾಗದೆ, 9 ಗಂಟೆಗೆ ಬರುವುದಾಗಿ ಸಂದೇಶ ಕಳುಹಿಸಿದರು. ‘ಈಗಾಗಲೇ ಸಮಯ ಮೀರಿದೆ, ನಾನು ಮಲಗಿದ್ದೇನೆ’ ಎಂದು ಸಿಂಗ್ ಮರುಸಂದೇಶ ಕಳುಹಿಸಿದ್ದರಂತೆ.

ಸಾರ್ವಜನಿಕ ವಲಯದ ಕೆಲಸದಲ್ಲಿ ಇರುವವರು ಬಹಳಷ್ಟು ದಕ್ಷತೆ ಮತ್ತು ನೈಪುಣ್ಯ ಹೊಂದಿದವರಾಗಿರಬೇಕು. ಕಾಲ ಕಳೆದಂತೆ ಅವರ ಕೌಶಲದ ಪರೀಕ್ಷೆಗಳಾಗಬೇಕು. ಅದನ್ನು ಆಧರಿಸಿ ತರಬೇತಿಗಳಾಗಬೇಕು. ಸಿಬ್ಬಂದಿ ನೇಮಕಾತಿ ಬರೀ ಅಂಕ ಆಧರಿಸಿ ಆಗಬಾರದು. ಅಂಕ ಮತ್ತು ಕೌಶಲ ಎರಡೂ ಇರಬೇಕು.

ವೈದ್ಯರು ರೋಗಿಯ ಸಮಯವನ್ನು, ಕಾರ್ಯಕ್ರಮದ ಆಯೋಜಕರು ಪ್ರೇಕ್ಷಕರ ಸಮಯವನ್ನು, ಕೆಲಸ ಮಾಡುವ ಸಿಬ್ಬಂದಿ ಕೆಲಸಕ್ಕಾಗಿ ಬಂದವರ ಸಮಯವನ್ನು... ಅದು ತಮ್ಮ ಸಮಯವೆಂದೇ ಭಾವಿಸಿ ಗೌರವಿಸಬೇಕು.

ನಮ್ಮಲ್ಲಿ ಎಷ್ಟೊಂದು ಮಾನವ ಸಂಪನ್ಮೂಲವಿದೆ. ಅದು ಬಹುತೇಕ ಕಾಯುವ ಬೆಂಚ್ ಮೇಲೆ ಕೂತು ಸೋರಿ ಹೋಗುತ್ತಿದೆ. ನಮ್ಮ ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದರೆ ನಾವು ಪ್ರಗತಿಪಥದಲ್ಲಿ ಇನ್ನೂ ಬಹಳ ಮುಂದೆ ಇರುತ್ತಿದ್ದೆವು.

ಮೂಲಸೌಕರ್ಯಗಳನ್ನು ಸುಧಾರಿಸುವುದರಿಂದ, ಆಡಳಿತ ವ್ಯವಸ್ಥೆಯನ್ನು ದಕ್ಷಗೊಳಿಸುವುದರಿಂದ, ತಂತ್ರಜ್ಞಾನವನ್ನು ಬಹಳಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರಿಂದ, ಪರಿಣತ ಸಿಬ್ಬಂದಿಯನ್ನು ಹೊಂದುವುದರಿಂದ ನಾವು ಈ ಕಾಯುವಿಕೆಯ ಕಾಯಿಲೆಗೆ ಮದ್ದು ಅರೆಯಬಹುದೇನೊ!

ವಾಚಕರ ವಾಣಿ

ಅರ್ಹರನ್ನು ವಂಚಿಸುವ ನಕಲಿ ವೃದ್ಧರು

ರಾಜ್ಯದ ಯಾವುದೇ ತಾಲ್ಲೂಕು ಕಚೇರಿಯಲ್ಲಿ ವೃದ್ಧರು ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸಲು ಸಾಮಾನ್ಯವಾಗಿ ಯಾರನ್ನಾದರೂ ಅವಲಂಬಿಸಿ ಅಲೆದಾಡುತ್ತಿರುತ್ತಾರೆ. ಇಂತಹ ಅರ್ಹರು ಹೇಗೋ ಲಂಚ ಹೊಂದಿಸಿಕೊಂಡು, ಮಧ್ಯವರ್ತಿಗಳ ಮೂಲಕ ಕಷ್ಟಪಟ್ಟು ವೃದ್ಧಾಪ್ಯ ವೇತನ ಪಡೆಯುತ್ತಾರೆ. ಆದರೆ ದುಡಿಯಲು ಗಟ್ಟಿಮುಟ್ಟಾಗಿದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವೃದ್ಧಾಪ್ಯ ವೇತನ ಪಡೆಯುವ ಮೂಲಕ ಅರ್ಹ ಫಲಾನುಭವಿಗಳನ್ನು ವಂಚಿಸುವ ಮತ್ತು ಇಂತಹವರಿಗೆ ಪ್ರೋತ್ಸಾಹ ನೀಡುವ ನೌಕರ ವರ್ಗದವರಿಗೆ ಕಾನೂನಿನ ಭಯವೇ ಇಲ್ಲದಂತಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕೊಂದರಲ್ಲಿಯೇ ವೃದ್ಧಾಪ್ಯ ಪಿಂಚಣಿ ಪಡೆಯುವ ಸಲುವಾಗಿ ಸಾವಿರಕ್ಕೂ ಹೆಚ್ಚು ಮಂದಿ ನಕಲಿ ವಯೋವೃದ್ಧರು ಸೃಷ್ಟಿಯಾಗಿದ್ದಾರೆಂದರೆ, ರಾಜ್ಯದಾದ್ಯಂತ ಇಂತಹ ಎಷ್ಟು ಜನ ನಕಲಿ ವೃದ್ಧರಿರಬಹುದು ಎನ್ನುವುದನ್ನು ಲೆಕ್ಕ ಹಾಕಬೇಕಾಗಿದೆ. ಈ ಬಗೆಯ ಅಕ್ರಮಗಳು ತಾಲ್ಲೂಕು ಕಚೇರಿಯ ಸಂಬಂಧಿಸಿದ ನೌಕರರ ಸಹಾಯವಿಲ್ಲದೇ ನಡೆಯಲು ಸಾಧ್ಯವಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ದ್ವಿತೀಯ ದರ್ಜೆ ಸಹಾಯಕರೊಬ್ಬರು ‘ಆ ಸಮಯದಲ್ಲಿ ತಹಶೀಲ್ದಾರ್ ವಾಹನ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ’ ಎಂದು ಉತ್ತರ ನೀಡಿದ್ದಾರೆ. ಇಂತಹವರನ್ನು ಕಚೇರಿ ಕರ್ತವ್ಯಕ್ಕಿಂತ ಯಾವುದಾದರೂ ಕಚೇರಿ ಕಾವಲುಗಾರ ಹುದ್ದೆಗೆ ನೇಮಿಸಬೇಕು. ಆಗ ಅವರಿಗೆ ತಮ್ಮ ಹುದ್ದೆಯ ಕರ್ತವ್ಯದ ಸ್ವರೂಪ ಮತ್ತು ಜವಾಬ್ದಾರಿ ಏನು ಎಂಬುದರ ಅರಿವು ಮೂಡುತ್ತದಲ್ಲದೆ ಬೇರೆಯವರು ಇಂತಹ ಕೆಲಸಗಳನ್ನು ಮಾಡಲು ಹಿಂಜರಿಯುವಂತೆ ಆಗುತ್ತದೆ.

ತಿಮ್ಮೇಶ ಮುಸ್ಟೂರು, ಜಗಳೂರು

ವಸ್ತುನಿಷ್ಠ ಅಧ್ಯಯನ ಅಗತ್ಯ

ಇಂದಿನ ಸಂದರ್ಭದಲ್ಲಿ ಕನ್ನಡ– ಕನ್ನಡಿಗರ ಬೇಡಿಕೆಗಳು ಅರ್ಥಪೂರ್ಣವಾಗಿ ಈಡೇರಲು ‘ನವ ಮಹಿಷಿ’ ಮತ್ತು ‘ನವ ಗೋಕಾಕ್’ ವರದಿಗಳು ಸಿದ್ಧಗೊಳ್ಳಬೇಕಾಗಿದೆ ಎಂದು ಚಂದ್ರಕಾಂತ ವಡ್ಡು ಹೇಳಿದ್ದಾರೆ (ಪ್ರ.ವಾ., ಸೆ. 18). ಕರ್ನಾಟಕದ ಒಂದು ಸಾವಿರಕ್ಕೂ ಹೆಚ್ಚು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸಲು ಅನುಮತಿ ನೀಡಲಾಗಿರುವ ಈ ಸಂದರ್ಭದಲ್ಲಿ ಈ ‘ಭೂತಕಾಲದ ವರದಿ’ಗಳನ್ನು ಮುಂದಿಟ್ಟುಕೊಂಡು, ವರ್ತಮಾನ ಮತ್ತು ಭವಿಷ್ಯದ ಕನ್ನಡ ಭಾಷೆ, ಕನ್ನಡ ಜನ ಮತ್ತು ಕನ್ನಡ ನಾಡಿನ ಹಿತಾಸಕ್ತಿಗಳನ್ನು ಕಾಯುವಂತೆ ರೂಪಿಸುವ ದಿಸೆಯಲ್ಲಿ ನವ ವರದಿಗಳನ್ನು ತಯಾರಿಸಲು ಹೊರಡುವುದು ಸರಿಯಾದ ಚಿಂತನೆಯಲ್ಲ. ಇದರ ಅರ್ಥ ಮಹಿಷಿ ವರದಿ ಮತ್ತು ಗೋಕಾಕ್ ವರದಿಯ ಮಹತ್ವವನ್ನು ಅಲ್ಲಗಳೆಯುವುದಲ್ಲ. ಆದರೆ ಜಾಗತೀಕರಣೋತ್ತರ ಸಂದರ್ಭದ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಸ್ಥಿತಿ–ಗತಿ ಮತ್ತು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಡೆದಿರುವ ಅಶ್ಚರ್ಯಕರವಾದ ಸಾಧನೆಗಳು ಹಾಗೂ ಬದಲಾವಣೆಗಳ ಸಂದರ್ಭವನ್ನು ಎದುರುಗೊಳ್ಳುವ ಬಗೆ ಬೇರೆಯದೇ ಆಗಿರಬೇಕು. ಆ ನೆಲೆಯಲ್ಲಿ ನಾವು ಆಳವಾಗಿ ಚಿಂತಿಸಬೇಕಾಗಿದೆ.

ಸಾಹಿತ್ಯ ಸಮ್ಮೇಳನಗಳಲ್ಲಿ ದಶಕಗಳಿಂದ ಆಗುತ್ತಿರುವ ಚರ್ಚೆಗಳು, ಹಲವು ಬಗೆಯ ಕನ್ನಡಪರ ಹೋರಾಟಗಳ ನಂತರವೂ ಶಾಲಾ ಶಿಕ್ಷಣವನ್ನು ಕನ್ನಡ ಮಾಧ್ಯಮದ ಮೂಲಕ ನೀಡಲು ಸಾಧ್ಯವಾಗಿಲ್ಲ. ಕನ್ನಡಿಗರಿಗೆ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವ ದಿಸೆಯಲ್ಲಿ ಇರುವ ತೊಡಕುಗಳನ್ನು ನಿವಾರಿಸಲು ಆಗಿಲ್ಲ. ಈ ದೃಷ್ಟಿಯಿಂದ ನೋಡಿದಾಗ, ಈ ಬಗೆಯ ಸಮಸ್ಯೆಗಳ ಮೂಲಕಾರಣಗಳು ಮತ್ತು ಅವುಗಳ ಆಳ-ಅಗಲವನ್ನು ಅರಿಯಲು ಬೇಕಾದ ವಸ್ತುನಿಷ್ಠ ಅಧ್ಯಯನಗಳು, ಅಂಕಿಅಂಶಗಳು, ಸಂಶೋಧನೆಗಳ ಕೊರತೆ ಇದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಮೂಲಕಾರಣಗಳನ್ನು ಸ್ಪಷ್ಟವಾಗಿ ಗುರುತಿಸದೆ ಹೋರಾಟದ ಹೊಸ ಮಾದರಿಗಳನ್ನು ಹುಡುಕುವುದು ಮತ್ತು ಪರಿಹಾರೋಪಾಯಗಳ ಬಗ್ಗೆ ಚರ್ಚಿಸುವುದು ಸರಿಯಲ್ಲ.

ಎಂ.ರವೀಂದ್ರ, ಬೆಂಗಳೂರು

ಆಗ ಅಲ್ಲೊಬ್ಬ ಇಲ್ಲೊಬ್ಬ ಕುಖ್ಯಾತ, ಈಗ...?

ಕಳ್ಳಸಾಗಣೆಯಿಂದ ಕುಖ್ಯಾತಿ ಪಡೆದಿದ್ದ ಹಾಜೀ ಮಸ್ತಾನ ಬೆಂಗಳೂರಿನಲ್ಲಿ ಬಂಧನಕ್ಕೆ ಒಳಗಾದ ವರದಿಯನ್ನು ಓದಿ (ಪ್ರ.ವಾ., 50 ವರ್ಷಗಳ ಹಿಂದೆ; ಸೆ. 19) ನನ್ನ ನೆನಪು 50 ವರ್ಷ ಹಿಂದಕ್ಕೆ ಹೋಯಿತು. ಆಗ ಕಾಲೇಜಿನಲ್ಲಿ ಓದುತ್ತಿದ್ದ ನಾವು ಸ್ನೇಹಿತರು ಅಂತಹ ಕುಖ್ಯಾತ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದ, ರಿಚ್ಮಂಡ್ ರಸ್ತೆಯಲ್ಲಿದ್ದ ಆತನ ಭವ್ಯ ಮನೆಯ ಬಳಿ ಹೋಗಿ ಅಲ್ಲಿದ್ದ ನಾಮಫಲಕವನ್ನು ಓದಿದ್ದ ನೆನಪು. 50 ವರ್ಷಗಳ ಹಿಂದೆ ಅಲ್ಲೊಬ್ಬ, ಇಲ್ಲೊಬ್ಬ ಕಳ್ಳಸಾಗಣೆದಾರ, ಮೋಸಗಾರ, ನೀತಿಗೆಟ್ಟ ರಾಜಕಾರಣಿ ಇರುತ್ತಿದ್ದರು ಮತ್ತು ಅದೇ ದೊಡ್ಡ ಸುದ್ದಿಯಾಗುತ್ತಿತ್ತು. ಆದರೆ ನಂತರದ ಈ 50 ವರ್ಷಗಳಲ್ಲಿ ನಾವು ಕಾಣುತ್ತಿರುವುದೇನು? ಲೆಕ್ಕವಿಲ್ಲದಷ್ಟು ಕಳ್ಳತನ, ಕಳ್ಳಸಾಗಣೆ, ದರೋಡೆ, ಕೋಟ್ಯಂತರ ರೂಪಾಯಿಗಳ ಹಗರಣ, ಕೊಲೆ, ಸುಲಿಗೆ, ಅತ್ಯಾಚಾರ, ಅನಾಚಾರ... ಛೇ!

ನಾವು ಎತ್ತ ಸಾಗುತ್ತಿದ್ದೇವೆ? ಅಭಿವೃದ್ಧಿಯ ಹೆಸರಿನಲ್ಲಿ ಮುನ್ನಡೆಯುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರೂ ಆ ದಿಕ್ಕು ಸರಿಯಿದೆಯೇ ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ. ತಪ್ಪು ದಿಕ್ಕಿನಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದರೆ ನಾವು ಅಷ್ಟೇ ವೇಗದಲ್ಲಿ ದುರಂತದ ಸನಿಹಕ್ಕೆ ಹೋಗುತ್ತಿದ್ದೇವೆ ಎಂದು ಅರ್ಥ. ಇಂತಹ ಅನಾಹುತಗಳನ್ನು ಎದುರಿಸಬೇಕಾದ ಸವಾಲು ಈಗ ನಮ್ಮ ಮುಂದೆ ಇದೆ.

ಟಿ.ವಿ.ಬಿ. ರಾಜನ್, ಬೆಂಗಳೂರು

ಧಾರವಾಡಕ್ಕೆ ಬೇಕು ಪ್ರತ್ಯೇಕ ಪಾಲಿಕೆ

ಬೀದರ್ ಮತ್ತು ರಾಯಚೂರಿಗೆ ಮಹಾನಗರಪಾಲಿಕೆ ರಚಿಸಬೇಕೆಂದು ಕಲಬುರಗಿಯಲ್ಲಿ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ, ಸಂತೋಷ. ನಾವು ಧಾರವಾಡದ ನಾಗರಿಕರು ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸಬೇಕೆಂದು ಎರಡು ವರ್ಷಗಳಿಂದ ಎಲ್ಲ ರೀತಿಯ ಹೋರಾಟ, ಸತ್ಯಾಗ್ರಹವನ್ನು ಮಾಡುತ್ತಾ ಬಂದಿದ್ದೇವೆ. ಈಗ ಅಭಿವೃದ್ಧಿ ವಿಷಯಗಳಲ್ಲಿ ಧಾರವಾಡ ನಗರವು ಉಪೇಕ್ಷೆಗೆ ಒಳಪಡುತ್ತಿದ್ದು, ಆಡಳಿತವೆಲ್ಲ ಹುಬ್ಬಳ್ಳಿ ಕೇಂದ್ರಿತವಾಗಿದೆ.

ಧಾರವಾಡ ನಗರವು ಮಹಾನಗರ ಪಾಲಿಕೆಯಾಗಲು ಎಲ್ಲ ರೀತಿಯ ಅರ್ಹತೆ ಮತ್ತು ಮೂಲ ಸೌಕರ್ಯಗಳನ್ನು ಹೊಂದಿದೆ. ಜಿಲ್ಲಾ ಕೇಂದ್ರವಾಗಿ ಧಾರವಾಡಕ್ಕೆ ತನ್ನದೇ ಆದ ಸಾಹಿತ್ಯಕ, ಸಾಂಸ್ಕೃತಿಕ ಅಸ್ಮಿತೆ ಇದೆ. ಹೀಗಿದ್ದೂ ಇಲ್ಲಿಯ ನಾಗರಿಕರ ಅಹವಾಲಿನ ಕುರಿತು ಸರ್ಕಾರ ಗಮನಹರಿಸುತ್ತಿಲ್ಲ. ಈಗಲಾದರೂ ಆದ್ಯತೆ ಮೇರೆಗೆ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಮಾಡಿ, ಧಾರವಾಡ ಮತ್ತು ಹುಬ್ಬಳ್ಳಿ ಎರಡೂ ನಗರಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶ್ರೀಲಂಕಾ: 'ಭವಿಷ್ಯ'ದ ಚುನಾವಣೆ

ಶ್ರೀಲಂಕಾದಲ್ಲಿ ಅಧ್ಯಕ್ಷೀಯ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ. ಶನಿವಾರ (ಸೆ.21) ಹೊಸ ಅಧ್ಯಕ್ಷರ ಆಯ್ಕೆಗೆ ಮತದಾನ ನಡೆಯಲಿದೆ. 2022ರ ಜನತಾ ದಂಗೆಯ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದು. ನೆಲಕಚ್ಚಿರುವ ಆರ್ಥಿಕತೆಯೂ ಸೇರಿದಂತೆ ಹಲವು ಗಂಭೀರ ಸಮಸ್ಯೆಗಳಿಂದ ನಲುಗಿಹೋಗಿರುವ ದ್ವೀಪರಾಷ್ಟ್ರದ ಜನ ಬದಲಾವಣೆ ಬಯಸುತ್ತಿದ್ದಾರೆಯೇ? ಈ ನಿರ್ಣಾಯಕ ಚುನಾವಣೆಯಲ್ಲಿ ಯಾರು ಆಯ್ಕೆಯಾಗಲಿದ್ದಾರೆ ಎನ್ನುವುದು ಲಂಕಾದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಲಿದೆ

ನಾಳೆ ಮತದಾನ

ಅಧ್ಯಕ್ಷರ ಮುಂದಿರುವ ಸವಾಲು

- ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಪಡೆದ ಸಾಲದ ಮರುಪಾವತಿ
- ದೇಶದ ಅರ್ಥ ವ್ಯವಸ್ಥೆಯ ಸುಧಾರಣೆ
- ಜೀವನ ವೆಚ್ಚ ಹೆಚ್ಚಾಗಿರುವುದು, ಕುಸಿದಿರುವ ಜೀವನ ಮಟ್ಟ
- ಕುಂಠಿತಗೊಂಡಿರುವ ಜನರ ಆದಾಯ ಹೆಚ್ಚಿಸುವುದು
- ನಿರುದ್ಯೋಗ ಸಮಸ್ಯೆ
- ಆಹಾರದ ಕೊರತೆ, ಅಪೌಷ್ಟಿಕತೆ

2.2 ಕೋಟಿ ಶ್ರೀಲಂಕಾದ ಜನಸಂಖ್ಯೆ | **1.7 ಕೋಟಿ** ಮತದಾರರ ಸಂಖ್ಯೆ | **13,134** ಮತದಾನ ಕೇಂದ್ರಗಳು | **75%** ಒಟ್ಟು ಜನಸಂಖ್ಯೆಯಲ್ಲಿ ಸಿಂಹಳೀಯರ ಪ್ರಮಾಣ | **38** ಕಣದಲ್ಲಿರುವ ಅಭ್ಯರ್ಥಿಗಳು | **51%** ಗೆಲ್ಲಲು ಅಭ್ಯರ್ಥಿಗಳು ಪಡೆಯ ಬೇಕಾದ ಕನಿಷ್ಠ ಮತಗಳ ಪ್ರಮಾಣ | **5 ವರ್ಷ** ಅಧ್ಯಕ್ಷರ ಅಧಿಕಾರದ ಅವಧಿ

ಪ್ರಜಾವಾಣಿ ವಾರ್ತೆ



ಆರ್ಥಿಕ ಬಿಕ್ಕಟ್ಟಿನಿಂದ ಕಂಗೆಟ್ಟು ಈಗ ಚೇತರಿಸಿಕೊಳ್ಳುತ್ತಿರುವ ಶ್ರೀಲಂಕಾದ ಜನರು ಹೊಸ ಅಧ್ಯಕ್ಷರ ಆಯ್ಕೆಗೆ ಶನಿವಾರ ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಎರಡು ವರ್ಷಗಳ ಹಿಂದೆ ನಡೆದಿದ್ದ ಜನತಾ ದಂಗೆಯಿಂದ ಗೊಟಬಯ ರಾಜಪಕ್ಸ ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಿದ್ದರು. ಆ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದ್ದು, ಜಗತ್ತಿನ ಗಮನ ಈಗ ಪುಟ್ಟ ದ್ವೀಪರಾಷ್ಟ್ರದತ್ತ ನೆಟ್ಟಿದೆ.

1948ರಲ್ಲಿ ಸ್ವಾತಂತ್ರ್ಯ ಗಳಿಸಿದ ನಂತರ ಎಂದೂ ಕಾಣದಂತಹ ಜನತಾ ದಂಗೆಯನ್ನು ದ್ವೀಪ ರಾಷ್ಟ್ರವು 2022ರಲ್ಲಿ ಕಂಡಿತ್ತು. ತೀವ್ರ ಆರ್ಥಿಕ ಮುಗ್ಗಟ್ಟಿನಿಂದ ನಲುಗಿಹೋಗಿದ್ದ ಜನರು ಅಧ್ಯಕ್ಷರಾಗಿದ್ದ ಗೊಟಬಯ ರಾಜಪಕ್ಸ ಅವರನ್ನು ಪದಚ್ಯುತಿಗೊಳಿಸಿದ್ದಷ್ಟೇ ಅಲ್ಲ, ಇಡೀ ವ್ಯವಸ್ಥೆಯೇ ಬದಲಾಗಬೇಕು ಎಂದು ಆಶಿಸಿದ್ದರು. ಗೊಟಬಯ ಅವರು ದೇಶ ಬಿಟ್ಟು ಪಲಾಯನ ಮಾಡಿದ ನಂತರ ರನಿಲ್ ವಿಕ್ರಮಸಿಂಘೆ ಅಧ್ಯಕ್ಷರಾದರು. ಅದಕ್ಕಾಗಿ ಅವರು ರಾಜಪಕ್ಸ ಅವರ ಪಕ್ಷದ ಬೆಂಬಲ ಪಡೆದಿದ್ದರು.

ಶ್ರೀಲಂಕಾದ ಮಟ್ಟಿಗೆ ಈ ಚುನಾವಣೆ ನಿರ್ಣಾಯಕ. ಅದಕ್ಕೆ ಕಾರಣ ಹಲವು; ದ್ವೀಪರಾಷ್ಟ್ರವು ಈ ಹಿಂದೆ ಅನುಭವಿಸಿದ ಆರ್ಥಿಕ ಬಿಕ್ಕಟ್ಟು ಅಂತಿಂಥದ್ದಲ್ಲ. ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿತ್ತು. ಇಂಧನ ಆಮದು ಮಾಡಿಕೊಳ್ಳಲೂ ಸರ್ಕಾರದ ಬಳಿ ಹಣ ಇರಲಿಲ್ಲ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಔಷಧಿಗಳಿಗೆ ಅಭಾವ ಸೃಷ್ಟಿಯಾಗಿ, ಅವುಗಳಿಗಾಗಿ ಜನ ಸರತಿ ಸಾಲಿನಲ್ಲಿ ನಿಲ್ಲಬೇಕಿತ್ತು. ದಿನದಲ್ಲಿ ಬಹುತೇಕ ಅವಧಿ ವಿದ್ಯುತ್ ಕಡಿತ ಮಾಡಲಾಗುತ್ತಿತ್ತು. ಹಣದುಬ್ಬರ ಶೇ 70ಕ್ಕೆ ಏರಿತ್ತು.

ದೇಶದಲ್ಲಿ ಎಲ್‌ಟಿಟಿಇ ಉಗ್ರರನ್ನು ನಿಗ್ರಹಿಸಿದ್ದೇ ತನ್ನ ಸಾಧನೆ ಎಂದು ಹೇಳಿಕೊಳ್ಳುತ್ತಿದ್ದ ಮಹಿಂದಾ ರಾಜಪಕ್ಸ ಮತ್ತು ಅವರ ಸಹೋದರ ಗೊಟಬಯ ರಾಜಪಕ್ಸ ಅವರ ದುರಾಡಳಿತವೇ ಇಂಥ ಪರಿಸ್ಥಿತಿಗೆ ಕಾರಣ ಎಂದು ಜನ ರೊಚ್ಚಿಗೆದ್ದಿದ್ದರು. ನ್ಯಾಯಾಲಯವೂ ರಾಜಪಕ್ಸ ಸೋದರರ ಆರ್ಥಿಕ ನೀತಿಗಳ ತಪ್ಪನ್ನು ಎತ್ತಿ ತೋರಿಸಿತ್ತು. ಜನರು ದಂಗೆಯೆದ್ದು ಅಧ್ಯಕ್ಷರ ನಿವಾಸಕ್ಕೆ ದಾಳಿ ಮಾಡುವ ಕೆಲವೇ ಗಂಟೆಗಳ ಮುಂಚೆ ಗೊಟಬಯ ದೇಶ ತೊರೆದು ಪರಾರಿಯಾಗಿದ್ದರು.

ಅಲ್ಲಿಗೆ ರಾಜಪಕ್ಸ ಕುಟುಂಬದ ರಾಜಕೀಯ ಜೀವನ ಅಂತ್ಯವಾಯಿತು ಎಂದೇ ಜನ ಭಾವಿಸಿದ್ದರು. ಆದರೆ, ಹಾಗೆ ಪರಾರಿಯಾದ 50 ದಿನಗಳ ನಂತರ ಗೊಟಬಯ ದೇಶಕ್ಕೆ ಮರಳಿ ಬಂದಿದ್ದರು. ವಿಕ್ರಮಸಿಂಘೆ ಸರ್ಕಾರವು ಅವರಿಗೆ ರಕ್ಷಣೆ ನೀಡಿದ್ದಲ್ಲದೇ, ವಾಸಕ್ಕೆ ಭವ್ಯ ಬಂಗಲೆ, ಪೊಲೀಸರ ರಕ್ಷಣೆ ಸೇರಿದಂತೆ ಮಾಜಿ ಅಧ್ಯಕ್ಷರಿಗೆ ನೀಡುವ ಎಲ್ಲ ಸವಲತ್ತುಗಳನ್ನೂ ಒದಗಿಸಿತು.

ದೇಶದ ರಾಜಕೀಯದಲ್ಲಿ ಎರಡು ದಶಕ ಪ್ರಾಬಲ್ಯ ಸಾಧಿಸಿದ್ದ ರಾಜಪಕ್ಸ ಅವರ ಕುಟುಂಬ ಈ ಬಾರಿಯ ಚುನಾವಣೆಯಲ್ಲಿ ಲೆಕ್ಕಕ್ಕಿಲ್ಲದಂತಾಗಿದೆ. ಆದರೆ, ಅವರು ಚುನಾವಣೆಯ ಕಣದಿಂದ ದೂರವೇನೂ ಉಳಿದಿಲ್ಲ. ಮಹಿಂದಾ ರಾಜಪಕ್ಸ ಅವರ ಮಗ ನಮಲ್ ರಾಜಪಕ್ಸ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಆದರೆ, ರಾಜಪಕ್ಸ ಕುಟುಂಬದ ಬಗ್ಗೆ ಜನರಿಗೆ ಇನ್ನೂ ಸಿಟ್ಟಿದೆ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ರನಿಲ್ ಅವರು ರಾಜಪಕ್ಸ ಕುಟುಂಬದ ಪರವಾಗಿದ್ದಾರೆ ಮತ್ತು ಶಿಕ್ಷೆಯಾಗುವುದರಿಂದ ಅವರ ಕುಟುಂಬವನ್ನು ರಕ್ಷಿಸುತ್ತಿದ್ದಾರೆ ಎನ್ನುವ ಅಸಮಾಧಾನ ಜನರಲ್ಲಿದೆ.

ಶ್ರೀಲಂಕಾದ ಪರಿಸ್ಥಿತಿ ಈಗಲೂ ಭೀಕರವಾಗಿದೆ. ಒಂದು ಸಮೀಕ್ಷೆಯ ಪ್ರಕಾರ, 2023ರಲ್ಲಿ ದೇಶದಲ್ಲಿ 40 ಲಕ್ಷ ಮಂದಿ ಬಡತನದ ರೇಖೆಗಿಂತ ಕೆಳಗಿದ್ದರು; ಈಗ ಅವರ ಸಂಖ್ಯೆ 70 ಲಕ್ಷ ದಾಟಿದೆ. ಬಡತನದ ಬವಣೆಗೆ ಸಿಲುಕಿರುವ ಅನೇಕರು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತಿದ್ದಾರೆ. ಅಧ್ಯಕ್ಷೀಯ ಚುನಾವಣೆಗೆ ಮುಂಚೆ ನಡೆಯಬೇಕಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನೂ ಆರ್ಥಿಕ ಮುಗ್ಗಟ್ಟಿನಿಂದ ಮುಂದೂಡಲಾಗಿದೆ. ಇಂಥ ದೇಶದ ಮುಂದಿನ ಅಧ್ಯಕ್ಷ ಯಾರಾಗಲಿದ್ದಾರೆ ಮತ್ತು ಅವರು ದೇಶವನ್ನು ಬಡತನದ ದವಡೆಯಿಂದ ಪಾರು ಮಾಡುವರೇ ಎನ್ನುವುದು ಸಹಜವಾಗಿಯೇ ಜಾಗತಿಕ ಮಟ್ಟದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

ಆಧಾರ: ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಎಲೆಕ್ಟೋರಲ್ ಸಿಸ್ಟಮ್, ಬಿಬಿಸಿ, ಎಎಫ್‌ಪಿ

ಆಯ್ಕೆ ಹೇಗೆ?

- ಶ್ರೀಲಂಕಾದಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಪ್ರಾಶಸ್ತ್ಯ ಮತಗಳ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ. ಮತದಾರರೊಬ್ಬರು ಮೂವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು (ಅಂದರೆ ಮೂರು ಪ್ರಾಶಸ್ತ್ಯ ಮತಗಳನ್ನು ಚಲಾಯಿಸಬಹುದು)
- ಯಾವುದೇ ಅಭ್ಯರ್ಥಿ ಅಧ್ಯಕ್ಷರಾಗಿ ಆಯ್ಕೆಯಾಗಬೇಕಾದರೆ, ಸಿಂಧು ಎಂದು ಅಂಗೀಕರಿಸಲಾದ ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ಶೇ 50ಕ್ಕಿಂತ (ಕನಿಷ್ಠ 51%) ಹೆಚ್ಚು ಮತಗಳನ್ನು ಪಡೆದಿರಬೇಕು
- ಒಂದು ವೇಳೆ, ಮೊದಲ ಪ್ರಾಶಸ್ತ್ಯದ ಮತಗಳ ಎಣಿಕೆಯಲ್ಲಿ ಯಾವುದೇ ಅಭ್ಯರ್ಥಿಗೆ ಬಹುಮತ ಬಾರದೇ ಇದ್ದರೆ, ಎರಡನೇ ಪ್ರಾಶಸ್ತ್ಯದ ಮತಗಳನ್ನು ಎಣಿಸಲಾಗುತ್ತದೆ. ಮೊದಲ ಸುತ್ತಿನಲ್ಲಿ ಹೆಚ್ಚು ಪ್ರಾಶಸ್ತ್ಯದ ಮತಗಳನ್ನು ಪಡೆದ ಇಬ್ಬರು ಅಭ್ಯರ್ಥಿಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗುತ್ತದೆ. ಇದರಲ್ಲಿ ಹೆಚ್ಚು ಮತ ಪಡೆದವರನ್ನು ವಿಜೇತರು ಎಂದು ಘೋಷಿಸಲಾಗುತ್ತದೆ
- ಈ ಹಿಂದಿನ ಎಲ್ಲ ಚುನಾವಣೆಗಳಲ್ಲಿ ಮೊದಲ ಪ್ರಾಶಸ್ತ್ಯದ ಮತದ ಸುತ್ತಿನಲ್ಲೇ ಅಭ್ಯರ್ಥಿಗಳು ಸರಳ ಬಹುಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎರಡನೇ ಮತ್ತು ಮೂರನೇ ಪ್ರಾಶಸ್ತ್ಯದ ಮತಗಳನ್ನು ಎಣಿಸುವ ಪ್ರಮೇಯವೇ ಬಂದಿರಲಿಲ್ಲ

ತ್ರಿಕೋನ ಸ್ಪರ್ಧೆ?

ಈ ಬಾರಿ ದ್ವೀಪರಾಷ್ಟ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಹಾಲಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಯುನೈಟೆಡ್ ನ್ಯಾಷನಲ್ ಪಾರ್ಟಿಯಿಂದ (ಯುಎನ್‌ಪಿ) ಆಯ್ಕೆಯಾಗಿ ಸಂಸತ್ ಪ್ರವೇಶಿಸಿದ್ದ ವಿಕ್ರಮಸಿಂಘೆ ಅವರನ್ನು ರಾಜಪಕ್ಸ ಕುಟುಂಬ ನೇತೃತ್ವದ ಶ್ರೀಲಂಕಾ ಪೊಡುಜನ ಪೆರಮುನ (ಎಸ್‌ಎಲ್‌ಪಿಪಿ ಅಥವಾ ಪೀಪಲ್ಸ್ ಫ್ರಂಟ್) ಪಕ್ಷವು ಬೆಂಬಲಿಸಿದೆ.


ರನಿಲ್ ವಿಕ್ರಮಸಿಂಘೆ

ಸಜಿತ್ ಪ್ರೇಮದಾಸ

ಶ್ರೀಲಂಕಾದ ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಅವರು ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಮತ್ತೊಬ್ಬ ಪ್ರಮುಖ ಅಭ್ಯರ್ಥಿ. ಮಾಜಿ ಅಧ್ಯಕ್ಷ ರಣಸಿಂಘೆ ಪ್ರೇಮದಾಸ ಅವರ ಮಗನಾಗಿರುವ ಸಜಿತ್, ಕಳೆದ ಚುನಾವಣೆಯಲ್ಲಿ ಎರಡನೇ ಸ್ಥಾನ ಗಳಿಸಿದ್ದರು. ಸಮಗಿ ಜನ ಬಲವೇಗಯ (ಎಸ್‌ಜೆಬಿ) ಪಕ್ಷದ (ಯುಎನ್‌ಪಿಯಿಂದ ಬೇರ್ಪಟ್ಟು ಉದಯಿಸಿದ ಹೊಸ ಪಕ್ಷ ಇದು) ಅಭ್ಯರ್ಥಿಯಾಗಿ ಅವರು ಕಣಕ್ಕಿಳಿದಿದ್ದಾರೆ.

ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷವು, ಮಾರ್ಕ್ಸಿಸ್ಟ್-ಲೆನಿನಿಸ್ಟ್ ಸಿದ್ಧಾಂತದ ಅಡಿಯಲ್ಲಿ ಸ್ಥಾಪನೆಗೊಂಡಿರುವ ಜನತಾ ವಿಮುಕ್ತಿ ಪೆರಮುನದ (ಪೀಪಲ್ಸ್ ಲಿಬರೇಷನ್ ಫ್ರಂಟ್) ನಾಯಕರಾಗಿರುವ ಅನುರಾ ಕುಮಾರ ದಿಸ್ಸನಾಯಕೆ ಅವರನ್ನು ಚುನಾವಣಾ ಅಖಾಡಕ್ಕೆ ಇಳಿಸಿದೆ. ಇವರ ಪಕ್ಷವು ಹಿಂದೆ, ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದ ಇತಿಹಾಸವನ್ನು ಹೊಂದಿದೆ.

ಅನುರಾ ಕುಮಾರ ದಿಸ್ಸನಾಯಕೆ

ಈ ಮೂವರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಇವರ ಜೊತೆಗೆ ಮಾಜಿ ಅಧ್ಯಕ್ಷ ಮಹಿಂದಾ ರಾಜಪಕ್ಸ ಅವರ ಕಿರಿಯ ಮಗ ನಮಲ್ ರಾಜಪಕ್ಸ ಕೂಡ ಎಸ್‌ಎಲ್‌ಪಿಪಿಯಿಂದ ಸ್ಪರ್ಧಿಸಿದ್ದಾರೆ. ಪಕ್ಷವು ಕೊನೆ ಕ್ಷಣದಲ್ಲಿ ಇವರ ಹೆಸರನ್ನು ಘೋಷಿಸಿತ್ತು. ಪಕ್ಷದ ಹಲವು ನಾಯಕರು ವಿಕ್ರಮಸಿಂಘೆಯವರನ್ನು ಬೆಂಬಲಿಸಿದ್ದರಿಂದ ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ.

ಭಾರತದ ಮೇಲೆ ಪರಿಣಾಮ?

ಹೊಸ ಅಧ್ಯಕ್ಷರ ಆಯ್ಕೆಯ ನಂತರ ಭಾರತ ಮತ್ತು ಶ್ರೀಲಂಕಾ ನಡುವಿನ ದ್ವಿಪಕ್ಷೀಯ ಸಂಬಂಧ ಹೇಗಿರಲಿದೆ ಎಂಬ ಕುತೂಹಲ ಮೂಡಿದೆ. ಎರಡೂ ರಾಷ್ಟ್ರಗಳ ಸಂಬಂಧ ಉತ್ತಮವಾಗಿಯೇ ಇದೆ. ಕೆಲವು ವರ್ಷಗಳಿಂದ ಲಂಕಾದ ಮೇಲೆ ಚೀನಾದ ಪ್ರಭಾವ ಹೆಚ್ಚುತ್ತಿದೆ. ಅಲ್ಲಿನ ಸರ್ಕಾರ ಕೂಡ ಚೀನಾ ಬಗ್ಗೆ ಒಲವು ತೋರುತ್ತಿದೆ. ಮಾಲ್ದೀವ್ಸ್‌ನೊಂದಿಗೆ ಭಾರತದ ಸಂಬಂಧ ಹಳಸಿದೆ. ಬಾಂಗ್ಲಾದೇಶದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಪ್ರಾದೇಶಿಕ ಸಮತೋಲನ ಕಾಪಾಡಿಕೊಳ್ಳಲು ಶ್ರೀಲಂಕಾದೊಂದಿಗೆ ಉತ್ತಮ ಸಂಬಂಧ ಹೊಂದುವ ಅಗತ್ಯವಿದೆ. ಹಾಗಾಗಿ, ಭಾರತ ಕೂಡ ಶ್ರೀಲಂಕಾದ ಚುನಾವಣೆ ಹಾಗೂ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ಸಿನಿ ಬಿಟ್ಸ್

'ನಾ ನಿನ್ನ ಬಿಡಲಾರೆ'ಗೆ ಶರಣ್ ಸಾಥ್

ಬಹುತೇಕ ಹೊಸಬರಿಂದಲೇ ಕೂಡಿರುವ 'ನಾ ನಿನ್ನ ಬಿಡಲಾರೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶರಣ್ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಸಾಥ್ ನೀಡಿದರು. ಚಿತ್ರಕ್ಕೆ ನವೀನ್ ಜಿ.ಎಸ್ ಆ್ಯಕ್ಷನ್ ಕಟ್ ಹೇಳಿದ್ದು, ಶ್ರೀಮತಿ ಭಾರತಿ ಬಾಳಿ ಬಂಡವಾಳ ಹೂಡಿದ್ದಾರೆ.

'ನಟಿ, ನಿರ್ಮಾಪಕಿ ಭಾರತಿ ಅವರ ಶ್ರಮಕ್ಕೆ ತಕ್ಕ ಚಿತ್ರ ಇದಾಗಿದೆ. ಆಸಕ್ತಿ, ಗುರಿ, ಶ್ರಮ ಎಲ್ಲಿರುತ್ತದೆಯೋ ಅಲ್ಲಿ ಗೆಲುವು ಖಂಡಿತ. ಓರ್ವ ಹೆಣ್ಣು ಮಗಳು ಇಷ್ಟು ಶ್ರಮಪಟ್ಟು ಸಿನಿಮಾ ಮಾಡಿದ್ದಾರೆ ಎಂದರೆ, ಇವರು ಪ್ರಥಮ ಪ್ರಯತ್ನದಲ್ಲಿ ಗೆದ್ದಂತಾಗಿದೆ. ನಾನು ನಾಲ್ಕೈದು ವರ್ಷದವನಿದ್ದಾಗ ಅನಂತನಾಗ್, ಲಕ್ಷ್ಮೀ ಅವರ 'ನಾ ನಿನ್ನ ಬಿಡಲಾರೆ' ಸಿನಿಮಾ ಮರು ಬಿಡುಗಡೆಗೊಂಡಿತ್ತು. ಆಗ ನಮ್ಮ ತಂದೆ ಆ ಚಿತ್ರ ತೋರಿಸಿದ್ದರು. ನಾನು ಎಲ್ಲಾ ಭಾಷೆಯ ದೆವ್ವಗಳ ಸಿನಿಮಾಗಳನ್ನು ತಪ್ಪದೆ ನೋಡುತ್ತೇನೆ. ಅದು ನನ್ನ ನೆಚ್ಚಿನ ಜಾನರ್' ಎಂದರು ಶರಣ್.

ಹೊಸಬರಾದ ಪಂಚೇಂದ್ರಿಯ, ಅಂಬಾಲಿ ಭಾರತಿ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಮಾಂತೇಶ್, ಸೀರುಂಡೆ ರಘು ಮೊದಲಾದವರು ತಾರಾಗಣದಲ್ಲಿದ್ದಾರೆ. 'ನಾನು ಕಳೆದ 8 ವರ್ಷಗಳಿಂದ ಚಿತ್ರರಂಗದ ವಿವಿಧ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಈ ಚಿತ್ರವನ್ನು ಆರಂಭಿಸಲು ಬಹಳಷ್ಟು ಪೂರ್ವ ತಯಾರಿ ಮಾಡಿಕೊಂಡಿದ್ದೆ. ಇದು ಸೈಕಲಾಜಿಕಲ್, ಹಾರರ್, ಥ್ರಿಲಿಂಗ್, ಸಸ್ಪೆನ್ಸ್ ಚಿತ್ರ. ವೈದ್ಯಕೀಯ ಸಂಗತಿಗಳನ್ನು ಚಿತ್ರದಲ್ಲಿ ಹೇಳಲಾಗಿದೆ. ಸದ್ಯ ಚಿತ್ರ ಸೆನ್ಸಾರ್ ಕಾರ್ಯ ಮುಗಿಸಿ ಬಿಡುಗಡೆಗೆ ಸಿದ್ಧವಿದೆ' ಎಂದರು ನಿರ್ದೇಶಕರು. ವೀರೇಶ್ ಛಾಯಾಚಿತ್ರಗ್ರಹಣ, ಎಂ.ಎಸ್. ತ್ಯಾಗರಾಜ್ ಸಂಗೀತ ಚಿತ್ರಕ್ಕಿದೆ.

ಸೆ.27 ಕ್ಕೆ 'ಲುಕ್ ಬ್ಯಾಕ್' ತೆರೆಗೆ

ಕೇರಳದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಸಮರ ಕಲೆ ಕಳರಿಪಯಟ್ಟು ಕುರಿತಾದ 'ಲುಕ್ ಬ್ಯಾಕ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ಕನ್ನಡ, ಮಲಯಾಳ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಸಿನಿಮಾ ತಯಾರಾಗಿದ್ದು, ಕರ್ನಾಟಕ ಮತ್ತು ಕೇರಳದಲ್ಲಿ ಸೆಪ್ಟೆಂಬರ್ 27ರಂದು ಚಿತ್ರ ತೆರೆ ಕಾಣಲಿದೆ.

ಟ್ರೇಲರ್ ಬಿಡುಗಡೆ ಮಾಡಿ ಮಾತನಾಡಿದ ಸಂಗೀತ ನಿರ್ದೇಶಕ ಹಂಸಲೇಖ 'ಭಾರತೀಯ ಪ್ರಾಚೀನ ಕಲೆಯ ಸಿನಿಮಾ ಮಾಡಿರುವ ಉದ್ದೇಶ ಚೆನ್ನಾಗಿದೆ. ಹೀಗಾಗಿ ಹಾಡುಗಳಿಗೆ ಸಂಗೀತ ಸಂಯೋಜಿಸಿ ಕೊಟ್ಟಿದ್ದೇನೆ. ಕಳರಿ ಅಂದರೆ ಕಳೆಯನ್ನು ಕಿತ್ತು ಹಾಕು ಎಂದರ್ಥ. ಮೈಮೇಲೆ, ಮನಸಿನ ಮೇಲೆ ಅರಿವಿರಬೇಕು ಎಂಬುದು ಚಿತ್ರದ ಆಶಯವಾಗಿದೆ. ಪ್ರತೀಕಾರದ ಕಥೆ ಒಳಗೊಂಡಿದ್ದು, ಕ್ಲೈಮ್ಯಾಕ್ಸ್ ವಿಭಿನ್ನವಾಗಿದೆ. ಇಂದಿನ ಹೆಣ್ಣು ಮಕ್ಕಳು ರಕ್ಷಣೆಗೆ ದೃಷ್ಟಿಯಿಂದ ಈ ಕಲೆಯನ್ನು ಕಲಿಯಬೇಕು' ಎಂದರು.

ಈ ಚಿತ್ರವನ್ನು ರಂಜನ್ ಮುಲಾರತ್ ನಟಿಸಿ, ನಿರ್ದೇಶಿಸಿದ್ದಾರೆ. 'ಮೂರು ವರ್ಷಗಳ ಹಿಂದೆ ಪ್ರಾರಂಭವಾದ ಸಿನಿಮಾ. ಎಲ್ಲ ಸಂಕಷ್ಟಗಳನ್ನು ದಾಟಿ ಬಿಡುಗಡೆ ಹಂತಕ್ಕೆ ಬಂದಿದೆ. ಚಿತ್ರದಲ್ಲಿ ಕಳರಿಪಯಟ್ಟು ಕಲೆಯೇ ಹೀರೊ ಎನ್ನಬಹುದು. ಕಳರಿಪಯಟ್ಟು ಕಲೆಯಲ್ಲಿ ಪದ್ಮಶ್ರೀ ಪುರಸ್ಕೃತ 84 ವರ್ಷ ವಯಸ್ಸಿನ ಮೀನಾಕ್ಷಿಯಮ್ಮ ಕೂಡ ಚಿತ್ರದಲ್ಲಿ ನಟಿಸಿದ್ದಾರೆ. ಇನ್ನು ಚಿತ್ರದ ಹೃದಯ ಸಂಗೀತ ಎನ್ನಬಹುದು. ಹಂಸಲೇಖ ಸೇರಿದಂತೆ ನಾಲ್ಕು ವಿದೇಶಿ ಸಂಗೀತ ನಿರ್ದೇಶಕರು ಚಿತ್ರಕ್ಕೆ ಕೆಲಸ ಮಾಡಿದ್ದಾರೆ' ಎಂದು ಚಿತ್ರದ ಕುರಿತು ಮಾಹಿತಿ ನೀಡಿದರು ನಿರ್ದೇಶಕರು.

ಚಿತ್ರದ ನಾಯಕಿಯಾಗಿ ಉಪಾಸನಾ ಗುರ್ಜನ್ ಕಾಣಿಸಿಕೊಂಡಿದ್ದಾರೆ. ಕೃಷ್ಣ ನಾಯಕರ್ ಛಾಯಾಚಿತ್ರಗ್ರಹಣವಿದೆ. ಕೇರಳ ಹಾಗೂ ಆಗುಂಬೆಯಲ್ಲಿ ಚಿತ್ರೀಕರಣಗೊಂಡಿದೆ.

ಉಪಾಸನಾ ಗುರ್ಜನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣದಲ್ಲಿ ಪ್ರತಿಭಟನೆಯೊಂದರ ವಿಡಿಯೊ ಹರಿದಾಡುತ್ತಿದೆ. 16 ಸೆಕೆಂಡ್‌ನ ವಿಡಿಯೊ ಬೃಹತ್ ರ್‍ಯಾಲಿಯೊಂದರ ಐದು ತುಣುಕುಗಳನ್ನು ಒಳಗೊಂಡಿದೆ. ಪ್ರತಿಭಟನೆಯಲ್ಲಿ ಭಾಗವಹಿಸಿರುವ ಜನ ಬಾವುಟ, ಬ್ಯಾನರ್‌ಗಳನ್ನು ಹಿಡಿದಿರುವಂತೆ ದೃಶ್ಯಗಳಲ್ಲಿ ಕಾಣುತ್ತದೆ. 'ಮಣಿಪುರಕ್ಕೆ ಶಾಂತಿ ಬೇಕು', 'ಶಾಂತಿಗಾಗಿ ರ್‍ಯಾಲಿ' ಎಂದು ಬ್ಯಾನರ್‌ಗಳಲ್ಲಿ ಬರೆದಿರುವಂತೆ ತೋರಿಸಲಾಗಿದೆ. ಜತೆಗೆ ಪ್ರತಿಭಟನಕಾರರು ಘೋಷಣೆಗಳನ್ನು ಕೂಗುವ ಧ್ವನಿಯೂ ವಿಡಿಯೊದಲ್ಲಿದೆ. ಈ ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವ ಹಲವರು, 'ಮಣಿಪುರದಲ್ಲಿ ಪರಿಸ್ಥಿತಿ ಹದಗೆಡುತ್ತಿದೆ; ಆದರೆ, ಭಾರತದ ಮಾಧ್ಯಮಗಳು ಇದನ್ನು ವರದಿ ಮಾಡುತ್ತಿಲ್ಲ' ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಈ ವಿಡಿಯೊ ಅಸಲಿ ಅಲ್ಲ.

ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಕೃತಕ ಬುದ್ಧಿಮತ್ತೆಯಿಂದ (ಎಐ) ರೂಪಿಸಿದ ದೃಶ್ಯಗಳಲ್ಲಿ ಕಾಣುವಂತಹ ಕೆಲವು ವ್ಯತ್ಯಾಸಗಳು ಕಂಡುಬಂದವು. ವಿಡಿಯೊದಲ್ಲಿರುವ ಕಟ್ಟಡಗಳು, ಬ್ಯಾನರ್‌ಗಳು ವಾಸ್ತವದಲ್ಲಿ ಇರುವಂತೆ ಇರದೇ ಎಐನಿಂದ ಮಾಡಿದಂತಿದ್ದವು. ಜತೆಗೆ, ಅಸ್ಸಾಂನ ಮಾನವ್ ಜ್ಯೋತಿ ಗೊಗೊಯ್ ಎನ್ನುವವರು ತಮ್ಮ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ 2024ರ ಫೆಬ್ರುವರಿ 1ರಂದು ಇದೇ ವಿಡಿಯೊ ಅನ್ನು ಹಂಚಿಕೊಂಡಿದ್ದು, ವಿಡಿಯೊ ಅನ್ನು ಎಐ ಸಾಧನಗಳಿಂದ ರೂಪಿಸಲಾಗಿದೆ ಎಂದು ಬರೆದುಕೊಂಡಿದ್ದಾರೆ. ಇವೆಲ್ಲವುಗಳಿಂದ ಈ ವಿಡಿಯೊ ಅಸಲಿ ಅಲ್ಲ ಎನ್ನುವುದು ದೃಢಪಡುತ್ತದೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಫಲದ ಅಪೇಕ್ಷೆ ಬೇಡ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

27

ದಕ್ಷಿಣ ಆಫ್ರಿಕಾ ದೇಶದಲ್ಲಿ ನೆಲ್ಸನ್ ಮಂಡೇಲ ಅಂತ ಒಬ್ಬರಿದ್ದರು. ಅವರನ್ನು ಕಪ್ಪು ಸೂರ್ಯ ಅಂತ ಕರೀತಿದ್ರು. ಕತ್ತಲಕೋಣೆಯಲ್ಲಿ ಅವರು 26 ವರ್ಷ ಇದ್ದರು. ಒಮ್ಮೆ ಅಬ್ದುಲ್ ಕಲಾಂ ಅವರು ಮಂಡೇಲ ಅವರಿಗೆ 'ನೀವು 26 ವರ್ಷ ಜೈಲಿನಲ್ಲಿದ್ದಿರಿ. ಕತ್ತಲ ಕೋಣೆಯಲ್ಲಿ ಅಷ್ಟೊಂದು ವರ್ಷ ಕಳೆಯಲು ನಿಮಗೆ ಶಾಂತಿ, ತಾಳ್ಮೆ ಹೇಗೆ ಬಂತು' ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಮಂಡೇಲ, 'ನಾನು ತಾಳ್ಮೆಯಿಂದ ಇರಲು ಸ್ಫೂರ್ತಿ ಬಂದಿದ್ದು ಭಾರತದಿಂದ. ನಿಮ್ಮ ಗಾಂಧೀಜಿಯಿಂದ ಅದನ್ನು ಕಲಿತೆ' ಎಂದು ಉತ್ತರಿಸಿದರಂತೆ.

ನಮ್ಮ ದೇಶ, ನಮ್ಮ ಊರಿನ ಬಗ್ಗೆ ನಮಗೆ ಅಭಿಮಾನ ಇರಬೇಕು. ಸುಮ್ಮನೆ ಕೆಲಸ ಮಾಡಬೇಕು. ಫಲದ ಬಗ್ಗೆ ಆಲೋಚಿಸಬಾರದು. ಆದರೆ ನಮಗೆ ಯಾವಾಗಲೂ ಫಲದ ಮೇಲೇ ಕಣ್ಣು. ಕೆಲಸಕ್ಕೆ ಮೊದಲೇ ಫಲ ಕೇಳ್ತೀವಿ ನಾವು. ಈಗ ಪೂಜೆ ಮಾಡ್ತೇವೆ. ನೀರು ಹಾಕಿ ಪೂಜೆ ಮಾಡ್ತೀವಿ. ಹೂವು ಹಾಕಿ ಪೂಜೆ ಮಾಡ್ತೀವಿ. ನೈವೇದ್ಯ ಇಟ್ಟು ಪೂಜೆ ಮಾಡ್ತೀವಿ.

ಅಲ್ಲಮ ಪ್ರಭು ಅಂತಾರೆ, 'ಮಜ್ಜನಕ್ಕೆರೆದು ಫಲವಬೇಡುವರಯ್ಯಾ ತಮಗೆಲ್ಲಿಯದೋ ಆ ಫಲವು ಸೀತಾಳಕ್ಕಲ್ಲದೆ' ಎಂದು. ನೀರು ಹಾಕಿ ಪೂಜೆ ಮಾಡಿದರೆ ಫಲ ಬರತ್ತೈತಿ ಅಂದರೆ ಫಲ ಹೊಳೆಗೆ ಹೋಗಬೇಕು. ಯಾಕೆಂದರೆ ನೀರು ಹೊಳೆಯದ್ದು. ಹೂವು ಏರಿಸಿದರೆ ಫಲ ಸಿಗತ್ತೈತಿ ಎಂದರೆ ಫಲ ಬಳ್ಳಿಗೆ ಹೋಗಬೇಕು. ಯಾಕೆಂದರೆ ಹೂವು ಬಳ್ಳೀದು. ನೈವೇದ್ಯ ಇಟ್ಟರೆ ಫಲ ಸಿಗತ್ತೈತಿ ಅಂದರೆ ಅದು ನಮಗೆ ಬರಲ್ಲ. ಅದು ಬೆಳೆದ ಭೂಮಿ ತಾಯಿಗೆ ಹೋಗತ್ತೈತಿ. ಫಲ ಬೇಡೋದಲ್ಲ. ಅದಾಗಿಯೇ ಬರಬೇಕು. ಪಂಚಾಕ್ಷರಿ ಗವಾಯಿಗಳು ತಮಗೆ ಪ್ರಶಸ್ತಿ ಬರಲಿ ಅಂತ ಕೆಲಸ ಮಾಡಿದರೇನು? ತಮಗೆ ಕಣ್ಣಿಲ್ಲದಿದ್ದರೂ ಕಣ್ಣಿಲ್ಲದವರ ಸೇವೆ ಮಾಡಿದರು. ತಮ್ಮ ಕೆಲಸ ತಾವು ಮಾಡುತ್ತಾ ಹೋದರು. ಎಲ್ಲ ಪ್ರಶಸ್ತಿಗಳೂ ಅವರ ಪಾದಕ್ಕೆ ಬಂದು ಬಿದ್ದವು. ಯಾವ ಮನುಷ್ಯ ತನ್ನ ಪಾಡಿಗೆ ತಾನು ಕೆಲಸ ಮಾಡುತ್ತಾನೋ ಅವನಿಗೆ ನಿಸರ್ಗ ಪೋಸ್ಟ್ ಕಾರ್ಡ್‌ನಂತೆ ಫಲವನ್ನು ಮುಟ್ಟಿಸಿ ಹೋಗತ್ತೈತಿ.

ಬಾಲಗಂಗಾಧರನಾಥ ತಿಲಕ ಅಂತಾ ಒಬ್ಬರಿದ್ದರು. ಅವರು ಸಣ್ಣವರಿದ್ದಾಗ ಶಾಲೆಯಲ್ಲಿ ಅವರ ಸ್ನೇಹಿತ ಶೇಂಗಾ ತಿಂದು ಸಿಪ್ಪೆ ಇವರ ಮುಂದೆ ಹಾಕಿದ. ಹೆಡ್ ಮಾಸ್ತರ್ ಬಂದು ನೋಡಿದಾಗ ತಿಲಕರ ಮುಂದೆ ಶೇಂಗಾ ಸಿಪ್ಪೆ ಇತ್ತು. ಇವರೇ ತಿಂದಿದ್ದಾರೆ ಎಂದು ಎರಡು ಏಟು ಹಾಕಿ ಮನೆಗೆ ಕಳಿಸಿದರು. ಮನೆಯಲ್ಲಿ ತಿಲಕರ ತಂದೆ 'ಯಾಕ್ ಇಷ್ಟು ಬೇಗ ಬಂದಿ' ಎಂದು ಕೇಳಿದರು. ಅದಕ್ಕೆ ಶಾಲೆಯಲ್ಲಿ ನಡೆದ ವಿಷಯ ತಿಳಿಸಿದರು ಬಾಲ ತಿಲಕ. ಮಗನನ್ನು ಶಾಲೆಗೆ ಕರೆದುಕೊಂಡು ಬಂದು ಮಾಸ್ತರ್ ಕೈಯಲ್ಲಿದ್ದ ಬಡಿಗೆ ತಗೊಂಡು ಮಗನಿಗೆ ಹೊಡೆದರು. 'ಯಾಕ್ ಹೊಡೀತೀರಿ. ಅವ ತಪ್ಪು ಮಾಡಿಲ್ಲ ಅಂತಾನಲ್ಲ' ಎಂದು ಮಾಸ್ತರ್ ಕೇಳಿದ್ದಕ್ಕೆ ತಿಲಕರ ತಂದೆ 'ಅವ ಶೇಂಗಾ ತಿಂದಿಲ್ಲ ಅನ್ನೋದು ನನಗೆ ಗೊತ್ತದೆ. ಆದರೆ ಯಾರೇ ತಿನ್ನಲಿ. ಶಾಲೆ ನಮ್ಮದಲ್ವಾ ಇವ ಯಾಕೆ ಕಸ ತೆಗೆದಿಲ್ಲ ಎಂದು ಹೊಡ್ಯಾಕತ್ತೀನಿ' ಎಂದರು.

ಅದು ತಿಲಕರಿಗೆ ಪಾಠ ಆಯ್ತು. ಮುಂದೆ ತಿಲಕರು ತಮ್ಮ ಪಾಡಿಗೆ ತಾವು ದೇಶದ ಕೆಲಸ ಮಾಡಿದರು. ಅದಕ್ಕೇ ಅವರು ದೇಶದ ತಿಲಕರಾದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತೃತೀಯ ಗಂ. 21-16 ನಕ್ಷತ್ರ: ಅಶ್ವಿನಿ ಗಂ. 26-43 ಯೋಗ: ಧ್ರುವ ಗಂ. 15-19 ಕರಣ: ವಣಿಜ ಗಂ. 10-56, ಕನ್ಯಾ ಮಾಸದ 04 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 3.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-23 **ಸೂರ್ಯಾಸ್ತ:** 06-24
ಮುಸ್ಲಿಂ ದಿನಾಂಕ: 16 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ: 6, 12

ಮೇಷ: ವಿದೇಶದಲ್ಲಿ ಶಿಕ್ಷಣ ಪಡೆಯಲು ಪ್ರಯತ್ನಿಸಿದರೆ ಅವಕಾಶಗಳು ಪ್ರಾಪ್ತಿಯಾಗಲಿವೆ. ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗಲಿದೆ. ಕೃಷಿ ಕ್ಷೇತ್ರದವರಿಗೆ ಕೆಲಸ ಅಧಿಕವಾಗಿರುವುದು.

ವೃಷಭ: ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ನಮ್ರತೆಯಿಂದ, ವಿನಯದಿಂದ ಇರುವುದನ್ನು ಮರೆಯಬೇಡಿ. ಕಲಾವಿದರು ಸಿಕ್ಕ ಅವಕಾಶವನ್ನು ತಿರಸ್ಕರಿಸಬೇಡಿ. ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿ ಹೆಚ್ಚಲಿದೆ.

ಮಿಥುನ: ನಿಮ್ಮ ಆಶ್ವಾಸನೀಯ ವರ್ತನೆಯು ಅನುಯಾಯಿಗಳಿಗೆ ಸಂತಸ ತರಲಿದೆ. ಹೋಮ-ಹವನಾದಿ ಧಾರ್ಮಿಕ ಕೆಲಸದಲ್ಲಿ ಪಾಲ್ಗೊಳ್ಳುವ ಸದವಕಾಶ ಸಿಗಲಿದೆ. ಯಾರಿಂದಲೂ ಸಾಲ ತೆಗೆದುಕೊಳ್ಳಬೇಡಿ.

ಕರ್ಕಾಟಕ: ಮಹಿಳೆಯರಿಗೆ ಗೌರವ ಹೆಚ್ಚಲಿದ್ದು ರಾಜಕೀಯ ಲಾಭ ಸಿಗಲಿದೆ. ನಿಮ್ಮ ವರ್ಚಸ್ಸಿನ ಪ್ರಭಾವದಿಂದ ನೂತನ ಅವಕಾಶಗಳು ದೊರೆಯಲಿವೆ. ಧ್ಯಾನ ಪ್ರವಚನ ಕೇಳುವುದರತ್ತ ಮನಸ್ಸು ಹರಿಯಲಿದೆ.

ಸಿಂಹ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರ ಜತೆ ಚರ್ಚಿಸಬೇಕಾದ ಸಂದರ್ಭ ಬರಲಿದೆ. ಪ್ರವಾಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ಗೃಹ ತಾಪತ್ರಯಗಳಿಂದ ಮುಕ್ತರಾಗಿ ನಿಶ್ಚಿಂತೆಯಾಗುತ್ತದೆ.

ಕನ್ಯಾ: ಲಾರಿ, ಟ್ಯಾಂಕರ್‌ನಂತಹ ಭಾರಿ ವಾಹನಗಳ ಮಾಲೀಕರಿಗೆ ಇಂದು ಒಳ್ಳೆಯ ದಿನ. ಕಾರ್ಮಿಕರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ. ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ತುಲಾ: ಧನಾಗಮನಕ್ಕೆ ಹಲವು ದಾರಿ ಇದ್ದರೂ, ಸರಿಯಾದ ದಾರಿ ಆರಿಸಿಕೊಳ್ಳುವುದು ನಿಮ್ಮ ವಿವೇಚನೆಗೆ ಬಿಟ್ಟದ್ದು. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಸಾಧಾರಣ ಲಾಭವಿರುವುದು. ಸ್ವತ್ತು ವಿವಾದಗಳಲ್ಲಿ ಜಯ ಸಿಗಲಿದೆ.

ವೃಶ್ಚಿಕ: ಚಿತ್ರಕಲೆ ಕುರಿತಾದ ಆಸಕ್ತಿಯಿಂದ ಹೆಚ್ಚಿನ ಕಲಿಕೆಗೆ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು. ಬಟ್ಟೆ ಉದ್ಯಮದವರಿಗೆ ಈ ದಿನ ಹೆಚ್ಚಿನ ಲಾಭವಾಗಲಿದೆ.

ಧನು: ತೆರೆಮರೆಯಲ್ಲಿ ನಡೆಸಿದ ಪ್ರಯತ್ನಗಳಿಂದ ಉನ್ನತ ಅಧಿಕಾರ ಪಡೆಯುವಿರಿ. ಮಕ್ಕಳ ವೃತ್ತಿಯ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳುವಿರಿ. ಕೆಲಸದ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿರಿ.

ಮಕರ: ಗೃಹ ನಿರ್ಮಾಣದಂತಹ ಕೆಲಸಗಳಿಗೆ ಹೆಚ್ಚಿನ ಸಮಯ ವಿನಿಯೋಗಿಸುವಿರಿ. ಪುಸ್ತಕ ಪ್ರಕಾಶಕರಿಗೆ ನೂತನ ಕಾರ್ಯಭಾರ ಒದಗಲಿದೆ. ಹೊಸ ಮನೆಯನ್ನು ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು.

ಕುಂಭ: ಸಹೋದರ ಸಹೋದರಿಯರ ಬಾಂಧವ್ಯ ಗಟ್ಟಿಯಾಗುವಂತಹ ಘಟನೆ ನಡೆಯಲಿದೆ. ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಲಾಭವಾಗಲಿದೆ.

ಮೀನ: ಬಿಡುವಿಲ್ಲದ ಕೆಲಸದಿಂದ ಬಳಲಿದ ನಿಮಗೆ ವಿಶ್ರಾಂತಿಗೆ ಸಮಯ ಸಿಗಲಿದೆ. ಕುಟುಂಬದಲ್ಲಿ ಹಂತ ಹಂತವಾಗಿ ಸುಖ ಶಾಂತಿ ಹೆಚ್ಚಲಿದೆ. ಸಹೋದರಿಯರೊಂದಿಗಿನ ಬಾಂಧವ್ಯವನ್ನು ಉತ್ತಮ ಪಡಿಸಿಕೊಳ್ಳಿ.

ಪದಬಂಧ 5808

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರದೊಳಗೆ ಬಿರುಸಾದುದು ಬಂದಿದೆ (3)
3.ಮುಪ್ಪು ಸಾವು ಇಲ್ಲದಿರುವಿಕೆ (5)
5.ದನಕ್ಕಾಗಿ ನಡೆದ ಯುದ್ಧ (3)
6.ಸರಕ್ಕನೇ ಧರಿಸಿರುವ ಮಾಲೆ! (2)
10.ಕೆಲಸಗಾರ ಇಲ್ಲಿದ್ದಾನೆ (4)
12.ದಮಯಂತಿ ಪತಿ ತಯಾರಿಸಿದ ರುಚಿಕಟ್ಟಾದ ಅಡುಗೆ (4)
14. ಕನಸಲ್ಲಿ ಕಾಣಿಸಿದ ಕೊಳೆ (2)
17.ವಿಜೃಂಭಣೆಗೊಂದು ಪರ್ಯಾಯ ಪದ (3)
18.ರಾಮನ ಮಗನಿದ್ದರೆ ಈ ಹುರುಪು! (5)
19.ಕೊನೆಗೆ ಯೋಗವಿದ್ದರೆ ಪ್ರಿಯರ ಅಗಲಿಕೆ (3)

ಮೇಲಿಂದ ಕೆಳಕ್ಕೆ
1.ಕಿವಿಯಿಂದ ಕಿವಿಗೆ ಹರಡುವ ಮಾತು (5)
2.ರಸ ಒಸರುವ ಜಿಹ್ವೆ (3)
3.ಹೂವುಗಳಿಂದ ಭಟ್ಟಿಯಿಳಿಸಿ ತೆಗೆದ ಸುಗಂಧದ್ರವ್ಯ (3)
4.ರಾಯರಿಂದ ಬಂದಿರುವ ನಿರೂಪ! (3)
7.ತಿಳುವಳಿಕೆ ಇಲ್ಲದವನು ತಿರುಗಿದ್ದಾನಲ್ಲಾ! (3)
8.ಕದವನ್ನು ತೆಗೆಯಲಾಗದಂತೆ ತಡೆಯುವ ಅಡ್ಡಮರ (3)
9.ಕನಸು ಇಲ್ಲಿ ದಿಟವಾಗಿದೆ! (3)
11.ತಿರುವು ಮುರುವಾಗಿರುವ ತಾವರೆ (3)
13.ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ (5)
15. ನೀರಿಗೊಂದು ಪರ್ಯಾಯ ಪದ (3)
16.ಸಲೀಸಾಗಿ ಹಿಡಿದಿರುವ ಆಯುಧ (3)
17.ಅಡಗಿಕೊಳ್ಳಲು ಸೂಕ್ತವಾದ ಕಾನನ (3)

1		2	■	3		4		
	■		■		■		■	■
5			■		■	6	7	■
	■	■	8	■	9	■		■
10	11			■	12			13
■		■		■		■	■	
■	14	15	■	16	■	17		
■	■		■		■		■	
18					■	19		

5807ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡ್ಡಿಕೆ 2.ಬಡನಡು 5.ನಾಟಕೀಯ 6.ಹಂತಕ 8.ವನ 10.ಚರಂಡಿ 11.ಣಪ 13.ವದಂತಿ 14.ಮದುಮಗ 16.ಅತಿರೇಕ 17.ಆದರ್ಶ

ಮೇಲಿಂದ ಕೆಳಕ್ಕೆ:
1.ಅವಿನಾಭಾವ 2.ಬಡ್ಡಿ 3.ನವತರುಣ 4.ನಯವಂಚಕ 7.ಅಡಿಗೆಮನೆ 9.ನವದಂಪತಿ 12.ಪರಾಗಸ್ಪರ್ಶ 15.ಅಂಕ

ಸುಡೊಕು 6193

	7	6		4				9
	9	4		7		3		
7	8			2			5	3
			4		5			7
6		5		8			2	
		7					9	5
	5				7			
9		1		5	8	2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6192 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಕಟ್ರಾದಲ್ಲಿ ಚುನಾವಣಾ ಪ್ರಚಾರ: ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

‘ಅಣೆಕಟ್ಟೆ ಕಟ್ಟುವ ಧೈರ್ಯ ತೋರಿರಲಿಲ್ಲ’

ಪ್ರಜಾವಾಣಿ ವಾರ್ತೆ

ಕಟ್ರಾ/ಶ್ರೀನಗರ (ಜಮ್ಮು–ಕಾಶ್ಮೀರ) (ಪಿಟಿಐ): ಕಾಂಗ್ರೆಸ್ ಹಾಗೂ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷಗಳು ಅಣೆಕಟ್ಟೆಗಳನ್ನು ಕಟ್ಟುವ ಧೈರ್ಯ ತೋರಲಿಲ್ಲ. ಹೀಗಾಗಿ, ಇಲ್ಲಿನ ನದಿಗಳ ನೀರು ಏಳು ದಶಕಗಳ ಕಾಲ ಗಡಿಯಾಚೆಗೆ ಹರಿಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ.

ವೈಷ್ಣೋದೇವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಹಮ್ಮಿಕೊಂಡಿದ್ದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಎನ್‌ಸಿ ಹಾಗೂ ಕಾಂಗ್ರೆಸ್ ಅಣೆಕಟ್ಟೆಗಳನ್ನು ನಿರ್ಮಿಸುವ ಧೈರ್ಯ ತೋರಿದ್ದಲ್ಲಿ, ಜಮ್ಮು–ಕಾಶ್ಮೀರ ರೈತರಿಗೆ ಅನುಕೂಲವಾಗುತ್ತಿತ್ತು ಎಂದರು.

‘ಶಹಾಪುರ ಕಂಡಿ ಅಣೆಕಟ್ಟೆ ಯೋಜನೆ ಹಲವು ವರ್ಷಗಳ ಕಾಲ ನನೆಗುದಿಗೆ ಬಿದ್ದಿತ್ತು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರದಿದ್ದಲ್ಲಿ ಕಠುವಾ ಮತ್ತು ಸಾಂಬಾ ಜಿಲ್ಲೆಗಳ ರೈತರ ಬದುಕು ಹಸನಾಗುತ್ತಿರಲಿಲ್ಲ’ ಎಂದರು.

‘ಚೆನಾಬ್ ನದಿಗೆ ರೈಲ್ವೆ ಸೇತುವೆ ನಿರ್ಮಾಣಕ್ಕೆ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಪ್ರಸ್ತಾವ ಮುಂದಿಟ್ಟಿತ್ತು. ಆದರೆ, ಕಾಂಗ್ರೆಸ್ ಮತ್ತು ಎನ್‌ಸಿ ಈ ಯೋಜನೆ ಕುರಿತ ಕಡತವನ್ನು ನಿರ್ಲಕ್ಷಿಸಿದ್ದರು’ ಎಂದು ಟೀಕಿಸಿದರು.

ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದ ಶೀತಲ್ ಮತ್ತು ರಾಕೇಶ್ ಹೆಸರು ಪ್ರಸ್ತಾಪಿಸಿದ ಮೋದಿ, ಈ ಕ್ರೀಡಾಪಟುಗಳ ಯಶಸ್ಸಿನಲ್ಲಿ ಕಟ್ರಾ ಪಾತ್ರ ದೊಡ್ಡದಿದೆ ಎಂದು ಹೊಗಳಿದರು.

ವಾಗ್ದಾಳಿ: ಶ್ರೀನಗರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಹಾಗೂ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ವಿರುದ್ಧ ವಾಗ್ದಾಳಿ ನಡೆಸಿದರು.

‘ಈ ಮೂರು ಪಕ್ಷಗಳು ತಮ್ಮ ರಾಜಕೀಯ ಲಾಭಕ್ಕಾಗಿ ಜಮ್ಮು–ಕಾಶ್ಮೀರದ ಯುವ ಜನತೆಯನ್ನು ಕಲ್ಲು ತೂರಾಟದಲ್ಲಿ ತೊಡಗುವಂತೆ ಮಾಡಿ, ಅವರ ದಾರಿ ತಪ್ಪಿಸಿದ್ದರು. ಈ ಪಕ್ಷಗಳು ಮುಂದಿನ ಪೀಳಿಗೆಯನ್ನು ಮತ್ತೆ ಅಪಾಯಕ್ಕೆ ದೂಡಲು ನಾನು ಅವಕಾಶ ನೀಡುವುದಿಲ್ಲ’ ಎಂದರು.

ವಿಧಾನಸಭೆ ಚುನಾವಣೆ ಅಂಗವಾಗಿ ಜಮ್ಮು–ಕಾಶ್ಮೀರದ ಕಟ್ರಾ ಪಟ್ಟಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರೋಡ್ ಶೋನಲ್ಲಿ ಪ್ರಧಾನಿ ನರೇಂದ್ರ ಮೋದಿ ಜನರತ್ತ ಕೈಬೀಸಿದರು –ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಪ್ರಜಾತಂತ್ರ ಪ್ರಕ್ರಿಯೆ ಬಗ್ಗೆ ಜಮ್ಮು–ಕಾಶ್ಮೀರ ಜನತೆಯಲ್ಲಿ ವಿಶ್ವಾಸ ಮರುಸ್ಥಾಪನೆಗೊಂಡಿದ್ದು, 5 ವರ್ಷಗಳಲ್ಲಿ ಇಲ್ಲಿನ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ

ನರೇಂದ್ರ ಮೋದಿ, ಪ್ರಧಾನಿ

ಮೋದಿ ಹೇಳಿದ್ದೇನು?

- ದೆಹಲಿ ಮತ್ತು ಕಾಶ್ಮೀರವನ್ನು ಸಂಪರ್ಕಿಸುವ ರೈಲು ಸಂಚಾರ ಶೀಘ್ರವೇ ಆರಂಭ ಆಗಲಿದೆ
- ಜಿ–20 ಶೃಂಗಸಭೆ, ಕಾರುಗಳ ರೇಸ್, ಯೋಗ ದಿನ ಆಚರಣೆ ಕಾಶ್ಮೀರಿಗರಲ್ಲಿನ ಉತ್ಸಾಹವನ್ನು ತೋರಿಸುತ್ತವೆ
- ರಾಷ್ಟ್ರ ಧ್ವಜಾರೋಹಣ ಮಾಡುವವರಿಗೆ ಶ್ರೀನಗರದ ಲಾಲ್ ಚೌಕ್ ಒಂದು ಕಾಲಕ್ಕೆ ಅಪಾಯಕಾರಿ ಸ್ಥಳವೆನಿಸಿತ್ತು. ಕೇಂದ್ರದ ಮಾಜಿ ಗೃಹ ಸಚಿವ, ಕಾಂಗ್ರೆಸ್ ನಾಯಕ ಸುನೀಲಕುಮಾರ್ ಶಿಂದೆ ಅವರು ಕೂಡ ಈ ಮಾತು ಹೇಳಿದ್ದಾರೆ. ಈಗ ಪರಿಸ್ಥಿತಿ ಬದಲಾಗಿದೆ
- ಮೂರು ಕುಟುಂಬಗಳ ರಾಜಕಾರಣದಿಂದಾಗಿ ಕಾಶ್ಮೀರಿ ಪಂಡಿತರು ನೋವು ಅನುಭವಿಸುವಂತಾಗಿದೆ. ಸಿಖ್ಖರು ತುಳಿತಕ್ಕೆ ಒಳಗಾಗುವಲ್ಲಿಯೂ ಈ ಕುಟುಂಬಗಳ ಪಾತ್ರವಿದೆ

‘ಜಮ್ಮು–ಕಾಶ್ಮೀರದಲ್ಲಿ ಜನತಂತ್ರದ ಹಬ್ಬ’

ಶ್ರೀನಗರ: ಜಮ್ಮು–ಕಾಶ್ಮೀರ ವಿಧಾನಸಭೆಯ ಮೊದಲ ಹಂತದ ಚುನಾವಣೆಯಲ್ಲಿ ದಾಖಲೆಯ ಮತದಾನವಾಗಿರುವುದನ್ನು ಹೊಗಳಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕೇಂದ್ರಾಡಳಿತ ಪ್ರದೇಶದಲ್ಲಿ ಜನತಂತ್ರ ಹಬ್ಬ ನಡೆಯುತ್ತಿದೆ ಎಂದು ಗುರುವಾರ ಹೇಳಿದ್ದಾರೆ.

ಶ್ರೀನಗರದಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಭಾರತದ ಪ್ರಜಾತಂತ್ರ ವ್ಯವಸ್ಥೆಯನ್ನು ಜಮ್ಮು–ಕಾಶ್ಮೀರದ ಜನತೆ ಯಾವ ರೀತಿ ಗಟ್ಟಿಗೊಳಿಸುತ್ತಿದ್ದಾರೆ ಎಂಬುದನ್ನು ಜಗತ್ತು ಗಮನಿಸುತ್ತಿದೆ’ ಎಂದು ಹೇಳಿದರು.

‘ಈ ಹಿಂದಿನ ದಿನಗಳಲ್ಲಿ ಕಾಶ್ಮೀರದ ಯುವ ಜನತೆ ಭದ್ರತಾ ಪಡೆಗಳತ್ತ ಕಲ್ಲು ತೂರಾಟ ನಡೆಸುತ್ತಿದ್ದರು. ಈಗ ಕಾಲ ಬದಲಾಗಿದ್ದು, ಇಲ್ಲಿನ ಬೀದಿಗಳಲ್ಲಿ ಅವರು ಕೈಯಲ್ಲಿ ಪುಸ್ತಕಗಳು ಮತ್ತು ಲೇಖನಿಗಳೊಂದಿಗೆ ಓಡಾಡುತ್ತಿದ್ದಾರೆ’ ಎಂದು ಮೋದಿ ಹೇಳಿದರು.

ಸೆ.25ರಂದು ನಡೆಯಲಿರುವ ಎರಡನೇ ಹಂತದ ಮತದಾನ ಸಂದರ್ಭದಲ್ಲಿಯೂ ದಾಖಲೆ ಪ್ರಮಾಣದಲ್ಲಿ ಹಕ್ಕು ಚಲಾಯಿಸುವಂತೆ ಅವರು ಮನವಿ ಮಾಡಿದರು.

‘ರುಬೈಯಾಗಾಗಿ ಉಗ್ರರ ಬಿಡುಗಡೆ ಉಗ್ರವಾದಕ್ಕೆ ಕಾರಣ’

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನೆ ಬೆಳೆಯಲು ಈ ಹಿಂದೆ ಕೆಲ ಸಂದರ್ಭಗಳಲ್ಲಿ ಉಗ್ರರನ್ನು ಜೈಲಿನಿಂದ ಬಿಡುಗಡೆ ಮಾಡಿದ್ದೇ ಕಾರಣ ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಗುರುವಾರ ಹೇಳಿದ್ದಾರೆ.

1989ರಲ್ಲಿ ಆಗಿನ ಕೇಂದ್ರ ಗೃಹ ಸಚಿವ ಮುಫ್ತಿ ಮೊಹಮ್ಮದ್ ಸಯೀದ್ ಪುತ್ರಿ ರುಬೈಯಾ ಸಯೀದ್ ಅವರನ್ನು ಅಪಹರಿಸಲಾಗಿತ್ತು. ಅವರನ್ನು ರಕ್ಷಿಸುವುದಕ್ಕಾಗಿ ಉಗ್ರರನ್ನು ಬಿಡುಗಡೆ ಮಾಡಲಾಗಿತ್ತು ಎಂದಿದ್ದಾರೆ.

ಜಮ್ಮು–ಕಾಶ್ಮೀರದ ‘ನಾಶ’ಕ್ಕೆ ಎನ್‌ಸಿ, ಕಾಂಗ್ರೆಸ್ ಹಾಗೂ ಪಿಡಿಪಿ ಕಾರಣ ಎಂಬ ಪ್ರಧಾನಿ ಟೀಕೆಗೆ ತಿರುಗೇಟು ನೀಡಿದ್ದಾರೆ.

‘1999ರಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು (ಐಸಿ–814) ಅಪಹರಿಸಿ ಅಫ್ಗಾನಿಸ್ತಾನದ ಕಂದಹಾರಕ್ಕೆ ಒಯ್ಯಲಾಗಿತ್ತು. ಆಗ ಪ್ರಯಾಣಿಕರ ರಕ್ಷಣೆಗಾಗಿ ಉಗ್ರರನ್ನು ಬಿಡುಗಡೆ ಮಾಡಿದ್ದು ಯಾರು? ಎಂದ ಅವರು, ‘ದೇಶ ವಿಭಜನೆಗೊಂಡ ವೇಳೆ ಎನ್‌ಸಿ ಇದ್ದಿದ್ದರಿಂದ ಜಮ್ಮು–ಕಾಶ್ಮೀರ ಭಾರತದಲ್ಲಿಯೇ ಉಳಿಯಿತು ಎಂದಿದ್ದಾರೆ.

ಕ್ಷುಲ್ಲಕ ರಾಜಕಾರಣ ಬೇಡ– ಕಾಂಗ್ರೆಸ್ ಸಲಹೆ

ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ‘ಕ್ಷುಲ್ಲಕ ರಾಜಕಾರಣ’ದಿಂದ ಹೊರಬರಬೇಕು. ಬಿಜೆಪಿಯು ಹೇಗೆ ‘ವಿರೋಧ ಪಕ್ಷದ ನಾಯಕನ ಜೀವವನ್ನು ಅಪಾಯದಲ್ಲಿ ಇರಿಸಿದೆ’ ಎಂದು ಇಡೀ ವಿಶ್ವವೇ ನೋಡುತ್ತಿದೆ ಎಂದು ಕಾಂಗ್ರೆಸ್ ಪಕ್ಷವು ಆಕ್ರೋಶ ಹೊರಹಾಕಿದೆ.

ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪತ್ರಕ್ಕೆ ಪ್ರತಿಕ್ರಿಯಿಸಿದ್ದ ಬಿಜೆಪಿ ನಾಯಕ ಜೆ.ಪಿ.ನಡ್ಡಾ ಅವರ ಹೇಳಿಕೆಗೆ ತಿರುಗೇಟು ನೀಡಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಪತ್ರ ಬರೆದಿದ್ದಾರೆ.

‘ರಾಹುಲ್ ಗಾಂಧಿ ಅವರಿಗಿರುವ ಜೀವ ಬೆದರಿಕೆ ಕುರಿತಂತೆ ಬಿಜೆಪಿಯ ನಡೆ ಖಂಡನೀಯ. ಖರ್ಗೆ ಅವರು ಪ್ರಧಾನಿಗೆ ಪತ್ರ ಬರೆದಿದ್ದರು. ಪ್ರತಿಕ್ರಿಯಿಸಲು ಅದನ್ನು ನಿಮಗೆ ವರ್ಗಾಯಿಸಿದ್ದು ಆಶ್ಚರ್ಯ ತಂದಿದೆ. ವಿರೋಧಪಕ್ಷದ ನಾಯಕನ ಮೇಲಿನ ಜೀವ ಬೆದರಿಕೆ ಕುರಿತು ಪ್ರಧಾನಿ ಅವರ ಮೌನ ಆತಂಕಕಾರಿ. ಬಾಲಿಶ ಪ್ರತಿಕ್ರಿಯೆ ಮೂಲಕ ಬೆದರಿಕೆ ವಿಷಯದ ಕುರಿತ ಗಮನವನ್ನು ಬೇರೆಡೆಗೆ ಸೆಳೆಯುವ ನಿಮ್ಮ ಯತ್ನ ನಾಚಿಕೆಗೇಡಿತನದ್ದು’ ಎಂದು ರಮೇಶ್ ಪತ್ರದಲ್ಲಿ ತಿಳಿಸಿದ್ದಾರೆ.

‘ಕಾಂಗ್ರೆಸ್ ನಾಯಕರು ರಾಷ್ಟ್ರಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ. ಮಹಾತ್ಮ ಗಾಂಧಿ ಅವರ ಹತ್ಯೆಗೆ ಮುನ್ನ ನಿಮ್ಮ ಸೈದ್ಧಾಂತಿಕ ಪೂರ್ವಜರು ಬಾಪು ವಿರುದ್ಧ ದ್ವೇಷದ ವಾತಾವರಣ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು’ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ‘ಗಂಭೀರ ವಿಷಯದ ಬಗ್ಗೆ ಪ್ರಧಾನಿ ಮೋದಿಯವರು ಸ್ವತಃ ಪ್ರತಿಕ್ರಿಯಿಸದಿರುವುದು ದುರಹಂಕಾರವನ್ನು ತೋರಿಸುತ್ತದೆ’ ಎಂದು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಪ್ರಧಾನಿ ವಿರುದ್ಧ ಕಾಂಗ್ರೆಸ್ ನಾಯಕರು ಬಳಸಿದ ಪದಗಳ ಆಯ್ಕೆ ಹಾಗೂ ಇತರ ಕಾಂಗ್ರೆಸ್ ಸದಸ್ಯರ ವಿರುದ್ಧದ ಬಿಜೆಪಿ ಕಾರ್ಯಕರ್ತರ ದೂರುಗಳನ್ನು ಖರ್ಗೆ ಅವರಿಗೆ ಬರೆದ ಪತ್ರದಲ್ಲಿ ನಡ್ಡಾ ಅವರು ಉಲ್ಲೇಖಿಸಿದ್ದರು.

ತಿರಸ್ಕೃತ ಉತ್ಪನ್ನಕ್ಕೆ ಪಾಲಿಶ್ ಮಾಡುವ ಯತ್ನ: ನಡ್ಡಾ

ಪ್ರಜಾವಾಣಿ ವಾರ್ತೆ

ಜೆ.ಪಿ.ನಡ್ಡಾ

ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡು ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಹಾಗೂ ಬಿಜೆಪಿಯ ಕೆಲವು ಮುಖಂಡರು ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ ಎಂದು ದೂರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದಿರುವ ಪತ್ರಕ್ಕೆ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ತೀಕ್ಷ್ಣ ಪ್ರತ್ಯುತ್ತರ ನೀಡಿದ್ದಾರೆ.

‘ಯಾವ ಒತ್ತಡಕ್ಕೆ ಒಳಗಾಗಿ ರಾಹುಲ್ ಅವರನ್ನು ಸಮರ್ಥಿಸಿಕೊಳ್ಳಲು ಮುಂದಾಗಿದ್ದೀರಿ’ ಎಂದು ನಡ್ಡಾ ಅವರು ಖರ್ಗೆ ಅವರನ್ನು ಕೇಳಿದ್ದಾರೆ. ರಾಹುಲ್ ಅವರು ಪ್ರಧಾನಿ ಮೋದಿ ಅವರನ್ನು ಹಾಗೂ ಒಬಿಸಿ ವರ್ಗಗಳನ್ನು ಮತ್ತೆ ಮತ್ತೆ ಅವಮಾನಿಸಿದ್ದಾರೆ ಎಂದು ನಡ್ಡಾ ಆರೋಪಿಸಿದ್ದಾರೆ. ‘ಸಾರ್ವಜನಿಕರಿಂದ ಮತ್ತೆ ಮತ್ತೆ ತಿರಸ್ಕಾರಕ್ಕೆ ಒಳಗಾಗಿರುವ ವಿಫಲ ಉತ್ಪನ್ನವೊಂದನ್ನು ಪಾಲಿಶ್ ಮಾಡಿ, ರಾಜಕೀಯ ಅನಿವಾರ್ಯಕ್ಕೆ ಅದನ್ನು ಮಾರುಕಟ್ಟೆಗೆ ಮತ್ತೆ ತರುವ ಯತ್ನವಾಗಿ ನೀವು ಪ್ರಧಾನಿಯವರಿಗೆ ಪತ್ರ ಬರೆದಿದ್ದೀರಿ’ ಎಂದು ನಡ್ಡಾ ಹೇಳಿದ್ದಾರೆ.

ಬಿಟ್ಟು ಅವರು ರಾಹುಲ್ ಅವರನ್ನು ‘ನಂಬರ್ ವನ್ ಭಯೋತ್ಪಾದಕ’ ಎಂದು ದೂಷಿಸಿದ್ದ ನಂತರ ಮೋದಿ ಅವರಿಗೆ ಪತ್ರ ಬರೆದಿದ್ದ ಖರ್ಗೆ ಅವರು, ಬಿಜೆಪಿಯವರನ್ನು ಶಿಸ್ತಿಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದರು. ತಂದೆ ರಾಜೀವ್ ಗಾಂಧಿ ಹಾಗೂ ಅಜ್ಜಿ ಇಂದಿರಾ ಗಾಂಧಿ ಅವರಿಗೆ ಆಗಿದ್ದ ಗತಿಯೇ ರಾಹುಲ್ ಅವರಿಗೂ ಆಗಲಿದೆ ಎಂದು ಪಂಜಾಬ್‌ನ ಬಿಜೆಪಿ ಶಾಸಕ ತರ್ವಿಂದರ್ ಸಿಂಗ್ ಮಾರ್ವಾ ಎಚ್ಚರಿಕೆ ನೀಡಿದ್ದರು.

ಮೋದಿ ಅವರನ್ನು ಗುರಿಯಾಗಿಸಿ ಸೋನಿಯಾ ಗಾಂಧಿ ಅವರು ‘ಸಾವಿನ ವ್ಯಾಪಾರಿ’ ಎಂದು ಕರೆದಿದ್ದನ್ನೂ ನಡ್ಡಾ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ‘ಕಳೆದ 10 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವು ಪ್ರಧಾನಿಯವರ ಮೇಲೆ ನಿಂದನೆಯ 110 ಪದಗಳನ್ನು ಸುರಿಸಿದೆ. ಪಕ್ಷದ ಉನ್ನತ ನಾಯಕರು ಕೂಡ ಈ ತಪ್ಪು ಮಾಡಿದ್ದಾರೆ’ ಎಂದು ನಡ್ಡಾ ದೂರಿದ್ದಾರೆ.

ರಾಹುಲ್ ಅವರು ಭಾರತ ವಿರೋಧಿ, ಪಾಕಿಸ್ತಾನ ಪರ ವ್ಯಕ್ತಿಗಳನ್ನು ಅಪ್ಪಿಕೊಳ್ಳುತ್ತಾರೆ; ಭಯೋತ್ಪಾದಕರ ಜೊತೆ ನಿಲ್ಲುತ್ತಾರೆ; ದೇಶವಿರೋಧಿ ಶಕ್ತಿಗಳಿಂದ ಬೆಂಬಲ ಕೋರುತ್ತಾರೆ; ಸಮಾಜ ಒಡೆಯಲು ಜಾತಿ ಮತ್ತು ಮೀಸಲಾತಿಯ ಬಗ್ಗೆ ಮಾತನಾಡುತ್ತಾರೆ... ರಾಹುಲ್ ಅವರ ಬಗ್ಗೆ ಹೆಮ್ಮೆಪಡುವಂಥದ್ದು ಏನಿದೆ ಎಂದು ನಡ್ಡಾ ಪ್ರಶ್ನಿಸಿದ್ದಾರೆ.

ಮಹಿಳೆಯರಿಗೆ ₹2,100: ಬಿಜೆಪಿ ಪ್ರಣಾಳಿಕೆಯಲ್ಲಿ ಭರವಸೆ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಗೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿರುವ ಬಿಜೆಪಿ, ಮಹಿಳೆಯರಿಗೆ ಪ್ರತಿ ತಿಂಗಳಿಗೆ ₹2,100 ನೀಡುವುದಾಗಿ ಭರವಸೆ ನೀಡಿದೆ.

ಯುವಕರಿಗೆ ಒಟ್ಟು ಎರಡು ಲಕ್ಷ ಸರ್ಕಾರಿ ನೌಕರಿ, ರಾಜ್ಯದ ‘ಅಗ್ನಿವೀರ’ರಿಗೆ ಖಾತರಿಯಾಗಿ ಸರ್ಕಾರಿ ನೌಕರಿ ಒದಗಿಸುವ ಭರವಸೆ ಕೂಡ ಬಿಜೆಪಿ ಪ್ರಣಾಳಿಕೆಯಲ್ಲಿ ಇದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರ ಸಮ್ಮುಖದಲ್ಲಿ ‘ಸಂಕಲ್ಪ ಪತ್ರ’ ಹೆಸರಿನ ಪ್ರಣಾಳಿಕೆಯನ್ನು ರೋಹಟಕ್‌ನಲ್ಲಿ ಬಿಡುಗಡೆ ಮಾಡಿದರು.

ರಾಜ್ಯದಲ್ಲಿ ಸತತವಾಗಿ ಮೂರನೆಯ ಅವಧಿಗೆ ಅಧಿಕಾರ ಹಿಡಿಯುವ ಉಮೇದಿನಲ್ಲಿ ಇರುವ ಬಿಜೆಪಿ, 24 ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆಗೆ ಖರೀದಿಸುವ ಭರವಸೆ ನೀಡಿದೆ.

ಕಾಂಗ್ರೆಸ್ ಪಕ್ಷದ ಪಾಲಿಗೆ ಚುನಾವಣಾ ಪ್ರಣಾಳಿಕೆ ಎಂಬುದು ಶಿಷ್ಟಾಚಾರ ಮಾತ್ರ. ಅದನ್ನು ಬಳಸಿ ಆ ಪಕ್ಷವು ಜನರನ್ನು ವಂಚಿಸುತ್ತದೆ ಎಂದು ನಡ್ಡಾ ಆರೋಪಿಸಿದರು.

ಪ್ರಮುಖ ಅಂಶಗಳು

- ₹500ಕ್ಕೆ ಅಡುಗೆ ಅನಿಲ ಸಿಲಿಂಡರ್
- ಗ್ರಾಮೀಣ, ನಗರ ಪ್ರದೇಶಗಳಲ್ಲಿ 5 ಲಕ್ಷ ಮನೆಗಳ ನಿರ್ಮಾಣ
- ಕಾಲೇಜಿಗೆ ಹೋಗುವ, ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಸ್ಕೂಟರ್
- ಎಸ್‌ಸಿ, ಒಬಿಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ದೇಶದ ಯಾವುದೇ ಸರ್ಕಾರಿ ವೈದ್ಯಕೀಯ ಅಥವಾ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಯನ ನಡೆಸಲು ವಿದ್ಯಾರ್ಥಿ ವೇತನ
- ಪ್ರತಿ ನಗರದಲ್ಲಿ 50 ಸಾವಿರ ಸ್ಥಳೀಯ ಯುವಕರಿಗೆ ಉದ್ಯೋಗ ನೀಡುವುದಕ್ಕೆ ಉದ್ಯಮಿಗಳಿಗೆ ಉತ್ತೇಜನ ನೀಡಲಾಗುತ್ತದೆ.
- ಪ್ರತಿ ಕುಟುಂಬಕ್ಕೆ ₹10 ಲಕ್ಷದವರೆಗೆ ಉಚಿತ ಚಿಕಿತ್ಸೆ. ಹಿರಿಯ ನಾಗರಿಕರಿಗೆ ₹5 ಲಕ್ಷದವರೆಗೆ ಉಚಿತ ಚಿಕಿತ್ಸೆ.

ಭಾರತ, ಡೊಭಾಲ್ ವಿರುದ್ಧ ಅಮೆರಿಕ ಕೋರ್ಟ್ ಸಮನ್ಸ್

ಪ್ರಜಾವಾಣಿ ವಾರ್ತೆ/ಪಿಟಿಐ



ಪನ್ನೂ

ನ್ಯೂಯಾರ್ಕ್: ‘ನನ್ನ ಹತ್ಯೆಗೆ ಸಂಚು ರೂಪಿಸಲಾಗಿತ್ತು’ ಎಂದು ಆರೋಪಿಸಿ, ಭಾರತ ಸರ್ಕಾರ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ವಿರುದ್ಧ ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ದಾಖಲಿಸಿರುವ ದಾವೆಗೆ ಸಂಬಂಧಿಸಿ, ನ್ಯೂಯಾರ್ಕ್ ಸೌತ್ ಡಿಸ್ಟ್ರಿಕ್ಸ್ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.

‘ರಾ’ (ಆರ್ ಆ್ಯಂಡ್ ಎ ಡಬ್ಲ್ಯು) ಮಾಜಿ ಮುಖ್ಯಸ್ಥ ಸಾಮಂತ್ ಗೋಯಲ್, ಏಜೆಂಟ್ ವಿಕ್ರಮ್ ಯಾದವ್ ಹಾಗೂ ಸದ್ಯ ಅಮೆರಿಕ ಜೈಲಿನಲ್ಲಿರುವ ಭಾರತೀಯ ಉದ್ಯಮಿ ನಿಖಿಲ್ ಗುಪ್ತ ಅವರ ಹೆಸರುಗಳನ್ನೂ ಸಮನ್ಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸೆ.21ರಿಂದ 23ರ ವರೆಗೆ ಅಮೆರಿಕ ಪ್ರವಾಸ ಕೈಗೊಂಡಿದ್ದು, ಇದಕ್ಕೂ ಮುನ್ನವೇ ಈ ಬೆಳವಣಿಗೆ ನಡೆದಿದೆ. ಈ ಕುರಿತು ಪ್ರತಿಕ್ರಿಯಿಸಿರುವ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ‘ಈ ಆರೋಪಗಳು ಅನಪೇಕ್ಷಿತ ಹಾಗೂ ಆಧಾರರಹಿತ’ ಎಂದು ಹೇಳಿದ್ದಾರೆ.

‘ಪನ್ನೂ ಪ್ರಕರಣ: ಭಾರತದ ನಿಲುವಿನಲ್ಲಿ ಬದಲಾವಣೆಯಿಲ್ಲ’

ನವದೆಹಲಿ (ಪಿಟಿಐ): ‘ಭಾರತ ಸರ್ಕಾರದ ವಿರುದ್ಧ ಅಮೆರಿಕ ನ್ಯಾಯಾಲಯದಲ್ಲಿ ದಾವೆ ಹೂಡಿರುವ, ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಕುರಿತು ಹೆಚ್ಚಿಗೆ ಹೇಳಬೇಕಿಲ್ಲ. ಈಗ ಮೊಕದ್ದಮೆ ಹೂಡಲಾಗಿದ್ದರೂ, ಪನ್ನೂ ಹಾಗೂ ಆತ ಪ್ರತಿನಿಧಿಸುವ ಸಂಘಟನೆ ಕುರಿತ ನಮ್ಮ ನಿಲುವುಗಳಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಗುರುವಾರ ಹೇಳಿದ್ದಾರೆ.

‘ಈ ವ್ಯಕ್ತಿ ಪ್ರತಿನಿಧಿಸುವ ಸಿಖ್ಸ್ ಫಾರ್ ಜಸ್ಟಿಸ್ ಸಂಘಟನೆ ಹಲವಾರು ದೇಶವಿರೋಧಿ ಕೃತ್ಯಗಳಲ್ಲಿ ಭಾಗಿಯಾಗಿತ್ತು. ಆದ ಕಾರಣ ಯುಎಪಿಎ ಅಡಿ ಇದನ್ನು ಕಾನೂನುಬಾಹಿರ ಸಂಘಟನೆ ಎಂಬುದಾಗಿ ಘೋಷಿಸಲಾಗಿದೆ’ ಎಂದರು. ಅಮೆರಿಕ ಭೇಟಿ ವೇಳೆ, ಅಧ್ಯಕ್ಷ ಜೋ ಬೈಡನ್ ಅವರೊಂದಿಗಿನ ಸಭೆಯಲ್ಲಿ ಖಾಲಿಸ್ತಾನ ವಿಷಯ ಪ್ರಸ್ತಾಪಗೊಳ್ಳುವುದೇ ಎಂಬ ಪ್ರಶ್ನೆಗೆ ಮಿಸ್ರಿ ನೇರ ಉತ್ತರ ನೀಡಲಿಲ್ಲ.

ಪಶ್ಚಿಮ ಬಂಗಾಳ: ತುರ್ತು ಸೇವೆ ಆರಂಭಿಸಲಿರುವ ಕಿರಿಯ ವೈದ್ಯರು

ಮುಷ್ಕರ ಭಾಗಶಃ ಕೈಬಿಡಲು ನಿರ್ಧಾರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರವು ತಮ್ಮ ಹೆಚ್ಚಿನ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿರುವುದರಿಂದ ಮುಷ್ಕರವನ್ನು ಭಾಗಶಃ ಕೈಬಿಡಲು ಕಿರಿಯ ವೈದ್ಯರು ಗುರುವಾರ ನಿರ್ಧರಿಸಿದ್ದಾರೆ. ತುರ್ತು ಮತ್ತು ಅಗತ್ಯ ಸೇವೆಗಳನ್ನು ನೀಡುವ ಕೆಲಸ ಶನಿವಾರ ಆರಂಭಿಸಲಿದ್ದಾರೆ.

ಆರ್‌.ಜಿ ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ– ಕೊಲೆ ಪ್ರಕರಣ ಖಂಡಿಸಿ ಕಿರಿಯ ವೈದ್ಯರು 41 ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

‘ಪಶ್ಚಿಮ ಬಂಗಾಳದ ಪ್ರವಾಹ ಪರಿಸ್ಥಿತಿಯನ್ನು ಮನಗಂಡು ಮತ್ತು ರಾಜ್ಯ ಸರ್ಕಾರ ನಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಲು ಸಮ್ಮತಿಸಿರುವುದರಿಂದ ಮುಷ್ಕರವನ್ನು ಭಾಗಶಃ ಹಿಂಪಡೆಯುತ್ತಿದ್ದೇವೆ. ತುರ್ತು ಮತ್ತು ಅಗತ್ಯ ಸೇವೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಆದರೆ ಒಪಿಡಿ (ಹೊರ ರೋಗಿ ವಿಭಾಗ) ಕೆಲಸ ಆರಂಭಿಸುವುದಿಲ್ಲ’ ಎಂದು ಗುರುವಾರ ನಡೆದ ಸಭೆಯ ಬಳಿಕ ವೈದ್ಯರು ತಿಳಿಸಿದ್ದಾರೆ.

‘ಸ್ವಾಸ್ಥ್ಯ ಭವನದ (ಆರೋಗ್ಯ ಇಲಾಖೆಯ ಕೇಂದ್ರ ಕಚೇರಿ) ಮುಂದೆ ನಡೆಸುತ್ತಿರುವ ಧರಣಿಯನ್ನು ಕೈಬಿಡುತ್ತೇವೆ. ಸ್ವಾಸ್ಥ್ಯ ಭವನದಿಂದ ಸಿಬಿಐ ಕಚೇರಿಗೆ ಶುಕ್ರವಾರ ಮೆರವಣಿಗೆ ನಡೆಯಲಿದೆ. ನಮ್ಮ ಬೇಡಿಕೆಗಳನ್ನು ಸರ್ಕಾರ ಈಡೇರಿಸಲು ಒಂದು ವಾರ ಕಾಯುತ್ತೇವೆ. ಸರ್ಕಾರ ತನ್ನ ಮಾತು ತಪ್ಪಿದರೆ ಮತ್ತೆ ಮುಷ್ಕರ ಆರಂಭಿಸುತ್ತೇವೆ’ ಎಂದಿದ್ದಾರೆ.

ಸಚಿವರ ಹೇಳಿಕೆ: ವಿವಾದ

ವೈದ್ಯ ವಿದ್ಯಾರ್ಥಿನಿ ಹತ್ಯೆ ಖಂಡಿಸಿ ‘ರಿಕ್ಲೇಮ್ ದಿ ನೈಟ್’ ಹೆಸರಿನಲ್ಲಿ ರಾತ್ರಿ ವೇಳೆ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಮಹಿಳೆಯೊಬ್ಬರು ಮದ್ಯ ಸೇವಿಸಿದ್ದಾರೆ ಎಂದು ಆರೋಪಿಸಿ ಬಂಗಾಳದ ಪಶು ಸಂಗೋಪನಾ ಸಚಿವ ಸ್ವಪನ್ ದೇವನಾಥ್ ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

‘ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯೊಬ್ಬರು ಇಬ್ಬರು ಪುರುಷರ ಜತೆ ಹೋಟೆಲ್‌ವೊಂದರಲ್ಲಿ ಕುಳಿತು ಬಿಯರ್ ಕುಡಿದಿದ್ದಾರೆ’ ಎಂದು ದೇವನಾಥ್ ಅವರು ಹೇಳಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

‘ಆ ಮಹಿಳೆಗೆ ಸಂಬಂಧಿಸಿದಂತೆ ಏನಾದರೂ ಅಹಿತಕರ ಘಟನೆ ನಡೆದಿದ್ದರೆ ಏನಾಗುತ್ತಿತ್ತು? ಪೋಷಕರಿಗೆ ನಾನು ಒಂದು ಮಾತು ಹೇಳುತ್ತೇನೆ– ಮಹಿಳೆಯರಿಗೆ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿ ನಡೆಯುವ ಪ್ರತಿಭಟನೆಯಲ್ಲಿ ನಿಮ್ಮ ಮಗಳು ಪಾಲ್ಗೊಳ್ಳಲಿ. ಆದರೆ, ಮಧ್ಯರಾತ್ರಿಯ ಬಳಿಕ ಆಕೆ ಏನು ಮಾಡುತ್ತಿದ್ದಾಳೆ ಎಂಬುದರ ಬಗ್ಗೆ ನಿಗಾ ವಹಿಸಿ’ ಎಂದು ಹೇಳುವುದು ವಿಡಿಯೊದಲ್ಲಿದೆ. ಟಿಎಂಸಿಯು ಈ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ. ‘ಇಂತಹ ಹೇಳಿಕೆಗಳನ್ನು ಪಕ್ಷವು ಅನುಮೋದಿಸುವುದಿಲ್ಲ’ ಎಂದು ಪಕ್ಷದ ನಾಯಕ ಕುನಾಲ್ ಘೋಷ್ ಹೇಳಿದ್ದಾರೆ.

ನಿರ್ದೇಶನಗಳ ಪಟ್ಟಿ ಬಿಡುಗಡೆ

ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆ, ಭದ್ರತೆ ಮತ್ತು ಕೆಲಸದ ಸ್ಥಳದಲ್ಲಿ ಅವರಿಗೆ ಅನುಕೂಲಕರ ವಾತಾವರಣ ಖಾತರಿಪಡಿಸುವುದಕ್ಕೆ ಸಂಬಂಧಿಸಿದ ನಿರ್ದೇಶನಗಳ ಪಟ್ಟಿಯನ್ನು ಪಶ್ಚಿಮ ಬಂಗಾಳ ಸರ್ಕಾರ ಗುರುವಾರ ಬಿಡುಗಡೆ ಮಾಡಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಅವರು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್‌.ಎಸ್‌.ನಿಗಮ್ ಅವರಿಗೆ ಬರೆದ ಪತ್ರದಲ್ಲಿ, ‘ಆಸ್ಪತ್ರೆಗಳಲ್ಲಿ ವೈದ್ಯರ ಕರ್ತವ್ಯಕ್ಕೆ ಸಾಕಷ್ಟು ಕೊಠಡಿಗಳು, ಶೌಚಾಲಯಗಳು, ಸಿ.ಸಿ.ಟಿ.ವಿ ಕ್ಯಾಮೆರಾಗಳು ಮತ್ತು ಕುಡಿಯುವ ನೀರಿನ ಸೌಲಭ್ಯ’ ಒದಗಿಸುವುದೂ ಸೇರಿದಂತೆ 10 ನಿರ್ದೇಶನಗಳನ್ನು ಹೊರಡಿಸಿದ್ದಾರೆ.

ಚಿತ್ರ ನಿರ್ದೇಶಕ ಪ್ರಕಾಶ್‌ಗೆ ಜಾಮೀನು

ಕೊಲ್ಲಂ (ಕೇರಳ) (ಪಿಟಿಐ): ಖ್ಯಾತ ಚಿತ್ರ ನಿರ್ದೇಶಕ ವಿ.ಕೆ. ಪ್ರಕಾಶ್ ಅವರಿಗೆ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಕೇರಳ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಪ್ರಕಾಶ್ ಅವರನ್ನು ಎರಡು ದಿನ ವಿಚಾರಣೆಗೆ ಗುರಿಪಡಿಸಿದ್ದ ಪಳ್ಳಿತ್ತೋಟಂ ಠಾಣೆಯ ಪೊಲೀಸರು, ಹೈಕೋರ್ಟ್ ನಿರ್ದೇಶನಕ್ಕೆ ಅನುಗುಣವಾಗಿ ಜಾಮೀನು ನೀಡಿದ್ದಾರೆ.

2022ರ ಏಪ್ರಿಲ್‌ನಲ್ಲಿ ಪ್ರಕಾಶ್ ತನಗೆ ಲೈಂಗಿಕ ಕಿರುಕುಳ ನೀಡಿದ್ದರು ಎಂದು ಮಹಿಳೆಯೊಬ್ಬರು ದೂರಿದ್ದರು. ಸಿನಿಮಾ ಚಿತ್ರಕಥೆಯೊಂದನ್ನು ವಿವರಿಸಲು ಪ್ರಕಾಶ್ ಅವರ ಬಳಿ ತೆರಳಿದ್ದಾಗ ದೌರ್ಜನ್ಯ ನಡೆದಿತ್ತು ಎಂದು ಆರೋಪಿಸಿದ್ದಾರೆ. ನ್ಯಾಯಮೂರ್ತಿ ಕೆ. ಹೇಮಾ ಸಮಿತಿಯ ವರದಿ ಬಹಿರಂಗವಾದ ಬಳಿಕ ಈ ಮಹಿಳೆಯು, ತಮ್ಮ ಮೇಲೆ ದೌರ್ಜನ್ಯ ನಡೆದಿತ್ತು ಎಂದು ಬಹಿರಂಗಪಡಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಪ್ರಕರಣ: ನೃತ್ಯ ಸಂಯೋಜಕ ಜಾನಿ ಮಾಸ್ಟರ್ ಸೆರೆ

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ತನ್ನೊಂದಿಗೆ ಕೆಲಸ ಮಾಡುತ್ತಿದ್ದ 21 ವರ್ಷದ ಮಹಿಳೆಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪದ ಮೇರೆಗೆ ನೃತ್ಯ ಸಂಯೋಜಕ ಜಾನಿ ಮಾಸ್ಟರ್ ಅವರನ್ನು ಬಂಧಿಸಲಾಗಿದೆ.

ಜಾನಿ ಮಾಸ್ಟರ್ ಅವರ ನಿಜವಾದ ಹೆಸರು ಶೇಕ್ ಜಾನಿ. ಅವರನ್ನು ಸೈಬರಾಬಾದ್ ಪೊಲೀಸರು ಗೋವಾದಲ್ಲಿ ಬಂಧಿಸಿದ್ದು, ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಬಳಿಕ ‘ಟ್ರಾನ್ಸಿಟ್ ವಾರಂಟ್’ ಪಡೆದು ಅವರನ್ನು ಹೈದರಾಬಾದ್‌ಗೆ ಕರೆತರಲಾಗುತ್ತಿದೆ ಎಂದು ರಾಜೇಂದ್ರನಗರ ವಲಯದ ಡಿಸಿಪಿ ಶ್ರೀನಿವಾಸ್ ತಿಳಿಸಿದರು.

ಹೊರಾಂಗಣ ಚಿತ್ರೀಕರಣದ ವೇಳೆ ಜಾನಿ ಮಾಸ್ಟರ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಮಹಿಳೆ ರಾಯದುರ್ಗ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು. ಅದನ್ನು ಆಧರಿಸಿ ಸೆ. 15ರಂದು ಪ್ರಕರಣ ದಾಖಲಿಸಿದ ಪೊಲೀಸರು, ಬಳಿಕ ಅದನ್ನು ನರಸಿಂಗಿ ಪೊಲೀಸ್ ಠಾಣೆಗೆ ವರ್ಗಾಯಿಸಿದರು.

ದೂರು ದಾಖಲಾದಾಗಿನಿಂದ ಜಾನಿ ನಾಪತ್ತೆಯಾಗಿದ್ದರು. ಅವರ ಶೋಧಕ್ಕಾಗಿ ಪೊಲೀಸರ ನಾಲ್ಕು ತಂಡಗಳನ್ನು ರಚಿಸಲಾಗಿತ್ತು. ಅಂತಿಮವಾಗಿ ಅವರು ಗೋವಾದಲ್ಲಿ ಪತ್ತೆಯಾದರು ಎಂದು ಅವರು ವಿವರಿಸಿದರು.

ಪೋಕ್ಸೊ ಕಾಯ್ದೆಯಡಿಯೂ ಪ್ರಕರಣ: ತನ್ನ ಮೇಲೆ ಜಾನಿ ಅವರು ಐದು ವರ್ಷಕ್ಕೂ ಹೆಚ್ಚು ಕಾಲದಿಂದ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಥಳಿಸಿದ್ದಾರೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಆ ವೇಳೆಯಲ್ಲಿ ಅವರು ಬಾಲಕಿಯಾಗಿದ್ದ ಕಾರಣ, ಜಾನಿ ವಿರುದ್ಧ ಪೋಕ್ಸೊ ಕಾಯ್ದೆಯಡಿಯೂ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಸಮಿತಿ ರಚನೆ: ಇದರ ಬೆನ್ನಲ್ಲೇ ತೆಲುಗು ಸಿನಿಮಾ ಮತ್ತು ವಾಣಿಜ್ಯ ಮಂಡಳಿ ಜಾನಿ ಮಾಸ್ಟರ್ ಅವರನ್ನು ಉಚ್ಚಾಟಿಸಿದೆ. ಅಲ್ಲದೆ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಸಮಿತಿಯೊಂದನ್ನು ರಚಿಸಿದ್ದು, 90 ದಿನಗಳೊಳಗೆ ವರದಿ ನೀಡುವಂತೆ ತಿಳಿಸಿದೆ.

ಸಂತ್ರಸ್ತೆಗೆ ಅಗತ್ಯ ನೆರವು ನೀಡುವುದಾಗಿ ತೆಲಂಗಾಣ ರಾಜ್ಯ ಮಹಿಳಾ ಆಯೋಗ ತಿಳಿಸಿದೆ.

‘ಲವ್ ಜಿಹಾದ್’ ಆರೋಪ: ಈ ಪ್ರಕರಣ ಕುರಿತು ರಾಜಕೀಯ ಪಕ್ಷಗಳೂ ಪ್ರತಿಕ್ರಿಯೆ ನೀಡಿದ್ದು, ರಾಜಕೀಯ ಬಣ್ಣ ಪಡೆದುಕೊಂಡಿದೆ. ತೆಲಂಗಾಣ ಬಿಜೆಪಿ ಮಹಿಳಾ ಮೋರ್ಚಾವು ಇದನ್ನು ‘ಲವ್ ಜಿಹಾದ್’ ಎಂದು ದೂರಿದೆ.

ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷವು ತನ್ನ ಕಾರ್ಯಕ್ರಮಗಳಿಂದ ದೂರ ಉಳಿಯುವಂತೆ ಜಾನಿ ಮಾಸ್ಟರ್‌ಗೆ ಸೂಚಿಸಿದೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜಾನಿ ಅವರು ಜನಸೇನಾ ಪಕ್ಷದ ಪರವಾಗಿ ಪ್ರಚಾರ ನಡೆಸಿದ್ದರು.

ಮುಖ್ಯಾಂಶಗಳು

- ಚಿತ್ರೀಕರಣದ ವೇಳೆ ಲೈಂಗಿಕ ದೌರ್ಜನ್ಯ– ದೂರು
- ಜಾನಿ ಮಾಸ್ಟರ್ ವಿರುದ್ಧ ಪೋಕ್ಸೊ ಕಾಯ್ದೆಯಡಿಯೂ ಪ್ರಕರಣ ದಾಖಲು

ಬಿಹಾರದ ನವಾದಾ ಜಿಲ್ಲೆಯಲ್ಲಿ ಘಟನೆ • ಒಂಬತ್ತು ಆರೋಪಿಗಳ ಬಂಧನ

ಜಾತಿ ಕಲಹ: 21 ಮನೆಗಳಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಹಾರದಲ್ಲಿ ಜಾತಿ ಕಲಹ ಮತ್ತೆ ಮುನ್ನೆಲೆಗೆ ಬಂದಿದೆ. ರಾಜ್ಯದ ನವಾದಾ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಮಹಾದಲಿತ್ ಜಾತಿಗೆ ಸೇರಿದ 21 ಗುಡಿಸಲುಗಳಿಗೆ ಬೆಂಕಿ ಹಚ್ಚಲಾಗಿದೆ. ಮಹಾದಲಿತ್ ಜಾತಿಯವರೇ ಸರ್ಕಾರಿ ಭೂಮಿಯ ದೊಡ್ಡ ಭಾಗದ ‘ಮಾಲೀಕತ್ವ’ ಹೊಂದಿದ್ದಾರೆ ಎಂಬ ಆಕ್ಷೇಪ ಇದಕ್ಕೆ ಕಾರಣವಾಗಿದೆ.

ವಸತಿ ಮತ್ತು ವಾಣಿಜ್ಯ ಭೂಮಿಗಳ ಮಾಲೀಕತ್ವ ಯಾರದು ಎಂದು ಗುರುತಿಸಲು ಬಿಹಾರ ಸರ್ಕಾರವು ಇತ್ತೀಚೆಗೆ ರಾಜ್ಯವ್ಯಾಪಿ ಸರ್ವೆ ನಡೆಸುವ ಕಾರ್ಯಾಚರಣೆಗೆ ಚಾಲನೆ ನೀಡಿದೆ.

ನವಾದಾ ಜಿಲ್ಲೆಯ ಕೃಷ್ಣಾನಗರ ಹಾಡಿ ಪ್ರದೇಶದಲ್ಲಿ ಸರ್ವೆ ನಡೆಯುವ ವೇಳೆಯೇ ಬಹುತೇಕ ದಲಿತರೇ ಇದ್ದ ಗುಂಪು, ಮಹಾದಲಿತ್ ಜಾತಿಯವರು ವಾಸವಿದ್ದ ಹಾಡಿ ಮೇಲೆ ದಾಳಿ ನಡೆಸಿದ್ದು, ಬೆಂಕಿ ಹಚ್ಚಿದೆ.

ಮಾಧ್ಯಮ ವರದಿಗಳ ಪ್ರಕಾರ, ಒಟ್ಟು 80 ಮನೆಗಳಿಗೆ ಬೆಂಕಿ ಹಚ್ಚಲಾಗಿದೆ. ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಭಿನವ್ ಧಿಮನ್, ‘21 ಗುಡಿಸಲುಗಳಿಗೆ ಬೆಂಕಿಹಚ್ಚಲಾಗಿದೆ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಬೆಂಕಿ ಅವಘಡದಲ್ಲಿ ಯಾರಿಗೂ ಗಾಯವಾಗಿಲ್ಲ. ಮುಖ್ಯ ಆರೋಪಿ ನಂದು ಪಾಸ್ವಾನ್ ಮತ್ತು ಇತರೆ ಒಂಬತ್ತು ಜನರನ್ನು ಬಂಧಿಸಲಾಗಿದೆ’ ಎಂದು ಎಸ್‌ಪಿ ಗುರುವಾರ ತಿಳಿಸಿದರು.

ಬಿಹಾರದಲ್ಲಿ ಪಾಸ್ವಾನ್ ಸಮುದಾಯದವರನ್ನು ದಲಿತರಾಗಿ, ಮಾಂಝಿಗಳನ್ನು ಮಹಾದಲಿತ್ ಎಂದು ವರ್ಗೀಕರಿಸಲಾಗಿದೆ. ಇವು, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಅತಿ ಹಿಂದುಳಿದ ವರ್ಗಗಳಾಗಿವೆ.

ಈ ಕೃತ್ಯ ಖಂಡನೀಯ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ. ನಿರ್ದಿಷ್ಟ ಸಮುದಾಯದ, ಆರ್‌ಜೆಡಿ ಬೆಂಬಲಿಗರನ್ನೇ ಗುರಿಯಾಗಿಸಿ ಬಂಧಿಸಲಾಗಿದೆ

ಲಾಲು ಪ್ರಸಾದ್, ಆರ್‌ಜೆಡಿ ಮುಖ್ಯಸ್ಥ

ಬಿಹಾರದ ನವಾದಾದಲ್ಲಿ ಬೆಂಕಿಯಿಂದ ಸುಟ್ಟು ಭಸ್ಮವಾದ ಗುಡಿಸಲಿನ ಅವಶೇಷಗಳ ಎದುರು ಆತಂತ್ರ ಕುಟುಂಬ –ಪಿಟಿಐ ಚಿತ್ರ

ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ಪಾಸ್ವಾನ್ ಸಮುದಾಯದವರು ಇವರ ತಂದೆ ರಾಮ್‌ವಿಲಾಸ್ ಪಾಸ್ವಾನ್ ಈ ಸಮುದಾಯದ ಅಗ್ರಗಣ್ಯ ನಾಯಕರಾಗಿದ್ದರು. ಮತ್ತೊಬ್ಬ ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ಅವರು ಮಹಾದಲಿತ್ ಸಮುದಾಯದವರು.

ಬುಧವಾರದ ಘಟನೆಗೆ ಪ್ರತಿಕ್ರಿಯಿಸಿರುವ ಸಚಿವ ಮಾಂಝಿ, ‘ಈ ಕೃತ್ಯದಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣಕ್ರಮವನ್ನು ಕೈಗೊಳ್ಳಬೇಕು’ ಎಂದು ನಿತೀಶ್ ಕುಮಾರ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. ಚಿರಾಗ್ ಪಾಸ್ವಾನ್ ಅವರು, ‘ತಪ್ಪು ಮಾಡಿದವರನ್ನು ಶೀಘ್ರ ಬಂಧಿಸಿ ಕ್ರಮಜರುಗಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ವಿರೋಧಪಕ್ಷದ ನಾಯಕ ತೇಜಸ್ವಿ ಯಾದವ್ ಅವರು, ಕೃತ್ಯಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ನೇರ ವಾಗ್ದಾಳಿ ನಡೆಸಿದ್ದಾರೆ.

ಸಿಬಿಎಫ್‌ಸಿ ನಡೆ ಬಗ್ಗೆ ಹೈಕೋರ್ಟ್ ಆಕ್ಷೇಪ

ಎಮರ್ಜೆನ್ಸಿ ಸಿನಿಮಾ: ಸ್ವಾತಂತ್ರ್ಯ ಹತ್ತಿಕ್ಕುವಂತಿಲ್ಲ

ಮುಂಬೈ (ಪಿಟಿಐ): ಸೃಜನಾತ್ಮಕ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಿಲ್ಲ ಎಂದು ಹೇಳಿರುವ ಬಾಂಬೆ ಹೈಕೋರ್ಟ್, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಎದುರಾಗಬಹುದು ಎಂಬ ಆತಂಕದ ಕಾರಣಕ್ಕೆ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಚಲನ ಚಿತ್ರಕ್ಕೆ ಪ್ರಮಾಣಪತ್ರ ನಿರಾಕರಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಾಬಾವಾಲಾ ಮತ್ತು ಫಿರ್ದೋಷ್ ಪೂನಿವಾಲಾ ಅವರು ಇದ್ದ ವಿಭಾಗೀಯ ಪೀಠವು, ಕಂಗನಾ ರನೌತ್ ನಟನೆಯ ‘ಎಮರ್ಜೆನ್ಸಿ’ ಸಿನಿಮಾಕ್ಕೆ ಪ್ರಮಾಣಪತ್ರ ನೀಡುವ ವಿಚಾರವಾಗಿ ಯಾವುದೇ ತೀರ್ಮಾನ ಕೈಗೊಳ್ಳದ ಸಿಪಿಎಫ್‌ಸಿ ಕುರಿತು ಅಸಮಾಧಾನ ವ್ಯಕ್ತಪಡಿಸಿತು. ನಿರ್ಧಾರವನ್ನು ಸೆಪ್ಟೆಂಬರ್ 25ಕ್ಕೆ ಮೊದಲು ಕೈಗೊಳ್ಳಬೇಕು ಎಂದು ಅದು ಮಂಡಳಿಗೆ ಸೂಚಿಸಿತು.

ಸಿನಿಮಾವೊಂದರಲ್ಲಿ ತೋರಿಸುವುದೆಲ್ಲವನ್ನೂ ನಂಬುವಷ್ಟು ದೇಶದ ಜನ ಮುಗ್ಧರಿದ್ದಾರೆ ಎಂದು ಮಂಡಳಿಯು ಭಾವಿಸಿದೆಯೇ ಎಂಬ ಪ್ರಶ್ನೆಯನ್ನು ಪೀಠವು ಕೇಳಿತು.

ಮಂಡಳಿಯು ರಾಜಕೀಯ ಕಾರಣಗಳಿಗಾಗಿ, ಈ ಸಿನಿಮಾಕ್ಕೆ ಪ್ರಮಾಣಪತ್ರ ನೀಡಲು ತಡ ಮಾಡುತ್ತಿದೆ ಎಂದು ಅರ್ಜಿದಾರರು ದೂರಿದ್ದಕ್ಕೆ ಪ್ರತಿಯಾಗಿ ಪೀಠವು, ಸಿನಿಮಾದ ಸಹ ನಿರ್ಮಾಪಕಿ ಆಗಿರುವ ಕಂಗನಾ ಅವರೇ ಬಿಜೆಪಿ ಸಂಸದೆ ಕೂಡ ಆಗಿದ್ದಾರೆ, ಆಡಳಿತ ಪಕ್ಷವು ತನ್ನದೇ ಸಂಸದೆಗೆ ವಿರುದ್ಧವಾಗಿದೆಯೇ ಎಂದು ಪ್ರಶ್ನಿಸಿತು.

ಕಂಗನಾ ಅವರು ಈ ಸಿನಿಮಾದ ನಿರ್ದೇಶನ ಕೂಡ ಮಾಡಿದ್ದಾರೆ. ಅಲ್ಲದೆ ಅವರು ಸಿನಿಮಾದಲ್ಲಿ ಇಂದಿರಾ ಗಾಂಧಿ ಅವರ ಪಾತ್ರ ನಿಭಾಯಿಸಿದ್ದಾರೆ. ಸಿನಿಮಾ ಬಿಡುಗಡೆಯನ್ನು ವಿಳಂಬಗೊಳಿಸುವ ಉದ್ದೇಶದಿಂದ, ಮಂಡಳಿಯು ಪ್ರಮಾಣಪತ್ರ ನೀಡುತ್ತಿಲ್ಲ ಎಂದು ಅವರು ಈಚೆಗೆ ದೂರಿದ್ದರು.

‘ನೀವು ಒಂದಲ್ಲ ಒಂದು ಬಗೆಯಲ್ಲಿ ತೀರ್ಮಾನ ಕೈಗೊಳ್ಳಬೇಕು. ಈ ಸಿನಿಮಾ ಬಿಡುಗಡೆ ಸಾಧ್ಯವಿಲ್ಲ ಎಂದು ಹೇಳುವ ಧೈರ್ಯ ನಿಮಗೆ ಇರಬೇಕು. ಆಗ ನಾವು ನಿಮ್ಮ ಧೈರ್ಯವನ್ನು ಮೆಚ್ಚಿಕೊಳ್ಳಬಹುದು. ಆದರೆ ನೀವು (ಮಂಡಳಿ) ಬೇಲಿಮೇಲೆ ಕುಳಿತವರಂತೆ ಆಡುವುದು ನಮಗೆ ಇಷ್ಟವಿಲ್ಲ’ ಎಂದು ಪೀಠವು ಹೇಳಿದೆ.

‘ಎಮರ್ಜೆನ್ಸಿ’ ಸಿನಿಮಾಕ್ಕೆ ಪ್ರಮಾಣಪತ್ರ ನೀಡುವಂತೆ ಮಂಡಳಿಗೆ ಸೂಚನೆ ನೀಡಬೇಕು ಎಂಬ ಕೋರಿಕೆಯೊಂದಿಗೆ ಜೀ ಎಂಟರ್‌ಟೇನ್ಮೆಂಟ್ ಎಂಟರ್‌ಪ್ರೈಸಸ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸುತ್ತಿದೆ. ಈ ಸಿನಿಮಾ ಸೆಪ್ಟೆಂಬರ್ 6ಕ್ಕೆ ಬಿಡುಗಡೆ ಆಗಬೇಕಿತ್ತು.

ಸಿಬಿಎಫ್‌ಸಿ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿನವ್ ಚಂದ್ರಚೂಡ್ ಅವರು, ಈ ಚಿತ್ರವನ್ನು ಮಂಡಳಿಯ ಅಧ್ಯಕ್ಷರು ಪುನರ್‌ಪರಿಶೀಲನಾ ಸಮಿತಿಗೆ ಅಂತಿಮ ತೀರ್ಮಾನಕ್ಕಾಗಿ ರವಾನಿಸಿದ್ದಾರೆ ಎಂದು ತಿಳಿಸಿದರು. ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಎದುರಾಗಬಹುದು ಎಂಬ ಆತಂಕ ಇದೆ ಎಂದು ಅವರು ಪೀಠಕ್ಕೆ ತಿಳಿಸಿದರು.

‘ಕಾನೂನು ಮತ್ತು ಸುವ್ಯವಸ್ಥೆಗೆ ತೊಂದರೆ ಆಗಬಹುದು, ಹೀಗಾಗಿ ಸಿನಿಮಾಕ್ಕೆ ಪ್ರಮಾಣಪತ್ರ ನೀಡಲಾಗದು ಎಂಬ ತೀರ್ಮಾನಕ್ಕೆ ಸಿಬಿಎಫ್‌ಸಿ ಬರಬಾರದು. ಇದು ನಿಲ್ಲಬೇಕು. ಇಲ್ಲದಿದ್ದರೆ ನಾವು ಸೃಜನಾತ್ಮಕ ಸ್ವಾತಂತ್ರ್ಯವನ್ನು ಹತ್ತಿಕ್ಕಿದಂತಾಗುತ್ತದೆ’ ಎಂದು ಪೀಠವು ಹೇಳಿತು.

ಜನ ಏಕೆ ಇಷ್ಟು ಸೂಕ್ಷ್ಮ ಆಗುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ನನ್ನ ಸಮುದಾಯವನ್ನು ಸಿನಿಮಾಗಳಲ್ಲಿ ಹಾಸ್ಯದ ವಸ್ತುವಾಗಿಸಲಾಗುತ್ತದೆ. ಆದರೆ, ನಾವು ನಕ್ಕು ಸುಮ್ಮನಾಗುತ್ತೇವೆ

ನ್ಯಾಯಮೂರ್ತಿ ಬಿ.ಪಿ. ಕೊಲಾಬಾವಾಲಾ (ಲಘು ಧಾಟಿಯಲ್ಲಿ ಹೇಳಿದ ಮಾತು)

ತಿರುಪತಿ ಲಡ್ಡು: ವಾಗ್ವಾದಕ್ಕೆ 'ಆಹಾರ'

ವೈಎಸ್‌ಆರ್‌ಸಿಪಿ ಅವಧಿಯಲ್ಲಿ ಪ್ರಾಣಿ ಕೊಬ್ಬು ಬಳಕೆ: ನಾಯ್ಡು • ಪ್ರಯೋಗಾಲಯದ ವರದಿ ಬಿಡುಗಡೆ

ಅಮರಾವತಿ (ಪಿಟಿಐ): ತಿರುಪತಿ ದೇವಸ್ಥಾನದ ಪ್ರಸಾದ 'ಲಡ್ಡು' ಈಗ ಸರ್ಕಾರ ಮತ್ತು ವಿಪಕ್ಷಗಳ ನಡುವೆ ವಾಗ್ವಾದಕ್ಕೆ ಆಹಾರವಾಗಿದೆ.

'ತಿರುಮಲ ದೇವಸ್ಥಾನದ ಪ್ರಸಾದ 'ಲಡ್ಡು' ತಯಾರಿಸಲು, ಈ ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ಅವಧಿಯಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿತ್ತು' ಎಂದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಹೇಳಿಕೆಗೆ, ಪ್ರತಿಪಕ್ಷಗಳು ತೀವ್ರ ಆಕ್ಷೇಪ ಮತ್ತು ವಿರೋಧ ವ್ಯಕ್ತಪಡಿಸಿವೆ.

ಮುಖ್ಯಮಂತ್ರಿಯವರ ಹೇಳಿಕೆ ವಿವಾದಕ್ಕೀಡಾದಂತೆ ಅದರ ಸಮರ್ಥನೆಯಾಗಿ ಗುಜರಾತ್‌ನ ಜಾನುವಾರು ಪ್ರಯೋಗಾಲಯ ಎನ್‌ಡಿಡಿಬಿ ಕಾಫ್ ಲಿಮಿಟೆಡ್‌ನ ವರದಿಯನ್ನು ಟಿಡಿಪಿ ಬಿಡುಗಡೆ ಮಾಡಿದೆ.

ಲಡ್ಡುವನ್ನು ತಯಾರಿಸಲು ಬಳಸಿದ್ದ ತುಪ್ಪದ ಮಾದರಿಯಲ್ಲಿ ಗೋಮಾಂಸದ ಚರ್ಬಿಯ ಅಂಶವು ಪತ್ತೆಯಾಗಿದೆ ಎಂದು ದೃಢಪಡಿಸುವ ಪ್ರಯೋಗಾಲಯ ವರದಿಯನ್ನು ಟಿಡಿಪಿ ವಕ್ತಾರ ಆನಂ ವೆಂಕಟರಮಣ ರೆಡ್ಡಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದರು.

ಈ ವರದಿಯ ಪ್ರಕಾರ, ತುಪ್ಪದ ಮಾದರಿಯಲ್ಲಿ ಮೀನಿನ ಎಣ್ಣೆ, ಗೋಮಾಂಸದ ಚರ್ಬಿ, ಹಂದಿಯ ಕೊಬ್ಬಿನ ಅಂಶಗಳು ಇರುವುದು ಪತ್ತೆಯಾಗಿದೆ. 2024ರ ಜುಲೈ 9ರಂದು ತುಪ್ಪದ ಮಾದರಿಯನ್ನು ಪಡೆಯಲಾಗಿತ್ತು. ಪ್ರಯೋಗಾಲಯದ ವರದಿಯು ಜುಲೈ 16ರಂದು ಬಂದಿದೆ.

'ರಾಜಕೀಯ ಲಾಭಕ್ಕಾಗಿ ಆರೋಪ'

ತಿರುಪತಿ ಲಡ್ಡು

'ಇದು, ದುರುದ್ದೇಶದ ಆರೋಪ. ರಾಜಕೀಯ ಲಾಭಕ್ಕಾಗಿ ಟಿಡಿಪಿ ಮುಖ್ಯಸ್ಥರೂ ಆದ ಮುಖ್ಯಮಂತ್ರಿ ಯಾವ ಮಟ್ಟಕ್ಕೂ ಇಳಿಯಬಲ್ಲರು' ಎಂದು ವೈಎಸ್‌ಆರ್‌ಸಿಪಿ ನಾಯಕ, ಟಿಟಿಡಿಯ ಮಾಜಿ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ತಿರುಗೇಟು ನೀಡಿದ್ದಾರೆ.

ಎರಡು ಅವಧಿಗೆ ಟಿಟಿಡಿ ಅಧ್ಯಕ್ಷರಾಗಿದ್ದ, ರಾಜ್ಯಸಭೆ ಸದಸ್ಯರಾದ ಸುಬ್ಬಾರೆಡ್ಡಿ, 'ಇಂತಹ ಆರೋಪದ ಮೂಲಕ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ದೇವಸ್ಥಾನದ ಪಾವಿತ್ರ್ಯತಕ್ಕೆ ಧಕ್ಕೆ ಉಂಟುಮಾಡಿದ್ದಾರೆ. ಈ ಹೇಳಿಕೆಯಿಂದ ದೇವಸ್ಥಾನದ ಕೋಟ್ಯಂತರ ಭಕ್ತರಿಗೂ ನೋವುಂಟು ಮಾಡಿದ್ದಾರೆ' ಎಂದು ಆರೋಪಿಸಿದರು.

'ಮುಖ್ಯಮಂತ್ರಿಯವರ ಹೇಳಿಕೆ ದುರುದ್ದೇಶದಿಂದ ಕೂಡಿದೆ. ಯಾವುದೇ ವ್ಯಕ್ತಿ ಇಂತಹ ಪದಗಳನ್ನು ಬಳಸಲು ಅಥವಾ ಹೀಗೆ ಆರೋಪ ಮಾಡಲು ಬಯಸುವುದಿಲ್ಲ' ಎಂದಿದ್ದಾರೆ.

ಹಿಂದಿನ ವೈಎಸ್‌ಆರ್ ಸರ್ಕಾರದ ಹಿಂದೂ ವಿರೋಧಿ ಕೃತ್ಯಗಳು ಗೊತ್ತಿರುವಂಥದ್ದೆ. ಈ ಕೃತ್ಯದಲ್ಲಿ ತೊಡಗಿದ್ದವರ ಮೇಲೆ ಸರ್ಕಾರ ಕಠಿಣ ಕ್ರಮಜರುಗಿಸಬೇಕು

ವಿನೋದ್ ಬನ್ಸಾಲ್
ರಾಷ್ಟ್ರೀಯ ವಕ್ತಾರ, ವಿಎಚ್‌ಪಿ

ತಿರುಪತಿ ದೇಗುಲ ಭಕ್ತಿಭಾವದ ತಾಣ. ಹಿಂದಿನ ಸರ್ಕಾರದ ಅವಧಿಯಲ್ಲಿ ಲಡ್ಡು ತಯಾರಿಸಲು ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿತ್ತು ಎಂದು ತಿಳಿದು ದಿಗ್ಭ್ರಮೆಯಾಗಿದೆ

ನಾರಾ ಲೋಕೇಶ್
ಮಾಹಿತಿ ತಂತ್ರಜ್ಞಾನ ಸಚಿವ

ಆದರೆ, ಆಂಧ್ರಪ್ರದೇಶ ಸರ್ಕಾರ ಅಥವಾ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಅಧಿಕೃತವಾಗಿ ಈ ವರದಿಯನ್ನು ದೃಢಪಡಿಸಿಲ್ಲ. ಗುಜರಾತ್‌ನಲ್ಲಿರುವ ಕೇಂದ್ರ ಸರ್ಕಾರದ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯಲ್ಲಿ ಈ ಪ್ರಯೋಗಾಲಯವಿದೆ.

ಬುಧವಾರ ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಕುರಿತು ಮಾತನಾಡಿದ್ದ ಮುಖ್ಯಮಂತ್ರಿ, 'ನಮ್ಮ ಸರ್ಕಾರ ಬಂದ ಮೇಲೆ ಶುದ್ಧ ತುಪ್ಪವನ್ನೇ ಬಳಸಲಾಗುತ್ತಿದೆ. ಪ್ರಸಾದದ ಗುಣಮಟ್ಟ ವೃದ್ಧಿಸಲು ತಯಾರಿಕೆಯ ಸ್ಥಳವನ್ನು ಶುದ್ಧೀಕರಿಸಲಾಗಿದೆ' ಎಂದೂ ಹೇಳಿದ್ದರು.

ದುರುದ್ದೇಶದ ಹೇಳಿಕೆ, ಮುಖ್ಯಮಂತ್ರಿಯನ್ನು ದೇವರೇ ಶಿಕ್ಷಿಸುತ್ತಾನೆ–ಮಾಜಿ ಅಧ್ಯಕ್ಷ

ಅಮರಾವತಿ (ಪಿಟಿಐ): 'ರಾಜಕೀಯ ಲಾಭಕ್ಕಾಗಿ ಮುಖ್ಯಮಂತ್ರಿ ಎನ್.ಚಂದ್ರಬಾಬುನಾಯ್ಡು ಇಂತಹ ಹೇಳಿಕೆ ನೀಡಿರುವುದು ಶೋಚನೀಯ. ದುರುದ್ದೇಶದ ಇಂತಹ ಕೃತ್ಯದಲ್ಲಿ ಯಾರಾದರೂ ತೊಡಗಿದಲ್ಲಿ, ಅಂತಹವರನ್ನು ಮಹಾ ವಿಷ್ಣು ನಾಶಪಡಿಸುತ್ತಾನೆ' ಎಂದು ವೈಎಸ್‌ಆರ್‌ಸಿಪಿ ಹಿರಿಯ ಮುಖಂಡ ಬಿ.ಕರುಣಾಕರ ರೆಡ್ಡಿ ಟೀಕಿಸಿದ್ದಾರೆ.

ಎರಡು ಅವಧಿಗೆ ಟಿಟಿಡಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಕರುಣಾಕರ ರೆಡ್ಡಿ, 'ಸಿ.ಎಂ ನಾಯ್ಡು ಮತ್ತು ಅವರ ಕುಟುಂಬ ಸದಸ್ಯರಿಗೆ ತಿರುಪತಿಯ ದೇವರೇ ಶಿಕ್ಷೆ ನೀಡಲಿದೆ. ಈ ಆರೋಪ ಅಸಮರ್ಥನೀಯ, ದುರುದ್ದೇಶದಿಂದ ಕೂಡಿದ್ದು ಹಾಗೂ ದೇವಸ್ಥಾನಕ್ಕೆ ಎಸಗಿದ ಅಪಚಾರವಾಗಿದೆ' ಎಂದು ಪ್ರತಿಕ್ರಿಯಿಸಿದರು.

ಮಾಜಿ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಹಾಗೂ ಪ್ರತಿಪಕ್ಷವನ್ನು ರಾಜಕೀಯವಾಗಿ ಹಣಿಯುವ ಉದ್ದೇಶದಿಂದ ಹೀಗೆ ಆರೋಪ ಮಾಡಿದ್ದಾರೆ ಎಂದು ಅವರು ಆರೋಪಿಸಿದರು.

ಸಿಬಿಐ ತನಿಖೆಗೆ ಒಪ್ಪಿಸಲಿ –ಶರ್ಮಿಳಾ

ಅಮರಾವತಿ (ಪಿಟಿಐ): ತಿರುಪತಿ ದೇವಸ್ಥಾನದ ಪ್ರಸಾದ ಲಡ್ಡು ತಯಾರಿಸಲು ನಿಜವಾಗಿ ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿದೆಯೇ ಎಂದು ತಿಳಿಯಲು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಒತ್ತಾಯಿಸಿದ್ದಾರೆ.

ಈ ಕುರಿತ ಸಿ.ಎಂ ಹೇಳಿಕೆಯಿಂದ ತಿರುಪತಿ ವೆಂಕಟೇಶ್ವರನ ಆರಾಧಿಸುವ ಕೋಟ್ಯಂತರ ಭಕ್ತರ ಭಾವನೆಗಳಿಗೆ ಧಕ್ಕೆಯಾಗಿದೆ. ಸರ್ಕಾರ ಈ ಬಗ್ಗೆ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಲಿ ಅಥವಾ ತನಿಖೆ ಹೊಣೆಯನ್ನು ಸಿಬಿಐಗೆ ಒಪ್ಪಿಸಲಿ ಎಂದು ಒತ್ತಾಯಿಸಿದರು.

ಕೆಲಸದ ಒತ್ತಡಕ್ಕೆ ಉದ್ಯೋಗಿ ಸಾವು: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅರ್ನ್ಸ್ಟ್ ಆ್ಯಂಡ್ ಯಂಗ್' (ಇವೈ) ಕಂಪನಿಯ ಯುವ ಮಹಿಳಾ ಉದ್ಯೋಗಿಯು ಕೆಲಸದ ಒತ್ತಡ, ಶೋಷಣೆ ಮತ್ತು ಅಸುರಕ್ಷಿತ ಪರಿಸರದಿಂದಾಗಿ ಮೃತಪಟ್ಟಿದ್ದಾರೆ ಎಂಬ ಆರೋಪದ ಕಾರಣ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ತನಿಖೆಗೆ ಗುರುವಾರ ಆದೇಶಿಸಿದೆ.

ಪುಣೆಯಲ್ಲಿ ಚಾರ್ಟೆಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಕೊಚ್ಚಿಯ ನಿವಾಸಿ ಅನ್ನಾ ಸೆಬಾಸ್ಟಿಯನ್ ಪೆರಾಯಿಲ್ (26) ಅವರು ಜುಲೈ 20ರಂದು ಮೃತಪಟ್ಟಿದ್ದರು. ಅತಿಯಾದ ಕೆಲಸದ ಒತ್ತಡದಿಂದ ತನ್ನ ಮಗಳು ಮೃತಪಟ್ಟಿದ್ದಾಳೆ ಎಂದು ಅನ್ನಾ ಅವರ ತಾಯಿ ಅನಿತಾ ಅವರು ಕಂಪನಿಗೆ ಪತ್ರ ಬರೆದಿದ್ದು, ಅದು ಬಹಿರಂಗವಾಗಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಅನಿತಾ ಅವರ ಪತ್ರಕ್ಕೆ ಪ್ರತಿಕ್ರಿಯಿಸಿರುವ ಕಂಪನಿಯು, ಈ ಸಂಬಂಧ ಪರಿಶೀಲಿಸುತ್ತೇವೆ ಮತ್ತು ಅವರ ಕುಟುಂಬದವರನ್ನು ಭೇಟಿಯಾಗಲು ಬಯಸುತ್ತೇವೆ ಎಂದು ತಿಳಿಸಿದೆ.

ಈ ಕುರಿತು 'ಎಕ್ಸ್' ಮಾಡಿರುವ ಕಾರ್ಮಿಕ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, 'ಅನ್ನಾ ಅವರ ನಿಧನದಿಂದ ತೀವ್ರ ದುಃಖಿತಳಾಗಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯಲಿದ್ದು, ನ್ಯಾಯ ದೊರಕಿಸಲು ಇಲಾಖೆ ಬದ್ಧವಾಗಿದೆ' ಎಂದು ಭರವಸೆ ನೀಡಿದ್ದಾರೆ.

ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಅವರು, ಅನ್ನಾ ಅವರ ಸಾವು ನೋವು ತರಿಸಿದೆ. ಅವರ ತಾಯಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಕಾರ್ಮಿಕ ಸಚಿವರಾದ ಮನಸುಖ್ ಮಾಂಡವಿಯ ಮತ್ತು ಶೋಭಾ ಕರಂದ್ಲಾಜೆ ಅವರನ್ನು ಕೋರುತ್ತೇನೆ ಎಂದಿದ್ದಾರೆ.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, 'ಅನ್ನಾ ಅವರ ಸಾವು ಮತ್ತು ಅವರ ತಾಯಿಯ ಭಾವನಾತ್ಮಕ ಪತ್ರವು ದೇಶದ ಯುವಕರನ್ನು ಬೆಚ್ಚಿಬೀಳಿಸಿದೆ' ಎಂದಿದ್ದಾರೆ.

ಸರ್ಕಾರ ಸೇರಿದಂತೆ ಕಾರ್ಪೊರೇಟ್ ಸಂಸ್ಥೆಗಳಲ್ಲಿನ ಪ್ರತಿಯೊಬ್ಬರೂ ಈ ಪತ್ರವನ್ನು ಎಚ್ಚರಿಕೆ ಮತ್ತು ಸಲಹೆ ಎಂದು ಪರಿಗಣಿಸಬೇಕು. ಕೆಲಸದ ವಾತಾವರಣ, ಪರಿಸ್ಥಿತಿ ಸರಿಯಿಲ್ಲದಾಗ, ಉತ್ತಮ ಕಾರ್ಯಕ್ಷಮತೆ ಮತ್ತು ಉತ್ತಮ ಫಲಿತಾಂಶ ಹೇಗೆ ಲಭ್ಯವಾಗುತ್ತದೆ ಎಂದು ಅವರು 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

'ಯಾರಿಗೂ ಹೀಗಾಗಬಾರದು'

ಕೊಚ್ಚಿ (ಪಿಟಿಐ): 'ಮಗಳ ಸಾವಿನ ಸಂಬಂಧ ನಾವು ಯಾವುದೇ ಕಾನೂನು ಹೋರಾಟ ಮಾಡುವುದಿಲ್ಲ. ಆದರೆ ನನ್ನ ಮಗಳಿಗೆ ಆದಂತೆ ಬೇರೆ ಯಾರಿಗೂ ಆಗಬಾರದು ಎಂಬುದಷ್ಟೇ ನಮ್ಮ ಕಳಕಳಿ' ಎಂದು ಅನ್ನಾ ಅವರ ತಂದೆ ಸಿಬಿ ಜೋಸೆಫ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

'ನನ್ನ ಮಗಳು ನಾಲ್ಕು ತಿಂಗಳ ಹಿಂದೆಯಷ್ಟೇ ಅಲ್ಲಿ ಕೆಲಸಕ್ಕೆ ಸೇರಿದ್ದಳು. ಕೆಲಸದ ಒತ್ತಡ ಹೆಚ್ಚಿತ್ತು. ರಾತ್ರಿ 12.30ರವರೆಗೂ ಕೆಲಸ ಮಾಡುತ್ತಿದ್ದಳು. ನಾವು ಅವಳಿಗೆ ಕೆಲಸಕ್ಕೆ ರಾಜೀನಾಮೆ ನೀಡುವಂತೆ ಹೇಳಿದ್ದೆವು. ಆದರೆ ಅವಳು ಕೇಳಲಿಲ್ಲ' ಎಂದು ಅವರು ವಿವರಿಸಿದರು.

'ಕೆಲಸದ ಒತ್ತಡ ಹೆಚ್ಚಿದ್ದ ಬಗ್ಗೆ ಮಗಳು ಸಹಾಯಕ ವ್ಯವಸ್ಥಾಪಕರ ಬಳಿ ದೂರು ನೀಡಿದ್ದರು. ಆದರೆ ಅವರು, ರಾತ್ರಿ ವೇಳೆಯೂ ಕೆಲಸ ಮಾಡುವಂತೆ ಸೂಚಿಸಿದ್ದರು' ಎಂದು ಅವರು ಹೇಳಿದ್ದಾರೆ.

ಬಿಡಾಡಿ ದನಗಳಿಗೆ 'ಬೆಳಕು ಪ್ರತಿಫಲಿಸುವ' ಪಟ್ಟಿ

ಪ್ರಜಾವಾಣಿ ವಾರ್ತೆ

ಲಖನೌ: ಬಿಡಾಡಿ ದನಗಳಿಗೆ ಬೆಳಕನ್ನು ಪ್ರತಿಫಲಿಸುವ ಪಟ್ಟಿಗಳನ್ನು ಅಳವಡಿಸುವ ಮೂಲಕ, ಜಾನುವಾರುಗಳಿಂದಾಗಿ ಸಂಭವಿಸುವ ಅಪಘಾತಗಳನ್ನು ತಡೆಗಟ್ಟಲು ಉತ್ತರ ಪ್ರದೇಶ ಸರ್ಕಾರ ಮುಂದಾಗಿದೆ.

ಬಿಡಾಡಿ ದನಗಳಿಂದಾಗಿ ರಸ್ತೆ ಅಪಘಾತಗಳು ಹೆಚ್ಚುತ್ತಿರುವುದರಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.

ಬಿಡಾಡಿ ದನಗಳಿಗೆ ಈ ವಿಶೇಷ ಪಟ್ಟಿಗಳನ್ನು ಅಳವಡಿಸಿದಾಗ, ವಿಶೇಷವಾಗಿ ರಾತ್ರಿ ಹೊತ್ತಿನಲ್ಲಿ ಅವುಗಳಿಂದ ಬೆಳಕು ಹೊರಹೊಮ್ಮುತ್ತದೆ. ಚಾಲಕರಿಗೆ ದೂರದಿಂದಲೇ ಜಾನುವಾರುಗಳು ಕಾಣಿಸುತ್ತವೆ ಹಾಗೂ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಸಾಧ್ಯವಾಗಲಿದೆ ಎಂದೂ ಮೂಲಗಳು ತಿಳಿಸಿವೆ.

'ಬಿಡಾಡಿ ದನಗಳ ಕುತ್ತಿಗೆ ಮತ್ತು ಕೊಂಬುಗಳಿಗೆ ಬೇರೆ ಬೇರೆ ಬಣ್ಣದ ಬೆಳಕು ಪ್ರತಿಫಲಕ ಪಟ್ಟಿಗಳನ್ನು ಅಳವಡಿಸಲಾಗುತ್ತದೆ. ಸಣ್ಣ ಮತ್ತು ದೊಡ್ಡ ಪಟ್ಟಣಗಳಲ್ಲಿನ ಬಿಡಾಡಿ ದನಗಳಿಗೆ ಇಂತಹ ಪಟ್ಟಿಗಳ ಅಳವಡಿಕೆ ಕಾರ್ಯ ಈಗಾಗಲೇ ಆರಂಭಗೊಂಡಿದೆ' ಎಂದು ಹೇಳಿವೆ.

ಸಲೀಂ ಖಾನ್‌ಗೆ ಜೀವ ಬೆದರಿಕೆ: ಇಬ್ಬರು ಆರೋಪಿಗಳು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಬಾಲಿವುಡ್‌ನ ಖ್ಯಾತ ಚಿತ್ರಕಥೆಗಾರ, ನಟ ಸಲ್ಮಾನ್ ಖಾನ್ ಅವರ ತಂದೆ ಸಲೀಂ ಖಾನ್ ಅವರಿಗೆ ವಾಹನವೊಂದರಲ್ಲಿ ಬಂದ ಬುರ್ಖಾಧಾರಿ ಮಹಿಳೆ ಹಾಗೂ ವ್ಯಕ್ತಿಯೊಬ್ಬರು ಜೀವ ಬೆದರಿಕೆವೊಡ್ಡಿದ್ದಾರೆ. ಈ ಬಗ್ಗೆ ದೂರು ದಾಖಲಾಗಿದ್ದು, ಇಬ್ಬರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬುಧವಾರ ಬೆಳಿಗ್ಗೆ ನಿತ್ಯದ ವಾಕಿಂಗ್ ಮುಗಿಸಿ, ತಮ್ಮ ನಿವಾಸದ ಬಳಿಯ ಬೆಂಚ್‌ವೊಂದಲ್ಲಿ ಸಲೀಂ ಅವರು ಕುಳಿತಿದ್ದಾಗ, ವಾಹನದಲ್ಲಿ ಬಂದ ಇಬ್ಬರು, 'ಲಾರೆನ್ಸ್ ಬಿಷ್ಣೋಯಿ ಅನ್ನು ಕರೆಸಲಾ' ಎಂದು ಕೇಳಿ, ಪತ್ರವೊಂದನ್ನು ನೀಡಿ ಅಲ್ಲಿಂದ ತೆರಳಿದ್ದಾರೆ.

ಇದನ್ನು ಗಮನಿಸಿದ ಸಲ್ಮಾನ್ ಖಾನ್ ಅವರ ಅಂಗರಕ್ಷಕ, ವಾಹನದ ನಂಬರ್ ಬರೆದಿಟ್ಟುಕೊಂಡು ಪೊಲೀಸರಿಗೆ ದೂರು ನೀಡಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ ಮುಂಬೈ ಪೊಲೀಸರು ಇಬ್ಬರನ್ನು ಗುರುವಾರ ವಶಕ್ಕೆ ಪಡೆದಿದ್ದಾರೆ. 'ನಾವು ತಮಾಷೆಗಾಗಿ ಈ ರೀತಿ ಮಾಡಿದ್ದೇವೆ' ಎಂದು ಆರೋಪಿಗಳು ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ:ಎಸ್‌ಯುಪಿ(1)ಸಿ–32/2024–25 ದಿನಾಂಕ: 17.09.2024

ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ) (ಕೆಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಕನ್ಸ್ಯೂಮೇಬಲ್ಸ್/ಡಿಸ್ಪೋಸೆಬಲ್ಸ್/ಕೆಮಿಕಲ್ಸ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಕೆಪಿಪಿ.ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 03.10.2024 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in** ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/MNG/KSMCA/645/24-25 dt.19.09.2024

ಕರ್ನಾಟಕ ಸರ್ಕಾರ
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ 577201
www.sims-shimoga.com Ph: 08182-229933 / 229933
Fax no.: 08182 264100

ಕ್ರ.ಸಂ./ಶಿ.ವೈ.ವಿ.ಸಂ.ಶಿ/ವಿ.ಆರ್.ಡಿ.ಎಲ್/24–25/E-office No: ದಿ:17.09.2024

ಅಧಿಸೂಚನೆ ಮುಂದುವರಿಕೆ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ DHR / ICMR ವತಿಯಿಂದ Viral Reserch Diagnostic Laboratory (VRDL) ಮತ್ತು ಎಂ.ಆರ್.ಯು. ಮಂಜೂರಾಗಿದ್ದು, ಈ ವಿಭಾಗಗಳಿಗೆ ಕೆಳಕಂಡ ಹುದ್ದೆಗಳಿಗೆ ಗುತ್ತಿಗೆ ಆದಾರದ ಮೇಲೆ ಸಂಚಿತ ವೇತನದಡಿಯಲ್ಲಿ ನೇಮಕಾತಿ ಸಲುವಾಗಿ ಅರ್ಜಿಗಳನ್ನು ಕರೆಯಲಾಗಿತ್ತು. ಆಡಳಿತಾತ್ಮಕ ಕಾರಣಗಳಿಂದ ನೇಮಕಾತಿ ಅಧಿಸೂಚನೆಯನ್ನು ಮುಂದುವರಿಸಲಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.sims-shimoga.com ನಲ್ಲಿ ಪಡೆಯತಕ್ಕದ್ದು. ಅರ್ಜಿದಾರರು ಭರ್ತಿಮಾಡಿದ ಅರ್ಜಿಗಳನ್ನು, ಅಗತ್ಯ ದಾಖಲೆಗಳೊಂದಿಗೆ ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರವರ ಹೆಸರಿಗೆ ಪಡೆದಿರುವ ರೂ. 1000/–ಡಿ.ಡಿ.ಯೊಂದಿಗೆ (ಹಿಂದಿರುಗಿಸಲಾಗುವುದಿಲ್ಲ) ನಿರ್ದೇಶಕರು ಮತ್ತು ಡೀನ್ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ.– 577201 ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ ಯಾವ ಹುದ್ದೆಗಾಗಿ ಅರ್ಜಿ ಎಂಬುದನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ವೇತನ ಶ್ರೇಣಿ ಮತ್ತು ಕನಿಷ್ಠ ಅರ್ಹತೆಯ ವಿವರಗಳನ್ನು Annexure-1 ರಲ್ಲಿ, (Website) ನಮೂದಿಸಲಾಗಿದೆ. ಆಯ್ಕೆಯನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಮಾಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30–09–2024 ಸಂಜೆ 5.00 ಗಂಟೆ.

Sl.No. 1. Details of posts: Project Technical Assistant **No. of post:** 02 Post (VRDL-EBS) **Salary (Monthly):** 28,000+HRA

ಸಹಿ/– ನಿರ್ದೇಶಕರು ಮತ್ತು ಡೀನ್, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/96/09/698

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ : ಬೆಂಗಳೂರು

ಸಂ:ಕರಾಸಾ/ವಿನಿ/ಕೆಂಬನಿ/ವಾ/582/2024–25 ದಿನಾಂಕ:11.09.2024

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 02/2024–25

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಗೆ ಬರುವ ಟ್ರಂಪೆಟ್ ಬಸ್ ನಿಲ್ದಾಣ, ದೇವನಹಳ್ಳಿ ಇಲ್ಲಿ ಗುರುತಿಸಿರುವ ಸ್ಥಳದಲ್ಲಿ "ಹೇಗಿದೆಯೋ ಹಾಗೇ" ಎಂಬ ಷರತ್ತಿನೊಂದಿಗೆ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ **ದಿನಾಂಕ: 19.09.2024 ರಿಂದ 14.10.2024 ರವರೆಗೆ** ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹಾಗೂ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ **https://ksrtc.karnataka.gov.in** ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ :7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ:080–8046010000/ 080–8068948777, support@eprochelpdesk.com

ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ

ವಾಸಾಸಂಇ/ವಾಪ್ರ/ಜಿಎ/2045/2024–25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ ರೇಸ್‌ಕೋರ್ಸ್ ರಸ್ತೆ, ಬೆಂಗಳೂರು– 560001.
ಫೋನ್ ಸಂ. 080–22265383 ವೆಬ್‌ಸೈಟ್: www.kiadb.in
ಇ–ಮೇಲ್: cdoce1@kiadb.in or jdtp@kiadb.in

ಸಂ.ಐಎಡಿಬಿ/ಇಎನ್‌ಜಿಜಿ/ಇಐಎ/ಇಟಿಎನ್‌ಡಿ–ಇಸಿ–09/248/2024–25 ದಿನಾಂಕ: 19–09–2024

ಪರಿಸರ ವಿಮೋಚನ ಪತ್ರ (ಇಸಿ) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಕೆಳಕಂಡ ಕೈಗಾರಿಕಾ ಪ್ರದೇಶಗಳಿಗೆ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್‌ಇಐಎಎ)/ಪರಿಸರ ಅರಣ್ಯ ಹವಮಾನ ಬದಲಾವಣೆ ಸಚಿವಾಲಯ (ಎಮ್.ಒ.ಇ.ಎಫ್&ಸಿ.ಸಿ) ಯಿಂದ ಪರಿಸರ ವಿಮೋಚನಾ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪತ್ರವನ್ನು ಪಡೆಯಲು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನ ಸಮ್ಮತಿ ಪತ್ರ (ಸಿ.ಎಫ್.ಇ) ಪಡೆಯಲು ಮತ್ತು ಅರ್ಧ ವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ 3 ವರ್ಷಗಳವರೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಮತ್ತು ಇತ್ಯಾದಿಯನ್ನು ಸಿದ್ದಪಡಿಸಲು ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಿದೆ. NABET & 7(c) ಅಲ್ಲಿ ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರ ಮಾನ್ಯತೆ ಪಡೆದ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು/ಸಲಹೆಗಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರ. ಸಂ	ಉದ್ದೇಶಿತ ಕೈಗಾರಿಕಾ ಪ್ರದೇಶದ ಹೆಸರು	ಅಂದಾಜು ವಿಸ್ತೀರ್ಣ (ಎಕರೆ)
1	ಜಂಗಮ ಕೋಟೆ ಕೈಗಾರಿಕಾ ಪ್ರದೇಶ ಹಂತ–1 ಯಣ್ಣಂಗೂರು, ಹೊಸಪೇಟೆ, ದೇವಗಾನಹಳ್ಳಿ, ಗೊಲ್ಲಹಳ್ಳಿ, ಚೊಕ್ಕೊಂಡನಹಳ್ಳಿ ಹಾಗೂ ಯದ್ದಲತಿಪ್ಪೇನಹಳ್ಳಿ ಗ್ರಾಮಗಳು ಜಂಗಮಕೋಟೆ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.	754.52
2	ಜಂಗಮ ಕೋಟೆ ಕೈಗಾರಿಕಾ ಪ್ರದೇಶ ಹಂತ–2 ನಡಪನಾಯಕನಹಳ್ಳಿ ಗ್ರಾಮ ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ,	1050.87
3	ಜಂಗಮ ಕೋಟೆ ಕೈಗಾರಿಕಾ ಪ್ರದೇಶ ಹಂತ–3 ಸಂಜೀವಪುರ, ತೊಟ್ಲಗಾನಹಳ್ಳಿ, ಅರಿಕೆರೆ ಬಸವಪಟ್ಟಣ, ಕೊಲಿಮೆಹೊಸೂರು ಮತ್ತು ತೊಡೂರು ಗ್ರಾಮಗಳು ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.	1017.72

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **04–10–2024 ಸಂಜೆ 5.00 ಗಂಟೆಯವರೆಗೆ**

ಸಹಿ/– ಮುಖ್ಯ ಅಭಿಯಂತರರು–1 ಕೆ.ಐ.ಎ.ಡಿ.ಬಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2078/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೃ.ಬೆಂ.ಮ.ಪಾಲಿಕೆ ಅಂಗನವಾಡಿ ಕೇಂದ್ರ, 2ನೇ ಮುಖ್ಯ, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು – 18

ಸಂಖ್ಯೆ:ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/07(2ನೇ ಕರೆ)/2024–25 ದಿನಾಂಕ: 19.09.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯು 4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಇವರು, ಕೆಪಿಡಬ್ಲ್ಯೂಡಿ/ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಚಾಮರಾಜಪೇಟೆ ವಿಭಾಗ ವ್ಯಾಪ್ತಿಯಲ್ಲಿ ರಸ್ತೆಗಳು, ಚರಂಡಿಗಳು, ಕಲ್ವರ್ಟ್‌ಗಳು, ಪಾದಚಾರಿಮಾರ್ಗಗಳಿಗೆ ಸಮಗ್ರ ಅಭಿವೃದ್ಧಿ ಮತ್ತು ಇತರೆ ಕಾಮಗಾರಿಗಳನ್ನು ಮಾಡುವುದು. (3 ಕಾಮಗಾರಿಗಳು) **ಮೊತ್ತ ₹.1000.00 ಲಕ್ಷಗಳು ಇಎಂಡಿ ಮೊತ್ತ: ₹.10.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **20.09.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **30.09.2024**ರ ಮಧ್ಯಾಹ್ನ **3:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **30.09.2024**ರ ಮಧ್ಯಾಹ್ನ **3:00** ಗಂಟೆಯವರೆಗೆ. (4) ದ್ವಿಲಕೋಟೆಯಲ್ಲಿ ತಾಂತ್ರಿಕ ಬಿಡ್ ದಾಖಲೆಯನ್ನು ದಿನಾಂಕ **01.10.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. (5) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **26.09.204**ರ ಸಂಜೆ **4:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಪಶ್ಚಿಮ) ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ನಡೆಸಲಾಗುವುದು. (6) ಆರ್ಥಿಕ ಬಿಡ್ ದಾಖಲೆಗಳನ್ನು ದಿನಾಂಕ **03.10.2024**ರ ಮಧ್ಯಾಹ್ನ **2:00** ಗಂಟೆಗೆ ಸಾಧ್ಯವಾದಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

THE RAICHUR DISTRICT CENTRAL COOPERATIVE BANK LTD., RAICHUR
Ref: RKDCC/HO/Securityguard/ Date :18.09.2024

E-Procurement Tender Notice

The Raichur and Koppal District Central Co-Operative Bank Ltd., Raichur invites **e-Tender reference no: RDCCB/2024-25/SE0005 "Tender for Providing 30 Nos Security Guards to Watch & Ward Duties at RKDCC BANK LTD, RAICHUR, Head Office and Bank Branches situated across Raichur and Koppal District on Contract Basis for 3 Years."** Tender Schedule and details can be obtained from KPPPortal https://kppp.karnataka.gov.in

Sd/- **(M B Pujar)**
Chief Executive Officer
R K D C C BANK Ltd., Raichur

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, ವಿಚಾರಣೆ ಸಂಖ್ಯೆ **Enquiry No. BESCOM/2024-25/SE0193** ರಂತೆ "ಬೆ.ವಿ.ಕಂ ವ್ಯಾಪ್ತಿಯ ರೀಟೇಲ್ ಮಳಿಗೆಗಳಲ್ಲಿ 5 ವರ್ಷಗಳ ಅವಧಿಗೆ ದರ ಗುತ್ತಿಗೆ ಆಧಾರದ ಮೇಲೆ ನಿರೀಕ್ಷಿತ ಗ್ರಾಹಕರಿಗೆ (ಹೊಸ ಸಂಪರ್ಕ ಮತ್ತು ತಾತ್ಕಾಲಿಕ ಸ್ಥಾಪನೆಗಳಿಗೆ) ವಿದ್ಯುತ್ ಸಂಪರ್ಕ ಪೂರೈಸಲು ಸ್ಮಾರ್ಟ್ ಮೀಟರ್‌ಗಳನ್ನು ಮಾರಾಟ ಮಾಡುವುದಕ್ಕಾಗಿ ಮತ್ತು 10 ವರ್ಷಗಳ ಕಾಲ ಐಟಿ ವ್ಯವಸ್ಥೆಯ ಸರಬರಾಜು, ಅನುಷ್ಠಾನ, ಕಾರ್ಯಾರಂಭ ಮತ್ತು ನಿರ್ವಹಣೆಗಾಗಿ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡಲು" ಟೆಂಡರನ್ನು ಆಹ್ವಾನಿಸಿದ್ದಾರೆ. ಬಿಡ್ ದಾಖಲೆಯ ಲಭ್ಯತೆ **23.09.2024** ರಂದು ಅಥವಾ ನಂತರ ದಿನದಂದು. ಬಿಡ್ ಸ್ವೀಕೃತಿಯ ಕೊನೆಯ ದಿನಾಂಕ ಬಿಡ್ ದಾಖಲೆಗಳ ಲಭ್ಯತೆಯ ದಿನಾಂಕದಿಂದ **30 ದಿನಗಳವರೆಗೆ**. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯುನ್ನು **https://kppp.karnataka.gov.in** ಜಾಲತಾಣದಲ್ಲಿ ಪಡೆಯಬಹುದು. ಸಹಾಯವಾಣಿ **(+91-8046010000, +91-8068948777)** ಅಥವಾ ಇ–ಮೇಲ್ **support@eprochelpdesk.com** ಸಂಪರ್ಕಿಸಬಹುದು. ಇತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಛೇರಿಯಿಂದ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/– ಪ್ರಧಾನ ವ್ಯವಸ್ಥಾಪಕರು (ವಿ) ಡಾಸ್,ಎಸ್‌ಜಿ & ಟಿಐಸಿ, ಬೆವಿಕಂ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.

ಸಂಖ್ಯೆ: ಉಗ್ರಾಣ/09/2024–25/1344 ದಿನಾಂಕ : 19.09.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕಲ್ಯಾಣ–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ 2023–24 ನೇ ಸಾಲಿನಲ್ಲಿ ಮಂಜೂರಾದ ವೈದ್ಯಕೀಯ ಉಪಕರಣ ಖರೀದಿ ಮಾಡಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಮರು–ಟೆಂಡರ್ ಕರೆಯಲಾಗಿದೆ. ಸದರಿ ಮರು–ಟೆಂಡರ್ ದಾಖಲೆಗಳನ್ನು **e-Portal (https.eproc.karnataka.gov.in)** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

1.**Indent No:** DHFWS/2024-25/IND0864/Call-2. **Name Of the Equipment:** ಕುಷ್ಟಗಿ ಸರ್ಕಾರಿ ಆಸ್ಪತ್ರೆಗೆ ಹಾಗೂ ತಾವರಗೇರಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮತ್ತು ಹನುಮಸಾಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ Video Guide Laproscope with Monitor. **Amount(in Lakhs):** 126.00 ಟೆಂಡರ್ ಪ್ರಕಟಣೆ ದಿನಾಂಕ: **19–09–2024**. ಟೆಂಡರ್ ದಾಖಲೆಯನ್ನು ಡೌನಲೋಡ್ ಮಾಡಲು ಪ್ರಾರಂಭ ದಿನಾಂಕ: **20–09–2024**. ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **21–09–2024 ರಂದು ಸಾಯಂಕಾಲ 5.00 ಗಂಟೆಯೊಳಗೆ**. ಟೆಂಡರ್ ಅಪಲೋಡ್ ಮಾಡಲು ಕೊನೆಯ ದಿನಾಂಕ : **27–09–2024 ರಂದು ಸಾಯಂಕಾಲ 5.30 ಗಂಟೆಯೊಳಗೆ**. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–09–2024 ಬೆಳಿಗ್ಗೆ 11.00 ಗಂಟೆಗೆ**. ಆರ್ಥಿಕ ಬಿಡ್ ತೆರೆಯುವ ದಿನಾಂಕ : **03–10–2024 ಮಧ್ಯಾಹ್ನ 4.00 ಗಂಟೆಗೆ**.

ಹೆಚ್ಚಿನ ವಿವರಗಳನ್ನು **https.eproc.karnataka.gov.in** ವೆಬ್‌ಸೈಟ್‌ನಲ್ಲಿ ಮೇಲಿನ ಟೆಂಡರ್ ನಂಬರಗಳ ಪ್ರಕಾರ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.

ಡಿಐಪಿಆರ್/ಕೊಪ್ಪಳ/395/ಕೆಎಸ್‌ಎಂಸಿಎ/2024–25

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2024–25/144
ದಿನಾಂಕ : 19–09–2024

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1&2&3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1&2&3ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಮುಖಾಂತರ 32 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ:** 2023–24ನೇ ಸಾಲಿನ 5054 ಮಾನ್ಯ ಮುಖ್ಯಮಂತಿಗಳ ವಿಶೇಷ ಯೋಜನೆ **ಅಡಿ** ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್**, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : RDPR/2023-24/WORK_INDENT :
8943, 8942, 8941, 8940, 8939, 8938, 8937, 8936, 8935, 8934, 3613, 3638, 3615, 3617, 3645, 3648, 3655, 3657, 8919, 8628, 8626, 8610, 8608

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **8.30** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **75.04** ಲಕ್ಷಗಳು

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:– ಅರ್ಜಿ ಬೆಲೆ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್** ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **20–09–2024** ರಿಂದ **07–10–2024** ರಂದು 16.30 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **08–10–2024** ರಂದು 16.35 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/229/2024–25

ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂ.: ಉಕೃನಿ (ಕೃಯಾಂ&ಸೂನೀ)/FM RFP/Drone/2024–25 ದಿನಾಂಕ: 19.09.2024

ಅಲ್ಪಾವಧಿ Request for Proposal ಪ್ರಕಟಣೆ

ಕೃಷಿ ಇಲಾಖೆಯ ಸಹಾಯಧನ ಕಾರ್ಯಕ್ರಮಗಳಡಿ ಮತ್ತು ಕೃಷಿ ಯಂತ್ರಧಾರೆ ಕೇಂದ್ರಗಳಿಗೆ, ಕಿಸಾನ್ ಡ್ರೋನ್‌ಗಳನ್ನು ಸರಬರಾಜು ಮಾಡಲು ಮೂಲ ತಯಾರಕರು / ತಯಾರಕ ಸಂಸ್ಥೆಗಳನ್ನು ಎಂಪ್ಯಾನಲ್ ಮಾಡಲು ಅಲ್ಪಾವಧಿ Request for Proposal (RfP) ಯನ್ನು ಕರೆಯಲಾಗಿರುತ್ತದೆ. ಸದರಿ ಅಲ್ಪಾವಧಿ Request for Proposal ನಡಿ ಭಾಗವಹಿಸಲು ಇಚ್ಛಿಸುವ ಮೂಲ ಡ್ರೋನ್ ತಯಾರಕರು / ತಯಾರಕ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **https://kppp.karnataka.gov.in** ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ.

ಆಸಕ್ತ, ಮೂಲ ಡ್ರೋನ್ ತಯಾರಕರು / ತಯಾರಕ ಸಂಸ್ಥೆಗಳು RfP ಡಾಕ್ಯೂಮೆಂಟನ್ನು **https://kppp.karnataka.gov.in** ನಿಂದ, ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಮತ್ತು ಇಲಾಖೆಯು ನಿಗದಿಪಡಿಸಿರುವ ಇ.ಎಂ.ಡಿ ಮೊತ್ತವನ್ನು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಖಾಲಿ ಅರ್ಜಿಗಳನ್ನು ದಿ. **20.09.2024** ರಿಂದ ದಿ. **07.10.2024** ವರೆಗೆ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **07.10.2024, ಅಪರಾಹ್ನ 4:30** ಗಂಟೆ. ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **09.10.2024** ರಂದು ಪೂರ್ವಾಹ್ನ **11:00** ಗಂಟೆಗೆ ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.

RFP ಷರತ್ತುಗಳನ್ವಯ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳ ದಾಖಲಾತಿಗಳನ್ನು (Hard Copy / Physical deposition) ಉಪ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಯಾಂತ್ರೀಕರಣ ಮತ್ತು ಸೂಕ್ಷ್ಮ ನೀರಾವರಿ ವಿಭಾಗ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001 ಇಲ್ಲಿ ದಿನಾಂಕ **08.10.2024**ರಂದು **ಅಪರಾಹ್ನ 4:30**ರ ವರೆಗೆ ಸ್ವೀಕರಿಸಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು DSC Key / e-Token ಗಳನ್ನು ಪರಿಗಣಿಸಿರುವ ಏಜನ್ಸಿಗಳ ಮುಖಾಂತರ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾಗದ ವಿಳಾಸ ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಕೇಂದ್ರ, 4ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 **(Helpdesk: +91 80 46010000, +91 80 68948777).**

ಸೂಚನೆ: e-procurement ಸೇವಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ ಹಾಗೂ RFP ದಾಖಲೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಸಹಿ/–, ಕೃಷಿ ನಿರ್ದೇಶಕರು ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಎಲ್‌ಸಿ/2074/2024–25

ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಉಪ ಕೃಷಿ ನಿರ್ದೇಶಕರು–1, ವಿಜಯಪುರ ಕಾರ್ಯಾಲಯ, ಜಿಲ್ಲಾಧಿಕಾರಿಗಳ ಕಚೇರಿ ರಸ್ತೆ, ವಿಜಯಪುರ–586101
ಇ–ಮೇಲ್: **dda1vjp@gmail.com** ದೂರವಾಣಿ ಸಂಖ್ಯೆ:08352–242516

ಸಂ:ಉಕೃನಿ–1/ವಿ/ಸಿ–1/ಹೊ.ಗು/2024–25 ದಿನಾಂಕ:19.09.2024

ಪತ್ರಿಕಾ ಪ್ರಕಟಣೆ

ಉಪ ಕೃಷಿ ನಿರ್ದೇಶಕರು–1 ವಿಜಯಪುರ ಕಚೇರಿಗೆ ಹಾಗೂ ಅಧೀನದಲ್ಲಿ ಬರುವ ಸಹಾಯಕ ಕೃಷಿ ನಿರ್ದೇಶಕರು ವಿಜಯಪುರ/ಮುದ್ದೇಬಿಹಾಳ/ಬಸವನ ಬಾಗೇವಾಡಿ ಕಚೇರಿಗಳಿಗೆ ಮಣ್ಣು ಮಾದರಿ ವಿಶ್ಲೇಷಕರು, ಪ್ರಯೋಗ ಶಾಲಾ ಸಹಾಯಕರು, ಪ್ರಯೋಗ ಶಾಲಾ ಪರಿಚಾರಕರು, ಕೃಷಿ ಸಂಜೀವಿನಿ ತಾಂತ್ರಿಕ ಸಹಾಯಕರು, ವಾಹನ ಚಾಲಕರು, ರೈತ ಸಂಪರ್ಕ ಕೇಂದ್ರಗಳ ದಾಸ್ತಾನು ನಿರ್ವಹಣಾ ಸಿಬ್ಬಂದಿ, ಬೆರಳಚ್ಚುಗಾರರು, ಗ್ರೂಪ್ ಡಿ ಸಿಬ್ಬಂದಿ ಒಟ್ಟು 51 ಹೊರಗುತ್ತಿಗೆ ಆಧಾರದ ಮೇಲೆ ಹುದ್ದೆಗಳಿಗಾಗಿ ಈ ಕೆಳಕಂಡಂತೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಅರ್ಹ ಟೆಂಡರದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಇ–ಟೆಂಡರನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸರಕಾರದ ಕೆಲಸದ ದಿನಗಳಂದು ಕಚೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ನೀಡಿ ಪಡೆಯಬಹುದಾಗಿದೆ.

1) ಇ–ಪೋರ್ಟಲ್‌ನಲ್ಲಿ ಟೆಂಡರ ಸಲ್ಲಿಸಲು ಪ್ರಾರಂಭಗುವ ದಿನಾಂಕ ಮತ್ತು ಸಮಯ: 19.09.2024
2) ಇ–ಪೋರ್ಟಲ್‌ನಲ್ಲಿ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03.10.2024 ರ ಸಂಜೆ 5.00 ಗಂಟೆಯವರೆಗೆ.
3) ಇ–ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.10.2024 ಬೆಳಿಗ್ಗೆ 11.00 ಗಂಟೆಗೆ.
4) ಇ–ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.10.2024 ಬೆಳಿಗ್ಗೆ 11.00 ಗಂಟೆಗೆ.

ಸಹಿ/– ಉಪ ಕೃಷಿ ನಿರ್ದೇಶಕರ–1 ವಿಜಯಪುರ

ವಾಸಾಸಂಇ/ವಿಜಯಪುರ/256/ಕೆಎಸ್‌ಎಂಸಿಎ/2024–25

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹226.50
ಆರ್‌ಎಸ್‌ಎಸ್-5	₹221.50
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹206.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹400-574
ದ್ವಿತಳಿ (ಬಿ.ವಿ)	₹412-758

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,377
ಇಂದಿನ ಅಂತ್ಯ	25,415
▲	38
ದಿನದ ಗರಿಷ್ಠ	25,611

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1500)
ಸೋಯಾ (ರಿಫೈನ್ಡ್)	₹1180 (1160)
ಸೂರ್ಯಕಾಂತಿ (ರಿಫೈನ್ಡ್)	₹1240 (1200)
ಪಾಮೋಲಿನ್	₹1210 (1170)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3500-4200
ಮಧ್ಯಮ	₹2500-3000
ಸಣ್ಣ	₹1000-1500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12000-14000
ಕೆ.ಆರ್.ಪೇಟೆ	₹10000-10000
ತಿಪಟೂರು	₹14200-14500

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

In fond remembrance of a remarkable and loving man



DODDANNA KEMPANNA

10th June 1942 - 19th September 2024

Mr. Doddanna Kempanna, president of Karnataka State Contractor's Association passed away peacefully on the 19th of September 2024.

Mr. Kempanna's death is mourned by his beloved wife, Vishala, his much loved daughters, Asha, Lavanya and Ashwini and his adored son, Balaji.

Mr. Kempanna's grandchildren mourn the loss of their loving grandfather. This loss is shared by his son in laws, Satish and Krishna, and his daughter in law, Bindu. His siblings and their families, particularly Dr.Krishna and Dr. Chandrashekar (and their families) grieve this immeasurable loss.

We thank everyone for their messages of condolences and support. We are comforted by the outpouring of love for Mr. Kempanna. His last rites will take place on the 20th of September at 1:00 PM in Jothipura.

Mobile : +91 9880401850

ಶ್ವೇತ ಕ್ರಾಂತಿ 2.0ಗೆ ಚಾಲನೆ

ನವದೆಹಲಿ (ಪಿಟಿಐ): ದೇಶದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಬಲವರ್ಧನೆಗೆ ಒತ್ತು ನೀಡುವ ನಿಟ್ಟಿನಲ್ಲಿ ಕೇಂದ್ರ ಸಹಕಾರ ಸಚಿವ ಅಮಿತ್ ಶಾ, ಗುರುವಾರ 'ಶ್ವೇತ ಕ್ರಾಂತಿ 2.0'ಕ್ಕೆ ಚಾಲನೆ ನೀಡಿದ್ದಾರೆ.

ಕೃಷಿಕ ಮಹಿಳೆಯರ ಸಬಲೀಕರಣ, ಸ್ಥಳೀಯವಾಗಿ ಹಾಲು ಉತ್ಪಾದನೆ ಹೆಚ್ಚಳ, ಹೈನುಗಾರಿಕೆಯ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹೈನು ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡುವುದು ಈ ಕಾರ್ಯಕ್ರಮದ ಪ್ರಮುಖ ಗುರಿಯಾಗಿದೆ. ಹೈನೋದ್ಯಮದಲ್ಲಿ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ಉದ್ದೇಶವಿದೆ.

ಇದೇ ವೇಳೆ ಅವರು ಹೈನು ಕೃಷಿಕರಿಗೆ ಅನುಕೂಲ ಕಲ್ಪಿಸಲು ರುಪೇ ಕಿಸಾನ್ ಕ್ರೆಡಿಟ್ ಕಾರ್ಡ್ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಮೈಕ್ರೊ ಎಟಿಎಂ ಕೇಂದ್ರಗಳ ಸ್ಥಾಪನೆಗೆ ಚಾಲನೆ ನೀಡಿದರು. 'ಶ್ವೇತ ಕ್ರಾಂತಿ 2.0' ಅಡಿ ಮುಂದಿನ ಐದು ವರ್ಷದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಹಾಲಿನ ಸಂಗ್ರಹ ಪ್ರಮಾಣವನ್ನು ಶೇ 50ರಷ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ.

ಅಮಿತ್ ಶಾ ಮಾತನಾಡಿ, 'ಗುಜರಾತ್‌ನ ಹೈನೋದ್ಯಮದಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ₹60 ಸಾವಿರ ಕೋಟಿ ವಹಿವಾಟು ನಡೆಸುತ್ತಿದ್ದಾರೆ. ಮಹಿಳೆಯರ ಸಶಸ್ತ್ರೀಕರಣದ ಜೊತೆಗೆ, ಅಪೌಷ್ಟಿಕತೆ ನಿರ್ಮೂಲನೆ ಮಾಡುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ.

ಕುಲಾಂತರಿ ಹತ್ತಿಗೆ ಅನುಮತಿ: ಚರ್ಚಿಸಿ ತೀರ್ಮಾನ

ಶೀಘ್ರ ಎಂಎಸ್‌ಪಿ ವರದಿ

ನವದೆಹಲಿ (ಪಿಟಿಐ): 'ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ರಚಿಸಿದ್ದ ಸಮಿತಿಯ ವರದಿಯನ್ನು ಶೀಘ್ರವೇ ಬಿಡುಗಡೆಗೊಳಿಸಲಾಗುವುದು' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್

ವಿವಾದಾತ್ಮಕ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ವೇಳೆ ಸಂಯುಕ್ತ ಕಿಸಾನ್ ಮೋರ್ಚಾವು, ಎಂಎಸ್‌ಪಿ ಅಗತ್ಯತೆಯನ್ನು ಪ್ರತಿಪಾದಿಸಿತ್ತು. ಈ ಬಗ್ಗೆ ಪರಿಶೀಲಿಸಲು ಸರ್ಕಾರವು 2022ರ ಜುಲೈನಲ್ಲಿ ಸಮಿತಿ ರಚಿಸಿತ್ತು. ಕೇಂದ್ರ ಕೃಷಿ ಸಚಿವಾಲಯದ ಮಾಜಿ ಕಾರ್ಯದರ್ಶಿ ಸಂಜಯ್ ಅಗರವಾಲ್ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಮತ್ತಷ್ಟು ಪರಿಣಾಮಕಾರಿಯಾಗಿ ಎಂಎಸ್‌ಪಿ ಜಾರಿ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳುವುದು, ನೈಸರ್ಗಿಕ ಕೃಷಿಗೆ ಉತ್ತೇಜನ ನೀಡುವುದಕ್ಕೆ ಸಂಬಂಧಿಸಿದಂತೆ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಲಿದೆ.

ಕೇಂದ್ರ ಸರ್ಕಾರದ 100 ದಿನಗಳ ಕಾರ್ಯಕ್ರಮದ ಅಂಗವಾಗಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವರಾಜ್ ಸಿಂಗ್ ಅವರು, 'ಸಮಿತಿಯ ಸದಸ್ಯರೊಂದಿಗೆ ನಿರಂತರ ಸಂಪರ್ಕ ಹೊಂದಲಾಗಿದೆ' ಎಂದರು.

'ಅಕ್ಟೋಬರ್‌ನಿಂದ ದೂರದರ್ಶನ ಹಾಗೂ ಆಲ್ ಇಂಡಿಯಾ ರೇಡಿಯೊದಲ್ಲಿ 'ಅಧುನಿಕ್ ಕೃಷಿ ಚೌಪಾಲ್' ಕಾರ್ಯಕ್ರಮ ಪ್ರಸಾರವಾಗಲಿದೆ. ಕೃಷಿಯಲ್ಲಿನ ಹೊಸ ಆವಿಷ್ಕಾರಗಳ ಬಗ್ಗೆ ವಿಜ್ಞಾನಿಗಳು ರೈತರೊಂದಿಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ' ಎಂದು ವಿವರಿಸಿದರು.

'ಕುಲಾಂತರಿ ತಳಿ ಹತ್ತಿ ವಿಚಾರವು ಸೂಕ್ಷ್ಮ ವಿಷಯವಾಗಿದೆ. ಸಮಗ್ರವಾಗಿ ಸಮಾಲೋಚನೆ ನಡೆಸಿದ ಬಳಿಕ ಕುಲಾಂತರಿ ತಂತ್ರಜ್ಞಾನಕ್ಕೆ ಅನುಮೋದನೆ ನೀಡಲಾಗುವುದು' ಎಂದರು.

ಆಹಾರ ಪರೀಕ್ಷೆಗೆ 100 ಲ್ಯಾಬ್ ಸ್ಥಾಪನೆ

ನವದೆಹಲಿ (ಪಿಟಿಐ): 'ಆಹಾರ ಪರೀಕ್ಷೆಗಾಗಿ 100 ಪ್ರಯೋಗಾಲಯ ಮತ್ತು 50 ವಿಕಿರಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದು ಕೇಂದ್ರ ಆಹಾರ ಸಂಸ್ಕರಣಾ ಸಚಿವ ಚಿರಾಗ್ ಪಾಸ್ವಾನ್ ತಿಳಿಸಿದ್ದಾರೆ.

ಗುರುವಾರ 'ವಿಶ್ವ ಆಹಾರ ಭಾರತ'ದ ಮೂರನೇ ಆವೃತ್ತಿಗೆ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

ಆಹಾರ ಸಂಸ್ಕರಣೆಯ ಗುಣಮಟ್ಟ ಹೆಚ್ಚಿಸುವ ಮೂಲಕ ವ್ಯರ್ಥವಾಗುವ ಪದಾರ್ಥಗಳ ಪ್ರಮಾಣವನ್ನು ಕಡಿಮೆ ಮಾಡುವ ಅಗತ್ಯವಿದೆ. ಆಹಾರ ಸಂಸ್ಕರಣಾ ವಲಯವು ರೈತರ ಆದಾಯ ಹೆಚ್ಚಿಸುವ ಜೊತೆಗೆ ಉದ್ಯೋಗಾವಕಾಶ ಸೃಷ್ಟಿಯಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದರು.

ಆಹಾರ ಪದಾರ್ಥಗಳ ಮೇಲಿನ ಜಿಎಸ್‌ಟಿ ಕಡಿಮೆಗೊಳಿಸುವ ಸಂಬಂಧ ಜಿಎಸ್‌ಟಿ ಮಂಡಳಿಯಲ್ಲಿ ಚರ್ಚಿಸಲಾಗುವುದು. ಮಂಡಳಿಯೇ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದರು.

ಇದೇ 22ರ ವರೆಗೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ 90ಕ್ಕೂ ಹೆಚ್ಚು ದೇಶಗಳು ಪಾಲ್ಗೊಳ್ಳಲಿವೆ.

ಮಹಾರಾಷ್ಟ್ರ ಚುನಾವಣೆಗೂ ಮೊದಲು ಪ್ರಕಟ ಸಾಧ್ಯತೆ

ಪೆಟ್ರೋಲ್, ಡೀಸೆಲ್ ದರ ಇಳಿಕೆ?

ನವದೆಹಲಿ (ಪಿಟಿಐ): 'ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವುದಕ್ಕೂ ಮೊದಲು ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿತಗೊಳಿಸುವ ನಿರೀಕ್ಷೆಯಿದೆ' ಎಂದು ಕೇಂದ್ರ ತೈಲ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಏರಿಳಿತ ಕಾಣುತ್ತಿದೆ. ಕಳೆದ ವಾರ ಬ್ರೆಂಟ್ ಕಚ್ಚಾ ತೈಲವು ಕಳೆದ ಮೂರು ವರ್ಷದಲ್ಲಿ ಮೊದಲ ಬಾರಿಗೆ ಕನಿಷ್ಠ ಬೆಲೆಯಾದ 70 ಡಾಲರ್‌ಗೆ (ಪ್ರತಿ ಬ್ಯಾರಲ್‌ಗೆ) ಇಳಿಕೆ ಕಂಡಿತ್ತು. ಗುರುವಾರ ಪ್ರತಿ ಬ್ಯಾರಲ್‌ಗೆ 74.58 ಡಾಲರ್ ಆಗಿದೆ.

ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾ ತೈಲವು ಪ್ರತಿ ಬ್ಯಾರಲ್‌ಗೆ 71.71 ಡಾಲರ್‌ಗೆ ತಲುಪಿದೆ.

ಹೆಸರು ಬಹಿರಂಗಪಡಿಸಲು ಇಚ್ಛಿಸದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಪ್ರತಿ ಬ್ಯಾರಲ್‌ಗೆ 70 ಡಾಲರ್‌ಗೆ ಇಳಿದಿದ್ದ ಕಚ್ಚಾ ತೈಲದ ಬೆಲೆಯು ನಂತರ ಏರಿಕೆಯಾಗಿದೆ' ಎಂದರು.

'ತೈಲ ಬೆಲೆಯಲ್ಲಿ ಸ್ಥಿರತೆ ಕಾಣದ ಹೊರತು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಉತ್ಪಾದನಾ ವೆಚ್ಚ ಆಧರಿಸಿ ಪ್ರತಿದಿನ ಇಂಧನ ಬೆಲೆಯನ್ನು ಪರಿಷ್ಕರಿಸುವ ಹಳೆಯ ಪದ್ಧತಿಗೆ ಮರಳುವ ಸಾಧ್ಯತೆ ತೀರಾ ಕಡಿಮೆ' ಎಂದು ಸ್ಪಷ್ಟಪಡಿಸಿದರು.

ಕಳೆದ ಮೂರು ವರ್ಷದಿಂದಲೂ ಭಾರತೀಯ ತೈಲ ನಿಗಮ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್), ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಉತ್ಪಾದನಾ ವೆಚ್ಚದ ಆಧಾರದ ಮೇಲೆ ದೈನಂದಿನ ಬೆಲೆ ಪರಿಷ್ಕರಣೆಯನ್ನು ಕೈಬಿಟ್ಟಿವೆ.

ತೈಲ ಕಂಪನಿಗಳು 2022ರ ಏಪ್ರಿಲ್‌ನಿಂದಲೂ ಇಂಧನ ಬೆಲೆಯಲ್ಲಿ ಕಡಿತ ಮಾಡಿರಲಿಲ್ಲ. ಆದರೆ, ಲೋಕಸಭಾ ಚುನಾವಣೆ ವೇಳೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಲಾ ₹2 ಕಡಿತಗೊಳಿಸಿದ್ದವು.

ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆ: ನಾಳೆ ಮತದಾನ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷೀಯ ಚುನಾವಣೆ ಇದೇ ಶನಿವಾರ ನಡೆಯಲಿದೆ. ಚುನಾವಣಾ ಪ್ರಚಾರವು ಬುಧವಾರ ಅಂತ್ಯಗೊಂಡಿದೆ.

ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ಮತದಾನ ನಡೆಯಲಿದೆ. ಸುಮಾರು 13,400 ಮತಗಟ್ಟೆಗಳಲ್ಲಿ 1.7 ಕೋಟಿ ಮಂದಿ ಮತದಾನ ಮಾಡಲಿದ್ದಾರೆ.

ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಕಣದಲ್ಲಿರುವ ಪ್ರಮುಖ ಅಭ್ಯರ್ಥಿ.

ಈ ಬಾರಿ ಕಣದಲ್ಲಿರುವ ಮತ್ತೊಬ್ಬ ಪ್ರಮುಖ ಅಭ್ಯರ್ಥಿ ಎಂದೇ ಬಿಂಬಿತವಾಗಿರುವ ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷದ ನಾಯಕ ಮತ್ತು ಅಧ್ಯಕ್ಷೀಯ ಅಭ್ಯರ್ಥಿ ಅರುಣ ಕುಮಾರ ಡಿಸ್ಸಾನಾಯಕೆ ಅವರು ತಾವು ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಎನ್‌ಪಿಪಿಯಿಂದಾಗಿ ಶ್ರೀಲಂಕಾದಲ್ಲಿ ಬದಲಾವಣೆ ಗಾಳಿ ಬೀಸಲಿದೆ ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

2031ಕ್ಕೆ ಭಾರತ 3ನೇ ಅತಿದೊಡ್ಡ ಆರ್ಥಿಕತೆ: ಎಸ್ ಆ್ಯಂಡ್ ಪಿ

ಮುಂಬೈ (ಪಿಟಿಐ): '2024–25ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆಯು ಶೇ 6.7ರಷ್ಟು ಪ್ರಗತಿ ಕಾಣಲಿದೆ. 2030–31ರ ವೇಳೆಗೆ ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ವರದಿ ಗುರುವಾರ ಹೇಳಿದೆ.

2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಶೇ 8.2ರಷ್ಟು ಪ್ರಗತಿ ಕಂಡಿದೆ. ವಾಣಿಜ್ಯ ವಹಿವಾಟುಗಳ ಸುಧಾರಣೆ, ಖಾಸಗಿ ವಲಯದಲ್ಲಿ ಹೂಡಿಕೆ ಹೆಚ್ಚಳ ಮತ್ತು ಸಾರ್ವಜನಿಕ ಬಂಡವಾಳದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಒತ್ತು ನೀಡಬೇಕಿದೆ ಎಂದು ಹೇಳಿದೆ.

ಕರಾವಳಿ ತೀರಗಳ ಅಭಿವೃದ್ಧಿ ಸೇರಿ ಭಾರತವು ಮೂಲಸೌಕರ್ಯದ ಅಭಿವೃದ್ಧಿಗೆ ಒತ್ತು ನೀಡಬೇಕಿದೆ. ಭೌಗೋಳಿಕ ಕಾರ್ಯತಂತ್ರ ಪ್ರದೇಶದ ಮೂಲಕ ಗರಿಷ್ಠ ವ್ಯಾಪಾರದ ಲಾಭವನ್ನು ಪಡೆಯಬೇಕಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ದೇಶದ ಶೇ 90ರಷ್ಟು ವ್ಯಾಪಾರವು ಸಾಗರೋತ್ತರ ಪ್ರದೇಶವನ್ನು ಅವಲಂಬಿಸಿದೆ. ಹಾಗಾಗಿ, ರಫ್ತು ಪ್ರಮಾಣ ಹೆಚ್ಚಿಸಲು ಬಂದರುಗಳ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳಿದೆ.

ಸೆನ್ಸೆಕ್ಸ್ 236 ಅಂಶ ಏರಿಕೆ

ಮುಂಬೈ (ಪಿಟಿಐ): ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ನಾಲ್ಕು ವರ್ಷದ ಬಳಿಕ ಶೇ 0.50ರಷ್ಟು ಬಡ್ಡಿದರ ಕಡಿತಗೊಳಿಸುವುದರಿಂದ ದೇಶದ ಷೇರುಪೇಟೆಯಲ್ಲಿ ಗುರುವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 236 ಅಂಶ ಏರಿಕೆ ಕಂಡು 83,184 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 38 ಅಂಶ ಏರಿಕೆ ಕಂಡು 25,415 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎನ್‌ಟಿಪಿಸಿ, ನೆಸ್ಲೆ, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್, ಮಾರುತಿ ಸುಜುಕಿ, ಎಚ್‌ಯುಎಲ್, ಭಾರ್ತಿ ಏರ್‌ಟೆಲ್, ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಎಚ್‌ಸಿಎಲ್ ಟೆಕ್ನಾಲಜೀಸ್, ಟಿಸಿಎಸ್, ಅದಾನಿ ಪೋರ್ಟ್ಸ್, ಎಲ್ ಆ್ಯಂಡ್ ಟಿ, ಜೆಎಸ್‌ಡಬ್ಲ್ಯು ಸ್ಟೀಲ್, ಎಸ್‌ಬಿಐ, ಟೆಕ್ ಮಹೀಂದ್ರ ಮತ್ತು ಬಜಾಜ್ ಫೈನಾನ್ಸ್ ಷೇರುಗಳು ಕುಸಿತ ಕಂಡಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	47619-48059
ಬೆಟ್ಟೆ	33329-33779
ಕೆಂಪುಗೋಟು	27800-28200
ರಾಶಿ	47139-47569
ಕುಮಟ	
ಚಿಪ್ಪು	20199-24799
ಕೋಕ	5011-21099
ಹಳೆಚಾಲಿ	35669-38499
ಹೊಸಚಾಲಿ	27169-34639
ಪುತ್ತೂರು	
ಹೊಸತು	36000-40500
ಕಾರ್ಕಳ	
ಹೊಸತು	25000-40500
ಹಳತು	30000-48000
ಸಾಗರ	
ಬಿಳಿಗೋಟು	10199-23599
ಚಾಲಿ	22099-32991
ಕೋಕ	8099-22699
ಕೆಂಪುಗೋಟು	14299-32899
ರಾಶಿ	28299-48839
ಸಿಪ್ಪೆಗೋಟು	10690-16321
ಶಿವಮೊಗ್ಗ	
ಬೆಟ್ಟೆ	40510-54700
ಗೊರಬಲು	17560-33109
ಹೊಸತು	42096-43159
ರಾಶಿ	30366-49009
ಸರಕು	44000-87550
ಸಿದ್ದಾಪುರ	
ಬಿಳಿಗೋಟು	24909-28199
ಚಾಲಿ	31009-34309
ಕೋಕ	23109-26399
ಕೆಂಪುಗೋಟು	21109-25109
ರಾಶಿ	40889-45699
ತಟ್ಟಿಬೆಟ್ಟೆ	27109-32019
ಶಿರಸಿ	
ಬೆಟ್ಟೆ	27199-36399
ಬಿಳಿಗೋಟು	20199-30400
ಚಾಲಿ	32608-35798
ಕೆಂಪುಗೋಟು	19809-21099
ರಾಶಿ	40389-44809
ಯಲ್ಲಾಪುರ	
ಬಿಳಿಗೋಟು	23601-29009
ಚಾಲಿ	29510-35599
ಕೋಕ	4212-18399
ಕೆಂಪುಗೋಟು	19499-20399
ರಾಶಿ	36899-52139
ತಟ್ಟಿಬೆಟ್ಟೆ	25099-35439

ವಿನಿಮಯ ದರ

$	ಡಾಲರ್	83.65
£	ಪೌಂಡ್	111.14
€	ಯುರೊ	93.52
¥	ಯೆನ್ (100ಕ್ಕೆ)	59

ವಿದೇಶಿ ವಿದ್ಯಾರ್ಥಿಗಳಿಗೆ ನೀಡುವ ಪರವಾನಗಿ ಕಡಿತ: ಕೆನಡಾ

ಜಸ್ಟಿನ್ ಟ್ರುಡೊ

ಒಟ್ಟಾವ(ಕೆನಡಾ) (ಪಿಟಿಐ): ವಿದೇಶಿ ವಿದ್ಯಾರ್ಥಿಗಳು ದೇಶದಲ್ಲಿ ಅಧ್ಯಯನ ಕೈಗೊಳ್ಳಲು ನೀಡಲಾಗುವ ಪರವಾನಗಿಗಳನ್ನು ಕಡಿಮೆ ಮಾಡುವುದಾಗಿ ಕೆನಡಾ ಘೋಷಿಸಿದೆ. ಕೆನಡಾದ ಈ ನಿರ್ಧಾರದಿಂದ ಅನೇಕ ಭಾರತೀಯರಿಗೆ ಅನನುಕೂಲವಾಗುವ ಸಾಧ್ಯತೆ ಇದೆ.

ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ವರ್ಷ ವಿದೇಶಿ ವಿದ್ಯಾರ್ಥಿಗಳಿಗೆ ಶೇ 35ರಷ್ಟು ಪರವಾನಗಿಗಳನ್ನು ನೀಡಲಿದ್ದೇವೆ. ಮುಂದಿನ ವರ್ಷ ಈ ಪ್ರಮಾಣದಲ್ಲಿ ಶೇ 10ರಷ್ಟು ಕಡಿತ ಮಾಡುತ್ತೇವೆ' ಎಂದಿದ್ದಾರೆ.

'ವಲಸೆಯಿಂದ ದೇಶದ ಆರ್ಥಿಕತೆಗೆ ಅನುಕೂಲವಾಗಲಿದೆ. ಆದರೆ, ಕೆಲ ಕಿಡಿಗೇಡಿಗಳು ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುವುದು ಮತ್ತು ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವುದು ಕಂಡುಬಂದಾಗ ಅಂತಹ ಚಟುವಟಿಕೆಗಳನ್ನು ಮಟ್ಟಹಾಕುತ್ತೇವೆ' ಎಂದು ಹೇಳಿದ್ದಾರೆ.

ಉನ್ನತ ಅಧ್ಯಯನಕ್ಕಾಗಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಕೆನಡಾಕ್ಕೆ ತೆರಳುತ್ತಾರೆ. ಒಟ್ಟಾವದಲ್ಲಿರುವ ಭಾರತೀಯ ಹೈಕಮಿಷನ್ ವೆಬ್‌ಸೈಟ್‌ನಲ್ಲಿನ ಮಾಹಿತಿ ಪ್ರಕಾರ, ಕೆನಡಾದಲ್ಲಿ 4,27,000 ಭಾರತೀಯ ವಿದ್ಯಾರ್ಥಿಗಳು ಅಧ್ಯಯನ ಕೈಗೊಂಡಿದ್ದಾರೆ.

ವಸ್ತು ಪ್ರದರ್ಶನ ಮಧ್ಯಪ್ರದೇಶದ ಉಜ್ಜೈನಿಯಲ್ಲಿ ಗುರುವಾರ ಸ್ವಚ್ಛತಾ ಕಾರ್ಯಕರ್ತರ ಅಭಿನಂದನಾ ಸಮಾರಂಭದ ಅಂಗವಾಗಿ ಹಮ್ಮಿಕೊಂಡಿದ್ದ ವಸ್ತು ಪ್ರದರ್ಶನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವೀಕ್ಷಿಸಿದರು –ಪಿಟಿಐ ಚಿತ್ರ

'ಸಿಂಧು ನದಿ ನೀರು ಹಂಚಿಕೆ: ಭಾರತ ಒಪ್ಪಂದ ಗೌರವಿಸಲಿ'

ಇಸ್ಲಾಮಾಬಾದ್(ಪಿಟಿಐ): ಸಿಂಧು ನದಿ ನೀರು ಹಂಚಿಕೆಗೆ ಸಂಬಂಧಿಸಿದ ಒಪ್ಪಂದಕ್ಕೆ ಮಹತ್ವ ಇದೆ. ಭಾರತ ಕೂಡ ಒಪ್ಪಂದವನ್ನು ಗೌರವಿಸುತ್ತದೆ ಎಂಬ ವಿಶ್ವಾಸ ಹೊಂದಿರುವುದಾಗಿ ಪಾಕಿಸ್ತಾನ ಗುರುವಾರ ಹೇಳಿದೆ.

ಒಪ್ಪಂದ ಮರುಪರಿಶೀಲನೆ ಕುರಿತು ಭಾರತ ನೋಟಿಸ್ ನೀಡಿದ್ದಕ್ಕೆ ಪಾಕಿಸ್ತಾನ ಈ ಪ್ರತಿಕ್ರಿಯೆ ನೀಡಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ವಿದೇಶಾಂಗ ಸಚಿವಾಲಯ ವಕ್ತಾರೆ ಮುಮ್ತಾಜ್ ಜಹ್ರಾ ಬಲೂಚ್,'ಸಿಂಧು ನದಿ ನೀರು ಹಂಚಿಕೆಗೆ ಸಂಬಂಧಿಸಿ ಎರಡೂ ದೇಶಗಳು ನಿರ್ದಿಷ್ಟ ವಿಧಾನ ಅನುಸರಿಸುತ್ತಿವೆ. ನೀರು ಹಂಚಿಕೆ ಕುರಿತ ಯಾವುದೇ ವಿಚಾರಗಳನ್ನು ಒಪ್ಪಂದದಲ್ಲಿನ ಅವಕಾಶಗಳ ಪ್ರಕಾರವೇ ಬಗೆಹರಿಸಿಕೊಳ್ಳಬೇಕು' ಎಂದರು.

'ವಿದೇಶಾಂಗ ಸಚಿವಾಲಯದ ಪ್ರತಿಕ್ರಿಯೆ ಗಮನಿಸಿದರೆ, ಒಪ್ಪಂದದ ಮರುಪರಿಶೀಲನೆಗೆ ಪಾಕಿಸ್ತಾನಕ್ಕೆ ಆಸಕ್ತಿ ಇಲ್ಲ ಎಂಬುದು ಗೊತ್ತಾಗುತ್ತದೆ' ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸಂಘರ್ಷ ತಡೆಗೆ ರಾಜತಾಂತ್ರಿಕ ಪರಿಹಾರದ ಭರವಸೆ ಕ್ಷೀಣ

ಹಿಜ್ಬುಲ್ಲಾ ವಿರುದ್ಧ ಯುದ್ಧಕ್ಕೆ ಇಸ್ರೇಲ್ ತಯಾರಿ

ಜೆರುಸಲೇಂ (ಎಪಿ): ಲೆಬನಾನ್‌ನಲ್ಲಿ ಎಲೆಕ್ಟ್ರಾನಿಕ್ ಸಾಧನಗಳ ಸ್ಫೋಟದ ಬೆನ್ನಲ್ಲೇ ಇಸ್ರೇಲ್‌ನ ರಕ್ಷಣಾ ಸಚಿವರು ಯುದ್ಧದ 'ಹೊಸ ಹಂತ'ದ ಆರಂಭ ಎಂದು ಘೋಷಿಸಿದ್ದಾರೆ. ಈ ಮೂಲಕ ಹಿಜ್ಬುಲ್ಲಾ ವಿರುದ್ಧ ಯುದ್ಧ ನಡೆಸಲು ಇಸ್ರೇಲ್ ತಯಾರಿ ನಡೆಸುತ್ತಿರುವುದನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಈ ಬೆಳವಣಿಗೆಯು ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವೆ ಹಿಂದೆಂದಿಗಿಂತ ಸಂಪೂರ್ಣ ಯುದ್ಧದ ಭೀತಿಯನ್ನು ಸೃಷ್ಟಿಸಿದೆ.

ಹಮಾಸ್ ಯುದ್ಧ ಪ್ರಾರಂಭಿಸಿದ ಮರು ದಿನದಿಂದ (ಅಕ್ಟೋಬರ್ 8) ಲೆಬನಾನಿನ ಹಿಜ್ಬುಲ್ಲಾ ಸಂಘಟನೆ ವಿರುದ್ಧ ಇಸ್ರೇಲ್ ಗಡಿಯಾಚೆ ಗುಂಡಿನ ವಿನಿಮಯ ಮಾಡಿಕೊಂಡಿತ್ತು. ಇದೀಗ ಇಸ್ರೇಲ್, ದೇಶದ ಉತ್ತರ ಭಾಗದಲ್ಲಿ ಯಥಾಸ್ಥಿತಿಯನ್ನು ಬದಲಿಸಲು ಬಯಸಿರುವಂತೆ ಕಾಣುತ್ತಿದೆ. ಇದು ಸಂಘರ್ಷ ತಡೆಗೆ ರಾಜತಾಂತ್ರಿಕ ಪರಿಹಾರದ ಭರವಸೆಗಳನ್ನು ಕ್ಷೀಣಿಸುವಂತೆ ಮಾಡುತ್ತಿದೆ.

ಇತ್ತೀಚೆಗೆ ಉತ್ತರ ಗಡಿ ಭಾಗದಲ್ಲಿ ಇಸ್ರೇಲ್ ಹೆಚ್ಚಿನ ಪಡೆಗಳನ್ನು ನಿಯೋಜಿಸುತ್ತಿದೆ. ಗಾಜಾ ಗಡಿಯಿಂದ ಸೇನಾ ಪಡೆಗಳನ್ನು ಉತ್ತರದ ಗಡಿ ಭಾಗಕ್ಕೆ ಸ್ಥಳಾಂತರಿಸುವುದರಲ್ಲಿ ತೊಡಗಿದೆ. ಇದರ ನಡುವೆ ಅಧಿಕಾರಿಗಳು ವಾಗ್ದಾಳಿಯನ್ನೂ ಹೆಚ್ಚಿಸಿದ್ದಾರೆ. ಇದು ಯುದ್ಧಕ್ಕೆ ಸನ್ನದ್ಧವಾಗುತ್ತಿರುವುದನ್ನು ತೋರಿಸುತ್ತದೆ.

ಈ ಹಿಂದೆಯೂ ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ಹೋರಾಟವು ಹಲವು ಬಾರಿ ಉಲ್ಬಣಗೊಂಡಿದ್ದಿದೆ. ಆದರೆ, ಆಗೆಲ್ಲ ಈ ಪರಮ ಶತ್ರುಗಳು ಜಾಗರೂಕವಾಗಿ ಸಂಪೂರ್ಣ ಯುದ್ಧ ನಡೆಯದಂತೆ ಎಚ್ಚರವಹಿಸಿದ್ದವು.

ಈ ಬಾರಿಯ ಪರಿಸ್ಥಿತಿ ಭಿನ್ನವಾಗಿದೆ. ಲೆಬನಾನ್‌ನಲ್ಲಿ ಮಂಗಳವಾರ ಮತ್ತು ಬುಧವಾರ ಪೇಜರ್‌ಗಳು, ವಾಕಿ–ಟಾಕಿಗಳು ಮತ್ತು ಇತರ ಸಾಧನಗಳು ಸ್ಫೋಟಗೊಂಡು ಕನಿಷ್ಠ 20 ಮಂದಿ ಮೃತಪಟ್ಟಿದ್ದಾರೆ. ಸಹಸ್ರಾರು ಜನರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಈ ಸ್ಫೋಟಗಳಿಗೆ ಇಸ್ರೇಲ್ ಕಾರಣ ಎಂಬುದು ಹಿಜ್ಬುಲ್ಲಾದ ಆರೋಪವಾಗಿದೆ. ಅಲ್ಲದೆ ಇದಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಹಿಜ್ಬುಲ್ಲಾ ಶಪಥ ಕೂಡ ಮಾಡಿದೆ.

ಇಸ್ರೇಲ್‌ನ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರು ಬುಧವಾರ ರಾತ್ರಿ, ಯುದ್ಧದ 'ಹೊಸ ಹಂತ'ದ ಪ್ರಾರಂಭವನ್ನು ಘೋಷಿಸಿದ್ದಾರೆ. ಇಸ್ರೇಲ್ ತನ್ನ ಗಮನವನ್ನು ಹಿಜ್ಬುಲ್ಲಾ ಕಡೆಗೆ ತಿರುಗಿಸುತ್ತಿದೆ. ಸಂಪನ್ಮೂಲ ಮತ್ತು ಸೇನಾ ಪಡೆಗಳನ್ನು ಉತ್ತರಕ್ಕೆ ರವಾನಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಛಾಬ್ರಿಯಾ ಅಂಡ್ ಸನ್ಸ್ ಬೇಕಾಗಿದ್ದಾರೆ ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ. ವೇತನ ಶ್ರೇಣಿ: 17,000/– ರಿಂದ 19,000/– ಸ್ಥಳ: ಬೆಂಗಳೂರು. ಉದ್ಯೋಗ: ಆಫೀಸ್ ಬಾಯ್, & ಡೆಲಿವರಿ ಬಾಯ್, ವಾಟ್ಸಪ್ ನಂ: 8792898561, 9164887571 ಸಮಯ: ಬೆಳಿಗ್ಗೆ 10 ರಿಂದ ರಾತ್ರಿ 8:30ರವರೆಗೆ ಕೆಲಸದ ಸಮಯ: ಸೋಮವಾರ ದಿಂದ ಶನಿವಾರ ಮಾತ್ರ

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9148525233, 9900859248

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

ADMISSION CORNER

Admission Guidance for 2024-25
Under NRI & Management Quota
MBBS, MS/MD, BDS, BAMS, BHMS, B Tech, BE & MBA
Get Admission in the Best College in Karnataka
FCC, BLR: 9900005943/9900005947
Toll free: 1800-570-3344 | www.fccbharat.com

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

ಭವಿಷ್ಯ

Astrology

★‖ಇಷ್ಟಪಟ್ಟವರು‖★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಪ್ರವಾಸ

Travel

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 6 ದಿನಗಳ ಬಾಲಿ. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900080793 9900080796

02.12.2024 04.01.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 18.11.2024 13.01.2025 ದುಬೈ,ಅಬುದಾಬಿ 5 ದಿನಗಳು. 21.11.2024 ನೇಪಾಳ 9 ದಿನಗಳು. 22.10.2024 23.11.2024 ಭೂತಾನ್ 8 ದಿನಗಳು. 24.11.2024 14.12.2024 ಶ್ರೀಲಂಕಾ 6 ದಿನಗಳು. 17.11.2024 ಅಸ್ಸಾಂ, ಮೇಘಾಲಯ 9 ದಿನಗಳು. 22.10.2024 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 24.11.2024 07.12.2024 ರಾಜಸ್ಥಾನ್ 10 ದಿನಗಳು. 18.11.2024 12.12.2024 ಮಧ್ಯಪ್ರದೇಶ 10 ದಿನಗಳು. 04.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟೆಸ್ಟ್ ಕ್ರಿಕೆಟ್: ತವರಿನಂಗಳದಲ್ಲಿ ಶತಕ ದಾಖಲಿಸಿದ 'ಆ್ಯಷ್' • ಅಗ್ರಕ್ರಮಾಂಕದ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದ ಹಸನ್

ಭಾರತಕ್ಕೆ ಅಶ್ವಿನ್–ಜಡೇಜ ಜೊತೆಯಾಟದ ಶಕ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಇಲ್ಲಿಯ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಗುರುವಾರ ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರು 'ಸೂಪರ್ ಹೀರೊ'ಗಳಂತೆ ಕಂಗೊಳಿಸಿದರು.

ಇಲ್ಲಿ ಆರಂಭವಾದ ಬಾಂಗ್ಲಾದೇಶ ಎದುರಿನ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನದಾಟದಲ್ಲಿ 144 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದ ಆತಿಥೇಯ ತಂಡಕ್ಕೆ ಅಶ್ವಿನ್–ಜಡೇಜ ಜೋಡಿಯು ಮರುಜೀವ ತುಂಬಿತು. ಇಬ್ಬರೂ ಸೇರಿ ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 195 ರನ್ ಸೇರಿಸಿದರು. ಇದರಿಂದಾಗಿ ತಂಡವು ದಿನದಾಟದ ಮುಕ್ತಾಯಕ್ಕೆ 80 ಓವರ್‌ಗಳಲ್ಲಿ 6ಕ್ಕೆ339 ರನ್‌ಗಳ ಉತ್ತಮ ಮೊತ್ತ ಪೇರಿಸಿದೆ. ಶತಕ ಗಳಿಸಿದ ಅಶ್ವಿನ್ (ಔಟಾಗದೆ 102; 112 ಎಸೆತ) ಹಾಗೂ ನೂರರತ್ತ ಹೆಜ್ಜೆಹಾಕಿರುವ ಜಡೇಜ (ಅಜೇಯ 87; 117ಎ) ಕ್ರೀಸ್‌ನಲ್ಲಿದ್ದಾರೆ.

ಎಂಜಿನಿಯರಿಂಗ್ ಪದವೀಧರ ಅಶ್ವಿನ್ ಚಾಣಾಕ್ಷ ಕ್ರಿಕೆಟಿಗ ಕೂಡ ಹೌದು. ಅವರಿಗೆ ಇದು ಟೆಸ್ಟ್‌ನಲ್ಲಿ ಆರನೇ ಶತಕ. ವಿಶ್ವದ ಅಪ್ರತಿಮ ಆಫ್‌ಸ್ಪಿನ್ನರ್‌ಗಳಲ್ಲಿ ಒಬ್ಬರು. ತಮ್ಮ ತವರಿನಂಗಳದಲ್ಲಿ ಅವರಿಗೆ ಇದು ಬಹುತೇಕ ಕೊನೆಯ ಟೆಸ್ಟ್ ಪಂದ್ಯವಾಗಿದೆ. ಅಶ್ವಿನ್ ಅವರ ಈ ಶತಕವು ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು. ಅವರು ಕಳೆದ ಮಂಗಳವಾರವಷ್ಟೇ 38ನೇ ಜನ್ಮದಿನ ಆಚರಿಸಿಕೊಂಡಿದ್ದಾರೆ.

ಚಹಾ ವಿರಾಮಕ್ಕೂ ಸ್ವಲ್ಪ ಹೊತ್ತಿಗೆ ಮುಂಚೆ ಕೆ.ಎಲ್.ರಾಹುಲ್ (16 ರನ್) ಅವರು ಔಟಾದರು. ಆಗ ಇನ್ನೊಂದು ಬದಿಯಲ್ಲಿದ್ದ ಜಡೇಜ ಅವರೊಂದಿಗೆ ಸೇರಿಕೊಂಡ ಅಶ್ವಿನ್ ಬಾಂಗ್ಲಾದ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು. ಶಿಸ್ತುಬದ್ಧ ರಕ್ಷಣಾ ತಂತ್ರ ಅನುಸರಿಸಬೇಕಾದ ಅನಿವಾರ್ಯ ಸಂದರ್ಭ ಅದಾಗಿತ್ತು. ಆದರೆ, ಅಶ್ವಿನ್ ಅವರ ಯೋಜನೆಯೇ ವಿಭಿನ್ನವಾಗಿತ್ತು.

ತಾವು ಎದುರಿಸಿದ ಎರಡನೇ ಎಸೆತದಲ್ಲಿಯೇ ತಮ್ಮ ಇರಾದೆಯನ್ನು ಬಹಿರಂಗಪಡಿಸಿದರು. ನಹೀದ್ ರಾಣಾ ಎಸೆತವನ್ನು ಬೌಂಡರಿಗೆ ಕಳಿಸಿದರು. ಐದು ಎಸೆತಗಳ ನಂತರ ಮತ್ತೊಂದು ಬೌಂಡರಿ ಹೊಡೆದರು. ಇದರಿಂದಾಗಿ ಅವರು ಬೌಲರ್‌ಗಳನ್ನು ದಂಡಿಸುವ ಮೂಡ್‌ನಲ್ಲಿರುವುದು ಸ್ಪಷ್ಟವಾಯಿತು. ನಂತರ ಅಶ್ವಿನ್ ಪ್ರಯೋಗಿಸಿದ ಸುಂದರವಾದ ಡ್ರೈವ್‌ಗಳು ವಿವಿಎಸ್ ಲಕ್ಷ್ಮಣ್ ಅವರ ಆಟವನ್ನು ನೆನಪಿಸಿದವು. ಅವರ ಟೈಮಿಂಗ್, ಕಟ್ ಶಾಟ್ಸ್, ಸ್ಲಿಪ್ ಮತ್ತು ಸ್ಕ್ವೇರ್‌ಗೆ ಪ್ರಯೋಗಿಸಿದ ಹೊಡೆತಗಳು ನೋಡುಗರ ಮನಕ್ಕೆ ಮುದ ನೀಡಿದವು.

ಬೆಳಗಿನ ಅವಧಿಯಲ್ಲಿ ಅಗ್ರಕ್ರಮಾಂಕದ ಬ್ಯಾಟರ್‌ಗಳನ್ನು ಗೋಳಾಡಿಸಿದ್ದ ಬೌಲರ್‌ಗಳು ಅಶ್ವಿನ್ ಆಟಕ್ಕೆ ಸುಸ್ತಾದರು. ಈ ಜೊತೆಯಾಟದಲ್ಲಿ ಜಡೇಜ ಅವರ ಪಾತ್ರವೂ ಮಹತ್ವದ್ದಾಗಿತ್ತು. ಅವರು ಅಶ್ವಿನ್ ತರಹ ಆಕ್ರಮಣಶೀಲರಾಗಿರಲಿಲ್ಲ. ಹೆಚ್ಚು ರಕ್ಷಣಾತ್ಮಕವಾಗಿ ಹಾಗೂ ತಾಳ್ಮೆಯಿಂದ ಆಡಿದರು. ಆದರೆ ಎಷ್ಟು ಸಾಧ್ಯವೋ ಅಷ್ಟು ಹೊತ್ತು ವಿಕೆಟ್ ಉರುಳದಂತೆ ನೋಡಿಕೊಂಡರು. ರನ್‌ಗಳ ಕಾಣಿಕೆಯನ್ನೂ ನೀಡಿದರು.

ಮೆಹಮೂದ್ ಹಸನ್ ಮಿಂಚು: ಬಾಂಗ್ಲಾದೇಶದ 24 ವರ್ಷ ವಯಸ್ಸಿನ ಮೆಹಮೂದ್ ಹಸನ್ (58ಕ್ಕೆ4) ಆತಿಥೇಯ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದರು.

ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಬಾಂಗ್ಲಾ ತಂಡಕ್ಕೆ ಇನಿಂಗ್ಸ್‌ಮೊದಲ ಒಂದು ಗಂಟೆ ಕಳೆಯುವುದರಲ್ಲಿಯೇ ಮಧ್ಯಮ ವೇಗಿ ಹಸನ್ 3 ವಿಕೆಟ್‌ಗಳ ಕಾಣಿಕೆ ನೀಡಿದರು. ಅವರು ಈಚೆಗೆ ಪಾಕಿಸ್ತಾನದ ಎದುರಿನ ಸರಣಿಯಲ್ಲಿ ಎಂಟು ವಿಕೆಟ್ (ಐದರ ಗೊಂಚಲು ಸೇರಿ) ಗಳಿಸಿದ್ದರು.

ಶ್ವೇತಚೆಂಡಿನ ಪರಿಣತ ಬೌಲರ್ ಎನಿಸಿಕೊಂಡು ತಂಡಕ್ಕೆ ಪದಾರ್ಪಣೆ ಮಾಡಿದ್ದ ಹಸನ್ ಈಗ ಕೆಂಪುಚೆಂಡಿನಲ್ಲಿಯೂ ತಮ್ಮ ಭುಜಬಲ ಮೆರೆಯುತ್ತಿದ್ದಾರೆ. ರೋಹಿತ್ ಶರ್ಮಾ, ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ಅವರಿಗೆ ತಮ್ಮ ಸ್ವಿಂಗ್ ರುಚಿ ತೋರಿಸಿದ ಹಸನ್ ಕುಣಿದಾಡಿದರು.

ಈ ಹಂತದಲ್ಲಿ 34 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಯಶಸ್ವಿ ಜೈಸ್ವಾಲ್ (56 ರನ್) ಮತ್ತು ರಿಷಭ್ ಪಂತ್ (39 ರನ್) ಬಲ ತುಂಬುವ ಪ್ರಯತ್ನ ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದರು. ಈ ಜೊತೆಯಾಟವನ್ನೂ ಹಸನ್ ಅವರೇ ಮುರಿದರು. ರಿಷಭ್ ಅವರನ್ನು ಔಟ್ ಮಾಡಿದರು.

ಇನ್ನೊಂದೆಡೆ ನಹೀದ್ ರಾಣಾ ಮತ್ತು ಮೆಹದಿ ಹಸನ್ ಮಿರಾಜ್ ಅವರು ಕ್ರಮವಾಗಿ ಯಶಸ್ವಿ ಮತ್ತು ಕೆ.ಎಲ್. ರಾಹುಲ್ (16 ರನ್) ವಿಕೆಟ್ ಗಳಿಸಿದರು.

6
ಆರ್. ಅಶ್ವಿನ್ ಅವರು ಟೆಸ್ಟ್‌ನಲ್ಲಿ ದಾಖಲಿಸಿದ ಶತಕಗಳ ಸಂಖ್ಯೆ

108
ಚೆನ್ನೈನಲ್ಲಿ ಬಾಂಗ್ಲಾ ಎದುರು ಶತಕ ಗಳಿಸಲು ಅಶ್ವಿನ್ ಆಡಿದ ಎಸೆತಗಳು. ಇದು ಅವರ ವೇಗದ ಶತಕವಾಗಿದೆ. ಚೆಪಾಕ್‌ನಲ್ಲಿ ದಾಖಲಾದ ಎರಡನೇ ವೇಗದ ಶತಕವೂ ಇದಾಗಿದೆ. 1987–88ರಲ್ಲಿ ಇಲ್ಲಿ ಕಪಿಲ್ ದೇವ್ 105 ಎಸೆತದಲ್ಲಿ 100ರ ಗಡಿ ದಾಟಿದ್ದರು.

8ನೇ ಕ್ರಮಾಂಕದ ಬ್ಯಾಟರ್‌ಗಳ ಶತಕ

ಆಟಗಾರ	ಶತಕ
ಆರ್. ಅಶ್ವಿನ್ (ಭಾರತ)	4
ಡೇನಿಯಲ್ ವೆಟೋರಿ (ನ್ಯೂಜಿಲೆಂಡ್)	4
ಕಮ್ರನ್ ಅಕ್ಮಲ್ (ಪಾಕಿಸ್ತಾನ)	3

ಚೆನ್ನೈನಲ್ಲಿ ಶತಕ ದಾಖಲಿಸಿದ ಆರ್. ಅಶ್ವಿನ್ ಅವರ ಸಂಭ್ರಮ –ಪಿಟಿಐ ಚಿತ್ರ

16 ಇನಿಂಗ್ಸ್‌ಗಳಲ್ಲಿ ಯಶಸ್ವಿ ಜೈಸ್ವಾಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ಸಾವಿರ ರನ್ ದಾಟಿದರು. ಇದು ಆರನೇ ವೇಗದ ಸಾಧನೆ. ಭಾರತದ ಆಟಗಾರರ ಪೈಕಿ ವಿನೋದ್ ಕಾಂಬ್ಳಿ (14 ಇನಿಂಗ್ಸ್) ನಂತರದ ಸ್ಥಾನದಲ್ಲಿದ್ದಾರೆ

ಚೆನ್ನೈನಲ್ಲಿ ಮೊದಲ ದಿನದಾಟದ ಗರಿಷ್ಠ ಸ್ಕೋರ್

ಮೊತ್ತ	ತಂಡ	ಎದುರಾಳಿ	ವರ್ಷ
6ಕ್ಕೆ339	ಭಾರತ	ಬಾಂಗ್ಲಾ	2024-25
3ಕ್ಕೆ326	ಆಸ್ಟ್ರೇಲಿಯಾ	ಭಾರತ	2000-01
7ಕ್ಕೆ316	ಆಸ್ಟ್ರೇಲಿಯಾ	ಭಾರತ	2012-13
1ಕ್ಕೆ315	ವಿಂಡೀಸ್	ಭಾರತ	1948-49

768 ತವರಿನಲ್ಲಿ ಆಡಿದ ಮೊದಲ 10 ಇನಿಂಗ್ಸ್‌ಗಳಲ್ಲಿ ಜೈಸ್ವಾಲ್ ಗಳಿಸಿದ ಒಟ್ಟು ಮೊತ್ತ. ಈ ಹಾದಿಯಲ್ಲಿ ವೆಸ್ಟ್‌ಇಂಡೀಸ್‌ನ ಜಾರ್ಜ್ ಹೆಡ್ಲಿ (747 ರನ್) 89 ವರ್ಷಗಳ ಹಿಂದೆ ನಿರ್ಮಿಸಿದ್ದ ದಾಖಲೆ ಮುರಿದರು

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 6ಕ್ಕೆ 339 (80 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಸಿ ಶಾದ್ಮನ್ ಬಿ ನಹೀದ್ 56 (118ಎ, 4x9)
ರೋಹಿತ್ ಸಿ ನಜ್ಮುಲ್ ಬಿ ಹಸನ್ 6 (19ಎ, 4x1)
ಶುಭಮನ್ ಸಿ ಲಿಟ್ಟನ್ ಬಿ ಹಸನ್ 0 (8ಎ)
ಕೊಹ್ಲಿ ಸಿ ಲಿಟ್ಟನ್ ಬಿ ಹಸನ್ 6 (6ಎ)
ಪಂತ್ ಸಿ ಲಿಟ್ಟನ್ ಬಿ ಹಸನ್ 39 (52ಎ, 4x6)
ರಾಹುಲ್ ಸಿ ಜಾಕಿರ್ ಬಿ ಮಿರಾಜ್ 16 (52ಎ, 4x1)
ರವೀಂದ್ರ ಜಡೇಜ ಔಟಾಗದೇ 86 (117ಎ, 4x10, 6x2)
ರವಿಚಂದ್ರನ್ ಅಶ್ವಿನ್ ಔಟಾಗದೇ 102 (112ಎ, 4x10, 6x2)
ಇತರೆ: 28 (ಬೈ 18, ಲೆಗ್‌ಬೈ 5, ನೋಬಾಲ್ 4, ವೈಡ್ 1)
ವಿಕೆಟ್ ಪತನ: 1-14 (ರೋಹಿತ್ ಶರ್ಮಾ; 5.1), 2-28 (ಶುಭಮನ್ ಗಿಲ್; 7.3), 3-34 (ವಿರಾಟ್ ಕೊಹ್ಲಿ; 9.2), 4-96 (ರಿಷಭ್ ಪಂತ್; 25.3), 5-144 (ಯಶಸ್ವಿ ಜೈಸ್ವಾಲ್, 41.4), 6-144 (ಕೆ.ಎಲ್.ರಾಹುಲ್, 42.2)
ಬೌಲಿಂಗ್: ತಸ್ಕಿನ್ ಅಹಮದ್ 15–1–47–0, ಹಸನ್ ಮೆಹಮೂದ್ 18–4–58–4, ನಹೀದ್ ರಾಣಾ 17–2–80–1, ಮೆಹದಿ ಹಸನ್ ಮಿರಾಜ್ 21–2–77–1, ಶಕೀಬ್ ಅಲ್ ಹಸನ್ 8–0–50–0, ಮೊಮಿನುಲ್ ಹಕ್ 1–0–4–0

ರವೀಂದ್ರ ಜಡೇಜ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ವಿಕೆಟ್ ಪಡೆದ ಸಂಭ್ರಮದಲ್ಲಿ ಮೆಹಮೂದ್ ಹಸನ್

ಬೆಂಗಳೂರು ಎಫ್‌ಸಿ ತಂಡದ ಸುನಿಲ್ ಚೆಟ್ರಿ ಗೋಲು ಗಳಿಸಿದ ನಂತರ ಸಂಭ್ರಮಿಸಿದ್ದು ಹೀಗೆ –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಚೆಟ್ರಿ ಕಾಲ್ಚಳಕ: ಬೆಂಗಳೂರು ಪಾರಮ್ಯ

ಬೆಂಗಳೂರು: ಸುನಿಲ್ ಚೆಟ್ರಿ ಮತ್ತು ರಾಹುಲ್ ಭೆಕೆ ಅವರ ಭರ್ಜರಿ ಆಟದ ಬಲದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಜಯಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 3–0ಯಿಂದ ಹೈದರಾಬಾದ್ ಎಫ್‌ಸಿ ವಿರುದ್ಧ ಜಯಭೇರಿ ಬಾರಿಸಿತು. ಟೂರ್ನಿಯಲ್ಲಿ ತಂಡಕ್ಕೆ ಇದು ಸತತ ಎರಡನೇ ಜಯವಾಗಿದೆ. ಒಟ್ಟು ಅರು ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿತು.

ಪಂದ್ಯದ ಆರಂಭದಿಂದಲೂ ಬಿಎಫ್‌ಸಿ ಪಾರಮ್ಯ ಮೆರೆಯಿತು. ತಂಡಕ್ಕೆ ಐದನೇ ನಿಮಿಷದಲ್ಲಿ ರಾಹುಲ್ ಭೆಕೆ ಅವರು ಗೋಲು ಖಾತೆ ತೆರೆದರು. ಇದರ ನಂತರದ 80 ನಿಮಿಷಗಳಲ್ಲಿ ಉಭಯ ತಂಡಗಳ ರಕ್ಷಣಾ ಆಟಗಾರರ ಸತ್ವಪರೀಕ್ಷೆ ನಡೆಯಿತು. ಎರಡೂ ತಂಡಗಳಿಗೆ ಗೋಲು ಒಲಿಯಲಿಲ್ಲ.

ಆದರೆ ಅನುಭವಿ ನಾಯಕ ಚೆಟ್ರಿ ತಮ್ಮ ಕಾಲ್ಚಳಕ ತೋರಿದರು. ಪೆನಾಲ್ಟಿ ಕಿಕ್ ನಲ್ಲಿ (85ನಿಮಿಷ) ಗೋಲು ಹೊಡೆದರು. ಅಷ್ಟಕ್ಕೇ ಸುಮ್ಮನಾಗದ ಅವರು ಕೊನೆಯ ಹಂತದ ನಿಮಿಷಗಳಲ್ಲಿಯೂ ಚುರುಕಾದ ದಾಳಿ ಸಂಘಟಿಸಿದರು. ಇದರ ಫಲವಾಗಿ ಮತ್ತೊಂದು ಗೋಲು (90 + 4ನಿ) ಕೂಡ ಒಲಿಯಿತು.

ಬಿಎಫ್‌ಸಿಯ ಆಟಗಾರರು ಚುಟುಕಾದ ಪಾಸ್‌ಗಳ ಮೂಲಕ ಎದುರಾಳಿಗಳ ಮೇಲೆ ಒತ್ತಡ ಹಾಕಿದರು. ಬಿಎಫ್‌ಸಿಯಿಂದ 595 ಪಾಸ್‌ಗಳು ದಾಖಲಾದರೆ, ಹೈದರಾಬಾದ್ ತಂಡವು 221 ಪಾಸ್‌ಗಳನ್ನು ಮಾತ್ರ ಮಾಡಿತು. ಪಾಸ್‌ಗಳ ನಿಖರತೆಯಲ್ಲಿ ಬಿಎಫ್‌ಸಿಯು ಶೇ 90ರಷ್ಟು ಸಫಲವಾಗಿತ್ತು. ಆದರೆ ತಂಡದ ಆಟಗಾರರು ಮೂರು ಸಲ ಹಳದಿ ಕಾರ್ಡ್ ದರ್ಶನ ಮಾಡಿದರು.

ಸ್ನೂಕರ್: ಮನುದೇವ್‌ಗೆ ಪ್ರಶಸ್ತಿ

ಬೆಂಗಳೂರು: ಐ.ಎಚ್.ಮನುದೇವ್ ಅವರು ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ರ‍್ಯಾಂಕಿಂಗ್ ಪುರುಷರ 6 ರೆಡ್ ಸ್ನೂಕರ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಗುರುವಾರ ನಡೆದ ಫೈನಲ್‌ನಲ್ಲಿ ಮನುದೇವ್ ಅವರು 6 – 3ರಿಂದ (33-12, 33-27, 36-02, 02-38, 59-03, 42-12, 25-37, 07-45, 32-22) ಬಿ.ಸಿ. ಕಾರ್ತಿಕ್ ಅವರನ್ನು ಸೋಲಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪೈಪೋಟಿಯಲ್ಲಿ ಸೀನ್ ಡೇವಿಸ್ 3–2ರಿಂದ (47-02, 00-32, 34-37, 46-00, 35-32) ಹರೀಶ್ ಕುಮಾರ್ ಅವರನ್ನು ಸೋಲಿಸಿದರು.

ಪ್ರಶಸ್ತಿಯೊಂದಿಗೆ ಐ.ಎಚ್.ಮನುದೇವ್

ಇದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ ಮನುದೇವ್ 5–3ರಿಂದ ಡೇವಿಸ್ ಅವರನ್ನು; ಕಾರ್ತಿಕ್ 5–4ರಿಂದ ಹರೀಶ್ ಅವರನ್ನು ಸೋಲಿಸಿದ್ದರು.

ದುಲೀಪ್ ಟ್ರೋಫಿ: ಶ್ರೇಯಸ್ ಅಯ್ಯರ್ ಮತ್ತೆ ವಿಫಲ

ಭಾರತ ಡಿ ತಂಡದ ಉತ್ತಮ ಮೊತ್ತ

ಅನಂತಪುರ (ಪಿಟಿಐ): ಉತ್ತಮ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿರುವ ಶ್ರೇಯಸ್ ಅಯ್ಯರ್ ಸತತ ಎರಡನೇ ಬಾರಿ ಸೊನ್ನೆಗೆ ನಿರ್ಗಮಿಸಿದರು. ಆದರೆ ಇತರ ಬ್ಯಾಟರ್‌ಗಳ ಉಪಯುಕ್ತ ಬ್ಯಾಟಿಂಗ್‌ನಿಂದ ಭಾರತ 'ಡಿ' ತಂಡವು ಗುರುವಾರ ಆರಂಭವಾದ ದುಲೀಪ್ ಟ್ರೋಫಿ ಕ್ರಿಕೆಟ್ ಲೀಗ್ ಪಂದ್ಯದಲ್ಲಿ ಭಾರತ 'ಬಿ' ವಿರುದ್ಧ 5 ವಿಕೆಟ್‌ಗೆ 306 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ನಾಯಕ ವಿಫಲನಾದರೂ, ಆರಂಭ ಆಟಗಾರರಾದ ದೇವದತ್ತ ಪಡಿಕ್ಕಲ್ (50), ಶ್ರೀಕರ್ ಭರತ್ (52), ರಿಕಿ ಭುಯಿ (56) ಮತ್ತು ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ (ಔಟಾಗದೇ 89, 83ಎ, 4x10, 6x3) ಅವರು ತಂಡದ ನೆರವಿಗೆ ನಿಂತರು.

ಪಡಿಕ್ಕಲ್ ಮತ್ತು ಭರತ್ ಮೊದಲ ವಿಕೆಟ್‌ಗೆ 105 ರನ್ ಸೇರಿಸಿ ಭದ್ರ ಬುನಾದಿ ಹಾಕಿಕೊಟ್ಟಿದ್ದರು. ಇಬ್ಬರೂ ಕ್ರಮವಾಗಿ ನವದೀಪ್ ಸೈನಿ ಮತ್ತು ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಎನ್.ಜಗದೀಶನ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ದಿನದಾಟ ಮುಗಿದಾಗ, ಸಂಜು ಜೊತೆ ಸಾರಾಂಶ್ ಜೈನ್ (ಔಟಾಗದೇ 26) ಅಜೇಯರಾಗುಳಿದಿದ್ದು, ಮುರಿಯದ ಆರನೇ ವಿಕೆಟ್‌ಗೆ 90 ರನ್ ಪೇರಿಸಿದ್ದಾರೆ. ಸಂಜು ಆಕ್ರಮಣಕಾರಿಯಾಗಿ ಆಡಿದರು.

ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದಿದ್ದ ಭಾರತ 'ಬಿ' ತಂಡದ ಕಡೆ ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ 60 ರನ್ನಿಗೆ 3 ವಿಕೆಟ್ ಪಡೆದು ಮಿಂಚಿದರು. ಇದರಲ್ಲಿ ಶ್ರೇಯಸ್ ವಿಕೆಟ್ ಸೇರಿತ್ತು. ಅಯ್ಯರ್ ಐದು ಇನಿಂಗ್ಸ್‌ಗಳಲ್ಲಿ ಗಳಿಸಿದ್ದು 104 ರನ್‌ಗಳನ್ನಷ್ಟೇ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 'ಡಿ': 77 ಓವರುಗಳಲ್ಲಿ 5ಕ್ಕೆ 306 (ದೇವದತ್ತ ಪಡಿಕ್ಕಲ್ 50, ಶ್ರೀಕರ ಭರತ್ 52, ರಿಕಿ ಭುಯಿ 56, ಸಂಜು ಸ್ಯಾಮ್ಸನ್ ಔಟಾಗದೇ 89; ರಾಹುಲ್ ಚಾಹರ್ 60ಕ್ಕೆ3) ವಿರುದ್ಧ ಭಾರತ 'ಬಿ'

ಎ ತಂಡಕ್ಕೆ ಚೇತರಿಕೆ ನೀಡಿದ ಶಾಶ್ವತ್ ರಾವತ್ ಅಜೇಯ ಶತಕ

ಅನಂತಪುರ: ಮಧ್ಯಮ ಸರದಿಯ ಬ್ಯಾಟರ್ ಶಾಶ್ವತ್ ರಾವತ್ (ಔಟಾಗದೇ 122, 235ಎ, 4x15) ಅವರ ಹೋರಾಟದ ಅಜೇಯ ಶತಕದಿಂದಾಗಿ ಭಾರತ 'ಎ' ತಂಡ, ಇನ್ನೊಂದು ಲೀಗ್ ಪಂದ್ಯದಲ್ಲಿ 'ಸಿ' ತಂಡದ ಎದುರು ಮುಖಭಂಗದಿಂದ ತಪ್ಪಿಸಿಕೊಂಡಿತು.

ಮೊದಲ ದಿನದಾಟ ಮುಗಿದಾಗ ಭಾರತ 'ಎ' 77 ಓವರುಗಳಲ್ಲಿ 7 ವಿಕೆಟ್‌ಗೆ 224 ರನ್ ಗಳಿಸಿತ್ತು. ಏಕಾಂಗಿಯಾಗಿ ಹೋರಾಟ ನಡೆಸಿದ ಶಾಶ್ವತ್ ಬಿಟ್ಟರೆ ಅವರಿಗೆ ಶಮ್ಸ್ ಮುಲಾನಿ (44) ಅವರಿಂದ ಮಾತ್ರ ಸ್ವಲ್ಪ ಬೆಂಬಲ ದೊರೆಯಿತು. ಉಳಿದವರು ದಯನೀಯ ವೈಫಲ್ಯ ಕಂಡರು.

ಆರಂಭ ಆಟಗಾರರಾದ ಪ್ರಥಮ್ ಸಿಂಗ್ (6), ಮಯಂಕ್ ಅಗರವಾಲ್ (6), ತಿಲಕ್ ವರ್ಮಾ (5), ರಿಯಾನ್ ಪರಾಗ್ (2) ಮತ್ತು ಕುಮಾರ್ ಕುಶಾಗ್ರ (0) ಯಾರೂ ಎರಡಂಕಿ ಮೊತ್ತ ತಲುಪಲಿಲ್ಲ. ಅನ್ಶುಲ್ ಕಾಂಬೋಜ್ (40ಕ್ಕೆ3) ಮತ್ತು ವೈಶಾಖ ವಿಜಯಕುಮಾರ್ (33ಕ್ಕೆ2) ವೇಗದ ದಾಳಿಗೆ ಈ 5 ವಿಕೆಟ್‌ಗಳು 36 ರನ್ನಿಗೆ ಉರುಳಿದ್ದವು.

ಇದು ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಶಾಶ್ವತ್‌ಗೆ 17 ಪಂದ್ಯಗಳಲ್ಲಿ ಆರನೇ ಶತಕ. ಮುಲಾನಿ ಜೊತೆ 6 ವಿಕೆಟ್‌ಗೆ 87 ರನ್ ಸೇರಿಸಿ ಕುಸಿತ ತಪ್ಪಿಸಿದರು.

ಶತಕ ಗಳಿಸಿದ ಶಾಶ್ವತ್ ರಾವತ್ –ಎಕ್ಸ್ ಚಿತ್ರ

ಸ್ಕೋರುಗಳು: ಭಾರತ 'ಎ': 77 ಓವರುಗಳಲ್ಲಿ 7 ವಿಕೆಟ್‌ಗೆ 224 (ಶಾಶ್ವತ್ ರಾವುತ್ ಔಟಾಗದೇ 122, ಶಮ್ಸ್ ಮುಲಾನಿ 44, ಆವೇಶ್ ಖಾನ್ ಔಟಾಗದೇ 16; ಅನ್ಶುಲ್ ಕಾಂಬೋಜ್ 40ಕ್ಕೆ3, ವೈಶಾಖ ವಿಜಯಕುಮಾರ್ 33ಕ್ಕೆ2) ವಿರುದ್ಧ ಭಾರತ 'ಸಿ'.

ಸಚಿನ್ ದಾಸ್ ಶತಕ: ಉತ್ತಮ ಮೊತ್ತದತ್ತ ಮಹಾರಾಷ್ಟ್ರ

ಬೆಂಗಳೂರು: ಸಚಿನ್ ದಾಸ್ ಅವರ ಶತಕ ಮತ್ತು ನಿಖಿಲ್ ನಾಯ್ಕ್ ಅವರ ಅಜೇಯ ಅರ್ಧಶತಕದ ಬಲದಿಂದ ಮಹಾರಾಷ್ಟ್ರ ತಂಡವು ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನ ಮೊದಲ ದಿನವಾದ ಗುರುವಾರ ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ವಿರುದ್ಧ 89 ಓವರ್‌ಗಳಲ್ಲಿ 6 ವಿಕೆಟ್‌ಗೆ 320 ರನ್ ಕಲೆಹಾಕಿದೆ.

ಇಲ್ಲಿನ ಆಲೂರು (1) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಸಚಿನ್ ಸೊಗಸಾದ ಬ್ಯಾಟಿಂಗ್ ಮೂಲಕ ತಂಡಕ್ಕೆ ಆಸರೆಯಾದರು. ಅವರು 170 ಎಸೆತಗಳಲ್ಲಿ 102 ರನ್ ಗಳಿಸಿದರು. ಅದರಲ್ಲಿ ಏಳು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳು ಸೇರಿದ್ದವು. ನಿಖಿಲ್ 106 ಎಸೆತಗಳಲ್ಲಿ ಔಟಾಗದೇ 64 ರನ್ ಗಳಿಸಿದ್ದಾರೆ. ಅಭಿಲಾಷ್ ಮತ್ತು ಶಿಖರ್ ಶೆಟ್ಟಿ ತಲಾ ಎರಡು ವಿಕೆಟ್ ಪಡೆದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮತ್ತೊಂದು ಪಂದ್ಯದಲ್ಲಿ ಹರ್ಷ ಗವಳಿ (ಔಟಾಗದೇ 121) ಅವರ ಶತಕದ ನೆರವಿನಿಂದ ಮಧ್ಯಪ್ರದೇಶ ತಂಡವು 90 ಓವರ್‌ಗಳಲ್ಲಿ 5 ವಿಕೆಟ್‌ಗೆ 259 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಆಲೂರು (1) ಮಹಾರಾಷ್ಟ್ರ: 89 ಓವರ್‌ಗಳಲ್ಲಿ 6ಕ್ಕೆ 320 (ಮುರ್ತಾಜಾ ಟ್ರಂಕ್ವಾಲಾ 48, ಸಚಿನ್ ದಾಸ್ 102, ಅಂಕಿತ್ ಬವಾನೆ 42, ನಿಖಿಲ್ ನಾಯ್ಕ್ ಔಟಾಗದೇ 64; ಅಭಿಲಾಷ್ 34ಕ್ಕೆ 2, ಶಿಖರ್ ಶೆಟ್ಟಿ 75ಕ್ಕೆ 2)– ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ವಿರುದ್ಧ

ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 90 ಓವರ್‌ಗಳಲ್ಲಿ 5ಕ್ಕೆ 259 (ಹರ್ಷ ಗವಳಿ ಔಟಾಗದೇ 121, ಹರ್‌ಪ್ರೀತ್ ಸಿಂಗ್ 53; ಅತೀತ್ ಸೇಠ್ 60ಕ್ಕೆ 2)– ಬರೋಡಾ ಕ್ರಿಕೆಟ್ ಸಂಸ್ಥೆ ವಿರುದ್ಧ

ಚೆಸ್ ಒಲಿಂಪಿಯಾಡ್ ಎಂಟನೇ ಸುತ್ತು

ಭಾರತಕ್ಕೆ ಮಣಿದ ಇರಾನ್

ಬುಡಾಪೆಸ್ಟ್: ದೊಮ್ಮರಾಜು ಗುಕೇಶ್ ಮತ್ತು ಅರ್ಜುನ್ ಇರಿಗೇಶಿ ಉತ್ತಮ ಪ್ರದರ್ಶನ ಮುಂದುವರಿಸಿದ ಪರಿಣಾಮ ಭಾರತ, 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದ ಎಂಟನೇ ಸುತ್ತಿನಲ್ಲಿ ಇರಾನ್ ತಂಡವನ್ನು ಗುರುವಾರ 3.5–0.5 ರಿಂದ ಸೋಲಿಸಿ ಅಗ್ರಸ್ಥಾನ ಉಳಿಸಿಕೊಂಡಿದೆ. ಇನ್ನು ಮೂರು ಸುತ್ತಿನ ಪಂದ್ಯಗಳು ಉಳಿದಿವೆ.

ಏಳನೇ ಪಂದ್ಯ ಆಡುತ್ತಿರುವ ಗುಕೇಶ್ ಮೊದಲ ಬೋರ್ಡ್‌ನಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಪರ್ಹಾಮ್ ಮಘಸೂಡ್ಲು ಅವರನ್ನು 34 ನಡೆಗಳಲ್ಲಿ ಸೋಲಿಸಿದರು. ಮಧ್ಯಮ ಹಂತದಲ್ಲೇ ಅವರು ಮೇಲುಗೈ ಸಾಧಿಸಿದರು. ಎರಡನೇ ಬೋರ್ಡ್‌ನಲ್ಲಿ ಪ್ರಜ್ಞಾನಂದ ರಮೇಶಬಾಬು ಮತ್ತು ಮೊಹಮ್ಮದ್ ಅಮೀನ್ ತಬಾತಬೇಯಿ 32 ನಡೆಗಳ ನಂತರ 'ಡ್ರಾ' ಮಾಡಿಕೊಳ್ಳಲು ಒಪ್ಪಿದರು. ಈ ವೇಳೆ ಇಬ್ಬರೂ ಸಮಾನಬಲ ಹೊಂದಿದ್ದರು.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಅರ್ಜುನ್ ಇರಿಗೇಶಿ ಮೂರನೇ ಬೋರ್ಡ್‌ನಲ್ಲಿ ಕಪ್ಪುಕಾಯಿಗಳಲ್ಲಿ ಆಡಿ ಇರಾನ್‌ನ ದಾನೇಶ್ವರ್ ಬರ್ದಿಯ ಅವರನ್ನು 36 ನಡೆಗಳಲ್ಲಿ ಮಣಿಸಿದರು. ವಿದಿತ್ ಎಸ್.ಗುಜರಾತಿ ಕೂಡ 40 ನಡೆಗಳಲ್ಲಿ ಇದಾನಿ ಪೌಯಾ ಅವರನ್ನು ಪರಾಭವಗೊಳಿಸಿ ಭಾರತದ ವಿಜಯದ ಅಂತರ ಹೆಚ್ಚಿಸಿದರು.

ಅರ್ಜುನ್ ಇರಿಗೇಶಿ, ನಿಂತಿರುವವರು ಆರ್. ಪ್ರಜ್ಞಾನಂದ

ಎಂಟು ಪಂದ್ಯಗಳಿಂದ ಭಾರತ 16 ಪಾಯಿಂಟ್ಸ್ ಸಂಗ್ರಹಿಸಿದೆ. ಎರಡನೇ ಸ್ಥಾನದಲ್ಲಿದ್ದ ಇರಾನ್‌ಗೆ ಇದು ಮೊದಲ ಸೋಲು.

ಆದರೆ, ಮಹಿಳೆಯರ ವಿಭಾಗದಲ್ಲಿ ಪೋಲೆಂಡ್ 2.5–1.5ರಿಂದ ಅಗ್ರ ಶ್ರೇಯಾಂಕದ ಭಾರತವನ್ನು ಸೋಲಿಸಿತು.

ಅಸಭ್ಯ ವರ್ತನೆ: ಸಮರವೀರ ವಿರುದ್ಧ ಆಸ್ಟ್ರೇಲಿಯಾ ಕ್ರಮ

ಮೆಲ್ಬರ್ನ್ (ಪಿಟಿಐ): ಆಕ್ಷೇಪಾರ್ಹ ರೀತಿಯಲ್ಲಿ ನಡೆದುಕೊಂಡು ಕ್ರಿಕೆಟ್ ಸಂಹಿತೆ ಉಲ್ಲಂಘಿಸಿದ್ದಕ್ಕೆ, ವಿಕ್ಟೋರಿಯಾ ಮಹಿಳಾ ತಂಡಕ್ಕೆ ಕೋಚ್ ಆಗಿದ್ದ ಶ್ರೀಲಂಕಾ ಮಾಜಿ ಟೆಸ್ಟ್ ಕ್ರಿಕೆಟಿಗ ದುಲಿಪ್ ಸಮರವೀರ ಅವರಿಗೆ ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿಯು 20 ವರ್ಷ ಕೋಚಿಂಗ್ ನೀಡದಂತೆ ನಿಷೇಧ ಹೇರಿದೆ.

2008ರಲ್ಲಿ ಅವರು ಮೊದಲ ಬಾರಿ ಕ್ರಿಕೆಟ್ ವಿಕ್ಟೋರಿಯಾ ಬ್ಯಾಟಿಂಗ್ ಕೋಚ್ ಆಗಿದ್ದರು. ಕಳೆದ ವರ್ಷ ಅವರನ್ನು ತಂಡದ ಹಂಗಾಮಿ ಹೆಡ್ ಕೋಚ್ ಆಗಿ ಮತ್ತು ಈ ವರ್ಷದ ಮೇ ತಿಂಗಳಲ್ಲಿ ಪೂರ್ಣಾವಧಿ ಹೆಡ್ ಕೋಚ್ ಆಗಿ ನಿಯುಕ್ತಿಗೊಳಿಸಲಾಗಿತ್ತು.



ಅವರು ಮಹಿಳಾ ಬಿಗ್‌ಬ್ಯಾಷ್ ಲೀಗ್‌ನಲ್ಲಿ ಮೆಲ್ಬರ್ನ್ ಸ್ಟಾರ್ಸ್ ತಂಡಕ್ಕೆ ಸಹಾಯಕ ಕೋಚ್ ಕೂಡ ಆಗಿದ್ದರು.

ಆಟಗಾರ್ತಿಯೊಬ್ಬರ ದೂರಿನ ಮೇರೆಗೆ ಕ್ರಿಕೆಟ್ ಆಸ್ಟ್ರೇಲಿಯಾ ಇಂಟೆಗ್ರಿಟಿ ವಿಭಾಗವು ಅವರ ವಿರುದ್ಧ ತನಿಖೆ ನಡೆಸಿತ್ತು.

ಸಮರವೀರ 1990ರ ದಶಕದಲ್ಲಿ ಲಂಕಾ ಪರ ಏಳು ಟೆಸ್ಟ್ ಮತ್ತು ಐದು ಏಕದಿನ ಪಂದ್ಯಗಳನ್ನು ಆಡಿದ್ದರು.

ಮುಂದಿನ ಎರಡು ದಶಕಗಳ ಅವಧಿಗೆ ಆಸ್ಟ್ರೇಲಿಯಾದಲ್ಲಿ ಯಾವುದೇ ಹುದ್ದೆಯನ್ನು ವಹಿಸುವುದರಿಂದ 52 ವರ್ಷ ವಯಸ್ಸಿನ ಆಟಗಾರನನ್ನು ನಿರ್ಬಂಧಿಸಲಾಗಿದೆ. ಅವರ ವರ್ತನೆ ಕ್ರಿಕೆಟ್ ಆಸ್ಟ್ರೇಲಿಯಾದ ನೀತಿಸಂಹಿತೆ 2.23ನೇ ವಿಧಿಯ ಗಂಭೀರ ಉಲ್ಲಂಘನೆಯಾಗಿದೆ. ಈ ವಿಧಿಯು 'ಕ್ರಿಕೆಟ್ ಸ್ಫೂರ್ತಿಗೆ ವಿರುದ್ಧವಾಗಿ ನಡೆದುಕೊಂಡಿದ್ದಕ್ಕೆ, ಕ್ರಿಕೆಟ್ ಹಿತಾಸಕ್ತಿಗೆ ಹಾನಿಕರವಾಗಿ ವರ್ತಿಸಿದ್ದಕ್ಕೆ ಅಥವಾ ಆಟಕ್ಕೆ ಕಳಂಕ ತರುವ ವಿಷಯ'ಕ್ಕೆ ಸಂಬಂಧಿಸಿದೆ.

ಚೀನಾ ಓಪನ್ ಬ್ಯಾಡ್ಮಿಂಟನ್

ಕ್ವಾರ್ಟರ್‌ಗೆ ಮಾಳವಿಕಾ

ಚಾಂಗ್‌ಝೌ (ಪಿಟಿಐ): ಭಾರತದ ಯುವ ಆಟಗಾರ್ತಿ ಮಾಳವಿಕಾ ಬನ್ಸೋಡ್ ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ತಮಗಿಂತ ಉನ್ನತ ಕ್ರಮಾಂಕದ ಕ್ರಿಸ್ಟಿ ಗಿಲ್ಮೊರ್ ಅವರನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಮಣಿಸಿ, ಕ್ವಾರ್ಟರ್ ಫೈನಲ್ ತಲುಪಿದರು.

ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ವಿಶ್ವದ 43ನೇ ಕ್ರಮಾಂಕದ ಮಾಳವಿಕಾ 21-17, 19-21, 21-16ರಿಂದ 25ನೇ ರ‍್ಯಾಂಕ್‌ನ ಸ್ಕಾಟ್ಲೆಂಡ್‌ನ ಗಿಲ್ಮೊರ್ ಅವರನ್ನು ಹಿಮ್ಮೆಟ್ಟಿಸಿದರು.

'ಸೂಪರ್ 1000 ಟೂರ್ನಿಯಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ತಲುಪಿದ್ದೇನೆ. ಬಹುದಿನದ ಕನಸು ಇಂದು ನನಸಾಗಿದೆ. ವೃತ್ತಿಜೀವನದಲ್ಲಿ ಇದು ನನ್ನ ದೊಡ್ಡ ಸಾಧನೆಯಾಗಿದೆ' ಎಂದು ಪಂದ್ಯ ಗೆದ್ದ ಬಳಿಕ 22 ವರ್ಷ ವಯಸ್ಸಿನ ಮಾಳವಿಕಾ ಹೇಳಿದರು.

ನಾಗ್ಪುರದ ಮಾಳವಿಕಾ ಆರಂಭಿಕ ಸುತ್ತಿನಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ, ಏಳನೇ ಕ್ರಮಾಂಕದ ಇಂಡೊನೇಷ್ಯಾದ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ ಅವರನ್ನು ನೇರ ಗೇಮ್‌ಗಳಲ್ಲಿ ಮಣಿಸಿದ್ದರು.

ಮಾಳವಿಕಾ ಬನ್ಸೋಡ್ –ಎಕ್ಸ್ ಚಿತ್ರ

ಟೂರ್ನಿಯಲ್ಲಿ ಉಳಿದಿರುವ ಏಕೈಕ ಭಾರತದ ಆಟಗಾರ್ತಿ ಯಾಗಿರುವ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್, ನಾಲ್ಕನೇ ಶ್ರೇಯಾಂಕದ ಅಕಾನೆ ಯಮಗುಚಿ ಅವರನ್ನು ಎದುರಿಸಲಿದ್ದಾರೆ.

ಈ ಹಿಂದಿನ ಎರಡು ಮುಖಾಮುಖಿಯಲ್ಲೂ ಮಾಳವಿಕಾ ಅವರನ್ನು ಜಪಾನಿನ ಆಟಗಾರ್ತಿ ಸೋಲಿಸಿದ್ದಾರೆ. ಉತ್ತಮ ಲಯದಲ್ಲಿರುವ ಭಾರತದ ತಾರೆ ಈ ಬಾರಿ ಪ್ರಬಲ ಸ್ಪರ್ಧೆಯೊಡ್ಡುವ ನಿರೀಕ್ಷೆಯಲ್ಲಿದ್ದಾರೆ.

ಹಾಕಿ: ಪಂಜಾಬ್ ಚಾಂಪಿಯನ್

ಜಲಂಧರ್ (ಪಿಟಿಐ): ಪೆನಾಲ್ಟಿ ಶೂಟೌಟ್‌ನಲ್ಲಿ ಉತ್ತರ ಪ್ರದೇಶವನ್ನು ಮಣಿಸಿದ ಪಂಜಾಬ್ ತಂಡವು ಗುರುವಾರ ಹಾಕಿ ಇಂಡಿಯಾ ಜೂನಿಯರ್ ಬಾಲಕರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಇಲ್ಲಿ ನಡೆದ ಫೈನಲ್‌ನ ಪಂದ್ಯವು ನಿಗದಿತ ಅವಧಿಯಲ್ಲಿ ತಲಾ ಮೂರು ಗೋಲುಗಳೊಂದಿಗೆ ಸಮಬಲ ಕಂಡಿತು. ಪೆನಾಲ್ಟಿ ಶೂಟೌಟ್‌ನಲ್ಲಿ 4–3ರಿಂದ ಪಂಜಾಬ್ ಮೇಲುಗೈ ಸಾಧಿಸಿತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಹರಿಯಾಣ ತಂಡವು 5–0ಯಿಂದ ಕರ್ನಾಟಕ ತಂಡವನ್ನು ಸುಲಭವಾಗಿ ಮಣಿಸಿತು.

ಮೈಸೂರು ರೇಸ್

ಎಕ್ಸಲೆಂಟ್ ಲಾಸ್ ಗೆಲ್ಲುವ ನಿರೀಕ್ಷೆ

ಮೈಸೂರು 1000 ಗಿನ್ನೀಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸಲೆಂಟ್ ಲಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಪೆಟ್ಟೀಸ್ ಲವ್ 9, ಜೆಂಟಲ್‌ಮ್ಯಾನ್ಸ್ ವರ್ಡ್ 12, ಒನ್ ಡೈಮಂಡ್ 2
2ನೇ ರೇಸ್: ಫ್ರಿಯಾ 2, ಅಂಕುಶ್ 9, ಕ್ವೀನ್ ಆಫ್ ಕಮ್‌ಬ್ಯಾಕ್ಸ್ 5
3ನೇ ರೇಸ್: ಎನ್.ಆರ್.ಐ ಟಚ್ 5, ನ್ಯಾಚುರಲ್ ಒನ್ 1, ಫ್ರೀ ಸ್ಪಿರಿಟೆಡ್ 9
4ನೇ ರೇಸ್: ಗಲಹಡ್ 2, ಫಿಲಾಸಫಿ 5, ಫೆರೆಟ್ಟಿ 3
5ನೇ ರೇಸ್: ಎಕ್ಸಲೆಂಟ್ ಲಾಸ್ 2, ಫಿನ್ಲೆ 3
6ನೇ ರೇಸ್: ಸಿಯೋಲ್‌ಫಾರ್ ಬುಲ್ಲೆಟ್ 3, ಸ್ಪಾರ್ಕ್ಲಿಂಗ್ ನೈಟ್ 4, ಕೋರ್ಟ್ ಜೆಸ್ಟರ್ 1
7ನೇ ರೇಸ್: ದಿ ಗೋಲ್ಡನ್ ಕಪ್ 10, ಇನ್ಫಿನೈಟ್‌ಪಾಸಿಬಿಲಿಟಿ 5, ಕೂರ್ಗ್ ಜನರಲ್ 9

ಉತ್ತಮ ಬೆಟ್: ಫ್ರಿಯಾ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಅಗ್ರ ಸಿಂಗಲ್ಸ್ ಆಟಗಾರನ ವರ್ತನೆಗೆ ಎಐಟಿಎ ಅಸಮಾಧಾನ

'ಭಾರತಕ್ಕೆ ಆಡಲು ನಗಾಲ್ ₹42 ಲಕ್ಷ ಕೇಳಿದ್ದರು'

ನವದೆಹಲಿ (ಪಿಟಿಐ): ಭಾರತ ತಂಡಕ್ಕೆ ಡೇವಿಸ್ ಕಪ್ ಪಂದ್ಯ ಆಡಬೇಕಾದರೆ ವಾರ್ಷಿಕ 50,000 ಡಾಲರ್ (ಸುಮಾರು ₹42 ಲಕ್ಷ) ನೀಡಬೇಕೆಂದು ಸುಮಿತ್ ನಗಾಲ್ ಬೇಡಿಕೆ ಸಲ್ಲಿಸಿದ್ದರು ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ)ಗುರುವಾರ ಹೇಳಿಕೊಂಡಿದೆ. ಆದರೆ, 'ಈ ಸೇವೆಗಾಗಿ ಅಥ್ಲೀಟುಗಳು ಸಂಭಾವನೆ ಕೇಳುವುದು ಹೊಸದೇನಲ್ಲ. ರೂಢಿಗತವಾಗಿದೆ' ಎಂದು ದೇಶದ ಅಗ್ರ ಸಿಂಗಲ್ಸ್ ಆಟಗಾರ ನಗಾಲ್ ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ.

ಬೆನ್ನು ನೋವು ಇದೆ ಎಂದು ಹೇಳಿ ನಗಾಲ್ ಅವರು ಇತ್ತೀಚೆಗೆ ಸ್ಟಾಕ್‌ಹೋಮ್‌ನಲ್ಲಿ ಸ್ವೀಡನ್ ವಿರುದ್ಧ ಡೇವಿಸ್ ಕಪ್ ಪಂದ್ಯದಿಂದ ಹಿಂದೆ ಸರಿದಿದ್ದರು. ಕಳೆದ ತಿಂಗಳು ಅಮೆರಿಕ ಓಪನ್ ಪುರುಷರ ಡಬಲ್ಸ್‌ನಲ್ಲಿ ಅವರು ಈ ಕಾರಣದಿಂದ ಹಿಂದೆಸರಿದಿದ್ದರು.

ಹೀಗಾಗಿ, ವಿಶ್ವಗುಂಪಿನ (ಒಂದು) ಪಂದ್ಯದಲ್ಲಿ ಸಿಂಗಲ್ಸ್ ಪರಿಣತರಿಲ್ಲದೇ ಭಾರತ, ಸ್ವೀಡನ್ ವಿರುದ್ಧ 0–4 ಮುಖಭಂಗ ಅನುಭವಿಸಿತ್ತು. ಡಬಲ್ಸ್ ಪರಿಣತರನ್ನು ಮತ್ತು ಹೊಸ ಆಟಗಾರರನ್ನು ನಾಯಕ ರೋಹಿತ್ ರಾಜ್‌ಪಾಲ್ ಆಡಿಸಬೇಕಾಯಿತು.

ನಗಾಲ್, ಯೂಕಿ ಭಾಂಬ್ರಿ ಮತ್ತು ಶಶಿಕುಮಾರ್ ಮುಕುಂದ್ ಸೇರಿದಂತೆ ದೇಶದ ಪ್ರಮುಖ ಆಟಗಾರರು ರಾಷ್ಟ್ರೀಯ ಕರ್ತವ್ಯಕ್ಕೆ ನಿರಾಕರಿಸುತ್ತಿದ್ದಾರೆ ಎಂದು ಮಂಗಳವಾರ ಎಐಟಿಎ ಅಸಮಾಧಾನ ವ್ಯಕ್ತಪಡಿಸಿತ್ತು.

ಸುಮಿತ್ ನಗಾಲ್ ಎಪಿ / ಪಿಟಿಐ ಚಿತ್ರ

ನಗಾಲ್ ಅವರು ಎಟಿಪಿ 250 ಹಾಂಗ್‌ಝೌ ಓಪನ್ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಗುರುವಾರ ಅವರ ಮೊದಲ ಪಂದ್ಯ ನಿಗದಿಯಾಗಿದೆ.

'ಅವರು ಮಾಡುತ್ತಿರುವುದು ಸರಿಯೇ ಅಥವಾ ಅಲ್ಲವೇ ಎಂಬುದನ್ನು ದೇಶ ನಿರ್ಧರಿಸಲಿ, ನಂತರ ಸರ್ಕಾರದ ನಿರ್ಧಾರ ಮಾಡಲಿ. ಆಟಗಾರರಿಗೆ 'ಟಾಪ್ಸ್' ಯೋಜನೆಯಡಿಯೂ ಆರ್ಥಿಕ ನೆರವು ನೀಡಲಾಗುತ್ತಿದೆ. ಡೇವಿಸ್ ಕಪ್ ಆಡಿದ್ದರೆ ಹಣ ನೀಡುವುದಿಲ್ಲವೆಂದಲ್ಲ. ಅಲ್ಲೂ ಹಣ ಸಿಗುತ್ತದೆ' ಎಂದು ಎಐಟಿಎ ಕಾರ್ಯದರ್ಶಿ ಅನಿಲ್ ಧುಪರ್ ಹೇಳಿದ್ದಾರೆ.

ಡೇವಿಸ್ ಕಪ್‌ನಲ್ಲಿ ಪಾಲ್ಗೊಂಡಿದ್ದಕ್ಕೆ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್‌ನಿಂದ ಸಿಗುವ ಬಹುಮಾನ ಹಣವನ್ನು ತಂಡದ ಆಟಗಾರರಿಗೆ ಹಂಚಲಾಗುತ್ತಿದ್ದು, ಇದನ್ನೇ ಎಐಟಿಎ ಉಲ್ಲೇಖಿಸಿದೆ.

'ಬೇರಾವುದೇ ಆಟಗಾರ ಐಟಿಎಫ್ ಬಹುಮಾನ ಹಣ ಬಿಟ್ಟು ಹೆಚ್ಚುವರಿ ಹಣ ಕೇಳಲಿಲ್ಲ' ಎಂದು ಹೇಳಿದ್ದಾರೆ.

'ಈ ಹಿಂದೆ ದೇಶದ ಪ್ರಮುಖ ಆಟಗಾರರು ಡೇವಿಸ್ ಕಪ್ ಆಡಿದ್ದಕ್ಕೆ ಹೆಚ್ಚುವರಿಯಾಗಿ ಹಣ ಕೇಳುತ್ತಿದ್ದರು ಮತ್ತು ಅವರ ಬೇಡಿಕೆಯನ್ನು ಸಮ್ಮತಿಸಲಾಗುತಿತ್ತು' ಎಂದು ಮಾಜಿ ಡೇವಿಸ್ ಕಪ್ ಆಟಗಾರರೊಬ್ಬರು ಪಿಟಿಐಗೆ ಖಚಿತಪಡಿಸಿದ್ದಾರೆ.

ಎಐಟಿಎ ಹೇಳಿಕೆಯನ್ನು ನಗಾಲ್ ಅಲ್ಲಗಳೆದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

'ಪರಿಹಾರ ಕೇಳುವ ಬಗ್ಗೆ ಸ್ಪಷ್ಟಪಡಿಸಲು ಬಯಸುತ್ತೇನೆ. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೆ ಪರ್ಯಾಯವಾಗಿ ಪರಿಹಾರ ಕೇಳುವುದು ಸಂಪ್ರದಾಯವಾಗಿ ಬೆಳೆದುಬಂದಿದೆ' ಎಂದಿದ್ದಾರೆ ನಗಾಲ್.

iPhone 16

Built for Apple Intelligence.

Apple Intelligence starting in US English in late 2024.[1]

Available today. Go to IndiaiStore.com to find Apple Authorised stores near you.

₹5000* Instant cashback on credit cards of ICICI Bank | kotak Mahindra Bank | SBI card + Exchange bonus up to **₹6000***

	iPhone 16	iPhone 16 Plus
MRP (incl. of all taxes) (128 GB, 1N)	₹79900.00	₹89900.00
Instant Cashback*	₹5000.00	₹5000.00
Exchange value of your old smartphone*	₹20000.00	₹20000.00
Exchange bonus*	₹6000.00	₹6000.00
Exchange Effective Price*	**₹48900.00**	**₹58900.00**

INDIA iSTORE

INGRAM MICRO | Redington

EMI starting at **₹3329/month*** | No cost EMI up to 24 months. Available with select leading Banks and NBFCs

[1] Apple Intelligence will be available in beta on all iPhone 16 models, iPhone 15 Pro and iPhone 15 Pro Max, with Siri and device language set to US English, as an iOS 18 update in late 2024. Some features and support for additional languages, including Indian English, French, Japanese and Spanish, will be coming over the course of the next year.

*The limited period offer illustrative Exchange Effective prices are computed on the MRP ₹79900.00 (incl. of all taxes) of iPhone 16, 128 GB, (15.54 cm, 1 N) and on the MRP ₹89900.00 (incl. of all taxes) of iPhone 16 Plus, 128 GB, (17.00 cm, 1 N) and reduced by ₹5000.00 Instant Cashback, which is valid exclusively on ICICI Bank Credit Card, Kotak Mahindra Bank Credit Card and SBI Credit Card (Non-EMI and EMI) & on ICICI Bank Debit Card (EMI only) and further reduced by exchange value of ₹20000.00 of iPhone 13, 128 GB (15.40 cm, 1 N) in a good working condition along with ₹6000.00 Exchange Bonus.The applicable Instant Cashback offer is valid for transactions made using Brand EMI option on Pine Labs and Paytm terminals and applicable on select online merchants via Pine Labs Payment Gateway. No Cost EMI on cards for up to 6 months tenure is available on ICICI Bank Credit Card, Kotak Mahindra Bank Credit Card, SBI Credit Card & ICICI Bank Debit Card EMI transactions. Low-Cost EMI is also available on tenures greater than 6 months. The above illustrative consumer loan offer of EMI of ₹3329.00 p.m. is computed on No Cost EMI of up to 24 months available from Bajaj Finance Ltd, HDFC Bank, HDB Financial services, ICICI Bank, IDFC First Bank and TVS Credit and is calculated on the MRP 79900.00 (inclusive of all taxes) for iPhone 16 (15.54 cm, 1N) 128 GB. 33% down payment is required to avail the above illustrated consumer loan offer from Bajaj Finance Ltd. 0 down payment offer is also available from other financiers. The consumer loan approval from the financier is at their sole discretion. EMIs illustrated above are rounded off to the nearest rupee for ease of reference. The offer is provided as No Cost EMI i.e. the benefit of No Cost EMI as a total applicable interest to be charged by financier on consumer loan or by bank on card EMI transactions for original tenure will be borne by Apple Authorised Distributors. Processing fee is applicable and will be charged to customer as per Financier's or Bank's terms and conditions. Goods and Services Tax will be applicable on processing fee, interest component and foreclosure charges, as applicable. Customer may be required to enter into separate agreements or arrangements (by whatever name called) with the financier to avail or use the EMI facility. Customers are advised to read the offer/agreement terms and conditions carefully. *The Exchange Bonus of up to ₹6000.00 is exclusively provided by the Apple Authorised Trade-in Providers Cashify and Servify at select participating stores in association with participating resellers at their sole discretion. Exchange Bonus is valid only for transactions involving Trade-in of customer's eligible old devices valued at least ₹3000.00 or above. Customer's eligible old devices valued between ₹3000.00 and ₹10000.00 will receive an Exchange Bonus of ₹3000.00 and customer's eligible devices valued between ₹10000.00 and ₹15000.00 will receive an Exchange Bonus of ₹4000.00 and customer's eligible devices valued above ₹15000.00 will receive an Exchange Bonus of ₹6000.00. The Exchange Bonus and Trade-in value will be passed on as a credit or discount in the customer's invoice. Customer's eligible old device trade-in value as diagnosed and assessed by Apple Authorised Trade-in Providers will be the final offer. Any other T&C's as specified by Apple Authorised Trade-in Providers will apply. The offers may be revised or withdrawn without any prior notice. Offer available till stocks last. Available at select participating Apple Authorised Reseller stores. For store details log on to IndiaiStore.com. All trademarks, logos and brand names are the property of their respective owners. Product features vary by model. TM and © 2024 Apple Inc. All rights reserved.